ಸಂಪುಟ : ೨೪
ಸಂಚಿಕೆ : ೧

ಕರ್ನಾಟಕ ಭಾರತಿ

ಸ್ವಾತಂತ್ರ್ಯೋತ್ಸವ ಸಂಚಿಕೆ

ಆಗಸ್ಟ ೧೯೯೧

ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ,

ಲೇಖಕರಿಗೆ ಸೂಚನೆಗಳು

"ಕರ್ನಾಟಕ ಭಾರತಿ"ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯ, ವಿಜ್ಞಾನ ಮತ್ತು ಮಾನವಿಕ ವಿಷಯಗಳ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅವರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪು ಮಾಡಿರಬೇಕು. ಹಸ್ತ ಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲೀ ಅಸಂಪೂರ್ಣವಾಗಿಯಾಗಲೀ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅವರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುತ್ತದೆ. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು ಸಂಪಾದಕರು, "ಕರ್ನಾಟಕ ಭಾರತಿ" ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು. ಇನ್ನಿತರ ಯಾವುದೇ ವಿಷಯಕ್ಕೆ ನಿರ್ದೇಶಕರು ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩ ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೨೪ ಸಂಚಿಕೆ : ೧

ಗೌರವ ಸಂಪಾದಕರು

ಡಾ. ಎಸ್. ರಾಮೇಗೌಡ

ಕುಲಪತಿಗಳು

ಸಂಪಾದಕರು

ಡಾ. ವೀರಣ್ಣ ರಾಜೂರ

ಡಾ. ಬಿ. ಆರ್. ಹಿರೇಮಠ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೨೪ ಸಂಚಿಕೆ : ೧

ಆಗಸ್ಟ ೧೯೯೧

ಸ್ವಾತಂತ್ರ್ಯೋತ್ಸವ ಸಂಚಿಕೆ

ಪ್ರಕಾಶಕರು

ಶ್ರೀ ಸದಾನಂದ ಕನವಳ್ಳಿ

ನಿರ್ದೇಶಕರು, ಪ್ರಸಾರಾಂಗ, ಕ. ವಿ. ವಿ., ಧಾರವಾಡ

ಮುದ್ರಕರು

ಬಸವನಾಳ ಪ್ರಿಂಟರ್ಸ್

ಯು. ಬಿ. ಹಿಲ್, ಧಾರವಾಡ

ಪರಿವಿಡಿ

ಬಸವ-ಗಾಂಧಿ

● ಎಸ್. ಎಸ್. ಕೋತಿನ

ಬಸವ ಮತ್ತು ಗಾಂಧಿ—ಇಬ್ಬರೂ ತಮ್ಮ ಕಾಲದ ಕರಾಳ ವ್ಯವಸ್ಥೆಯ ಭೀಕರ ಸವಾಲುಗಳನ್ನು ಮಾನವೀಯ ಅಂತಃಕರಣದ ನೆಲೆಯಲ್ಲಿಯೇ ಸ್ವೀಕರಿಸುವದರೊಂದಿಗೆ, ಒಟ್ಟು ಸಾಮಾಜಿಕ ಪರಿವರ್ತನೆಗಾಗಿ ಒಂದು ಸೈದ್ಧಾಂತಿಕ ಹೋರಾಟಕ್ಕೆ ತಮ್ಮನ್ನು ತೊಡಗಿಸಿಕೊಂಡ ವಿಭೂತಿಪುರುಷರು. ಮಹಾಪ್ರವಾದಿಗಳಾಗಿದ್ದ ಅವರ ಹೋರಾಟ, ಅಂದಿನ ಸಮಸ್ಯೆಯ ಒತ್ತಡಗಳಿಗೆ ಅನಿವಾರ್ಯವಾದ ತಾತ್ಕಾಲಿಕ ಪರಿಹಾರವನ್ನು ಒದಗಿಸಿ, ಸಮಾಧಾನಪಟ್ಟುಕೊಳ್ಳುವದಾಗಿರದೆ, ಒಂದು ಹೊಸ ಸಮಾಜದ ರಚನೆಯಮೂಲಕ ಮಾನವ ಸಮಸ್ಯೆಗಳಿಗೆ ಶಾಶ್ವತವಾದ ಪರಿಹಾರವನ್ನು ಕಂಡುಕೊಳ್ಳುವದಾಗಿತ್ತು. ಅದಕ್ಕಾಗಿ ಭೂತ-ವರ್ತಮಾನಗಳ ವಿಶ್ಲೇಷಣೆಯ ನೆಲೆಯಲ್ಲಿ ಸಮಸ್ಯೆಗಳನ್ನು ಶೋಧಿಸಿ ಸಾರ್ವಕಾಲಿಕವಾದ, ಸಾರ್ವತ್ರಿಕವಾದ ಮೌಲ್ಯಗಳ ಅನ್ವೇಷಣೆಗೆ ತೊಡಗುವದಕ್ಕೆ ಮತ್ತು ಅವುಗಳಿಗೆ ಒಂದು ಸೈದ್ಧಾಂತಿಕ ಹಾಗೂ ವೈಜ್ಞಾನಿಕ ನೆಲೆಗಟ್ಟನ್ನು ಒದಗಿಸುವದಕ್ಕೆ ಅವರಿಬ್ಬರೂ ಮುಂದಾದರು. ಹೀಗೆ ರೂಪಿಸಿಕೊಂಡ ತತ್ವ-ಸಿದ್ಧಾಂತಗಳಲ್ಲಿ ಕಂಡುಬರುವ ಅವರ ಸ್ವಂತಿಕೆ ಮತ್ತು ವೈಯಕ್ತಿಕತೆ ಇಲ್ಲಿ ಮುಖ್ಯವೆನಿಸುವದಿಲ್ಲ; ಅಲ್ಲದೆ ಆ ಸ್ವಂತಿಕೆ ಮತ್ತು ವೈಯಕ್ತಿಕತೆಗಳೇ ಆಯಾ ವ್ಯಕ್ತಿಗಳ ಹಾಗೂ ಸಿದ್ಧಾಂತಗಳ ಮಾನದಂಡಗಳೂ ಎನಿಸಬೇಕಾಗಿಲ್ಲ. ಅಂದರೆ ಗಾಂಧಿಯವರ 'ಸತ್ಯಾಗ್ರಹ'ದಂಥ ತತ್ವಗಳನ್ನು ವಿಶ್ಲೇಷಣೆಗೆ ಒಳಪಡಿಸಿ, ಅವುಗಳ ಒಳಸಾಮಗ್ರಿಗಳೆಲ್ಲ ಪರಂಪರೆಯಿಂದಲೊ ಅಥವಾ ಬೇರೆ ಮೂಲಗಳಿಂದಲೊ ಆಮದು ಮಾಡಿಕೊಂಡವುಗಳು ಎಂಬ ಕಾರಣಕ್ಕಾಗಿ ಆ ತತ್ವಗಳಲ್ಲಿಯ ಗಾಂಧಿಯವರ ಸ್ವಂತಿಕೆ ಸುಳ್ಳಾಗುವದಿಲ್ಲ. ಹಳೆಯ ಅಥವಾ ಆಮದುಮಾಡಿಕೊಂಡ ದ್ರವ್ಯ-ಸಾಮಗ್ರಿಗಳ ಸಮರ್ಪಕ ಸಂಯೋಜನೆಯಿಂದ ಒಂದು ಘನವಾದ ಉದ್ದೇಶಕ್ಕೆ ಒಂದು ಹೊಸ ದಿವ್ಯಾಸ್ತ್ರವನ್ನಾಗಿ ರೂಪಿಸಿಕೊಳ್ಳುವದು ಮಹತ್ವದ್ದಾಗುತ್ತದೆ. ಮೇಲಾಗಿ ಆ ಅಸ್ತ್ರವನ್ನು ಪ್ರಯೋಗಿಸುವ ಸಾಮರ್ಥ್ಯ ಮತ್ತು ನೈಪುಣ್ಯವಂತೂ ಇನ್ನೂ ಹೆಚ್ಚು ಮಹತ್ವದ್ದಾಗುತ್ತದೆ. ಇನ್ನೂ ವಿಶೇಷವೆಂದರೆ ಅಂಥ ಅಸ್ತ್ರಗಳ ನಿರ್ಮಾಣ ಸಾಮಗ್ರಿಗಳ ಆಯ್ಕೆಯ ಮತ್ತು ಅವುಗಳ ಪರಿಮಿತಿ-ಪ್ರಮಾಣಗಳ ಔಚಿತ್ಯದಲ್ಲಿ ತೋರುವ ಪರಿಣತಿ, ಅದರ ಹಿಂದಿನ ಶ್ರದ್ಧೆ-ಸಾಧನೆ ಇನ್ನೂ ಹೆಚ್ಚು ಗಮನಾರ್ಹವೆನಿಸುತ್ತದೆ. ಈ ಹಿನ್ನೆಲೆಯಲ್ಲಿ ನೋಡಿದಾಗ, ಬಸವ ಹಾಗೂ ಗಾಂಧಿ—ಇಬ್ಬರೂ

ಇಟ್ಟುಕೊಂಡ ಆದರ್ಶ ಸಮಾಜನಿರ್ಮಾಣದ ಗುರಿ, ಆ ಗುರಿಗಾಗಿ ನಡೆಸಿದ ಕಳ ಕಳಿಯ ಹೋರಾಟ, ಆ ಹೋರಾಟಕ್ಕಾಗಿ ಬಳಸಿಕೊಂಡ ಅಸ್ತ್ರ, ಆ ಅಸ್ತ್ರದ ಪ್ರಯೋಗಕ್ಕಾಗಿ ಅನುಸರಿಸಿದ ರೀತಿ ಅಥವಾ ಮಾರ್ಗ ಮತ್ತು ಅವೆಲ್ಲವುಗಳ ಒಟ್ಟು ಪ್ರತಿಫಲಗಳಲ್ಲಿ ಕಂಡುಬರುವ ಸಾಮ್ಯ ವಿಸ್ಮಯಕಾರಿಯಾದ ಒಂದು ಸಾಂಸ್ಕೃತಿಕ ದಾಖಲೆ ಎನಿಸುತ್ತದೆ. ನಿರ್ಲಕ್ಷಿತವಾದ ಮತ್ತು ಅಪಮೌಲ್ಯಗೊಂಡ ಒಂದು ಶ್ರೀಮಂತ ಸಂಸ್ಕೃತಿಯ ಮೌಲ್ಯಗಳನ್ನು ಶೋಧಿಸಿ, ಅವುಗಳನ್ನು ಪರಿಷ್ಕರಿಸಿ, ಸಚೇತನಗೊಳಿಸಿ ಚಲಾವಣೆಗೆ ತರುವ ಮೂಲಕ ಪ್ರಸ್ತುತಗೊಳಿಸಿಕೊಂಡದ್ದು, ಆ ಮೂಲಕವಾಗಿ ಅಭೂತಪೂರ್ವವಾದದ್ದನ್ನು, ಮಾನವ ಇತಿಹಾಸದಲ್ಲಿಯೇ ಆಶ್ಚರ್ಯ-ಕರವಾದದ್ದನ್ನು ಆವಿಷ್ಕರಿಸಿಕೊಟ್ಟದ್ದು— ಈ ಪ್ರವಾದಿದ್ವಯರ ಶ್ರೇಯಸ್ಸು; ಒಂದು ಅರ್ಥದಲ್ಲಿ ಅದು ಭಾರತೀಯ ಸಂಸ್ಕೃತಿಯ ಪರಂಪರೆಗೆ ಸಲ್ಲಬೇಕಾದ ಶ್ರೇಯಸ್ಸೂ ಹೌದು. ಇವರಿಬ್ಬರ ತತ್ವ ಹೋರಾಟಗಳಿಗೆ ಭಾರತೀಯ ದಾರ್ಶನಿಕ ಪರಂಪರೆಯ ಗಟ್ಟಿ ನೆಲಗಟ್ಟು ಇದ್ದುದರಿಂದಲೇ ಅವು ಕಾಲ-ದೇಶಗಳ ಪರಿಧಿಯನ್ನು ಮೀರಿ ಸಂವಾದಿಗಳಾಗಿ ಕಾಣಿಸಿಕೊಳ್ಳುತ್ತವೆ. ಗಾಂಧಿಯವರು ತಮ್ಮ ಸತ್ಯಾಗ್ರಹ, ಸರ್ವೋದಯ ಸಿದ್ಧಾಂತಗಳಿಗೆ ತಮ್ಮ ಸಮಕಾಲೀನ ಪಾಶ್ಚಾತ್ಯ ತತ್ವಜ್ಞಾನಿಗಳ, ಚಿಂತನಶೀಲರ ಆಲೋಚನೆಗಳಿಂದಲೂ ಪ್ರೇರಣೆ-ಪ್ರಚೋದನೆಗಳನ್ನು ಪಡೆದು ಕೊಂಡಿದ್ದರೂ ಅವರ ವ್ಯಕ್ತಿತ್ವದ ಕೇಂದ್ರಸತ್ವ ಹಾಗೂ ಅವರ ಸಿದ್ಧಾಂತಗಳ ಜೀವ ದ್ರವ್ಯಗಳಲ್ಲಿ ಬಸವಣ್ಣ ಹಾಗೂ ಅವರ ಸಿದ್ಧಾಂತದ ಹೋಲಿಕೆ ಕಂಡುಬರುವಷ್ಟು ಉಳಿದವರಲ್ಲಿ ಕಂಡು ಬರುವದಿಲ್ಲ ಎನ್ನುವದಾದರೆ, ಅದಕ್ಕೆ ಮುಖ್ಯ ಕಾರಣ ಅವ ರಿಬ್ಬರ ಅಂತಃಪ್ರಜ್ಞೆಯಲ್ಲಿ ಸಹಜವಾಗಿಯೇ ಬೇರೂರಿದ್ದ ಭಾರತೀಯ ದಾರ್ಶನಿ ಕತೆಯೇ ಎನ್ನಬೇಕು.

ಅಂದಂದಿನ ಶೋಷಣೆ ಮತ್ತು ಸಮಸ್ಯೆಗಳಿಗೆ ಉತ್ತರವಾಗಿ ಉದ್ಭವಿಸಿದ ಈ ಎರಡೂ ಸತ್ವಗಳ ಹೋರಾಟದ ಅಂತಿಮ ಗುರಿ ಒಂದೇ ಎನಿಸಿದರೂ ಆ ಹೋರಾ ಟಕ್ಕೆ ಅವರಿಬ್ಬರೂ ಆಯ್ಕೆ ಮಾಡಿಕೊಂಡ ಕ್ಷೇತ್ರ ಅನಿವಾರ್ಯವಾಗಿಯೇ ಬೇರೆ ಬೇರೆಯಾಗಿದ್ದವು. ಕಾರಣ, ಆಯಾ ಸಾಮಾಜಿಕ ಶೋಷಣೆ ಹಾಗೂ ಸಮಸ್ಯೆಗಳೇ ಬೇರೆ ಬೇರೆ ಮೂಲದವುಗಳಾಗಿದ್ದವು. ಅಂದರೆ ಬಸವಣ್ಣನವರ ಕಾಲದ ಶೋಷಣೆ ಧರ್ಮಮೂಲವಾದ ಶೋಷಣೆಯಾಗಿದ್ದರೆ, ಗಾಂಧಿಯವರ ಕಾಲದ್ದು ರಾಜಕೀಯ ಪ್ರೇರಿತ ಶೋಷಣೆಯಾಗಿತ್ತು. ವಸಾಹತುಶಾಹಿತ್ವ, ಸಾಮ್ರಾಜ್ಯಶಾಹಿತ್ವ, ಬಂಡ ವಾಳಶಾಹಿತ್ವ, ಔದ್ಯೋಗಿಕರಣ ಇತ್ಯಾದಿಗಳಿಂದಾಗಿ ಗಾಂಧಿಯವರ ಕಾಲದ ಪರಿಸರ ಬಸವಯುಗದ ಪರಿಸರಕ್ಕಿಂತ ಕಲ್ಪನೆಗೆ ಮೀರಿ ಬೇರೆಯಾಗಿತ್ತಲ್ಲದೆ ಎಲ್ಲ ಸಮಸ್ಯೆಗಳ ಕೇಂದ್ರನೆಲೆ ರಾಜಕೀಯವಾಗಿತ್ತು. ಆದರೆ ಬಸವಯುಗದಲ್ಲಿ ಕಲುಷಿತಗೊಂಡ ಧಾರ್ಮಿಕಪರಿಸರ, ಪುರೋಹಿತಶಾಹಿತ್ವ ಅಂದಿನ ಶೋಷಣೆಯ ಎಲ್ಲ ನೆಲೆಗಳಿಗೂ

ನೇರ ಜವಾಬ್ದಾರಿಯಾಗಿತ್ತು. ಬಸವಣ್ಣನವರ ಕಾಲದ ರಾಜಕೀಯ ಅದು ಆಂತರಿಕವಾಗಿದ್ದು, ವಸಾಹತುಶಾಹಿತ್ವದಿಂದ ಕೂಡಿರಲಿಲ್ಲ. ಆದ್ದರಿಂದ ಅದು ಅಂಥ ತಲೆಕೆಡಿಸಿಕೊಳ್ಳುವ ಸಮಸ್ಯೆಯೂ ಆಗಿರಲಿಲ್ಲ. ಅದರಂತೆ ಆಧುನಿಕಯುಗದ ಗಾಂಧಿಯವರಿಗೆ ಸಾಮಾಜಿಕ ಹಾಗೂ ಜನಾಂಗಿಕ ಸಂಕೀರ್ಣತೆಯಿಂದಾಗಿ ಧರ್ಮ ಅತಿ ಮುಖ್ಯವಾದ ಗಂಭೀರ ಸಮಸ್ಯೆಯಾಗಿರಲಿಲ್ಲ. ಬಸವಣ್ಣನವರ ಕಾಲದ ಅನಾಹುತಗಳಿಗೆ ರಾಜಕೀಯ ಪೂರಕಶಕ್ತಿಯಾಗಿದ್ದರೆ, ಗಾಂಧೀಜಿಯವರ ಕಾಲದ ಅನಾಹುತಗಳಿಗೆ ಧರ್ಮಪ್ರಚೋದಕಶಕ್ತಿಯಾಗಿತ್ತು. ಒಟ್ಟಿನಲ್ಲಿ ಬಸವಣ್ಣನವರ ಕಾಲದ ಶೋಷಣೆ ಧರ್ಮಮೂಲವಾದ್ದರಿಂದ ಅನಿವಾರ್ಯವಾಗಿ ಅವರ ಹೋರಾಟವೂ ಧರ್ಮಮೂಲ ಹೋರಾಟವಾಯಿತು; ಗಾಂಧಿಯುಗದ ಶೋಷಣೆ ರಾಜಕೀಯ ಮೂಲದ್ದಾದ್ದರಿಂದ ಅವರ ಹೋರಾಟ ರಾಜಕೀಯ ಮೂಲದ್ದಾಗಬೇಕಾಯಿತು.

ಹೀಗೆ ಹೋರಾಟದ ಕ್ಷೇತ್ರಗಳು ಬೇರೆಯಾದರೂ ಅವರಿಬ್ಬರ ವ್ಯಕ್ತಿತ್ವದ, ಬದುಕಿನ ಜೀವಧಾತು ಆಧ್ಯಾತ್ಮವಾಗಿತ್ತು. ಅಂತಾಗಿ ಅವರಿಬ್ಬರೂ ವ್ಯಷ್ಟಿ ಹಾಗೂ ಸಮಷ್ಟಿಯ ಬದುಕಿನ ಅಸ್ವಸ್ಥತೆಯನ್ನು ಆಧ್ಯಾತ್ಮಿಕ ನೆಲೆಯಲ್ಲಿ ಗುರುತಿಸಿ, ಅದರ ಪರಿಹಾರವನ್ನು ಆಧ್ಯಾತ್ಮಿಕ ನೆಲೆಯಲ್ಲಿಯೇ ಕಂಡುಕೊಂಡರು. ಆಧ್ಯಾತ್ಮಿಕ ನೆಲೆಯಲ್ಲಿಯೇ ವ್ಯಷ್ಟಿ-ಸಮಷ್ಟಿಗಳ, ಲೌಕಿಕ-ಆಮುಷ್ಮಿಕಗಳ ಸಾಮರಸ್ಯವನ್ನು ಸಾಧಿಸಿಕೊಡುತ್ತಲೇ ಒಟ್ಟು ಬದುಕಿನ, ಬದುಕಿನ ಸೌಂದರ್ಯದ ಅಖಂಡತೆಯನ್ನು ಸಾಕ್ಷಾತ್ಕರಿಸಿಕೊಟ್ಟರು. ವಸ್ತುಸೌಂದರ್ಯದ ಮೂಲವನ್ನು ಆತ್ಮಸೌಂದರ್ಯದ ನೆಲೆಯಲ್ಲಿ ಗುರುತಿಸಿಕೊಟ್ಟರು. ಭೌತಿಕ–ಆಧ್ಯಾತ್ಮಿಕತೆಗಳ ಸಾಮರಸ್ಯದಿಂದ ಎರಡರ ಸಾರ್ಥಕತೆಯನ್ನು ಹೆಚ್ಚಿಸಿಬಿಟ್ಟು, ಮಾನವಬದುಕಿನ ಪರಮಸಾರ್ಥಕತೆಯನ್ನು ಸಾಧಿಸಿಕೊಟ್ಟರು. ಅಂತೆಯೇ ಗಾಂಧಿಯವರಿಗೆ ಧರ್ಮ ಹಾಗೂ ರಾಜಕೀಯ ಬೇರೆಬೇರೆಯಾಗಿ ಕಾಣಲೇ ಇಲ್ಲ. "ಆಧ್ಯಾತ್ಮಕ್ಕೂ ರಾಜಕೀಯಕ್ಕೂ ಸಂಬಂಧವಿಲ್ಲ ಎನ್ನುವವರಿಗೆ ಆಧ್ಯಾತ್ಮವೆಂದರೇನೆಂಬುದೇ ತಿಳಿಯದು ಎಂದು ಅಳುಕಿಲ್ಲದೇ ವಿನೀತವಾಗಿ ಹೇಳುತ್ತೇನೆ"೧ ಎಂದು ಸ್ಪಷ್ಟಪಡಿಸಿದ ಅವರೇ ಇನ್ನೊಂದೆಡೆಯಲ್ಲಿ "ನಾನು ಭೇಟಿಮಾಡಿದ ಧಾರ್ಮಿಕ ವ್ಯಕ್ತಿಗಳಲ್ಲಿ ಹೆಚ್ಚು ಮಂದಿ ಪ್ರಚ್ಛನ್ನ ರಾಜಕಾರಣಿಗಳು. ಆದರೆ ರಾಜಕಾರಣದ ವೇಷದಲ್ಲಿರುವ ನಾನು ಹೃದಯದಲ್ಲಿ ಧಾರ್ಮಿಕನಾಗಿದ್ದೇನೆ."೨ ಎಂದು ತಮ್ಮ ನಿಲುವನ್ನು ಮಾರ್ಮಿಕವಾಗಿ ಸಮರ್ಥಿಸಿಕೊಂಡಿರುವದೂ ಉಂಟು. "ರಾಜಕೀಯ ಸಂಪರ್ಕವಿಲ್ಲದೆ ಸಮಾಜಸೇವೆಯಂಥ ಕೆಲಸ ನಡೆಸುವದು ಸಾಧ್ಯವಿಲ್ಲ; ಆದ್ದರಿಂದ ರಾಜಕೀಯ ಕ್ಷೇತ್ರವನ್ನು ಪ್ರವೇಶಿಸುವದು ಅನಿವಾರ್ಯವಾಯಿತು. ಮತ್ತು ನೈತಿಕದೃಷ್ಟಿಯಿಂದ ರಾಜಕೀಯ ಕಾರ್ಯ ಪರಿ

ಗಣಿತವಾಗಬೇಕು"೩ ಎಂಬ ಅವರ ಹೇಳಿಕೆಯೂ ಈ ಸಂದರ್ಭದಲ್ಲಿ ಗಮನಾರ್ಹವಾದದ್ದು. ಒಟ್ಟಿನಲ್ಲಿ ಸಾಮಾಜಿಕ ಪರಿವರ್ತನೆಯನ್ನೇ ಮುಖ್ಯಗುರಿಯನ್ನಾಗಿಟ್ಟುಕೊಂಡು ರಾಜಕೀಯಕ್ಕೆ ಆಧ್ಯಾತ್ಮಿಕ ತೇಜಸ್ಸನ್ನು ತಂದುಕೊಟ್ಟದ್ದು, ಆ ಮೂಲಕ ಇತಿಹಾಸವೇ ಕಂಡರಿಯದ ಸೋಜಿಗವನ್ನು ಸಾಧಿಸಿ ತೋರಿಸಿದ ಶ್ರೇಯಸ್ಸು ಗಾಂಧಿಯವರದು.

ಹೀಗೆ ಬಸವ ಮತ್ತು ಗಾಂಧಿ—ಇಬ್ಬರದೂ ಧರ್ಮಮೂಲಪ್ರವೃತ್ತಿಯೇ ಆದರೂ ಸನಾತನ ಹಿಂದೂಧರ್ಮವನ್ನು ಕುರಿತ–ಈ ಸಂದರ್ಭದಲ್ಲಿ ಅದನ್ನು ವೈದಿಕ ಧರ್ಮವೆಂದು ಕರೆದರೂ ಸರಿಯೆ–ಅವರಿಬ್ಬರ ದೃಷ್ಟಿ-ಧೋರಣೆಯಲ್ಲಿ ತುಂಬ ವ್ಯತ್ಯಾಸವಿರುವದನ್ನು ಮರೆಯುವಂತಿಲ್ಲ.

ಧಾರ್ಮಿಕವಾಗಿ ಅತ್ಯಂತ ಸಂಕೀರ್ಣ ಸಂದರ್ಭದಲ್ಲಿದ್ದು ರಾಜಕೀಯ ಹೋರಾಟಕ್ಕೆ ತೊಡಗಿದ್ದರೂ ಗಾಂಧಿಯವರು ತಮ್ಮನ್ನು "ಸನಾತನ ಹಿಂದೂ" "ಸಂಪ್ರದಾಯಶರಣ ಹಿಂದೂಮತಸ್ಥ"೪ ಎಂದೂ ಕರೆದುಕೊಂಡಿರುವದಲ್ಲದೆ "ಹಿಂದೂಧರ್ಮದ ಮೂಲಕ ಆನಂದವನ್ನು, ಶಾಂತಿಯನ್ನು ಕಾಣುವ ಹೊರತು ಈ ಜಗತ್ತಿನಲ್ಲಿ ನನಗೆ ಬೇರಾವ ಆಸೆಯೂ ಇಲ್ಲ",೫ "ನನ್ನ ಹಿಂದೂನಿಷ್ಠೆ ಅತ್ಯಂತ ವಿಶಾಲ ಸಹನೆಯಿಂದ ಕೂಡಿದೆ", "ಹಿಂದೂಧರ್ಮ ನನಗೆ ಗೊತ್ತಿರುವ ಧರ್ಮಗಳಲ್ಲೆಲ್ಲ ಅತ್ಯಂತ ಸಹಿಷ್ಣುತೆಯಿಂದ ಕೂಡಿದೆ."೬ ಎಂದು ಮುಕ್ತಕಂಠದಿಂದ ಘೋಷಿಸಿದ್ದಾರೆ; ಇಂಥ ಉತ್ಕಟತೆಯಿಂದಾಗಿಯೇ ಗಾಂಧಿ ತಮ್ಮ ಹೋರಾಟದ ಸಂದರ್ಭದಲ್ಲಿಯೇ, ಹಲವಾರು ಧೋರಣೆಗಳಲ್ಲಿಯೇ ದ್ವಂದ್ವವನ್ನು ಎದುರಿಸಬೇಕಾಯಿತೆಂಬುದನ್ನೂ ಮರೆಯುವಂತಿಲ್ಲ. ಒಂದು ಸಣ್ಣ ಉದಾಹರಣೆಯೆಂದು ಹೇಳುವದಾದರೆ, ವರ್ಣಾಶ್ರಮವನ್ನು ಎತ್ತಿಹಿಡಿದ ಗಾಂಧಿಯವರು ಹರಿಜನರನ್ನು ಮಾನವೀಯ ಅನುಕಂಪದ ದೃಷ್ಟಿಯಿಂದ ಕಂಡರೆ ಹೊರತು ಅದ್ವೈತ ಅಥವಾ ಸಾಮರಸ್ಯ ದೃಷ್ಟಿಯಿಂದ ಕಾಣಲಿಲ್ಲ; ಹರಿಜನರೊಂದಿಗಿದ್ದ ಅವರ ಸಂಬಂಧ ಬಸವಣ್ಣನವರು ಇಟ್ಟುಕೊಂಡ ಸಂಬಂಧದಂತೆ ರಾಸಾಯನಿಕ ಸಂಬಂಧವಾಗಿರದೆ ಅದು ಭೌತ ಮಿಶ್ರಣದಂತೆ ಮಾತ್ರವಾಗಿತ್ತು. ಬೇರೆಬೇರೆ ಜಾತಿ-ಮತ-ಧರ್ಮಗಳಿಂದ ಕೂಡಿದ ರಾಜಕೀಯ ಹೋರಾಟಕ್ಕಿಳಿದ ಸಮುದಾಯದಲ್ಲಿ ಒಂದು ಮಿತಿಯಲ್ಲಿ ಭಾವೈಕ್ಯತೆಯನ್ನು ತರುವದು ಸಾಧ್ಯವಾಯಿತೇ ಹೊರತು ಸಾಮರಸ್ಯವನ್ನು ತರುವದು ಸಾಧ್ಯವಾಗಲಿಲ್ಲವೆಂದೇ ಹೇಳಬೇಕು. ಇದರಿಂದಾಗಿಯೇ ಗಾಂಧಿಯವರ ಸಿದ್ಧಾಂತ ಮತ್ತು ವಾದಗಳಲ್ಲಿ ಅವರ ಅನುಯಾಯಿಗಳಿಗೇ ಅಪನಂಬಿಕೆಯುಂಟಾಗುವಂತಾಯಿತು.

ಧರ್ಮಮೂಲ ಹೋರಾಟಕ್ಕಿಳಿದ ಬಸವಣ್ಣನವರು ಸಂಪೂರ್ಣ ದ್ವಂದ್ವಾತೀತರೆಂದೇ ಹೇಳಬೇಕಿಲ್ಲ. ಆದರೂ ತಮ್ಮ ಧಾರ್ಮಿಕಧೋರಣೆಗಳಲ್ಲಿ ಸ್ಪಷ್ಟ ಹಾಗೂ ಖಚಿತ ನಿಲುವನ್ನು ತಾಳಿದವರಾಗಿದ್ದರು; ಅವುಗಳ ಅನುಷ್ಠಾನದಲ್ಲಿ ಪ್ರಜ್ಞಾಪೂರ್ವಕವಾಗಿಯೇ ಅವರು ಹೆಚ್ಚಿನ ಎಚ್ಚರಿಕೆಯಿಂದ ಹೆಜ್ಜೆ ಇಡಬೇಕಿತ್ತು. ಬಸವಣ್ಣನವರು ಅಂದಿನ ಶೋಷಣೆಯ ಮೂಲವನ್ನು ಅಂದಿನ ವೈದಿಕಧರ್ಮದ ಅಪಮೌಲ್ಯಗಳಲ್ಲಿ, ಅದರ ಪುರೋಹಿತಶಾಹಿತ್ವದ ಪೋಷಣೆಯಲ್ಲಿ, ಅದರ ಒಟ್ಟು ವ್ಯವಸ್ಥೆಯಲ್ಲಿ ಕಂಡುಕೊಂಡವರಾಗಿದ್ದರು. ಆದ್ದರಿಂದ ಒಟ್ಟು ಧಾರ್ಮಿಕ ಪರಿಸರವನ್ನು ನಿಷ್ಠುರ ಶೋಧನೆಗೆ, ನಿರ್ದಾಕ್ಷಿಣ್ಯ ವಿಶ್ಲೇಷಣೆಗೆ ಒಳಪಡಿಸಬೇಕಾದದ್ದು, ಸನಾತನ ಕೆಲವು ಮೌಲ್ಯಗಳನ್ನೂ ಪರಿಷ್ಕರಣದೊಂದಿಗೆ ಬಳಸಿಕೊಳ್ಳಬೇಕಾದದ್ದು ಅನಿವಾರ್ಯವಾಗಿತ್ತು. ಅಂತೆಯೇ,

"ವೇದ ನಡನಡ ನಡುಗಿತ್ತು, ಶಾಸ್ತ್ರವಗಲಿ ಕೆಲಕ್ಕೆ ಸಾರಿದ್ದಿತ್ತಯ್ಯ"
"ವೇದಕ್ಕೆ ಒರೆಯ ಕಟ್ಟುವೆ,
ಶಾಸ್ತ್ರಕ್ಕೆ ನಿಗಳವನ್ನಿಕ್ಕುವೆ
ತರ್ಕದ ಬೆನ್ನಬಾರನೆತ್ತುವೆ
ಆಗಮದ ಮೂಗ ಕೊಯ್ವೆ
ನೋಡಯ್ಯ ಮಹಾದಾನಿ ಕೂಡಲಸಂಗಮದೇವ
ಮಾದರ ಚೆನ್ನಯ್ಯನ ಮಗ ನಾನಯ್ಯ"

ಎಂದು ಸಾತ್ವಿಕ ರೋಷವನ್ನು ಪ್ರದರ್ಶಿಸಬೇಕಾಯಿತು; ಇಂಥ ಸಂದರ್ಭದಲ್ಲಿ ಬಸವಣ್ಣನವರಿಗಿದ್ದ ಅಂದಿನ ವ್ಯವಸ್ಥೆಯ ಬಗೆಗಿನ ಅಸಮಾಧಾನ, ಅವರ ಆ ಬಿರುನುಡಿಗಳ ಹಿಂದಿನ ಕಳಕಳಿಯ ಅನನ್ಯತೆ ಇಲ್ಲಿ ಗಮನಾರ್ಹವಾದದ್ದು.

ಬಸವ ಹಾಗೂ ಗಾಂಧಿಯುವರ ಕಾಲಕ್ಕಾಗಲೇ ಶೋಷಿತಜನಾಂಗದ ಜಾಗೃತ ಪ್ರಜ್ಞೆಯ ಪ್ರಖರತೆಯಿಂದ ಅದರ ಎದೆಯ ಆಳದ ಲಾವಾರಸ ಹೊರಹೊಮ್ಮಿದ ಪರಿಣಾಮವಾಗಿ ಆಗಲೆ ಒಂದುಬಗೆಯ ಹೋರಾಟ ರೂಪಗೊಂಡದ್ದನ್ನು ಮರೆಯುವಂತಿಲ್ಲ. ಆದರೆ ಹಾಗೆ ರೂಪಗೊಳ್ಳುತ್ತ ಬೆಳೆದು ಒಂದು ಹಂತವನ್ನು ತಲುಪಿದ್ದ ಹೋರಾಟದ ಪ್ರವಾಹವನ್ನು ಒಂದು ವ್ಯವಸ್ಥೆಯ ಚೌಕಟ್ಟಿಗೆ, ಸಂಯಮತೆಗೆ ಒಳಪಡಿಸಿ, ಅದಕ್ಕೊಂದು ಸೈದ್ಧಾಂತಿಕ ನೆಲೆಗಟ್ಟನ್ನೂ ಒದಗಿಸಿ ವಿಧ್ವಂಸಕಾರಿಯಾಗ ಬಹುದಾಗಿದ್ದ ಅದರ ಕ್ರಿಯಾಶೀಲತೆಯನ್ನು ಒಂದು ವಿಧಾಯಕ ಮತ್ತು ರಚನಾತ್ಮಕ ಗುರಿಯತ್ತ ಮುನ್ನಡೆಸಿದ್ದು, ಗಾಂಧಿ-ಬಸವರ ಶ್ರೇಯಸ್ಸು; ಅದರ ಮುಂಚೂಣಿಯನ್ನು ಹಿಡಿದು ಪ್ರಕ್ಷುಬ್ಧಗೊಂಡ ವಾತಾವರಣವನ್ನು ನಿಯಂತ್ರಿಸಿದುದೇ ಒಂದು ದೊಡ್ಡ ಸಾಹಸ; ಅಹಿಂಸೆಯ ಮಾರ್ಗವಾಗಿ ಸತ್ಯದ ಗುರಿಯತ್ತ ಅದನ್ನು ನಡೆಸಿ ದಡಗಾಣಿಸಿದುದೇ ಒಂದು ಮಹಾಪವಾಡ.

ಒಂದು ಘನವಾದ ಉದ್ದೇಶಕ್ಕಾಗಿ ಗಾಂಧಿ 'ಸತ್ಯಾಗ್ರಹ'ವೆಂಬ ಪರಿಣಾಮಕಾರಿಯಾದ ತತ್ವವನ್ನು ರೂಪಿಸಿಕೊಂಡು ಅದನ್ನು ಆತ್ಮಸಾಕ್ಷಿಯಾಗಿ ಅನುಸರಿಸಿದರು. ಅವರೇ ಹೇಳಿಕೊಂಡಂತೆ ಮತ್ತು ಅವರ ಅನುಯಾಯಿಗಳು, ವಿಮರ್ಶಕರು, ಅಂದಿನ ಚಿಂತನಶೀಲರೂ ಒಪ್ಪಿಕೊಂಡಂತೆ ಅದು ಅವರ ಸ್ವಂತ ದರ್ಶನವಾಗಿತ್ತು; ಅವರ ಸ್ವಂತದ್ದಾದ ಉಪನಿಷತ್ತಾಗಿತ್ತು. ಆದರೆ ಬಸವಣ್ಣನವರು ತಮ್ಮದೇ ಎಂದು ಹೇಳಿಕೊಳ್ಳದ, ಆದರೆ 'ಸತ್ಯಾಗ್ರಹ'ದ ಬಿಂಬಮೂಲವೆಂಬಂತೆಯೇ ಇದ್ದ ಮತ್ತು ಸಮಷ್ಟಿಪ್ರಜ್ಞೆಯ ಕ್ರಿಯಾಶೀಲತೆಯಿಂದ ರೂಪಗೊಂಡ 'ಶರಣಧರ್ಮ'ವನ್ನು ತಮ್ಮ ಹೋರಾಟಕ್ಕೆ ಲಿಂಗಸಾಕ್ಷಿಯಾಗಿ ಅನುಸರಿಸಿದರು.

ಈ 'ಸತ್ಯಾಗ್ರಹ'ವಾಗಲಿ, 'ಶರಣಧರ್ಮ'ವಾಗಲಿ ಇದ್ದಕ್ಕಿದ್ದಂತೆಯೇ ಧುತ್ತನೇ ಹುಟ್ಟಿಕೊಂಡ ಚಮತ್ಕಾರವಾಗಿರಲಿಲ್ಲ. ಆಗಲೇ ಹೇಳಿದಂತೆ ಅವು ಭಾರತೀಯ ದರ್ಶನಪರಂಪರೆಯ ಹಿನ್ನೆಲೆಯಲ್ಲಿ ಸುದೀರ್ಘಕಾಲದ ಪ್ರಯೋಗಶೀಲತೆಯ ಪರಿಣಾಮವಾಗಿ ಪ್ರಜ್ವಲಿಸಿದವುಗಳು. ಆದರೆ ಒಂದು, ವ್ಯಷ್ಟಿಯ ಅಂದರೆ ಗಾಂಧಿಯವರ ಅನುಭವ–ಚಿಂತನೆ–ಪ್ರಯೋಗಶೀಲತೆಯ ಪ್ರತಿಫಲನವಾದರೆ ಇನ್ನೊಂದು, ಸಮಷ್ಟಿಯ ಅಂದರೆ ಶರಣಸಮುದಾಯದ ಅನುಭವ–ಚಿಂತನೆ–ಪ್ರಯೋಗಗಳ ಪ್ರತಿಫಲನ. ಆದ್ದರಿಂದ ಒಂದರ ಆಗುಹೋಗುಗಳ ಜವಾಬ್ದಾರಿ ಮುಖ್ಯವಾಗಿ ಗಾಂಧಿಯವರದಾದರೆ ಇನ್ನೊಂದರ ಜವಾಬ್ದಾರಿ ಅಂದಿನ ಶರಣಪ್ರಭುತ್ವದ್ದಾಗುತ್ತದೆ; ಸಮಷ್ಟಿಶಕ್ತಿ ಪರಿಸರದ ಪಕ್ವತೆ ಒಂದರ ಸಾಫಲ್ಯದ ಪೂರಕಶಕ್ತಿಯಾದರೆ ವ್ಯಷ್ಟಿಶಕ್ತಿ ಅಥವಾ ಬಸವಶಕ್ತಿ ಅಂದಿನ ಶರಣರ ಆಂದೋಲನಕ್ಕೆ ಪೂರಕ ಮತ್ತು ಪೋಷಕ ಶಕ್ತಿಯಾಗಿ ಕಾಣಿಸಿಕೊಳ್ಳುತ್ತದೆ.

ಬಸವ–ಗಾಂಧಿ ತಮ್ಮ ಯುಗದ ಹಂಬಲಕ್ಕೆ, ಅವರ ಮನೋಧರ್ಮಕ್ಕೆ ಒಂದು ದಾರ್ಶನಿಕ-ಸೈದ್ಧಾಂತಿಕಧ್ವನಿಯಾಗಿ ಅಭಿವ್ಯಕ್ತಿಯನ್ನು ಒದಗಿಸಿದರೂ ಅವರಿಬ್ಬರ ರೀತಿ ಮತ್ತು ಮನೋಧರ್ಮದಲ್ಲಿಯ ವ್ಯತ್ಯಾಸ ಸ್ಪಷ್ಟವಾಗಿ ಗೋಚರಿಸುವಂತಹದು. ಬಸವಣ್ಣನವರದು ಮುಖ್ಯವಾಗಿ ಅಂದಿನ ಕಾಲದ ಶೋಷಿತ ಸಮುದಾಯದ ಒಡಲಾಳದ ಪ್ರಾತಿನಿಧಿಕ ಭಾಷೆ; ದಾರ್ಶನಿಕ ಹಾಗೂ ಪ್ರವಾದಿಯಾದ ಕವಿಯೊಬ್ಬನ ಎದೆಯ ಕುಲುಮೆಯಿಂದ ಹೊರಹೊಮ್ಮಿ ವಿನ್ಯಾಸಕ್ಕೆ ಒಳಪಟ್ಟ ಭಾಷೆ. ಆದರೆ ಬಸವಣ್ಣನವರಂತೆಯೇ ದಾರ್ಶನಿಕ ಹಾಗೂ ತೀವ್ರ ಸಂವೇದನಾಶೀಲನಾಗಿಯೂ ಗಾಂಧೀಜಿಯವರದು ನೇರವಾದ ಸರಳವಾದ, ಮೃದುವಾದ, ನಮ್ರ-ವಿನಮ್ರವಾದ ಭಾಷೆ; ಪ್ರಜ್ಞಾಪೂರ್ವಕವಾಗಿಯೇ ನಾಗರಿಕಪ್ರಜ್ಞೆಯಿಂದ ನಿಯಂತ್ರಿತವಾದ ಪರಿಷ್ಕೃತ ಭಾಷೆ. ಹಾಗೆಂದೇ ಬಸವಣ್ಣನವರು ಅಂದಿನ ಶರಣಸಮುದಾಯದಲ್ಲಿ ಒಬ್ಬರಾಗಿ, ಅದರ ಒಂದು ಅವಿಭಾಜ್ಯ ಘಟಕವಾಗಿ, ಅದರ ಪ್ರಾತಿನಿಧಿಕ ಸತ್ವವಾಗಿ ಕಾಣಿಸಿಕೊಂಡರೆ, ಗಾಂಧಿಯವರು ತಮ್ಮ ಸಮಕಾಲೀನ ನೆರೆಹೊರೆಯವರಲ್ಲಿಯೇ,

ತಮ್ಮ ಅನುಯಾಯಿಗಳಲ್ಲಿಯೇ ಪ್ರಜ್ಞಾಪೂರ್ವಕವಾಗಿ ಪ್ರತ್ಯೇಕವಾಗಿ ಕಾಣಿಸಿಕೊಳ್ಳುತ್ತಾರೆ. ಬಸವಣ್ಣನವರು ಒಬ್ಬ ದಾರ್ಶನಿಕರಾಗಿ, ತತ್ವಜ್ಞಾನಿಗಳಾಗಿ ಕ್ರಿಯಾಶೀಲರಾದಾಗ ಅವರ ಭಾಷೆ ತತ್ವಜಿಜ್ಞಾಸಕನ ಭಾಷೆಯಾಗುತ್ತದೆ; ಅದೇ ಅಂದಿನ ದೌರ್ಜನ್ಯ, ಹಿಂಸೆ, ಶೋಷಣೆ ಒಟ್ಟು ವ್ಯವಸ್ಥೆಯ ವಿರುದ್ಧ ಕ್ರಾಂತಿಪುರುಷರಾಗಿ ಹೋರಾಟಕ್ಕಿಳಿದಾಗ ಅವರ ಭಾಷೆ ಬೆಂಗುಡಿಗನ ಭಾಷೆಯಾಗಿ, ಗುಡುಗು ಸಿಡಿಲಾಗಿ ಕೇಳಿಬರುತ್ತದೆ. ಆದರೆ ಗಾಂಧಿಯವರ ಭಾಷೆಯಲ್ಲಿ ಎಂಥ ಸಂದರ್ಭ-ದಲ್ಲೂ ಇಂಥ ಬಿರುಸುತನ ಕಾಣಿಸಿಕೊಳ್ಳುವದು ಕಷ್ಟ. ಹೀಗಾಗಿ ಗಾಂಧಿಯವರ ಬರಹ ಹಿತಚಿಂತಕನೊಬ್ಬನ ತತ್ವೋಪದೇಶವನ್ನು, ಆತ್ಮಕಥೆಯನ್ನು ಕೇಳಿದ ಅನುಭವವನ್ನು ಒದಗಿಸಿದರೆ ಬಸವಣ್ಣನವರ ಸಾಹಿತ್ಯ— ಅದು ಒಟ್ಟು ಶರಣಸಾಹಿತ್ಯದ ಒಂದು ಪ್ರಾತಿನಿಧಿಕ ಸಾಹಿತ್ಯವೂ ಹೌದು— ಸಾಮಾಜಿಕ ಕಳಕಳಿಯುಳ್ಳ ಕ್ರಾಂತಿಕಾರ ಕವಿಯೊಬ್ಬನ ಪ್ರತಿಭೆಯಿಂದ ಹೊರಹೊಮ್ಮಿದ ಶಕ್ತಿಯುತವಾದ ಕಾವ್ಯಾನುಭವವನ್ನು ಒದಗಿಸುತ್ತದೆ. ಇದಕ್ಕೆ ಕಾರಣ ಒಂದು ಗದ್ಯವೆಂದಾಗಲಿ, ಇನ್ನೊಂದು ಪದ್ಯವೆಂದಾಗಲಿ ಅಲ್ಲ. ಅವರಿಬ್ಬರ ಮೂಲ ಮನೋಧರ್ಮ ಹಾಗೂ ಅವರು ನಡೆಸಿದ ಚಳುವಳಿ–ಹೋರಾಟದ ನೆಲೆಯಲ್ಲಿಯೇ ಅದರ ಮೂಲಭೂತ ಕಾರಣವನ್ನು ಕಂಡುಕೊಳ್ಳಬಹುದಾಗಿದೆ.

ಧರ್ಮದ ಹೆಸರಿನಲ್ಲಿಯೇ ಆಗಲೊಲ್ಲದೇಕೆ ಶರಣರ ಜೀವನಮೌಲ್ಯಗಳು ಇಂದಿಗೂ ಜೀವಂತವಾಗಿ, ಹೆಚ್ಚು ಪ್ರಸ್ತುತವಾಗಿ ಉಳಿದುಕೊಂಡಿದ್ದರೂ ಆಧುನಿಕ ಯುಗದಲ್ಲಿ ಆ ಮೌಲ್ಯಗಳಿಗೆ ರಾಷ್ಟ್ರವ್ಯಾಪಿ ಪ್ರಚಾರವಾದರೂ ದಕ್ಕಲಿಲ್ಲ. ಅಂತೆಯೇ ಗಾಂಧಿಯವರು ನಡೆಸಿದ ಪ್ರಯೋಗ ಮತ್ತು ಹೋರಾಟಗಳ ಸಂದರ್ಭದಲ್ಲಿ ಅವರಿಗೆ ಶರಣರ ಆಂದೋಲನದಿಂದ, ಅದರ ತತ್ವ-ಸಿದ್ಧಾಂತಗಳಿಂದ ಹೆಚ್ಚಿನ ಪ್ರೇರಣೆ–ಪ್ರಚೋದನೆ ಮತ್ತು ಮಾರ್ಗದರ್ಶನ ದೊರೆಯದೇಹೋಯಿತು; ಆದರೂ ಗಾಂಧಿಯವರ 'ಸತ್ಯಾಗ್ರಹ' ಹೋರಾಟ ಒಂದು ಹಂತಕ್ಕೆ ಬರುತ್ತಿದ್ದಂತೆಯೇ ಹರ್ಡೇಕರ ಮಂಜಪ್ಪನವರ ಹಾಗೂ ಪಾವಟೆ ಸಿದ್ಧರಾಮಪ್ಪನವರ ಕಳಕಳಿಯ ಪ್ರಯತ್ನದಿಂದಾಗಿ ಬಸವಣ್ಣನವರ ವ್ಯಕ್ತಿತ್ವದ, ಅವರ ಆಂದೋಲನದ ಮತ್ತು ಅವರ ತತ್ವ–ಸಿದ್ಧಾಂತಗಳ ಪರಿಚಯ ಗಾಂಧಿಯವರಿಗಾಯಿತು. ಅದು ಗಾಂಧಿಯವರ ಮೇಲೆ ಆಶ್ಚರ್ಯಕರವಾದ ಪರಿಣಾಮವನ್ನು ಬೀರುವದರೊಂದಿಗೆ ಅಗಾದ ಸ್ಫೂರ್ತಿಯನ್ನೂ ಒದಗಿಸಿತು. ಆದರೆ ಬಸವಣ್ಣನವರ ವ್ಯಕ್ತಿತ್ವ ಹಾಗೂ ಆಂದೋಲನದ ಆಳ ಪರಿಚಯ ಮತ್ತು ಅವರ ತತ್ವ–ಸಿದ್ಧಾಂತಗಳ ಗಹನ ಅಧ್ಯಯನಕ್ಕೆ ಅಂದಿನ ರಾಜಕೀಯ ಹೋರಾಟದ ಒತ್ತಡ ಹಾಗೂ ಭಾಷಾ ಸಮಸ್ಯೆಯಿಂದಾಗಿ ಗಾಂಧಿಯವರಿಗೆ ಸಾಧ್ಯವಾಗಿರಲಿಲ್ಲ. ಒಂದುವೇಳೆ ಅದು ಸಾಧ್ಯವಾಗಿದ್ದರೆ ಗಾಂಧಿ

ಯವರು ತಮ್ಮ 'ಸತ್ಯಾಗ್ರಹ'ದಂಥ ತತ್ವಗಳನ್ನು ಬಸವಸಿದ್ಧಾಂತಗಳ ನೆಲೆಯಲ್ಲಿ ಇನ್ನೂ ಪರಿಷ್ಕರಿಸಿಕೊಳ್ಳಬಹುದಿತ್ತೇನೊ ಎನಿಸುತ್ತದೆ.

ಗಾಂಧಿಯವರಿಗೆ ಬಸವಣ್ಣನವರ ನೇರ ಪರಿಚಯವಿರದಿದ್ದರೂ ಅವರಿಬ್ಬರ ಮನೋಧರ್ಮ, ತತ್ವ-ಸಿದ್ಧಾಂತ, ಗುರಿ-ಸಾಧನೆಗಳಲ್ಲಿ ಆಕಸ್ಮಿಕವೆನ್ನಬಹುದಾದರೂ ಆಶ್ಚರ್ಯಕರವಾದ, ಅತ್ಯಂತ ಸಹಜವೆನ್ನಬಹುದಾದ ಹೋಲಿಕೆ ಇರುವದನ್ನು ಮರೆಯಲಾಗುವದಿಲ್ಲ; ಅಷ್ಟು ಮಾತ್ರವಲ್ಲ ಗಾಂಧಿಯವರೇ ಹಲವು ಸಂದರ್ಭಗಳಲ್ಲಿ ಒಪ್ಪಿಕೊಂಡಿರುವಂತೆ ಅವರ ಮೇಲಾದ ಬಸವಣ್ಣನವರ ಪ್ರಭಾವವನ್ನು ಅಲ್ಲಗಳೆಯಲಾಗುವಂತಿಲ್ಲ. ನಿದರ್ಶನವಾಗಿ — ೧೯೨೪ ರಲ್ಲಿ ಬೆಳಗಾವಿಯಲ್ಲಿ ಸೇರಿದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಕಾಲಕ್ಕೆ ವೀರಶೈವ ಪರಿಷತ್ತನ್ನು ಸಂಘಟಿಸಿದ ಸಂದರ್ಭದಲ್ಲಿ ಹರ್ಡೇಕರ ಮಂಜಪ್ಪನವರು ಲಕ್ಷ್ಮಣರಾವ್ ಭಿಡೆ ಅವರಿಂದ ಹಿಂದಿ ಮತ್ತು ಮರಾಠಿ ಭಾಷೆಗಳಲ್ಲಿ 'ಸತ್ಯಾಗ್ರಹಿ ಬಸವೇಶ್ವರ' ಎಂಬ ಹೆಸರಿನಲ್ಲಿಯೇ ಚಿಕ್ಕ ಕೃತಿಯೊಂದನ್ನು ಪ್ರಕಟಿಸಿ ಗಾಂಧಿಯವರನ್ನು ಮೊದಲುಗೊಂಡು ಇತರ ಮಹತ್ವದ ರಾಷ್ಟ್ರೀಯ ಮುಖಂಡರಿಗೂ ಹಂಚಿದಂದನ್ನು ಇಲ್ಲಿ ಸ್ಮರಿಸಬೇಕು. ಬಸವಣ್ಣನವರ ಬಗ್ಗೆ ಆಗತಾನೆ ಓದಿ-ಕೇಳಿ ತಿಳಿದುಕೊಂಡ ಗಾಂಧಿಯವರು ಅಂದಿನ ತಮ್ಮ ಭಾಷಣದಲ್ಲಿ "ನಾನು ಬಸವಣ್ಣನವರ ತತ್ವಗಳಲ್ಲಿ ಒಂಬತ್ತನ್ನು ಮಾತ್ರ ಈಗ ಆಚರಿಸಲಿಕ್ಕೆ ಆರಿಸಿಕೊಂಡಿದ್ದೇನೆ; ಅವುಗಳನ್ನೇ ಈಗ ನಾನು ಕಾರ್ಯರೂಪಕ್ಕೆ ತರುತ್ತಲಿದ್ದೇನೆ."[೭] ಎಂದು ಪ್ರಾಂಜಲಮನಸ್ಸಿನಿಂದ ಹೇಳಿದ್ದು, ಈ ಸಂದರ್ಭದಲ್ಲಿ ಅತ್ಯಂತ ಗಮನಾರ್ಹ; ಅದರೊಂದಿಗೆ ಉಳಿದ ಸಭಿಕರಲ್ಲಿ ಕೆಲವರು "ಭಾರತದ ಸ್ವಾತಂತ್ರ್ಯಕ್ಕಾಗಿ ಮಹಾತ್ಮಾಜಿಯವರು ಯಾವ ತತ್ವವನ್ನು ಅಂಗೀಕರಿಸಿರುವರೊ ಆ ತತ್ವಗಳ ಜನಕರಾದ ಬಸವಣ್ಣನವರ ಅನುಯಾಯಿಗಳೇ ಈ ಕರ್ನಾಟಕದಲ್ಲಿ ತುಂಬಿರುವಂತೆ ಕಾಣುತ್ತದೆ."[೮] ಎಂದು ಹೇಳಿ, ಆ ಮೂಲಕ ಗಾಂಧೀಪ್ರಣೀತ ತತ್ವಗಳು ಬಸವತತ್ವಗಳ ಪ್ರತಿಧ್ವನಿ ಎಂದು ಮನಗಾಣಿಸಿಕೊಟ್ಟುದಂದನ್ನೂ ಸ್ಮರಿಸಿಕೊಳ್ಳಬೇಕು; ಹಾಗೆಯೇ ಗಾಂಧಿಯವರ ರಾಷ್ಟ್ರೀಯ ಚಳುವಳಿಯನ್ನು ಕರ್ನಾಟಕದ ಬ್ರಾಹ್ಮಣೇತರಜನಾಂಗ ಸಂಶಯ ಹಾಗೂ ಆತಂಕಗಳಿಂದ ಕಾಣುತ್ತಿದ್ದ ಸಂದರ್ಭದಲ್ಲಿ ಹರ್ಡೇಕರ ಮಂಜಪ್ಪನಂಥವರು, ರಾಷ್ಟ್ರೀಯ ಚಳುವಳಿಯ ಸ್ವರೂಪ, ಸತ್ಯಾಗ್ರಹ ಸಿದ್ಧಾಂತಗಳು, ಶರಣರ ಆಂದೋಲನ ಹಾಗೂ ಸಿದ್ಧಾಂತಗಳ ಆಂತರಿಕ ಸಂಬಂಧವನ್ನು ತೋರಿಸಿಕೊಡುವ ಮೂಲಕ ಕರ್ನಾಟಕದಲ್ಲಿ ರಾಷ್ಟ್ರೀಯ ಚಳುವಳಿಗೆ ಉತ್ತೇಜನವನ್ನು ತಂದುಕೊಟ್ಟಿದ್ದೂ ಅಷ್ಟೇ ಸ್ಮರಣಾರ್ಹವಾಗಿದೆ.

ಇನ್ನೂ ಹೇಳಬೇಕೆಂದರೆ, ೧೯೩೩ರಲ್ಲಿ ಗಾಂಧಿಯವರು ಹಿಂಡಲಗಿ ಜೈಲಿನಲ್ಲಿದ್ದಾಗ ರಂಗನಾಥ ದಿವಾಕರ ಅವರು ರಚಿಸುತ್ತಿದ್ದ 'ವಚನಶಾಸ್ತ್ರ ರಹಸ್ಯ" ಗ್ರಂಥ

ವನ್ನು ಕುರಿತೂ ತಿಳಿದುಕೊಂಡಿದ್ದರು; ಎಂ. ಪಿ. ಪಾಟೀಲರು ಬಸವಣ್ಣನವರ ಕೆಲವು ವಚನಗಳನ್ನು ಇಂಗ್ಲೀಷಿನಲ್ಲಿ ಅನುವಾದಿಸಿಯೂ ತೋರಿಸಿದ್ದರು; ಅಲ್ಲದೆ ಸ್ವತಃ ಗಾಂಧಿಯವರೇ ಕರ್ನಾಟಕದ ಮುಂದಾಳುಗಳಾಗಿದ್ದ ಗಂಗಾಧರರಾಯರಿಗೆ "ಬಸವಣ್ಣನವರು ನಿಜವಾದ ಅಹಿಂಸಾವಾದಿಗಳು ಮತ್ತು ಸತ್ಯನಿಷ್ಠರು; ಅವರು ಮಾಡಿದ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣಾಕಾರ್ಯವು ಅಪೂರ್ವವಾಗಿದೆ. ಆದ್ದರಿಂದ ನೀವು ಅವರ ಚರಿತ್ರೆಯ ಮತ್ತು ಅವರ ಕಾರ್ಯದ ಪರಿಚಯ ಮಾಡಿಕೊಳ್ಳಿರಿ."[೯] ಎಂದು ಮೌಲಿಕ ಸಲಹೆಯನ್ನೂ ಇತ್ತಿದ್ದರು.

ಈ ಹಿನ್ನೆಲೆಯಲ್ಲಿ ಗಾಂಧಿಯವರ ಸತ್ಯಾಗ್ರಹದಂಥ ತತ್ವಗಳನ್ನು ಮತ್ತು ಶರಣತತ್ವಗಳನ್ನು ಮುಖಾಮುಖಿಯಾಗಿ ನಿಲ್ಲಿಸಿ ನೋಡಿದಾಗ ಅವೆಲ್ಲ ಒಂದೇ ಬೇರಿನ ಕುಡಿಗಳಾಗಿ, ಬಿಂಬಪ್ರತಿಬಿಂಬಗಳಾಗಿ ಕಾಣಿಸಿಕೊಂಡರೆ ಅಚ್ಚರಿಯಲ್ಲ. ಅವೆಲ್ಲ ಕಾಲಮಾನ ಪರಿಸರವನ್ನು ಮೀರಿ ಸಂವಾದಿಗಳಾಗಿ ಕಾಣಿಸಿಕೊಳ್ಳುವಂಥವುಗಳು. ಹೀಗಾಗಿ ವ್ಯಕ್ತಿ-ಸಮಾಜ, ರಾಷ್ಟ್ರ-ವಿಶ್ವಗಳ ಯೋಗಕ್ಷೇಮಕ್ಕೆ, ಉದ್ಧಾರಕ್ಕೆ ಸಂಬಂಧಿಸಿದ ಎಲ್ಲ ತತ್ವಗಳನ್ನು ಗರ್ಭೀಕರಿಸಿಕೊಂಡ ಸತ್ಯಾಗ್ರಹ ಮತ್ತು ಅದರ ಪ್ರಯೋಗ–ಅನುಷ್ಠಾನ ಶರಣತತ್ವ ಹಾಗೂ ಚಳುವಳಿಯ ಮುಂದುವರಿಕೆಯಾಗಿ ಕಂಡರೆ ಆಶ್ಚರ್ಯವಿಲ್ಲ.

'ಸತ್ಯಾಗ್ರಹ'ವೆನ್ನುವದು ಆಧುನಿಕ ಕಾಲದ ರಾಜಕೀಯ ಹೋರಾಟದ ವಿಶಿಷ್ಟ ಸಂದರ್ಭದಲ್ಲಿ ಅಂದರೆ ಗಾಂಧಿಯವರ ನೇತೃತ್ವದಲ್ಲಿ ದಕ್ಷಿಣ ಆಫ್ರಿಕಾದ ಭಾರತೀಯರೆಲ್ಲ ನಡೆಸಿದ ರಾಜಕೀಯ ಹೋರಾಟದ ಸಂದರ್ಭದಲ್ಲಿ ಆಕಸ್ಮಿಕವೆನ್ನುವಂತೆ ಅಸ್ಪಷ್ಟವಾಗಿ ಸುಳುಹುದೋರಿ, ಅನಂತರ ಉನ್ಮೀಲನಗೊಳ್ಳುತ್ತ, ಸ್ಪಷ್ಟವಾದ ಆಕಾರವನ್ನು ತಾಳುತ್ತ ಒಂದು ಖಚಿತ ಸಿದ್ಧಾಂತವಾಗಿ ರೂಪಗೊಂಡದ್ದು. ಹೀಗೆ ಒಂದು ಕಾಲದ ರಾಜಕೀಯ ಸಂದರ್ಭದಲ್ಲಿ ಕಾಣಿಸಿಕೊಂಡ ಒಂದು ಆಧುನಿಕ ಯುಗದ ಸಿದ್ಧಾಂತಕ್ಕೂ ಮತ್ತು ಒಂದು ಧಾರ್ಮಿಕ ನೆಲೆಯಲ್ಲಿ, ಅದು ಕೂಡ ನೂರಾರು ವರ್ಷಗಳ ಹಿಂದೆ ನಡೆದ ಆಂದೋಲನದ ಸಂದರ್ಭದಲ್ಲಿಯ ಸಿದ್ಧಾಂತಗಳಿಗೂ ಸಂಬಂಧವನ್ನು ಕಲ್ಪಿಸುವದು ಒಂದು ಯಾಂತ್ರಿಕ ಪ್ರಯತ್ನ, ಇಲ್ಲವೆ ಭ್ರಮೆಯೆನ್ನುವದಾದರೆ ಆಯಾ ಸಿದ್ಧಾಂತಗಳ ವ್ಯಾಪ್ತಿಯನ್ನು, ಅವುಗಳ ಅಂತರ್ಯವನ್ನು ಅರ್ಥಮಾಡಿಕೊಳ್ಳದೆ ಅವೆರಡಕ್ಕೂ ಮಾಡುವ ಕೆಟ್ಟ ಅಪಚಾರ.

'ಸತ್ಯಾಗ್ರಹ' ಎಂಬುದು ಗಾಂಧಿಯವರಿಂದ ಮಾನವ ಇತಿಹಾಸಕ್ಕೆ ಸಂದ ಒಂದು ಉಜ್ವಲವಾದ ಅಪೂರ್ವ ಕೊಡುಗೆ. ಸಾಮಾಜಿಕ, ಧಾರ್ಮಿಕ, ರಾಜಕೀಯ ಬದುಕಿನಲ್ಲಿಯ ಎಲ್ಲ ಅಂತರಗಳನ್ನೂ ಅಳಿಸಿಹಾಕಿ ಆತ್ಮಕಲ್ಯಾಣದಲ್ಲಿಯೇ ಲೋಕಕಲ್ಯಾಣವನ್ನು, ಲೋಕಕಲ್ಯಾಣದಲ್ಲಿಯೇ ಆತ್ಮಕಲ್ಯಾಣವನ್ನು ಸಾಧಿಸುವ ದಿವ್ಯ

ರಹಸ್ಯವನ್ನು ಸ್ಫೋಟಗೊಳಿಸುವ, ಆ ಮೂಲಕ ಪುರುಷಾರ್ಥಗಳಿಗೆ ಸಾಧಕವಾದ ಗಾಂಧೀಪ್ರಣೀತ ದಾರ್ಶನಿಕಸಿದ್ಧಾಂತ. 'ಸತ್ಯಾಗ್ರಹ'ದಲ್ಲಿಯ 'ಸತ್ಯ' ಎಂಬ ಪರಿಕಲ್ಪನೆಯಾಗಲಿ, ಅದು ಒಳಗೊಳ್ಳುವ ಅಹಿಂಸೆ, ಬ್ರಹ್ಮಚರ್ಯ, ನಿರ್ಭಯತೆ, ಅಸ್ತೇಯ, ಅಸ್ವಾಮ್ಯ, ತ್ಯಾಗ ಇತ್ಯಾದಿ ತತ್ವಗಳಿಗಾಗಲಿ ಭಾರತೀಯ ದಾರ್ಶನಿಕ ಸಂದರ್ಭದಲ್ಲಿ ಹೊಸದೇನೂ ಅಲ್ಲ; ಹಾಗೆ ನೋಡಿದರೆ ಅದು ಭಾರತೀಯ ದಾರ್ಶನಿಕ ಪರಂಪರೆಯಷ್ಟೇ ಪ್ರಾಚೀನವಾದದ್ದು. ಸತ್ಯಕಾಮ, ಸತ್ಯಧರ್ಮ, ಸತ್ಯಾನ್ವೇಷಿ, ಸತ್ಯಧೃತಿ, ಸತ್ಯವಂತ ಇತ್ಯಾದಿ ಶಬ್ದಗಳಂತೆ "ಸತ್ಯನ್ನಾಸ್ತಿ ಪರೋ ಧರ್ಮಃ" (ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ), 'ಸತ್ಯಮಾಯಂತನಮ್' (ಸತ್ಯವೇ ಆಶ್ರಯಸ್ಥಾನ), "ಅಸತೋಮಾ ಸದ್ಗಮಯ" "ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಂ ತತ್ವಂ ಪೂಷನ್ ಅಪಾವೃಣು· ಸತ್ಯಧರ್ಮಾಯ ದೃಷ್ಟಯೇ" (ಸತ್ಯದ ಮುಖವು ಚಿನ್ನದ ಮುಚ್ಚಳದಿಂದ ಮುಚ್ಚಲ್ಪಟ್ಟಿರುವುದು; ಹೇ, ಸರ್ವಪೋಷಕನೆ ಸತ್ಯಧರ್ಮಕ್ಕಾಗಿ, ಸತ್ಯದ ದರ್ಶನಕ್ಕಾಗಿ ಆ ಮುಚ್ಚಳವನ್ನು ತೆಗೆ) ಎಂಬಂಥ ಉಕ್ತಿಗಳನ್ನು ನಮ್ಮ ದರ್ಶನಪರಂಪರೆಯ ಉದ್ದಕ್ಕೂ ಗುರುತಿಸಬಹುದು. ಆದರೆ ಈ ಸನಾತನಧರ್ಮಪರಂಪರೆಯ ಜೀವದ್ರವ್ಯವನ್ನು ಹರಳುಗೊಳಿಸಿ, ಅದನ್ನು 'ಸತ್ಯಾಗ್ರಹ' ಎಂಬ ವಿನೂತನ ಪರಿಕಲ್ಪನೆಯನ್ನಾಗಿ ಗುರುತಿಸಿ ಒಂದು ಅಸ್ತ್ರವನ್ನಾಗಿ, ಒಂದು ಯುಗಧರ್ಮವನ್ನಾಗಿ ಆವಿಷ್ಕರಿಸಿಕೊಟ್ಟ ಶ್ರೇಯಸ್ಸು ಗಾಂಧಿಯವರದು. "ಯಾವ ನೂತನ ಸಿದ್ಧಾಂತಗಳನ್ನು ನಾನು ಮಂಡಿಸಿಲ್ಲ, ಆದರ ಬದಲು ಸಿದ್ಧಾಂತಗಳ ಪುನರ್ ನಿರೂಪಣೆಯ ಪ್ರಯತ್ನ ನನ್ನದು."[೧೦] "ನೂತನ ಸಿದ್ಧಾಂತದ ಮೂಲಪುರುಷ ನಾನಲ್ಲ. ಸತ್ಯ ಅಹಿಂಸೆಗಳು ಪರ್ವತದಂತೆ ಪುರಾತನ, ಅವೆರಡರಲ್ಲೂ ಪ್ರಯೋಗ ನಡೆಸುವದಷ್ಟೇ ನನ್ನ ಕೆಲಸ"[೧೧] ಎಂಬಂಥ ಅವರ ಹೇಳಿಕೆಗಳನ್ನು ಈ ಹಿನ್ನೆಲೆಯಲ್ಲಿ ಗ್ರಹಿಸಬೇಕು.

ಗಾಂಧಿಯವರ ಭಗವದ್ಭಕ್ತಿ ಹಾಗೂ ಅದ್ವೈತದರ್ಶನದ ಮೇಲಿನ ಅವರ ಅಚಲ ಶ್ರದ್ಧೆಯ ನೆಲೆಯಲ್ಲಿ 'ಸತ್ಯಾಗ್ರಹ' ಸಿದ್ಧಾಂತ ಮೂರ್ತಗೊಂಡದ್ದು. ಈ ಎರಡೂ ಶಕ್ತಿಗಳು ಅದಕ್ಕೆ ಭಾವನಾತ್ಮಕ ಹಾಗೂ ವೈಜ್ಞಾನಿಕ ಸಮರ್ಥನೆಯನ್ನು ಒದಗಿಸಿವೆ. "ಅದ್ವೈತದಲ್ಲಿ ನನಗೆ ಶ್ರದ್ಧೆ ಇದೆ. ಜೀವ ಸಮಸ್ತದ ಅಖಂಡತೆಯಲ್ಲಿ ನನಗೆ ವಿಶ್ವಾಸವಿದೆ."[೧೨] "ಎಲ್ಲವೂ ದೇವಾಂಶಸಂಭೂತ, ಭಗವಂತನ ಅಖಂಡತೆಯನ್ನು ನಂಬುವದರೊಂದಿಗೆ ಜನತೆಯ ಅಖಂಡತೆಯನ್ನೂ ನಂಬಬೇಕು."[೧೩] "ರಾಜಕೀಯ, ಧಾರ್ಮಿಕ, ಸಾಮಾಜಿಕ ಎಲ್ಲವೂ ಈಶ್ವರನ ಸಾಕ್ಷಾತ್ಕಾರದ ಪರಮೋದ್ದೇಶದಿಂದಲೇ ನಿಯಂತ್ರಿತವಾಗಬೇಕು...... ಈಶ್ವರ ಸೃಷ್ಟಿಯಲ್ಲಿ ಆತನನ್ನು ಕಂಡು ಅದರಲ್ಲಿಯೇ ಒಂದಾಗುವದು ಈಶ್ವರದರ್ಶನದ ಏಕೈಕ ಮಾರ್ಗ. ಸರ್ವರ ಸೇವೆಯೊಂದೇ ಇದಕ್ಕೆ ಸಾಧನ, ನಾನು ಸರ್ವದ ಒಂದು ಅಂಶ, ಇತರರನ್ನು ಬಿಟ್ಟು

ನಾನೊಬ್ಬನೇ ಆತನನ್ನು ಪಡೆಯಲಾರೆ"೧೪ ಎಂಬ ಅವರ ಮಾತುಗಳು ಇದಕ್ಕೆ ಸ್ಪಷ್ಟವಾದ ಸಮರ್ಥನೆಯನ್ನು ಒದಗಿಸುತ್ತವೆ.

'ಸತ್ಯಾಗ್ರಹ' ಎನ್ನುವದು ಸತ್ಯ ಮತ್ತು ಆಗ್ರಹ ಎಂಬ ಶಬ್ದಗಳ ಸಮಾಸ ದಿಂದ ನಿಷ್ಪನ್ನಗೊಂಡ ಒಂದು ಪರಿಕಲ್ಪನೆಯೂ ಹೌದು; ಒಂದು ಪ್ರಕ್ರಿಯೆಯೂ ಹೌದು. ಇಲ್ಲಿ 'ಸತ್ಯ'ವೆಂಬುದು ದೇವರು. ಆತ್ಮದ ಮೂಲಸ್ವರೂಪ, ಪರ ಬ್ರಹ್ಮವೇ ಹೊರತು ಬೇರೆಯಲ್ಲ. ಅಹಿಂಸೆ-ಪ್ರೇಮ ಅದರ ಇನ್ನೊಂದು ರೂಪ; ನಿತ್ಯ-ಶಾಶ್ವತ, ನಿರ್ವಿಕಾರವೆಂಬುದು ಅದರ ಮೂಲ ಗುಣ. ಹಾಗಾಗಿ ಭಗವಂತನೇ ಪ್ರಾಣಶಕ್ತಿ, ಅವನೇ ಸತ್ಯ, ಜ್ಯೋತಿ ಎಂದು ನಂಬಿದ ಗಾಂಧಿಯವರ ಮೇರೆಗೆ 'ಸತ್ಯಾಗ್ರಹ' ಎನ್ನುವದು ಇಂಥ ಭಗವದ್ರೂಪಿ ಸತ್ಯದ ಸಾಕ್ಷಾತ್ಕಾರದ ಆಗ್ರಹ; ಸತ್ಯದ ಸಾಕ್ಷಾತ್ಕಾರಕ್ಕಾಗಿ ಮಾಡುವ ಆಗ್ರಹ. ಇಲ್ಲಿ ಆಗ್ರಹವೆಂದರೆ ಒತ್ತಾಯ, ಬಲವಂತಿಕೆ, ಹಟ, ಛಲ, ಶ್ರದ್ಧೆ, ವಿಶ್ವಾಸ, ಸಾಮರ್ಥ್ಯ, ಶಕ್ತಿ ಎಂದು ಇತ್ಯಾದಿ ಅರ್ಥ. ಸತ್ಯಕ್ಕೆ, ಆತ್ಮಸಾಕ್ಷಿಗೆ ವಿರುದ್ಧವಾದದ್ದನ್ನು, ಪ್ರತಿಕೂಲವಾದದ್ದನ್ನು, ಅಪ ಚಾರವಾದದ್ದನ್ನು ಅಂದರೆ ಹಿಂಸೆ, ಕ್ರೌರ್ಯ, ದ್ವೇಷ, ದ್ವಂದ್ವ, ಮೋಹ, ಮಮ ತ್ವಾದಿ ಅಮಾನವೀಯ ಗುಣಗಳನ್ನು ಅಹಿಂಸೆ ಹಾಗೂ ಪ್ರೇಮದ ಮೂಲಕ ಎದುರಿಸಿ ವ್ಯಕ್ತಿ–ಸಮಾಜದಲ್ಲಿ ಪರಿವರ್ತನೆಯನ್ನು ತರುವದು, ಅದಕ್ಕಾಗಿ ಸರ್ವಾ ರ್ಪಣ ಭಾವದಿಂದ ಹೋರಾಡುವದು ಸತ್ಯಾಗ್ರಹ. ಜೀವಗುಣವನ್ನು ಆತ್ಮಗುಣ ವನ್ನಾಗಿ ಪರಿವರ್ತಿಸು ವದು ಸತ್ಯಾಗ್ರಹವೇ ಹೊರತು ಕೇವಲ ರಾಜಕೀಯ ಪ್ರತಿ ಭಟನೆ, ರೋಷಭರಿತ ಅಸಮಾಧಾನದ ಹೋರಾಟವಲ್ಲ. ಒಟ್ಟಿನಲ್ಲಿ ವ್ಯಕ್ತಿಯ-ಸಮಾಜದ, ಒಟ್ಟು ಲೋಕದ ಪರಿವರ್ತನೆಗಾಗಿ, ಉದ್ಧಾರಕ್ಕಾಗಿ ಆತ್ಮಸಾಕ್ಷಿಯಾಗಿ ಆತ್ಮಶಕ್ತಿಯಿಂದ ಅಹಿಂಸಾಮೂಲಕವಾಗಿ ತನ್ನನ್ನು ಸಮರ್ಪಿಸಿಕೊಳ್ಳುವದು, ಆ ಮೂಲಕವಾಗಿ ಆತ್ಮಸಾಕ್ಷಾತ್ಕಾರವನ್ನು ಪಡೆಯುವದು ಸತ್ಯಾಗ್ರಹ. ಅಂದರೆ ಅದುವೇ ಶರಣಧರ್ಮ. ಹಾಗೆ ತನ್ನನ್ನು ಆತ್ಮಸಾಕ್ಷಿಯಾಗಿ ಸಮರ್ಪಿಸಿಕೊಳ್ಳುವ ಪ್ರತಿಯೊಬ್ಬ ವ್ಯಕ್ತಿಯೂ ಸತ್ಯಾಗ್ರಹಿ, ಅವನೇ ಶರಣ.

ಬಸವತತ್ವ ಮತ್ತು ಗಾಂಧಿತತ್ವಗಳನ್ನೆರಡನ್ನೂ ಅವುಗಳ ಸ್ವರೂಪ-ಆಶಯಗಳ ಹಿನ್ನೆಲೆಯಲ್ಲಿ ಪೃಥಕ್ಕರಿಸಿ ನೋಡಿದಾಗ, ಅದೆಷ್ಟೋ ಹಂತಗಳಲ್ಲಿ, ಅವೆರಡೂ ಸಮೀಕರಣಗೊಳ್ಳುವದನ್ನು ಕಾಣಬಹುದಾಗಿದೆ; ಅಂಥ ಸಂದರ್ಭಗಳಲ್ಲಿ ಸತ್ಯಾಗ್ರಹ ಬೇರೆಯಲ್ಲ, ಶರಣಧರ್ಮ ಬೇರೆಯಲ್ಲ; ಶರಣ ಬೇರೆಯಲ್ಲ, ಸತ್ಯಾಗ್ರಹಿ ಬೇರೆಯಲ್ಲ ಎನಿಸಿಬಿಡುತ್ತದೆ. ಶಕ್ತಿವಿಶಿಷ್ಟಾದ್ವೈತದ ನೆಲೆಗಟ್ಟಿನ ಮೇಲೆ ಹೆಚ್ಚು ವೈಜ್ಞಾನಿಕವಾಗಿ ಪ್ರತಿಪಾದಿತವಾದ ಶರಣಧರ್ಮವೇ ಅದ್ವೈತದರ್ಶನದ ನೆಲೆಯಲ್ಲಿ ಮೂರ್ತಗೊಂಡ ಗಾಂಧಿಪ್ರಣೀತ ಸತ್ಯಾಗ್ರಹದಲ್ಲಿ ಪ್ರತಿಬಿಂಬಿತವಾಗಿರುವದು ಕಂಡು ಬರುತ್ತದೆ.

ಶರಣಧರ್ಮ ಅಥವಾ ವೀರಶೈವದ ಮೇರೆಗೆ ಶಕ್ತಿವಿಶಿಷ್ಟವಾದ ಪರಬ್ರಹ್ಮ ಪ್ರಕಾಶವೇ ತನ್ನ ಲೀಲೆಗಾಗಿ ತಾನೇ ಲಿಂಗವಾಗಿ ಉಪಾಸ್ಯವಾದಂತೆ, ಅಂಗವಾಗಿ ಉಪಾಸಕವೂ ಆಯಿತು. ಆ ಅಂಗ-ಲಿಂಗಗಳೆರಡೂ ಶಕ್ತಿವಿಶಿಷ್ಟವಾದವುಗಳೆ. ಇನ್ನು 'ಪರಶಿವನಲ್ಲಿ ಅವಿನಾಭಾವ ಸಂಬಂಧದಿಂದಿರುವ ವಿಮರ್ಶನ ಪ್ರವೃತ್ತಿಯ ಪರಿಣಾಮವೇ ಜಗತ್ತು' ಅದು ಕೂಡ ಶಕ್ತಿವಿಶಿಷ್ಟವಾದದ್ದು. ಆದ್ದರಿಂದ ಶಕ್ತಿವಿಶಿಷ್ಟವಾದ ಜೀವಿಯು ತನ್ನ ಶಕ್ತಿಯನ್ನು ವಿಕಾಸಗೊಳಿಸಿಕೊಂಡು ಇತರ ಜೀವಿಗಳೊಡನೆ ಪಡೆಯುವ ಸಾಮರಸ್ಯದೊಂದಿಗೆ ಅಖಂಡ ಜೀವವಾಗಿ ಅಖಂಡ ಸ್ಥಲದಲ್ಲಿ ಸಾಮರಸ್ಯಗೊಳ್ಳುವದು ಮುಕ್ತಿ. ಇಲ್ಲಿ ವ್ಯಷ್ಟಿ-ಸಮಷ್ಟಿಗಳ ಶಕ್ತಿವಿಕಾಸದ ಮೂಲಕ ಪಡೆಯುವ ಸಾಮರಸ್ಯವೇ ಲಿಂಗಾಂಗಸಾಮರಸ್ಯ. ಈ ವ್ಯಷ್ಟಿ-ಸಮಷ್ಟಿಗಳ ಸಾಮರಸ್ಯಕ್ಕಾಗಿ ಶರಣನು ನಡೆಸುವ ಸಾಧನೆ ಮತ್ತು ಹೋರಾಟವೆ ಶರಣಧರ್ಮ. ಇನ್ನೊಂದು ಅರ್ಥದಲ್ಲಿ ಅದುವೇ ಸತ್ಯಾಗ್ರಹ. ಈ 'ಸತ್ಯಾಗ್ರಹಿ'ಯು ಏಕೋದಶ ವ್ರತಗಳನ್ನು, ಶರಣಧರ್ಮದ ಷಟಸ್ಥಲ, ಅಷ್ಟಾವರಣಗಳ, ಅದಕ್ಕೂ ಹೆಚ್ಚಾಗಿ 'ಪಂಚಾಚಾರ'ದ ಪ್ರಕ್ರಿಯೆಯಲ್ಲಿ ಸ್ಪಷ್ಟವಾಗಿ ಗುರುತಿಸಬಹುದು.

ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ ಮತ್ತು ಭೃತ್ಯಾಚಾರವೆಂದು ಐದು ಪ್ರಮುಖ ಆಚರಣೆಗಳಿದ್ದು ಅವುಗಳಲ್ಲಿ ಲಿಂಗಧ್ಯಾನಾದಿಗಳೇ ಪ್ರಮುಖವಾಗಿರುವ ಲಿಂಗಾಚಾರವು ವ್ಯಷ್ಟಿಯ ವಿಕಾಸಕ್ಕೆ ನೆರವಾಗುವಂತಹದು; ಅದರಂತೆ ಸಮಸ್ತ ಪ್ರಾಣಿಗಳಲ್ಲಿ ಪಾತ್ರಾಪಾತ್ರವ ತಿಳಿದು ಪರಹಿತಾರ್ಥಿಯಾಗುವದು ಮತ್ತು ಜೀವಿಗಳ ಉದ್ಧಾರ ಬಯಸುವದು ಸದಾಚಾರ; ಈ ಸದಾಚಾರವು ಸತ್ಯಶುದ್ಧ ಕಾಯಕವನ್ನೂ ಒಳಗೊಳ್ಳುವಂತಹದು.

ಇನ್ನು ಲಿಂಗಾಚಾರದಿಂದ ತಾನೊಬ್ಬನೇ ಶಿವಸ್ವರೂಪಿಯೆಂದು ಭಾವಿಸದೆ ಇತರ ಶಿವಭಕ್ತರನ್ನು ಶಿವಸ್ವರೂಪಿಗಳೆಂದು ತಿಳಿದು ಅವರೊಡನೆ ಅಭೇದಬುದ್ಧಿಯಿಂದ ವರ್ತಿಸುವದು, ಮುಂದುವರೆದು 'ಸರ್ವಂ ಶಿವಮಯಂ ಜಗತ್' ಎಂಬ ವಿಶ್ವವಿಶಾಲ ಮನೋಭಾವನೆಯನ್ನು ಬಳಸಿಕೊಳ್ಳುವದು ಮತ್ತು ಭಕ್ತಸಮಾಜಕ್ಕೆ ಅರ್ಥಪ್ರಾಣಾಭಿಮಾನವನ್ನು ಅರ್ಪಿಸುವದು ಶಿವಾಚಾರದ ಗುರಿ.

ಅಷ್ಟಾವರಣಗಳ ಮೇಲೆ ಅನ್ಯರಿಂದ ಕುಂದುನಿಂದೆಗಳು ಬಂದು ತಟ್ಟಿದಲ್ಲಿ ಗಣಸಮೂಹವನ್ನೊಡಗೂಡಿ ಸ್ಥಳವನ್ನು ತ್ಯಜಿಸುವದು, ಶಿವಧರ್ಮಕ್ಕಾಗಿ ಅಂದರೆ ಶರಣಧರ್ಮಕ್ಕಾಗಿ ಕಷ್ಟಕೋಟಲೆಗಳನ್ನು ಎದುರಿಸುವದು, ಆತ್ಮತ್ಯಾಗಕ್ಕೆ ಸಿದ್ಧನಾಗುವದು, ಪ್ರಾಣಾರ್ಪಣೆಯನ್ನು ಮಾಡುವದು ಗಣಾಚಾರದ ಗುಣ. ಅದರಂತೆ ಸಮಾಜಕ್ಕೆ ದೇಶಕ್ಕೆ, ವಿಶ್ವಕಲ್ಯಾಣಕ್ಕೆ ತನ್ನನ್ನು ಸಮರ್ಪಿಸಿಕೊಳ್ಳುವದು ಭೃತ್ಯಾಚಾರ.[೧೫]

ಹೀಗೆ ಒಟ್ಟಿನಲ್ಲಿ ವ್ಯಷ್ಟಿ-ಸಮಷ್ಟಿಯ ಭವಿತ್ವವನ್ನು ಕಳೆದು ಎಲ್ಲೆಡೆಯಲ್ಲೂ ಶಿವಭಕ್ತಿಯ ಶಕ್ತಿಯನ್ನು ಬೆಳಗುವದು ಶರಣಧರ್ಮದ ಮೂಲಭೂತ ಕಾಳಜಿ. ಭಕ್ತಿಯ ಅಂದರೆ ಶಕ್ತಿಯ ವಿಕಾಸವೆನ್ನುವದೇ ಇನ್ನೊಂದು ಅರ್ಥದಲ್ಲಿ ಸತ್ಯಾಗ್ರಹ; ಭವಿತನವೇ ಇನ್ನೊಂದು ಅರ್ಥದಲ್ಲಿ ದುರಾಗ್ರಹ.

ಆಗಲೆ ಹೇಳಿದಂತೆ 'ಸತ್ಯಾಗ್ರಹ' ಎನ್ನುವದು ಅಹಿಂಸಾಪೂರ್ವಕವಾದ ಅತ್ಯಂತ ಸಾತ್ವಿಕವಾದ ಪ್ರತಿಭಟನೆ. ಅದರ ಉದ್ದೇಶ ಶೋಷಣೆಯ ನಿರ್ಮೂಲನವೇ ಹೊರತು ಶೋಷಕರ ನಿರ್ಮೂಲನೆಯಲ್ಲ. ಮುಖ್ಯವಾಗಿ ಅಲ್ಲಿ ನಡೆಯಬೇಕಾದದ್ದು ಹೃದಯ ಪರಿವರ್ತನೆ. ಅಂತೆಯೇ ಗಾಂಧಿಯವರು ತಮ್ಮ ಎಷ್ಟೋ ವಿರೋಧಿಗಳ ಮನಸ್ಸನ್ನು ಪರಿವರ್ತಿಸಿ ಒಲಿಸಿಕೊಂಡಂತೆ ಬಸವಣ್ಣನವರೂ ಭವಿಗಳನ್ನು ಭಕ್ತರನ್ನಾಗಿ ಪರಿವರ್ತಿಸಿರುವದನ್ನು, ಮಹಿಳೆಯರೂ ಸೇರಿದಂತೆ ಅದೆಷ್ಟೋ ಜನ ತಮ್ಮ ಪೂರ್ವದ ದುಷ್ಕರ್ಮವನ್ನು ಬಿಟ್ಟು ಅನಾಚಾರವನ್ನು ತ್ಯಜಿಸಿ, ಅರಸೊತ್ತಿಗೆಯನ್ನು ಉಳಿದು ಶರಣರಾದ ಉದಾಹರಣೆಗಳಿಗೆ ಕೊರತೆ ಇಲ್ಲ. ಮಧುವರಸ ಶಿವಭಕ್ತನಾದದ್ದು, ಕಳ್ಳರು ಶರಣರಾದದ್ದು ಇತ್ಯಾದಿ ಸಂಗತಿಗಳನ್ನು ಉದಾಹರಣೆಗಾಗಿ ಸ್ಮರಿಸಬಹುದು.

ಅದರಂತೆ ಸತ್ಯಾಗ್ರಹದ ಮುಖ್ಯ ಮಾರ್ಗಗಳಾದ ಅಹಿಂಸಾತ್ಮಕ ಪ್ರತಿಭಟನೆ, ಕಷ್ಟಸಹಿಷ್ಣುತೆ, ಅಸಹಕಾರ, ಸವಿನಯ ಶಾಸನಭಂಗ ಮತ್ತು ದೇಶತ್ಯಾಗದಂಥ ಮಾರ್ಗಗಳನ್ನು ಅನುಸರಿಸಿದ ಉದಾಹರಣೆಗಳನ್ನು ಶರಣರಲ್ಲಿಯೇ ಸಾಕಷ್ಟು ಕಾಣಬಹುದು. ಹಾಗೆ ನೋಡಿದರೆ ವೀರಶೈವ ಪುರಾಣಗಳ ಪ್ರಮುಖ ಉದ್ದೇಶವೇ ಸತ್ಯಾಗ್ರಹದ ಅಂದರೆ ಶರಣಧರ್ಮದ ಮಾರ್ಗಗಳನ್ನು ಪ್ರತಿಬಿಂಬಿಸುವ, ಪ್ರತಿಪಾದಿಸುವ ಉದ್ದೇಶದಿಂದಲೇ ಕೂಡಿದಂತೆ ಕಂಡುಬರುತ್ತದೆ.

ಇವೆಲ್ಲವುಗಳೊಂದಿಗೆ ಇನ್ನೊಂದು ಉಲ್ಲೇಖನೀಯ ವಿಷಯವೆಂದರೆ, ಸಮಾಜದಲ್ಲಿಯ ಅನ್ಯಾಯಗಳನ್ನು ಎದುರಿಸುವದಕ್ಕಾಗಿಯೇ ತಮ್ಮನ್ನು ಸಮರ್ಪಿಸಿಕೊಂಡ ಮುಳ್ಳಾವಿಗೆಯ ಕಾಯಕ ಅಯ್ಯಗಳ ಒಂದು ವರ್ಗವೇ ಶರಣರ ಕಾಲದಲ್ಲಿ ನಿರ್ಮಾಣಗೊಂಡಿದ್ದಂತೆ ತಿಳಿದುಬರುತ್ತದೆ. ಸಮಾಜಕ್ಕೆ ಯಾರಾದರೂ ಅನ್ಯಾಯ ವೆಸಗಿದರೆ ಈ ಅಯ್ಯಗಳು ಅವರ ಓಣಿ-ಕೇರಿಗಳಲ್ಲಿ ಇಲ್ಲವೆ ಅವರ ಮನೆಯ ಮುಂದೆ ಮುಳ್ಳಾವಿಗೆಯ ಮೇಲೆ ನಿಂತು ಉಪವಾಸವನ್ನು ಆಚರಿಸುತ್ತಿದ್ದರು; ಅಪರಾಧಿಗಳು ಪಶ್ಚಾತ್ತಾಪದಿಂದ ಶರಣುಬಂದಾಗ, ಅಂದರೆ ಪರಿವರ್ತಿತರಾದಾಗ ಮಾತ್ರ ತಮ್ಮ ಶರಣಪ್ರತಿಭಟನೆಯನ್ನು ನಿಲ್ಲಿಸುತ್ತಿದ್ದರು. ಇದು ಗಾಂಧೀಪ್ರಣೀತ ಸತ್ಯಾಗ್ರಹದಲ್ಲಿ ಕಾಣಿಸಿಕೊಳ್ಳುವ ಉಪವಾಸ, ಮತ್ತು ಆತ್ಮಕ್ಲೇಶಾನುಭವಕ್ಕೆ ಒಂದು ಸಂವಾದಿಯಾಗಬಲ್ಲ ಸಂಗತಿ.

ಇನ್ನು ಅಸಹಕಾರವೆಂದರೆ, ಅದು ರಾಜಕೀಯ ಅಸಹಕಾರವೇ ಆಗಬೇಕಿಲ್ಲ. ಶರಣರು ರಾಜಕೀಯವಾಗಿ ಮಾತ್ರವಲ್ಲ ಧಾರ್ಮಿಕವಾಗಿಯೂ, ಸಾಮಾಜಿಕ ಹಾಗೂ ಕೌಟುಂಬಿಕವಾಗಿಯೂ ಅಸಹಕಾರವನ್ನು ಪ್ರದರ್ಶಿಸಿರುವದಕ್ಕೆ ಗಾಂಧಿ ಹಾಗೂ ಶರಣರ ಬದುಕಿನಲ್ಲಿಯೇ ಸಾಕಷ್ಟು ಉದಾಹರಣೆಗಳನ್ನು ನೋಡಬಹುದು. ಬಸವಾದಿ ಶರಣರು ವರ್ಣಾಶ್ರಮ ವ್ಯವಸ್ಥೆಗೆ ಅಸಹಕಾರವನ್ನು ಪ್ರದರ್ಶಿಸಿದ್ದು, ವರ್ಣಸಂಕರಗೈದು ಭೀಕರ ಆಪತ್ತನ್ನು ಮೈಮೇಲೆ ಹಾಕಿಕೊಂಡದ್ದು-ಇವೇ ಮೊದಲಾದವುಗಳು ಅಸಹಕಾರಕ್ಕೆ ಅವಿಸ್ಮರಣೀಯ ಉದಾಹರಣೆಗಳು. ಎಲ್ಲಕ್ಕೂ ಮುಖ್ಯವಾಗಿ ಬಿಜ್ಜಳನಿಂದ ಮತ್ತು ಪುರೋಹಿತವರ್ಗದಿಂದ ಉಲ್ಬಣಿಸಿದ ಅನ್ಯಾಯವನ್ನು, ಹಿಂಸೆಯನ್ನು ಪ್ರತಿಭಟಿಸಲು ಬಸವಣ್ಣನವರೂ ದೇಶತ್ಯಾಗ ಮಾಡಿದುದು ಈ ಸಂದರ್ಭದಲ್ಲಿ ಮತ್ತೂ ಗಮನಾರ್ಹವಾದುದ್ದು.

ಇನ್ನೊಂದು ಮುಖ್ಯವಿಷಯ : ಈ ಸಂದರ್ಭದಲ್ಲಿ ಸತ್ಯಾಗ್ರಹಕ್ಕೂ ಆಗಲೇ ಪಾಶ್ಚಾತ್ಯರಲ್ಲಿ ಆಚರಣೆಯಲ್ಲಿದ್ದ ಸಾತ್ವಿಕ ಪ್ರತಿಭಟನೆ (Passive Resistance) ಗೂ ಮತ್ತು ಶರಣಧರ್ಮಕ್ಕೂ ಇರುವ ಆಂತರಿಕ ಸಂಬಂಧ-ವ್ಯತ್ಯಾಸಗಳನ್ನು ಸ್ಥೂಲವಾಗಿಯಾದರೂ ಗಮನಿಸಬೇಕಾದದ್ದು ಅತ್ಯನಿವಾರ್ಯ.

ವ್ಯಕ್ತಿ-ಸಮಾಜ-ಧರ್ಮವನ್ನು ಕುರಿತು ಎಲ್ಲ ಕಾಲ-ಪರಿಸರಕ್ಕೂ ಅನ್ವಯಿಸಬಹುದಾದ ಈ ಸತ್ಯಾಗ್ರಹತತ್ವ ಗಾಂಧಿಯವರಲ್ಲಿ ಸುಳುಹುದೋರಿ ಒಂದು ತತ್ವವಾಗಿ ರೂಪಗೊಂಡದ್ದು ರಾಜಕೀಯ ಹೋರಾಟದ ಸಂದರ್ಭದಲ್ಲಿ. ಅನಿರೀಕ್ಷಿತ ದೈವೀಪ್ರಕಾಶದಂತೆ ಪ್ರಕಟಗೊಳ್ಳುತ್ತ ಹೊರಟ ಈ ದರ್ಶನವನ್ನು ಗಾಂಧಿಯವರು ಪಾಶ್ಚಾತ್ಯರಲ್ಲಿ ಆಗಲೆ ರೂಢಿಯಲ್ಲಿದ್ದ, 'ಪ್ಯಾಸಿವ್ ರೆಸಿಸ್ಟನ್ಸ' ಎಂಬ ಹೆಸರಿನಿಂದಲೇ ಗುರುತಿಸಿದ್ದರು; ತಮ್ಮ ಆದರ್ಶ ಹೋರಾಟಕ್ಕೆ ಅದೇ ಹೆಸರನ್ನು ಕೊಟ್ಟಿದ್ದರು. ಆದರೆ ಆ ವಿದೇಶಿ ಹೆಸರು ನಮ್ಮ ದೇಶದ ಜನರಲ್ಲಿ, ವಿಶೇಷವಾಗಿ ಜನಸಾಮಾನ್ಯರಲ್ಲಿ, ಅದರ ಉಚ್ಚಾರದ ಕ್ಲಿಷ್ಟತೆಯಿಂದಾಗಿ ಬಳಕೆಗೆ ಬರುವದೂ ಕಷ್ಟವೆಂದು ತೋರಿತು; ಮೇಲಾಗಿ ಈ ಹಿರಿಯ ಸೈದ್ಧಾಂತಿಕ ಹೋರಾಟವನ್ನು, ತತ್ವವನ್ನು ಇಂಗ್ಲೀಷ ಹೆಸರಿನಿಂದ ಕರೆಯುವದು ಅವರಿಗೆ ನಾಚಿಕೆಗೇಡಾಗಿ ತೋರಿತು. ಆದ್ದರಿಂದ ಅದಕ್ಕೆ ಸಮರ್ಪಕವಾದ ಹೆಸರನ್ನು ಸೂಚಿಸಲು ಒಂದು ಪ್ರಕಟಣೆಯನ್ನೇ ಹೊರಡಿಸಬೇಕಾಯಿತು. ಅಂಥ ಸಂದರ್ಭದಲ್ಲಿ ಅವರ ಸಂಬಂಧಿಯೇ ಆಗಿದ್ದ ಮಗನಲಾಲ ಗಾಂಧಿಯವರು "ಸತ್ಕಾರಣದಲ್ಲಿ ಶ್ರದ್ಧೆ" ಎಂಬ ತಾತ್ಪರ್ಯದ ಹಿನ್ನೆಲೆಯಲ್ಲಿ 'ಸದಾಗ್ರಹ' ಎಂಬ ಹೆಸರನ್ನು ಸೂಚಿಸಿದರು. ಗಾಂಧಿಯವರಿಗೆ ಆ ಹೆಸರು ಹೆಚ್ಚು ಉಚಿತವೆನಿಸಿದರೂ ಸಂಪೂರ್ಣ ತೃಪ್ತಿಯನ್ನು ಕೊಡಲಿಲ್ಲ. ಆದ್ದರಿಂದ ಅದನ್ನೇ ಪರಿಷ್ಕರಿಸಿ 'ಸತ್ಯಾಗ್ರಹ' ಎಂದು ತಿದ್ದುಪಡಿಯೊಂದಿಗೆ ಬಳಕೆಗೆ ತಂದರು. 'ಪ್ಯಾಸಿವ್ ರೆಸಿಸ್ಟನ್ಸ' ಎಂಬ ಹೆಸರನ್ನೂ ತ್ಯಜಿಸಿದರು.[೧೬]

ಆದರೂ ಸತ್ಯಾಗ್ರಹವೆಂಬುದು ಪ್ಯಾಸಿವ್ ರೆಸಿಸ್ಟನ್ಸದ ಪರ್ಯಾಯ ಪದವೆಂದೇ ಬಹುಜನರ ಗ್ರಹಿಕೆಯಾಗಿ, ನಂಬಿಕೆಯಾಗಿ ಮುಂದುವರೆಯಿತು. ಆಗಿನ ಸಂದರ್ಭದಲ್ಲಿ ಅದು ಸಹಜವೂ ಆಗಿತ್ತು. ಇಂಗ್ಲೀಷ ಶಬ್ದಕ್ಕೆ ಸಂವಾದಿಶಬ್ದದ ಹುಡುಕಾಟದ ಫಲವಾಗಿಯೇ 'ಸತ್ಯಾಗ್ರಹ' ಶಬ್ದ ಹುಟ್ಟಿಕೊಂಡಂತೆ ಎಲ್ಲರ ತಿಳುವಳಿಕೆಯಾಗಿತ್ತು. ಗಾಂಧಿಯವರ ಕೇವಲ ಅಭಿಮಾನಿಗಳಾಗಿದ್ದ ಹಾಸ್ಕಿನ್ ಅವರೇ ಒಂದು ಸಭೆಯಲ್ಲಿ ಗಾಂಧಿಚಳುವಳಿಯನ್ನು, ಅದರ ಸ್ವರೂಪ-ಉದ್ದೇಶವನ್ನು ಪರಿಚಯಮಾಡಿಕೊಡುತ್ತ ಅದನ್ನು ಪ್ಯಾಸಿವ್ ರೆಸಿಸ್ಟನ್ಸದೊಡನೆ ಅಭೇದಗೊಳಿಸಿ ಮಾತಾಡಿದರು. ಅಲ್ಲದೆ ಭಾರತೀಯರಿಗೆ ವೋಟಿನ ಅಧಿಕಾರ ಇಲ್ಲದಿರುವದು, ಅವರೆಲ್ಲ ಅಲ್ಪಸಂಖ್ಯಾತರಾಗಿರುವದು ಮತ್ತು ಅವರೆಲ್ಲ ಶಸ್ತ್ರಾಸ್ತ್ರವಿಲ್ಲದ ದುರ್ಬಲರೂ ಆಗಿರುವದನ್ನು ಎತ್ತಿ ಹೇಳಿ, ತಮ್ಮ ಅಭಿಪ್ರಾಯಕ್ಕೆ ಪರ್ಯಾಯವಾಗಿ ಸಮರ್ಥನೆಯನ್ನು ಒದಗಿಸಿಕೊಂಡಿದ್ದರು. ಹೀಗೆ ಪ್ಯಾಸಿವ್ ರೆಸಿಸ್ಟನ್ಸನ್ನು ತಮ್ಮ ಇಂಥ ಸತ್ಯಾಗ್ರಹ ಚಳುವಳಿಗೆ ಸಂವಾದಿಯನ್ನುವಂತೆ ಬಳಸಿಕೊಂಡದ್ದು, ಮೇಲಾಗಿ ಅದನ್ನು ದುರ್ಬಲರ ದಾರಿಯೆಂದು ಅರ್ಥೈಸಿದ ರೀತಿ ಗಾಂಧೀಯವರ ದೊಡ್ಡ ಅಸಮಾಧಾನಕ್ಕೆ ಕಾರಣವಾಯಿತು.

ಗಾಂಧಿಯವರೇ ಹೇಳುವಂತೆ 'ಪ್ಯಾಸಿವ್ ರೆಸಿಸ್ಟನ್ಸ' ಎಂಬುದನ್ನು ಯಾರು ಯಾವಾಗ ಬಳಸಿದರೆಂಬುದು ಮತ್ತು ಪ್ರಯೋಗಕ್ಕೆ ತಂದರೆಂಬುದು ತಿಳಿಯದು; ಅದನ್ನು ಕುರಿತು ನಿಶ್ಚಿತ ವ್ಯಾಖ್ಯಾನವೂ ಕಂಡುಬರುವದಿಲ್ಲ. ಆದರೂ ಇಂಗ್ಲೀಷರಲ್ಲಿ ಯಾವುದೇ ಅಲ್ಪಸಂಖ್ಯಾತ ಪಂಗಡದವರಿಗೆ ಒಂದು ಶಾಸನ ಅಸಹನೀಯವೆಂದು ತೋರಿದರೆ ಅದರ ವಿರುದ್ಧ ದಂಗೆ ಏಳದೆ ಶಾಸನಭಂಗ ಮಾಡಲಾಗುತ್ತಿತ್ತು. ಒಂದು ಅರ್ಥದಲ್ಲಿ ಅದನ್ನು ನಿಷ್ಕ್ರಿಯ ಹೋರಾಟವೆಂದೂ ಹೇಳಲಾಗುತ್ತಿತ್ತು. ಆಗ ಇಂಗ್ಲೀಷ ಮಹಿಳೆಯರು ವೋಟಿನ ಹಕ್ಕಿಗಾಗಿ ನಡೆಸಿದ ಹೋರಾಟವನ್ನೂ ಪ್ಯಾಸಿವ್ ರೆಸಿಸ್ಟನ್ಸ ಎಂಬ ಹೆಸರಿನಿಂದಲೇ ಕರೆಯಲಾಗುತ್ತಿತ್ತು.

ಆದರೆ ಗಾಂಧಿಯವರ ಸತ್ಯಾಗ್ರಹ ಚಳುವಳಿ ಕೇವಲ ಓಟಿಗಾಗಿ ನಡೆಸಿದ ಹೋರಾಟವಾಗಿರಲಿಲ್ಲ; ಅದು ಮುಖ್ಯವಾಗಿ ಅಸಹಾಯಕತೆಯ ಸಂಕೇತವೂ ಆಗಿರಲಿಲ್ಲ. ಅವಕಾಶ ಸಿಕ್ಕಿದರೂ ಹಿಂಸೆಗೆ ಇಳಿಯುವ ಪ್ರವೃತ್ತಿಯೂ ಸತ್ಯಾಗ್ರಹದ್ದಾಗಿರಲಿಲ್ಲ. ಅಂತೆಯೇ ಗಾಂಧಿಯವರಿಗೆ ತಮ್ಮ ಅಭಿಮಾನಿಗಳಲ್ಲಿಯೇ ಈ ಎರಡೂ ಕುರಿತು ಇದ್ದ ಸಂವಾದಿಭಾವನೆ ಒಂದು ಸವಾಲಾಗಿ ಕಂಡಿದ್ದರೆ ಆಶ್ಚರ್ಯವಲ್ಲ. 'ಸತ್ಯಾಗ್ರಹ' ಪ್ಯಾಸಿವ್ ರೆಸಿಸ್ಟನ್ಸಗಿಂತ ಪ್ರತ್ಯೇಕವಾದ ಸೈದ್ಧಾಂತಿಕ ಹೋರಾಟವೆಂದೂ, ಅದಕ್ಕಿಂತಲೂ ಹೆಚ್ಚು ಪವಿತ್ರವಾದ ಮನೋಧರ್ಮವೆಂದೂ ಸಾಧಿಸಲು, ಹಾಗೆಂದು ಅರ್ಥೈಸಿಕೊಡಲು ಹಲವಾರು ಸಂದರ್ಭಗಳಲ್ಲಿ ಬರಹ-ಭಾಷಣಗಳ ಮೂಲಕ ಯತ್ನಿಸಿದರು,

ಗಾಂಧಿಯವರು ಪ್ಯಾಸಿವ್ ರೆಸಿಸ್ಟನ್ಸ ಹಾಗೂ ಸತ್ಯಾಗ್ರಹದಲ್ಲಿ ಸಾಕಷ್ಟು ವ್ಯತ್ಯಾಸವನ್ನು ಗುರುತಿಸುವದಲ್ಲದೆ ಎಷ್ಟೋ ಅಂಶಗಳಲ್ಲಿ ವಿರೋಧವನ್ನು ಎತ್ತಿ ಹೇಳಿದ್ದಾರೆ. "ಪ್ಯಾಸಿವ್ ರೆಸಿಸ್ಟರ್ಸ" ಮತ್ತು ಸತ್ಯಾಗ್ರಹಿಗಳು ಎಂದು ಕರೆದು ಕೊಳ್ಳುವವರು ಇಬ್ಬರೂ ಒಂದೇ ಎಂದು ಭಾವಿಸಿದರೆ, ಇಬ್ಬರಿಗೂ ಪರಸ್ಪರ ಅನ್ಯಾಯ ಮಾಡಿ ದುಷ್ಪರಿಣಾಮಕ್ಕೆ ಎಡೆಮಾಡಿದಂತಾಗುತ್ತದೆ.[೧೭] ಎಂಬುದು ಅವರ ಸ್ಪಷ್ಟ ವಾದ ನಿಲುವಾಗಿತ್ತು. ಗಾಂಧಿಯವರ ಅಭಿಪ್ರಾಯದಲ್ಲಿ ಪ್ಯಾಸಿವ್ ರೆಸಿಸ್ಟನ್ಸ ಸಂಪೂರ್ಣ ಅಹಿಂಸಾವಾದಿಯಾದದ್ದೂ ಅಲ್ಲ; ಎಲ್ಲಿಯವರೆಗೆ ಅಸಹಾಯಕತೆ, ದೌರ್ಬಲ್ಯ ಕಾಣಿಸಿಕೊಳ್ಳುತ್ತಿದೆಯೊ, ಎಲ್ಲಿಯವರೆಗೆ ಬೇರೆ ದಾರಿ-ಉಪಾಯ ಗಳಾಗಲಿ, ಶಸ್ತ್ರಸೌಕರ್ಯ ಇರುವದಿಲ್ಲವೊ ಅಲ್ಲಿಯವರೆಗೆ ಮಾತ್ರ ಪ್ಯಾಸಿವ್ ರೆಸಿಸ್ಟರ್ಸಗಳದು ಸೌಮ್ಯ ಹಾಗೂ ಸಾತ್ವಿಕ ಹೋರಾಟ; ಅವಕಾಶ ಸಿಕ್ಕರೆ ಹಿಂಸಾ ಚಾರಕ್ಕೂ ಇಳಿಯುವದು ಅವರಿಗೆ ಅನೀತಿಯಲ್ಲ. ಮೇಲಾಗಿ ಅಲ್ಪಕಾಲಿಕವಾಗಿ, ಅದೂ ಬಾಹ್ಯ ಒತ್ತಡದಿಂದ ಕಾಣಿಸಿಕೊಳ್ಳುವ ಅಹಿಂಸೆ ಅವರ ಅಸಹಾಯಕತೆಯ, ದೌರ್ಬಲ್ಯದ ಒಂದು ಪ್ರತೀಕವೇ ಹೊರತು ಅವರ ಸಹಜ ಮನೋಧರ್ಮವಲ್ಲ.

ಇನ್ನು ಸತ್ಯಾಗ್ರಹವೆನ್ನುವದು ಇದಕ್ಕೆ ತದ್ವಿರುದ್ಧವೆನ್ನಬಹುದಾದ ಹೋರಾಟ, ಒಂದು ತತ್ವ, ಒಂದು ಮನೋಧರ್ಮ. ಅಲ್ಲಿ ಹಿಂಸೆಗೆ, ಮೋಸಕ್ಕೆ, ಬಲ ಪ್ರಯೋಗಕ್ಕೆ, ದ್ವಂದ್ವಕ್ಕೆ ಎಂಥ ಸಂದರ್ಭದಲ್ಲೂ ಎಳ್ಳಷ್ಟೂ ಅವಕಾಶವಿರುವದಿಲ್ಲ; ವಿರೋಧಿಗಳಿಂದ ಒದಗಿ ಬರುವ ಆಕ್ರಮಣವನ್ನು ಅತ್ಯಂತ ಸಂಯಮಂತೆಯಿಂದ, ಶಾಂತಿಯಿಂದ, ಪ್ರೀತಿಯಿಂದ ಆತ್ಮವಿಶ್ವಾಸದೊಂದಿಗೇನೇ, ಆತ್ಮಕ್ಲೇಶಾನುಭವ ದೊಂದಿಗೇನೇ ಎದುರಿಸಬೇಕಾಗುತ್ತದೆ; ಆ ಮೂಲಕ ವಿರೋಧಿಗಳ ಸ್ವಭಾವ ಪರಿ ವರ್ತನೆಯನ್ನು ಸಾಧಿಸಬೇಕಾಗುತ್ತದೆ. ತನ್ನನ್ನು ಮಾತ್ರವಲ್ಲ ಹಿಂಸೆಗೆ ಒಳಗಾದ ಯಾವುದೇ ಜೀವಿಯ ರಕ್ಷಣೆಗಾಗಿಯೂ ಮುಂದಾಗುವದು ಅಹಿಂಸೆ ಎನಿಸಿಕೊಳ್ಳು ತ್ತದೆ; ಅಂಥ ಅಹಿಂಸೆಯೇ ಸತ್ಯಾಗ್ರಹವೆನಿಸಿಕೊಳ್ಳುತ್ತದೆ. ಆದ್ದರಿಂದ ಸತ್ಯಾಗ್ರಹ ವೆಂಬುದು ಸ್ವಾರ್ಥದ, ದೌರ್ಬಲ್ಯದ, ಅಸಹಾಯಕತೆಯ ಹೇಡಿತನದ ಸಂಕೇತವಲ್ಲ. ಅದು ತಾತ್ಕಾಲಿಕವೂ ಅಲ್ಲ; ಸೀಮಿತ ಕಾಲ-ಪರಿಸರ-ಸಮಸ್ಯೆಗಳಿಗೂ ಅನ್ವಯಿಸು ವಂತಹದಲ್ಲ. ಶಸ್ತ್ರಾಸ್ತ್ರಗಳ ಸೌಕರ್ಯದ ಸಂದರ್ಭದಲ್ಲಿಯೂ ಸತ್ಯಾಗ್ರಹಿ ಅವು ಗಳನ್ನು ಆಪದ್ಧರ್ಮವೆಂದು ಕೂಡ ಬಳಸಲಾರ. ಕಾಡನ್ನು ಸುಟ್ಟ ಬೆಂಕಿ ಕೊನೆಗೆ ತಾನೂ ನಂದಿಹೋಗುವದು ಅನಿವಾರ್ಯವಾದಂತೆ, ವೈರಿಗಳನ್ನು ನಾಶಪಡಿಸುವ ವ್ಯಕ್ತಿ ಕೊನೆಗೆ ತಾನೂ ಧ್ವಂಸಗೊಳ್ಳುವದು ನಿಶ್ಚಯ. ದೈಹಿಕಶಕ್ತಿಗೆ ಮಿತಿಯುಂಟು, ಆತ್ಮಶಕ್ತಿಗೆ ಮಿತಿಯಿಲ್ಲ. ಮೇಲಾಗಿ ಸತ್ಯಾಗ್ರಹವೆನ್ನುವದು ಕೇವಲ ರಾಜಕೀಯ, ಸಾಮಾಜಿಕ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ನಡೆಸುವ ಚಳುವಳಿಯೂ ಅಲ್ಲ. ಅದು ವ್ಯಷ್ಟಿ-ಸಮಷ್ಟಿಯ ಎಲ್ಲ ಸಂದರ್ಭದಲ್ಲೂ ನಡೆಯಬೇಕಾದ ಹೋರಾಟ; ತನ್ನ

ತನ್ನ ಮನಸ್ಸಿನ ವಿರುದ್ಧವಾಗಿ ತಾನೇ ನಡೆಸಬೇಕಾಗಿ ಬರಬಹುದಾದ ಹೋರಾಟವೂ ಕೂಡ. ಇನ್ನೂ ಹೇಳುವದಾದರೆ, ಗಾಂಧಿಯುವರ ಅಭಿಪ್ರಾಯದಲ್ಲಿ ಹೇಡಿತನ ದೊಡ್ಡ ಹಿಂಸೆ; ಅದು ಭಗವಂತನಲ್ಲಿರುವ ನಮ್ಮ ನಂಬಿಕೆಯ ಅಭಾವದ ಸಂಕೇತ. ಹಿಂಸಾಚಾರಿ ಅಹಿಂಸಾತ್ಮಕನಾಗುವದು ಸಾಧ್ಯ; ಆದರೆ ಹೇಡಿ ಎಂದೂ ಅಹಿಂಸಾವಾದಿಯಾಗಲಾರ. ಹಾಗೆಂದೇ ನಮ್ಮ ಮೇಲೆ, ನಮ್ಮ ಬಂಧುಗಳ ಮೇಲೆ ಸತ್ಯಾಗ್ರಹವನ್ನು ಪ್ರಯೋಗಿಸುವದು ಸಾಧ್ಯವಾದಂತೆ ಪ್ಯಾಸಿವ್ ರೆಸಿಸ್ಟನ್ಸ ಬಳಸಲು ಸಾಧ್ಯವಾಗುವದಿಲ್ಲ. ಶತ್ರುಗಳ ವಿರುದ್ಧ ನಡೆಸುವ ಹೋರಾಟ "ಪ್ಯಾಸಿವ್ ರೆಸಿಸ್ಟನ್ಸ" ಹೋರಾಟ: ಅಸತ್ಯದ ವಿರುದ್ಧ-ಅದು ಎಲ್ಲಿಯೋ ಇರಲಿ ಯಾರಲ್ಲಿಯೋ ಇರಲಿ— ನಡೆಸುವ ಹೋರಾಟ ಸತ್ಯಾಗ್ರಹ ಹೋರಾಟ.

ಹೀಗೆ ಗಾಂಧಿ ಸತ್ಯಾಗ್ರಹ ಮತ್ತು ಪ್ಯಾಸಿವ್ ರೆಸಿಸ್ಟನ್ಸಗಳ ನಡುವಿನ ಕಂದರವನ್ನು ಹಲವಾರು ನೆಲೆಗಳಲ್ಲಿ ಸಮರ್ಥಿಸಿಕೊಳ್ಳುತ್ತಾರೆ. ತಮ್ಮ ಸಮರ್ಥನೆಗಾಗಿ ಆ ಕಾಲದಲ್ಲಿ ಇಂಗ್ಲೀಷ ಮಹಿಳೆಯರು ನಡೆಸಿದ ಅಂಥ ಚಳುವಳಿಯನ್ನು ಪರಿಣಾಮಕಾರಿಯಾದ ಉದಾಹರಣೆಯನ್ನಾಗಿ, ನಿದರ್ಶನವನ್ನಾಗಿ ಬಳಸಿಕೊಳ್ಳುತ್ತಾರೆ. ಆ ಚಳುವಳಿಯಲ್ಲಿ ಭಾಗವಹಿಸಿದ ಮಹಿಳೆಯರು ಧೈರ್ಯಶಾಲಿಗಳಾಗಿದ್ದರೂ, ನಿಸ್ವಾರ್ಥಿಗಳಾಗಿದ್ದರೂ ಮನೆಗಳಿಗೆ ಬೆಂಕಿಹಚ್ಚಿ, ಗಂಡಸರ ಮೇಲೆ ಕೈಮಾಡಿದುದನ್ನು ಎತ್ತಿ ಹೇಳುತ್ತಾರೆ. ಉಗ್ರಪರಿಸ್ಥಿತಿಯನ್ನು ಉಂಟುಮಾಡುವ ಉದ್ದೇಶವೂ ಆ ಮಹಿಳಾ ಪ್ಯಾಸಿವ್ ರೆಸಿಸ್ಟರುಗಳದ್ದಾಗಿತ್ತೆಂದೂ ಗಾಂಧಿ ಸಾಧಿಸುತ್ತಾರೆ.

ಮೂಲತಃ ಗಾಂಧಿಯವರಿಂದಲೂ ಮೊದಲುಗೊಂಡು, ಸಾತ್ವಿಕ ಪ್ರತಿಭಟನೆಯೆಂದೇ ಅರ್ಥೈಸಿಕೊಳ್ಳುತ್ತ ಬಂದಿದ್ದ ಪ್ಯಾಸಿವ್ ರೆಸಿಸ್ಟನ್ಸದ ಮೂಲಪ್ರಣಾಳಿಕೆಯಲ್ಲಿ ಈ ಹಿಂಸೆಗೆ ಅವಕಾಶವಿತ್ತೆಂದು ನಂಬುವದು ಕಷ್ಟ. ಹಾಗೇನಾದರೂ ಇದ್ದದ್ದೇ ಆಗಿದ್ದರೆ, ಗಾಂಧಿಯವರು ಆರಂಭದಲ್ಲಿ ತಮ್ಮ ಆ ಹೋರಾಟಕ್ಕೆ 'ಪ್ಯಾಸಿವ್ ರೆಸಿಸ್ಟನ್ಸ' ಎಂದು ಕರೆದುಕೊಳ್ಳುವ ಸಾಹಸಮಾಡುತ್ತಿರಲಿಲ್ಲ. ಮೇಲಾಗಿ ಆ ಹೆಸರಿನ ಬದಲಾವಣೆಯ ಹಿಂದಿದ್ದ ಕಾರಣ ಅದು ತಮ್ಮ ಹೋರಾಟದ ಸ್ವರೂಪಕ್ಕಿಂತ, ಧೋರಣೆಗಿಂತ ಭಿನ್ನವಾದದ್ದು ಎಂಬುದಾಗಿರಲಿಲ್ಲ. ತಮ್ಮ ಸತ್ಯಾಗ್ರಹವನ್ನು ಆತ್ಮಶಕ್ತಿ ಎಂದು ಗುರುತಿಸಿದ, ಗೌರವಿಸಿದ ಗಾಂಧಿಯವರೇ ಸ್ವತಃ ಪ್ಯಾಸಿವ್ ರೆಸಿಸ್ಟನ್ಸನ್ನು ಕೂಡ ಆತ್ಮಶಕ್ತಿಯೆಂದು ಗುರುತಿಸಿ ಗೌರವಿಸಿದ್ದೂ ಉಂಟು.

ಪ್ಯಾಸಿವ್ ರೆಸಿಸ್ಟನ್ಸ ಕೂಡ ಅಹಿಂಸೆಯಿಂದ ಕೂಡಿದ ಆಧ್ಯಾತ್ಮಿಕಶಕ್ತಿ ಎಂದೂ ಬೇರೊಂದು ಸಂದರ್ಭದಲ್ಲಿ ಗಾಂಧಿಯವರೇ ಹೇಳಿರುವದುಂಟು; "ಈ ಶಕ್ತಿ ಕೇವಲ ಬಲಹೀನರು ಎಲ್ಲಿಯತನಕ ಹಿಂಸೆಯನ್ನು ಹಿಂಸೆಯಿಂದಲೇ ಎದುರಿಸಲು ಶಕ್ತರಾಗುವದಿಲ್ಲವೋ ಅಲ್ಲಿಯತನಕ ಉಪಯೋಗಿಸುವ ಶಕ್ತಿಯೆಂದು ಹೇಳುವದು

ಶುದ್ಧಾಂಗ ಅಸತ್ಯ. ಈ ಮೂಢನಂಬಿಕೆ ಇಂಗ್ಲೀಷ ಶಬ್ದದ ಅಪೂರ್ಣತೆಯಿಂದ ಹುಟ್ಟಿರುತ್ತದೆ"೧೮ ಎಂದೂ ಹೇಳಿರುವದನ್ನೂ ಪ್ರಸ್ತುತ ಸಂದರ್ಭದಲ್ಲಿ ಮರೆಯ ಲಾಗದು. ಅಲ್ಲದೆ ಗಾಂಧಿಯವರೆ ಹೇಳುವಂತೆ ಸ್ವತಃ ಟಾಲಸ್ಟಾಯ್ ಅವರೂ ಈ ತತ್ವವನ್ನು ಆತ್ಮಬಲ ಅಥವಾ ಪ್ರೇಮಬಲ ಎಂದೂ ಕರೆದಿದ್ದರು. ಮೇಲಾಗಿ ಏಸುಕ್ರಿಸ್ತನನ್ನು ಇಂಗ್ಲೀಷರು ಪ್ಯಾಸಿವ್‌ರೆಸಿಸ್ಟರಗಳಿಗೆ ಕಿರೀಟಪ್ರಾಯನೆಂದು ಕೀರ್ತಿಸಿರುವದನ್ನು ನೋಡಿದರೆ, ಖಂಡಿತವಾಗಿಯೂ ಅದು ಹಿಂಸಾತ್ಮಕವಾಗಿರಲಿಲ್ಲ ವಷ್ಟೇ ಅಲ್ಲ, ಸತ್ಯಾಗ್ರಹದಂತೆ ಅದು ಕೂಡ ಆತ್ಮಕ್ಲೇಶಾನುಭವವನ್ನೇ ಒಳಗೊಂಡಿ ತ್ತೆಂಬುದು ಸ್ಪಷ್ಟ. ಅಂದಿನ ಮಹಿಳಾಚಳುವಳಿಯು ಹಿಂಸಾಕೃತ್ಯಕ್ಕೆ ತೊಡಗಿದ್ದರೆ ದೋಷ ಆ ಮಹಿಳಾ ಅನುಯಾಯಿಗಳದೇ ಹೊರತು ಆ ಮೂಲತತ್ವದ್ದಲ್ಲ. ಈ ಮಾತು ಸತ್ಯಾಗ್ರಹದ ಬಹಳಷ್ಟು ಅನುಯಾಯಿಗಳಿಗೂ ಮತ್ತು ಸತ್ಯಾಗ್ರಹ ಚಳುವಳಿಯ ಬಹಳಷ್ಟು ಸಂದರ್ಭಗಳಿಗೂ ಅನ್ವಯಿಸುವಂತಹದು. ಆದ್ದರಿಂದ ಮೂಲಭೂತ ಲಕ್ಷಣ ಸ್ವರೂಪ, ಆಶಯುಗಳ ದೃಷ್ಟಿಯಿಂದ ಅವೆರಡು ಒಂದೇಯಾಗಿ ಕಾಣಿಸಿಕೊಳ್ಳುತ್ತವೆ. ಆದರೆ ತಮ್ಮ ಹೋರಾಟಕ್ಕೆ ಪ್ರತ್ಯೇಕವಾದ ಒಂದು ಹೆಸರಿ ನಿಂದಲೇ ಗುರುತಿಸಿ ಅದನ್ನು ಪ್ರತ್ಯೇಕವಾದ ಒಂದು ಸಿದ್ಧಾಂತವನ್ನಾಗಿ ರೂಪಿಸುವ ಹಂಬಲವನ್ನು ಹೊಂದಿದ್ದ ಗಾಂಧಿಯವರು ಅದಕ್ಕೆ ಒಂದು ಪ್ರತ್ಯೇಕವಾದ ಅಸ್ತಿತ್ವ ವನ್ನು ಒದಗಿಸಿಕೊಡುವ ಉತ್ಕಟತೆಯಿಂದಾಗಿ ಪ್ಯಾಸಿವ್‌ರೆಸಿಸ್ಟನ್ನು ಅರ್ಥೈಸ ಹೊರಟಂತೆ ಕಂಡುಬರುತ್ತದೆ. ಅದೇ ಕಾರಣಕ್ಕಾಗಿ ಉದ್ದೇಶಪೂರ್ವಕವಾಗಿಯೇ ಅದರ ಉದಾತ್ತತೆಗೆ ಒಂದು ಸೀಮಿತ ಅರ್ಥವನ್ನು ಒದಗಿಸಿದಂತೆಯೂ ಕಂಡುಬರು ತ್ತದೆ. ಇದರಿಂದಾಗಿಯೇ ಬಹಳಷ್ಟುಸಲ ಪ್ಯಾಸಿವ್‌ರೆಸಿಸ್ಟನ್ಸ ಕುರಿತು ಗಾಂಧಿ ಯವರಲ್ಲಿ ದ್ವಂದ್ವಧೋರಣೆಯೂ ಕಂಡುಬರುತ್ತದೆ. ಇದರ ಅರ್ಥ ಅವೆರಡು ಗಳಲ್ಲಿ ಮೂಲಭೂತ ವ್ಯತ್ಯಾಸವೇ ಇಲ್ಲವೆಂದಲ್ಲ. ಅಂಥ ವ್ಯತ್ಯಾಸ ಇರುವದಾದರೆ ಅದನ್ನು ಅವೆರಡುಗಳಿಗೆ ಹಿನ್ನಲೆಯಾದ ವಿಭಿನ್ನ ಸಾಂಸ್ಕೃತಿಕ, ಸಾಮಾಜಿಕ ಹಾಗೂ ದಾರ್ಶನಿಕ ಪರಂಪರೆಯಲ್ಲಿ ಗುರುತಿಸಬಹುದಾಗಿದೆ. ಸತ್ಯಾಗ್ರಹಕ್ಕೆ ಇರುವ ಭಾರ ತೀಯ ಆಧ್ಯಾತ್ಮಿಕ ತೇಜಸ್ಸಿನಿಂದಾಗಿ, ದಾರ್ಶನಿಕ ಪರಂಪರೆಯ ಸತ್ವದಿಂದಾಗಿ ಮತ್ತು ಲೌಕಿಕ-ಆಮುಷ್ಮಿಕಗಳೆರಡನ್ನೂ ಸಮರಸಗೊಳಿಸಿಕೊಡುವಲ್ಲಿ, ಸತ್ಯದ ಅನ್ವೇಷಣೆ ಹಾಗೂ ಅದರ ಸಾಕ್ಷಾತ್ಕಾರದ ಹಿನ್ನಲೆಯಲ್ಲಿ ಅವರ ವೈಶಿಷ್ಟ್ಯವನ್ನು, ಪ್ರತ್ಯೇಕತೆಯನ್ನು ಕಂಡುಕೊಳ್ಳಬಹುದಾಗಿದೆ. ಈ ಸತ್ಯಾಗ್ರಹ ಶರಣಧರ್ಮದ ಪುನಃ ಸೃಷ್ಟಿಯಂತೆ ಇಲ್ಲವೆ ಪುನರಾವತಾರದಂತೆ ಕಾಣಿಸಿಕೊಳ್ಳುವದಕ್ಕೂ ಅದರ ಭಾರತೀಯ ಆಧ್ಯಾತ್ಮಿಕ ಪರಂಪರೆಯ ತೇಜಸ್ಸನ್ನೇ ಪ್ರಮುಖ ಕಾರಣವನ್ನಾಗಿ ಗುರುತಿಸಬಹುದು. ಹಾಗೆ ನೋಡಿದರೆ ಭಾರತೀಯ ದಾರ್ಶನಿಕ ಪರಂಪರೆಯ ಮೂಲ ಸತ್ವವೇ ಲೋಕ ಕಲ್ಯಾಣಕ್ಕಾಗಿ ಬೇರೆಬೇರೆ ಕಾಲದಲ್ಲಿ ಬೇರೆಬೇರೆ ಪರಿಕಲ್ಪನೆಗಳ ಮೂಲಕ ಮರು ಹುಟ್ಟನ್ನು ಪಡೆಯುತ್ತಬಂದಿದೆ. ಹೀಗೆ ಬೇರೆಬೇರೆ ಯುಗದಲ್ಲಿ, ಬೇರೆಬೇರೆ ರೂಪದಲ್ಲಿ

ಕಾಣಿಸಿಕೊಳ್ಳುವ ಪರಿಕಲ್ಪನೆಗಳ, ಸಿದ್ಧಾಂತಗಳ ಒಳಸತ್ವದ ಮೂಲ ಸ್ರೋತ್ರ ಮಾತ್ರ ಒಂದೇಯಾಗಿ ಗೋಚರಿಸುವದೂ ಈ ಕಾರಣಕ್ಕಾಗಿಯೆ.

ಸತ್ಯಾಗ್ರಹ ಮತ್ತು ಶರಣಧರ್ಮಗಳು ಬೇರೆಬೇರೆ ಕಾಲಮಾನಗಳಲ್ಲಿ ರೂಪ ಗೊಂಡದ್ದರಿಂದ ಅವುಗಳ ಧಾರ್ಮಿಕ ಪರಿಭಾಷೆ, ಪರಿಕಲ್ಪನೆ, ಪ್ರಕ್ರಿಯೆಗಳಲ್ಲಿ ಆನು ಷಂಗಿಕವಾದ ವ್ಯತ್ಯಾಸ ತೀರ ಸಹಜ; ಆದರೆ ಹಿಂಸೆ ಮತ್ತು ಅಹಿಂಸೆಯನ್ನು ಕುರಿತ ಅವೆರಡುಗಳ ನಿಲುವು ಈ ಸಂದರ್ಭದಲ್ಲಿ ಒಂದು ಮಹತ್ವದ ಸಮಸ್ಯೆ.

"ತನಗೆ ಮುನಿವವರಿಗೆ ತಾ ಮುನಿಯಲೇಕಯ್ಯ
ತನಗಾದೊಡೇನು ಅವರಿಗಾದೊಡೇನು"

"ದಯವಿಲ್ಲದ ಧರ್ಮವೇವುದಯ್ಯಾ
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ
ದಯವೇ ಧರ್ಮದ ಮೂಲವಯ್ಯಾ"

"ಸಕಲ ಪ್ರಾಣಿಗಳ ತನ್ನಂತೆ ಭಾವಿಸಬೇಕು"

"ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ..."

ಎಂದೆಲ್ಲ ಹೇಳಿದ ಶರಣರಲ್ಲಿಯೇ ಸಾಕಷ್ಟು ಸಿಟ್ಟಿನ, ರೋಷದ, ಅಸಹನೆಯ ಮತ್ತು ತಾಳ್ಮೆಗೆಟ್ಟ ಮಾತುಗಳು, ಕೆಲವು ಸಲವಂತೂ ಹೀನಾಯ ಬೈಗುಳದ ರೂಪದಲ್ಲಿ, ಕೇಳಿಬರುತ್ತವೆ; ಬೇಕಾದಷ್ಟು ಸಲ ಹೀನೋಪಮೇಯಗಳೂ ಹರಿದಾಡುತ್ತವೆ. ಗಣಾಚಾರದಂಥ ಆಚರಣೆಯಲ್ಲಿ ಹಿಂಸಾರೂಪದ ದಂಡನೆಯ ಜಳವೂ ತಾಗಿಬರು ತ್ತದೆ. ಆದರೆ ಗಾಂಧಿಯವರ ಬದುಕಿನಲ್ಲಾಗಲಿ, ಬರಹದಲ್ಲಾಗಲಿ, ದಂಡನೆಯ ಮಾತೊತ್ತಟ್ಟಿಗಿರಲಿ ಬಿರುಸುತನವೂ ಕಾಣಿಸಿಕೊಳ್ಳುವದಿಲ್ಲ. ಅಷ್ಟೇ ಅಲ್ಲ 'ಧರಣಿ' ಯೂ ಕೂಡ ಅವರ ದೃಷ್ಟಿಯಲ್ಲಿ ಸತ್ಯಾಗ್ರಹವಾಗದೆ ದುರಾಗ್ರಹವಾಗಿ ಕಾಣಿಸಿ ಕೊಳ್ಳುತ್ತದೆ. ಇದನ್ನು ನೋಡಿದರೆ ಹಿಂಸೆ ಮತ್ತು ಅಹಿಂಸೆಯ ಬಗೆಗಿನ ಶರಣರ ಹಾಗೂ ಗಾಂಧಿಯವರ ಕಲ್ಪನೆ ವಿಶಿಷ್ಟ ಹಾಗೂ ವಿಭಿನ್ನವಾಗಿರುವಂತೆ ಕಂಡು ಬರುತ್ತದೆ.

ಹಿಂಸೆ-ಅಹಿಂಸೆಯ ವಿಷಯ ಅತ್ಯಂತ ಸೂಕ್ಷ್ಮವಾದದ್ದು. ಅದು ಬಳಕೆ ಯಾಗುವ ರೀತಿ, ಉದ್ದೇಶ, ಆಶಯವನ್ನು ಸಮಯ-ಸಂದರ್ಭ ಅದರ ಪರಿಮಿತಿ ಯನ್ನು ಅವಲಂಬಿಸಿರುವಂತಹದು. ಬೆಂಕಿ ಉರಿಯಾಗಿ ಸುಟ್ಟುಹಾಕಬಲ್ಲಂತೆ ಜ್ಯೋತಿಯಾಗಿ ಬೆಳಗಲೂ ಬಲ್ಲದು. ಒಂದು ಲೋಹ ಮಾರಕಾಸ್ತ್ರವಾಗಬಲ್ಲಂತೆ,

ಜೀವನೋಪಯೋಗಿ ಸಾಧನವೂ ಆಗಬಲ್ಲದು. ಎಲ್ಲ ಉಪಾಯಗಳು ಸಲ್ಲದೆ ಹೋದಾಗ ಒಂದು ಮಿತಿಯಲ್ಲಿ ನಿರ್ದಯತೆಗೂ ದಯೆಯಷ್ಟೇ ಬೆಲೆ ಬರಬಲ್ಲುದು; ಹಿಂಸೆಯೂ ಅಹಿಂಸೆಯಷ್ಟೇ ಪರಿಣಾಮಕಾರಿಯಾಗಬಲ್ಲದು. ಎಲ್ಲಿ ಸಂಸ್ಕರಣ ಪರಿಷ್ಕರಣವಿದೆಯೋ ಅಲ್ಲೆಲ್ಲ ಒಂದು ರೀತಿಯಲ್ಲಿ, ಒಂದು ಹಂತದಲ್ಲಿ ಸೌಮ್ಯವಾದ ಶಿಕ್ಷೆಯ, ದಂಡನೆಯ ರೂಪದ ಹಿಂಸೆ ಅನಿವಾರ್ಯವಾಗುತ್ತದೆ. ಆದರೆ ಅದು ಹಿಂಸಾರೂಪದ ಅಹಿಂಸೆ. ಲೋಕಕಲ್ಯಾಣಕ್ಕಾಗಿ ನಡೆಯುವ ಅಹಿಂಸೆಯ ರೂಪಾಂತರ; ಅವತಾರ. ವ್ಯಕ್ತಿ-ಸಮಾಜ ಹಾಗೂ ಲೋಕದ ಸಂಸ್ಕರಣಕ್ಕಾಗಿ ಶರಣರಲ್ಲಿ ಆನುಷಂಗಿಕವಾಗಿ ಅನಿವಾರ್ಯವಾಗಿ ಕಾಣಿಸಿಕೊಳ್ಳುತ್ತಿದ್ದ ನಿರ್ದಾಕ್ಷಿಣ್ಯ ರೂಪದ ಹಿಂಸೆ ಈ ಸ್ವರೂಪದ್ದು; ತೀರ ವ್ಯವಹಾರಿಕವಾದದ್ದು. ಗಾಂಧಿಯವರಲ್ಲಿ 'ಉಪವಾಸ' ಕೊನೆಯ ಅಸ್ತ್ರವಾದಂತೆ, ಶರಣರಲ್ಲಿ ಲಿಂಗಸಾಕ್ಷಿಯಾದ ಶಿಕ್ಷೆ-ದಂಡನೆಯೂ ಒಂದು ಅನಿವಾರ್ಯವಾದ ಅಷ್ಟೇ ಸಾತ್ವಿಕವಾದ ಕೊನೆಯ ಅಸ್ತ್ರ. ಶರಣರದು ಲೌಕಿಕಸಂಬಂಧಿಯಾದ ವಾಸ್ತವಪ್ರಪಂಚಕ್ಕೆ ಸಂಬಂಧಿಸಿದ್ದು; ಗಾಂಧಿಯವರದು ಸ್ವಪ್ನಸದೃಶವಾದ ಆದರ್ಶಲೋಕಕ್ಕೆ ಸಂಬಂಧಿಸಿದ್ದು.

ಗಾಂಧಿಯವರು ಅಹಿಂಸೆ ಹಾಗೂ ಸನಾತನ ಹಿಂದೂಧರ್ಮದ ಬಗೆಗಿನ ಅವಾಸ್ತವ ಹಾಗೂ ಅತಿರೇಕದ ಕಲ್ಪನೆಗಳಿಂದ ಎಷ್ಟೋ ಸಂದರ್ಭದಲ್ಲಿ ಸಂದಿಗ್ಧತೆಯನ್ನು, ದ್ವಂದ್ವವನ್ನು ಎದುರಿಸಬೇಕಾಯಿತು. ವಾದಕ್ಕಾಗಿಯೇ ಒಂದು ಉದಾಹರಣೆಯನ್ನು ಎತ್ತಿಹೇಳುವದಾದರೆ-ಮಾನಭಂಗಕ್ಕೆ ಒಳಗಾಗುತ್ತಿರುವ ಸ್ತ್ರೀಯು ಕೂಡ ತನ್ನ ಮಾನರಕ್ಷಣೆಗಾಗಿಯೂ ಹಿಂಸಾಮಾರ್ಗವನ್ನು ಅನುಸರಿಸಕೂಡದು; "ಅಂಥ ಮಹಿಳೆಗೆ ಹಿಂಸೆಯ ಅಪಾಯಕ್ಕೊಳಗಾಗುವ ಸ್ಥಿತಿಯೇ ಪ್ರಾಪ್ತವಾಗುವದಿಲ್ಲ. ಒಂದು ವೇಳೆ ಬಂದರೂ ಅಂಥವಳು ದುರುಳರಿಗೆ ಯಾವ ಬಗೆಯ ಹಿಂಸೆಯನ್ನೂ ಎಸಗದೆ ತನ್ನ ಮಾನವನ್ನು ಪೂರ್ಣವಾಗಿ ರಕ್ಷಿಸಿಕೊಳ್ಳಲು ಶಕ್ತಳಾಗುವಳು. ಪೂರ್ಣ ಪಾವಿತ್ರ್ಯತೆ ತನ್ನನ್ನು ತಾನೇ ರಕ್ಷಿಸಿಕೊಳ್ಳಬಲ್ಲದು ಎಂಬ ಮಾತನ್ನು ಯಾವ ಸಂಶಯವೂ ಇಲ್ಲದೆ ಒಪ್ಪುತ್ತೇನೆ" ಎಂಬುದು ಗಾಂಧಿಯವರ ವಾದ; ನೆಲದ, ಬದುಕಿನ ವಾಸ್ತವ ಸಂಬಂಧದ ಪರಲನ್ನು ಹರಿದುಕೊಂಡು ವಿಶ್ವಾಸವನ್ನು ಕಳೆದುಕೊಳ್ಳುವಂತಹದು.

ಗಾಂಧಿಯವರು ತಮ್ಮ 'ಸತ್ಯಾಗ್ರಹ'ದ ಈ ಅಸ್ತ್ರವನ್ನು ರಾಜಕೀಯ ಸಂದರ್ಭದಲ್ಲಿ ಪರಕೀಯರಾದ ಬ್ರಿಟಿಶರೊಂದಿಗೆ ಮಾತ್ರವಲ್ಲ ತಮ್ಮ ತತ್ವ-ನಂಬಿಕೆ, ವಾದದ ಕಾರ್ಯಾಚರಣೆಗಾಗಿ ತಮ್ಮ ಅನುಯಾಯಿಗಳ ಮೇಲೆಯೇ ಪ್ರಯೋಗಿಸುವ ಮೂಲಕ ತಮ್ಮ ಸಮಕಾಲೀನ ಒಟ್ಟು ಪರಿಸರದ ಮೇಲೆ ನುಣ್ಣಗಿನ ಒತ್ತಡ ಹಾಗೂ ಶೀತಲ ಆಕ್ರಮಣ ನಡೆಸಿದರೆಂಬ ಆಪಾದನೆಗೂ ಗುರಿಯಾದರು. 'ಸತ್ಯ'ವೆಂದರೆ 'ತಾವು ಹೇಳಿದ್ದು' ಎಂಬ ಅತಿರೇಕವೂ ಕಾಣಿಸಿಕೊಂಡಿತು. ಅಂದರೆ, ಎಷ್ಟೋ ಸಲ, ಯಾವ ಮಾರ್ಗ-ಅಭಿಪ್ರಾಯವನ್ನು ಗಾಂಧಿಯವರು ಅನುಸರಿಸಿದರೆ ಸತ್ಯಾ

ಗ್ರಹವಾಗಂತ್ರಿತ್ತೊ, ಆದನ್ನೇ ಅನ್ಯರು ಅನುಸರಿಸಿದರೆ ದುರಾಗ್ರಹವೆನಿಸುವಂತಾಯಿತು. 'ಸತ್ಯ'ದ ಸಾಕ್ಷತ್ಕಾರ, ಮತ್ತು ಸತ್ಯಾಗ್ರಹದ ವ್ರತಗಳೆಲ್ಲ ಸಾಮಾನ್ಯರಿಗೆ ಸಾಧ್ಯವಾಗದೇಹೋಗುವ ಸಂಭವವೇ ಹೆಚ್ಚಾಗಿ, ಅದು ಗಾಂಧಿಯಂಥ "ಒಬ್ಬ ವ್ಯಕ್ತಿಯ ನಿರ್ಣಯವನ್ನು ಕಮ್ಮಿ ದರ್ಜೆಯ ಬೌದ್ಧಿಕ ಮತ್ತು ನೈತಿಕಶಕ್ತಿ ಹೊಂದಿದವರು ಕುರುಡರಂತೆ ಅನುಸರಿಸಬೇಕು" ಎನ್ನುವ ಅತಿಪ್ರಸಂಗ ಒದಗಿದೊಂದು 'ಗಾಂಧೀಪ್ರಭುತ್ವ' ಎಂದೂ ಕರೆಯಿಸಿಕೊಳ್ಳುವ ಹಂತಕ್ಕೂ ಬಂದಿತು. ಆದರಿಂದ ಸತ್ಯಾಗ್ರಹವೆನ್ನುವದು ಒಂದು ವಿಶಿಷ್ಟ ದರ್ಜೆಯ, ವಿಶಿಷ್ಟ ವರ್ಗದ ಸೊತ್ತಾಗಿ ನಿಲ್ಲುವಂತಹ ಸ್ಥಿತಿ ಸತ್ಯಾಗ್ರಹಕ್ಕೂ ತಪ್ಪಲಿಲ್ಲ. ಆದರೆ ಸಮುದಾಯಪ್ರಜ್ಞೆಯಿಂದ ಕೂಡಿದ ಮತ್ತು ಶರಣ ಸಮುದಾಯದ ಸೊತ್ತಾಗಿಯೇ ರೂಪಗೊಂಡ 'ಅನುಭವಮಂಟಪ'ದ ಪರಿಕಲ್ಪನೆ ಶರಣಪ್ರಭುತ್ವವನ್ನು ಸ್ಥಾಪಿಸಿತು. ಅಂತೆಯೇ ಕಲ್ಯಾಣದ ಅನುಭವಮಂಟಪ ಜನಸಂಪರ್ಕದಿಂದ ದೂರವಾದ ಆಶ್ರಮವಾಗದೆ, ಜನಸಮುದಾಯದಲ್ಲಿಯ ಮಹಾಮನೆಯಾಯಿತು; ಅನುಭವಮಂಟಪವಾಯಿತು; ಶರಣಪ್ರಭುತ್ವದ ಸಂಕೇತವಾಯಿತು; ಪ್ರಜಾಪ್ರಭುತ್ವದ ಪೂರ್ವಮಾದರಿಯಾಯಿತು. ಈ ಶರಣಧರ್ಮದ ಸಿದ್ಧಾಂತಗಳು ಸಮಷ್ಟಿಪ್ರಜ್ಞೆಯಿಂದ ರೂಪಗೊಂಡವುಗಳಾಗಿದ್ದರಿಂದ ನೂರಾರು ವರುಷಗಳವರೆಗೆ ಚಲಾವಣೆಯಲ್ಲಿ ಉಳಿಯಬಲ್ಲವುಗಳಾದವು. ಆದರೆ 'ಸತ್ಯಾಗ್ರಹ'ದ ಮೌಲ್ಯಗಳು ಗಾಂಧಿಯವರ ಎದುರಿನಲ್ಲಿಯೇ ಚಲಾವಣೆಯನ್ನು ಕಳೆದುಕೊಂಡವು. ಅವರ ಸರ್ವೋದಯತತ್ವಗಳಲ್ಲಿಯ ಆರ್ಥಿಕ-ಸಾಮಾಜಿಕ ಚಿಂತನೆಗಳು ಆದರ್ಶಮಂತ್ರಗಳಾಗಿ ಉಳಿದುಕೊಂಡವು. ಅಂತೆಯೇ ಮಹಾತ್ಮಾಗಾಂಧಿಯವರು ತೆಗೆದ ಹತಾಶಯ ಉದ್ಗಾರವಿದು : "Who listens to me today? Everybody is egar to grand photoes and statues. Nobody really wants to follow my advice, neither the people nor those in power have any use for me".

ಇಷ್ಟೆಲ್ಲ ಹೇಳಿದುದರ ಮುಖ್ಯ ಉದ್ದೇಶ 'ಶರಣಧರ್ಮ' ಅಥವಾ ಬಸವಣ್ಣನವರ ಬದುಕು ದ್ವಂದ್ವಾತೀತವೆಂದಾಗಲಿ, ಬಸವಣ್ಣನವರ ಸಾಧನೆಯ ಎದುರಿಗೆ ಗಾಂಧಿಯವರ ವ್ಯಕ್ತಿತ್ವ, ಸಾಧನೆ-ಸತ್ವ ಕ್ಷೀಣಗೊಳ್ಳುವದನ್ನು ಪ್ರತಿಪಾದಿಸುವದಾಗಲಿ ಅಲ್ಲ; ಅವರಿಬ್ಬರೂ ಯುಗಪುರುಷರಾಗಿ ಲೋಕವನ್ನು ಪರಿಪೂರ್ಣತೆಯತ್ತ ನಡೆಸಿಕೊಂಡು ಹೋಗಲು ಆತ್ಮಸಾಕ್ಷಿಯಾಗಿ ತಮ್ಮನ್ನು ಸಮರ್ಪಿಸಿಕೊಂಡ ಮಹಾಚೇತನಗಳು. ಮೂಲತಃ ಅವರಿಬ್ಬರೂ ಒಂದು ಹಂತದಲ್ಲಿ ಸಾಧಕರೆ ಆದುದರಿಂದ ದ್ವಂದ್ವ ತೀರ ಅನಿವಾರ್ಯವೂ ಹೌದು, ಸಹಜವೂ ಹೌದು. ಆದರೂ ಬಸವಣ್ಣನವರ ಮನೋಧರ್ಮ ಹಾಗೂ ಸಿದ್ಧಾಂತಗಳು ತಮ್ಮ ಸಮಕಾಲೀನದಲ್ಲಿಯಷ್ಟಾದರೂ ಹೆಚ್ಚು ಪ್ರಸ್ತುತವೆನಿಸಿದ್ದುವು; ಆದರೆ ಗಾಂಧಿಯವರ ಮನೋಧರ್ಮ, ತತ್ವಗಳೂ

ಸಮಕಾಲೀನದಲ್ಲಿಯೇ ಬಹಳಷ್ಟು ಹಂತದಲ್ಲಿ ಅಪ್ರಸ್ತುತವಾಗಿ ಕಾಣಿಸಿಕೊಂಡದ್ದುಂಟು. ಒಟ್ಟಿನಲ್ಲಿ ಬಸವಣ್ಣನವರ ವ್ಯಕ್ತಿತ್ವ ಗಾಂಧಿಯವರ ವ್ಯಕ್ತಿತ್ವಕ್ಕಿಂತಲೂ ವ್ಯಾಪಕವಾದುದೆಂದು ಹೇಳುವವಮೂಲಕ ನಮ್ಮ ಆತ್ಮಸಾಕ್ಷಿತ್ವವನ್ನು ಕಾಪಾಡಿಕೊಳ್ಳಬೇಕಾಗುತ್ತದೆ.

ಅಡಿಟಿಪ್ಪಣಿಗಳು

೧. 'ಸತ್ಯಾಗ್ರಹ'—ಮೋ. ಕ. ಗಾಂಧಿ; (೧೯೫೯) 'ನಿವೇದನ' ಅನು : ಕುವೆಂಪು. ಪುಟ-IX

೨. ನೋಡಿ : 'ಮಾರ್ಕ್ಸ್ ಮತ್ತು ಗಾಂಧಿ'— ಮಧು ದಂಡವತೆ; ಅನು : ಕೆ. ವಿ. ಸುಬ್ಬಣ್ಣ ಮತ್ತು ಅಕ್ಷರ; (೧೯೮೩), ಪು : ೧೦೫

೩. 'ಸತ್ಯಾಗ್ರಹ' ಮೋ. ಕ. ಗಾಂಧಿ, 'ನಿವೇದನ' ಪು : X

೪. ನೋಡಿ : 'ಹಿಂದೂಧರ್ಮ-ಗಾಂಧೀಜಿ'—ಜಿ. ವಿ. ನಾರಾಯಣಮೂರ್ತಿ, ಪ್ರ. ಕ. ೫೧-೪, ಪು-೬೭

೫. ನೋಡಿ : ಅದೇ ಪು : ೬೮

೬. ನೋಡಿ : ಅದೇ ಪು-೭೦.

೭. 'ಬಸವತತ್ವ ಪರಿಮಳ'— ಸಂ : ಮಲ್ಲಾಬಾದಿ ವೀರಭದ್ರಪ್ಪ, (೧೯೫೪) ಪ್ರಸ್ತಾವನೆ. ಪು : XVI

೮. ಅದೇ ಪು : XVII

೯. 'ಮಹಾತ್ಮಾಗಾಂಧೀಜಿ ಮತ್ತು ಬಸವಣ್ಣನವರು' ಎಂ. ಪಿ. ಪಾಟೀಲ "ಯುಗಪುರುಷ ಗಾಂಧಿ" (೧೯೭೦)

೧೦. 'ಸತ್ಯಾಗ್ರಹ' ಮೋ. ಕ. ಗಾಂಧಿ (೧೯೫೯) ನಿವೇದನ : ಪು-XI

೧೧. ಅದೇ ಪು : XII

೧೨. ಅದೇ ,, XI

೧೩. ಅದೇ ,, XI

೧೪. ಅದೇ ,, X

೧೫. ನೋಡಿ : 'ವೀರಶೈವ ತತ್ವಾರ್ಥ ವಿವೇಚನೆ'—ಡಾ. ಬಿ. ವ್ಹಿ. ಮಲ್ಲಾಪುರ (೧೯೮೭), ಪು: ೭೦-೭೪

೧೬. ನೋಡಿ : 'ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹ'—ಮೋ. ಕ. ಗಾಂಧಿ (೧೯೫೮), ಪು : ೧೧೯

೧೭. ಅದೇ ಪು : ೧೨೩

೧೮. 'ಸತ್ಯಾಗ್ರಹ' ಮೋ. ಕ. ಗಾಂಧಿ, (೧೯೫೯), ಪು : ೭೨,

ಇವಲ್ಲದೆ ಈ ಮುಂದಿನ ಗ್ರಂಥಗಳ ನೆರವನ್ನೂ ಪಡೆದುಕೊಳ್ಳಲಾಗಿದೆ

—ಸರ್ವೋದಯ—ಮೋ. ಕ. ಗಾಂಧಿ, ಪ್ರ. ಗಾಂಧಿಸ್ಮಾರಕ ನಿಧಿ, ಮೈಸೂರು.

—ಮಾನವನಿಷ್ಠೆ ಸರ್ವೋದಯ ಕ್ರಾಂತಿ—ದಾದಾ ಧರ್ಮಾಧಿಕಾರಿ, ಅನು. ಸಿದ್ದವ್ವನಹಳ್ಳಿ ಕೃಷ್ಣ ಶರ್ಮ, ಪ್ರ. ಗಾಂಧಿಸ್ಮಾರಕ ನಿಧಿ, ಬೆಂಗಳೂರು (೧೯೬೩)

—ಬಸವೇಶ್ವರ ಗಾಂಧೀಜಿ—ಡಾ. ಎಚ್. ತಿಪ್ಪೇರುದ್ರಸ್ವಾಮಿ, ಪ್ರ. ಬಸವೇಶ್ವರಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ (೧೯೮೩)

—ಬಸವೇಶ್ವರ—ಡಾ. ಬಿ. ಬಿ. ಹೆಂಡಿ, ಪ್ರ. ಬಸವೇಶ್ವರಪೀಠ, ಕ. ವಿ. ವಿ. ಧಾರವಾಡ (೧೯೮)

● ● ●

ಪ್ರಕ್ಷಿಪ್ತ ವಚನಕಾರರು

● ಎಂ. ಎಂ. ಕಲಬುರ್ಗಿ

ಕಳೆದ ಎಂಟುನೂರು ವರ್ಷಗಳ ಇತಿಹಾಸದಲ್ಲಿ ವಚನಸಾಹಿತ್ಯವು ಸೃಜನ, ಸಂರಕ್ಷಣ ಮತ್ತು ಸಂಯೋಜವೆಂಬ ಮೂರು ಘಟ್ಟಗಳನ್ನು ದಾಟಿ, ಈಗ ಸಂಸ್ಕರಣ ಘಟ್ಟದಲ್ಲಿದೆ. ಸೃಜನವೆಂಬುದು ೧೨ನೆಯ ಶತಮಾನಕ್ಕೆ, ಸಂರಕ್ಷಣವೆಂಬುದು ೧೩-೧೪ನೆಯ ಶತಮಾನಗಳಿಗೆ, ಸಂಯೋಜನವೆಂಬುದು ೧೫ರಿಂದ ೧೯ನೆಯ ಶತಮಾನಗಳ ವರೆಗೆ ವ್ಯಾಪಿಸಿ ನಿಂತಿದೆ. ಇಲ್ಲಿಂದ ಮುಂದಿನ ೨೦ನೆಯ ಶತಮಾನ ಸಂಸ್ಕರಣಘಟ್ಟವಾಗಿದೆ. ಸಂರಕ್ಷಣಘಟ್ಟದ 'ವಚನಸಂಗ್ರಹ'ಕೃತಿಗಳಿಗೆ ಭಿನ್ನಪಾಠ ದೋಷಗಳು ಹುಟ್ಟಿಕೊಂಡರೆ, ಸಂಯೋಜನ ಘಟ್ಟದ 'ವಚನಸಂಕಲನಕೃತಿ'ಗಳಲ್ಲಿ ಹೆಚ್ಚಿನದಾಗಿ ಪ್ರಕ್ಷಿಪ್ತವಚನಗಳು ಸೇರಿಕೊಂಡವು. 'ವಚನಸಂಪಾದನಕೃತಿ'ಗಳಲ್ಲಿ ಇನ್ನೂ ಹೆಚ್ಚಿನದಾಗಿ ಪ್ರಕ್ಷಿಪ್ತವಚನಕಾರರು ಸೇರಿಕೊಂಡರೆಂದು ಕಾಣುತ್ತದೆ. ಸಂಸ್ಕರಣಕ್ರಿಯಾಸಂದರ್ಭದಲ್ಲಿ ಯಾವುದೇ ವಿದ್ವಾಂಸ ಮೊದಲು ಮಾಡಬೇಕಾದುದು ಈ ಪ್ರಕ್ಷಿಪ್ತವಚನಗಳನ್ನು, ಪ್ರಕ್ಷಿಪ್ತವಚನಕಾರರನ್ನು ಹೊರಗೆ ಇಡುವುದು, ಆಮೇಲೆ ಮಾಡಬೇಕಾದುದು ಭಿನ್ನಪಾಠದೋಷಗಳನ್ನು ದೂರ ಸರಿಸುವುದು.

೨೦ನೆಯ ಶತಮಾನದ ಆದಿಭಾಗದಲ್ಲಿ ವಚನಸಾಹಿತ್ಯವನ್ನು ಪ್ರಕಟಿಸಿದ ವಿದ್ವಾಂಸರು ಪ್ರಾಚೀನ "ವಚನಸಂಕಲನಕೃತಿ"ಗಳನ್ನು ಮೂಲರೂಪದಲ್ಲಿಯೇ ಸ್ವತಂತ್ರವಾಗಿ ಪ್ರಕಟಿಸಿದ್ದರೆ, ಇಂದಿನ ವಿದ್ವಾಂಸರಿಗೆ ಅವುಗಳಲ್ಲಿಯ ಪ್ರಕ್ಷಿಪ್ತವಚನ-ನಿಜವಚನಗಳನ್ನು, ಪ್ರಕ್ಷಿಪ್ತವಚನಕಾರ-ನಿಜವಚನಕಾರರನ್ನು ಗುರುತಿಸುವುದು ಕೆಲ ಮಟ್ಟಿಗೆ ಸುಲಭವಾಗುತ್ತಿದ್ದಿತು. ನಿಜವಚನಕಾರರನ್ನು ಇಟ್ಟುಕೊಂಡು, ಅವರ ನಿಜವಚನಗಳನ್ನು ಈ ಎಲ್ಲ ಮೂಲಗಳಿಂದ ಪ್ರಕಟಿಸಲು ಅನುಕೂಲವಾಗುತ್ತಿತ್ತು. ಆದರೆ ಡಾ. ಫ. ಗು. ಹಳಕಟ್ಟಿ ಮೊದಲಾದ ವಿದ್ವಾಂಸರು ಹಾಗೆ ಮಾಡದೆ, ಪ್ರಾರಂಭದಲ್ಲಿಯೇ ಅನೇಕ ಮೂಲಗಳಿಂದ ವಚನಗಳನ್ನು ಆಯ್ದು, ವಂಡಿವಾಳ ಮಾಚಿದೇವನ ವಚನ, ಸಿದ್ಧರಾಮೇಶ್ವರ ವಚನ ಇತ್ಯಾದಿ ಏಕವ್ಯಕ್ತಿ ವಚನ ಸಂಪುಟಗಳನ್ನೂ, 'ವಚನಶಾಸ್ತ್ರಸಾರ' ಮೊದಲಾದ ಬಹುವ್ಯಕ್ತಿ ವಚನಸಂಪುಟಗಳನ್ನೂ ಪ್ರಕಟಿಸಿದರು. ಇದರಿಂದಾಗಿ ಪ್ರಾರಂಭದಲ್ಲಿಯೇ ನಿಜವಚನಕಾರರ

ಯಾದಿಯಲ್ಲಿ ಪ್ರಕ್ಷಿಪ್ತವಚನಕಾರರು ಸೇರಿಕೊಂಡುಬಿಟ್ಟರು; ಪ್ರಕ್ಷಿಪ್ತವಚನಗಳು ನಿಜವಚನಗಳ ರಾಶಿಯಲ್ಲಿ ಬೆರೆತುಹೋದವು. ತಾವು ಸಂಗ್ರಹಿಸಿದ ವಚನಗಳಿಗೆ ಆಕರ ಹೇಳದ ಕಾರಣ ಪ್ರಾಮಾಣಿಕ ಕೃತಿಗಳಿಂದ ಆರಿಸಿಕೊಂಡುವು ಯಾವುವು? ಅಪ್ರಾಮಾಣಿಕ ಕೃತಿಗಳಿಂದ ಆರಿಸಿಕೊಂಡುವು ಯಾವುವು? ಎಂಬುದೂ ಸ್ಪಷ್ಟ ವಾಗದೆ ಎಲ್ಲ ವಚನಗಳನ್ನು, ಎಲ್ಲ ವಚನಕಾರರನ್ನು ನಂಬುವಂತಾಯಿತು. ಮುಂದೆ ಆರ್. ನರಸಿಂಹಾಚಾರ್ ಅವರು ಡಾ. ಫ. ಗು. ಹಳಕಟ್ಟಿ ಅವರ ಈ ಸಂಪುಟಗಳನ್ನು ಬಳಸಿಕೊಳ್ಳುವಲ್ಲಿ ಕವಿಚರಿತೆಯ ಪಠ್ಯಭಾಗ, ಅನುಬಂಧಭಾಗಗಳಲ್ಲಿ ಈ ಪ್ರಕ್ಷಿಪ್ತ ವಚನಕಾರರು ಸೇರಿಕೊಂಡು, ವಿದ್ವಾಂಸರ ವಲಯದಲ್ಲಿಯೂ ಮಾನ್ಯತೆ ಪಡೆದರು. ಶರಣರ ಮೇಲಿನ ಭಕ್ತಿ, ಹಳಕಟ್ಟಿ ಅವರ ಮೇಲಿನ ಗೌರವ, ನರಸಿಂಹಾಚಾರ್ ಅವರ ಅಧಿಕಾರವಾಣಿಯ ಬಗೆಗಿನ ವಿಶ್ವಾಸ ಕಾರಣವಾಗಿ ಶ್ರೀ ಎಸ್. ಎಸ್. ಬಸವನಾಳ ಮೊದಲಾದವರು ಪ್ರಕ್ಷಿಪ್ತವಚನಗಳನ್ನು, ಪ್ರಕ್ಷಿಪ್ತವಚನಕಾರರನ್ನು ಗುರುತಿಸುವುದ ರತ್ತ ಗಮನಹರಿಸದೆ, ವಚನಗಳ ಪಾಠದಲ್ಲಿ ಸುಧಾರಣೆಮಾಡಲು ಮಾತ್ರ ತೊಡಗಿ ದರು. ಆದರೆ ೨೦ನೆಯ ಶತಮಾನದ ಕಿನೆಯ ಪಾದದಲ್ಲಿ ಪ್ರಕ್ಷಿಪ್ತವಚನಗಳ ಬಗ್ಗೆ ದನಿ ಕೇಳಿಬಂದರೂ, ಅದರ ಹಿಂದಿರುವ ಇಂಗಿತ ಶುದ್ಧಶೈಕ್ಷಣಿಕವಾಗಿಲ್ಲದ ಕಾರಣ ವಿದ್ವಾಂಸರು ಈ ಬಗ್ಗೆ ಒಂದು ಬಗೆಯ ತಟಸ್ಥಧೋರಣೆ ತಾಳಿದರೆಂದು ತೋರುತ್ತದೆ. ಮೇಲಾಗಿ ಪ್ರಕ್ಷಿಪ್ತವಚನಗಳನ್ನು ಆತ್ಯಂತಿಕವಾಗಿ ಬಿಡಿಸಿ ಹೇಳುವುದು ಅಷ್ಟು ಸುಲಭವೂ ಅಲ್ಲ. ಹೀಗಿದ್ದೂ ಅಂಥ ವಚನಗಳ ಕಡೆಗೆ ರಚನಾತ್ಮಕ ಪ್ರತಿಕ್ರಿಯೆ ತೋರಿಸುತ್ತ ಹೋಗುವುದು ಅವಶ್ಯವಿದೆ. ಅಂಥ ಒಂದು ಪ್ರಯತ್ನ ಈ ಲೇಖನ.

ಶರಣರಲ್ಲಿ ವಚನ ಬರೆದವರಿದ್ದಾರೆ, ವಚನ ಬರೆಯದವರಿದ್ದಾರೆ. ಈ ವಚನ ಬರೆಯದ ಶರಣರ ಹೆಸರಿನಲ್ಲಿ ಪ್ರಕ್ಷಿಪ್ತವಚನಗಳು ಹುಟ್ಟಿಕೊಂಡಿವೆ. ಇವರನ್ನು "ಪ್ರಕ್ಷಿಪ್ತವಚನಕಾರರು–೧" ಎಂದು ಕರೆಯಬಹುದು. ಹೆಚ್ಚಿನದಾಗಿ ಕಾಲ್ಪನಿಕ ವ್ಯಕ್ತಿಗಳ ಹೆಸರಿನಲ್ಲಿಯೂ ವಚನಗಳು ಹುಟ್ಟಿಕೊಂಡಿವೆ. ಇವರನ್ನು "ಪ್ರಕ್ಷಿಪ್ತ ವಚನ ಕಾರರು-೨" ಎಂದು ಕರೆಯಬಹುದು. ಮೇಲೆ ಹೇಳಿದ "ವಚನಸಂಗ್ರಹ" ವರ್ಗದ ಕೃತಿಗಳು ಪ್ರಕ್ಷಿಪ್ತವಚನಗಳ, ಪ್ರಕ್ಷಿಪ್ತವಚನಕಾರರ ದಾಳಿಗೆ ಗುರಿಯಾಗಿಲ್ಲವೆಂದು ತೋರುತ್ತದೆ. ಆದರೆ ಒಂದು ತತ್ತ್ವವನ್ನು ಕೇಂದ್ರವಾಗಿಟ್ಟುಕೊಂಡು ರೂಪಿಸಿದ "ವಚನಸಂಕಲನ" ವರ್ಗದಕೃತಿಗಳು ನಿಜವಚನಕಾರರ ಹೆಸರಿನಲ್ಲಿ ಪ್ರಕ್ಷಿಪ್ತವಚನ ಗಳನ್ನೂ ಹುಟ್ಟಿಸಿಕೊಂಡಿರಬಹುದು. ಇದಕ್ಕಿಂತ, ಒಂದು ತತ್ತ್ವವನ್ನು ಕುರಿತು ಚರ್ಚೆ ನಡೆಸಿದ ಸಂವಾದ ರೀತಿಯ "ವಚನ ಸಂಪಾದನ" ವರ್ಗದ ಕೃತಿಗಳಲ್ಲಿ ವಿಷಯದ ಕೊರತೆಯೆನಿಸಿದಾಗ ಮೇಲೆ ಹೇಳಿದ ಎರಡೂ ರೀತಿಯ ಪ್ರಕ್ಷಿಪ್ತವಚನಕಾರರು ಹುಟ್ಟಿಕೊಂಡಂತಿದೆ. ಇವರು ಪ್ರಕ್ಷಿಪ್ತರೆನ್ನಲು ಕಾರಣವೆಂದರೆ ಇವರ ಹೆಸರಾಗಲೀ, ವಚನಗಳಾಗಲೀ ಅನೇಕ ಸಂಖ್ಯೆಯಲ್ಲಿ ಸಿಗುವ ಪ್ರಾಚೀನ ಬೇರೆ ವಚನಕೃತಿಗಳಲ್ಲಿ

ಕಂಡುಬರದೆ ಒಂದು ಕೃತಿಯಲ್ಲಿ, ಬಹಳೆಂದರೆ ಇದೇ ಜಾತಿಯ ಇನ್ನೊಂದು ಕೃತಿಯಲ್ಲಿ ಮಾತ್ರ ಕಂಡುಬರುವುದು, ವಚನಶೈಲಿಯಲ್ಲಿ ವ್ಯತ್ಯಾಸ ತೋರಿಬರುವುದು, ಮತ್ತು ಕೆಲವೊಮ್ಮೆ ತತ್ವವಿರೋಧಿಯಾಗಿರುವುದು. ಈ ಅಂಶಗಳನ್ನು ಆಧರಿಸಿ ಕೆಳಗಿನ ಕೃತಿಗಳಲ್ಲಿ ಮಾತ್ರ ಕಂಡುಬರುವವರನ್ನು ಪ್ರಕ್ಷಿಪ್ತವಚನಕಾರರೆಂದು ಭಾವಿಸಬಹುದಾಗಿದೆ.

೧. ಮುಕ್ತಿಕಂಠಾಭರಣ :

ಮುಕ್ತಿಕಂಠಾಭರಣದಲ್ಲಿ ಕಂಡುಬರುವ ವಚನಕಾರರ ಸಂಖ್ಯೆ ೪೨. ಇವರಲ್ಲಿ ೧೦ ಜನ ಪ್ರಕ್ಷಿಪ್ತವಚನಕಾರರಿರುವಂತಿದೆ :

೧. ಆಗಮಮೋಹಿನಿ	—	ಆಗಮ ಮೋಹಿನಿ
೨. ಕಿರಾತ ಸಂಗಯ್ಯ	—	ಕಿರಾತ ಸಂಗಲಿಂಗ
೩. ನಿಜಗುಣದೇವ	—	ನಿಜಗುಣಲಿಂಗ
೪. ನಿಜಲಿಂಗದೇವ	—	ನಿಜಲಿಂಗದೇವ
೫. ನಿರಾಳದೇವ	—	ನಿರಾಳ ಶ್ರೀಗುರುಲಿಂಗ
೬. ರೇವಣಸಿದ್ಧ	—	ತ್ರಿಪುರಾಂತಕ ಸೋಮಲಿಂಗ
೭. ವೇದಕಂಚುಕಿ	—	ವೇದಕಂಚುಕಿ
೮. ಶಾಂಭವಿ	—	ಶಾಂಭವಿಲಿಂಗ
೯. ಶಿವಪೂಜೆಯ ಭೀಮಯ್ಯ	—	ಶಿವಪೂಜೆಯ ಭೀಮಲಿಂಗ
೧೦. ಸೌಂದರಿದೇವಿ	—	ಶ್ರೀಗುರು ಸೋಮಲಿಂಗ[೧]

ಈ ೧೦ ಜನರು "ಪ್ರಕ್ಷಿಪ್ತವಚನಕಾರರು-೨" ವರ್ಗಕ್ಕೆ ಸೇರುತ್ತಾರೆ. ಇಲ್ಲಿ ಆಗಮಮೋಹಿನಿ, ವೇದಕಂಚುಕಿ ಮೊದಲಾದಂವು ಪ್ರಾಚೀನ ಕಾಲದಲ್ಲಿ ಕರ್ನಾಟಕದ ವ್ಯಕ್ತಿಗಳಿಗೆ ಇಡುವ ಹೆಸರುಗಳಾಗಿ ತೋರುವುದಿಲ್ಲ.

ಕಿರಾತಸಂಗಯ್ಯ, ಶಿವಪೂಜೆಯ ಭೀಮಯ್ಯ ಹೆಸರುಗಳು ಡಾ. ಫ. ಗು. ಹಳಕಟ್ಟಿಯವರ 'ವಚನಶಾಸ್ತ್ರಸಾರ'ದ ಅನುಬಂಧದಲ್ಲಿ ಕಂಡುಬರುತ್ತವೆ. ಬಹುಶಃ ಈ ಹೆಸರುಗಳನ್ನು ಡಾ. ಹಳಕಟ್ಟಿಯವರು ಮುಕ್ತಿಕಂಠಾಭರಣ ಇಲ್ಲವೆ ಮುಂದೆ ಪ್ರಸ್ತಾಪಿಸಲ್ಪಡುವ 'ಅಲ್ಲಮಪ್ರಭು ಸಿದ್ಧರಾಮನ ವಾದದ ವಚನಗಳು'

೧ ಈ ಯಾದಿಯಲ್ಲಿ ಗಂಗಾಂಬಿಕೆಯೂ ಸೇರಿಕೊಳ್ಳುವ ಸಾಧ್ಯತೆಯಿದೆ.

ಕೃತಿಯಿಂದ ಎತ್ತಿಕೊಂಡಿರಬಹುದು. ಆಮೇಲೆ ಈ ಹೆಸರುಗಳನ್ನು ಹಳಕಟ್ಟಿಯವರಿಂದ ಆರ್. ನರಸಿಂಹಚಾರ್ಯರು ಸ್ವೀಕರಿಸಿದರು. ಶ್ರೀ ಬಸವನಾಳರು ತಮ್ಮ "ಬಸವಣ್ಣನವರ ಷಟ್‌ಸ್ಥಳ ವಚನಗಳು" ಕೃತಿಯ ಮುನ್ನುಡಿಯಲ್ಲಿ ಮುಕ್ತಿ ಕಂಠಾಭರಣದ ಒಂದು ವಚನವನ್ನು ಆಧಾರವಾಗಿ ಬಳಸುವ ಮೂಲಕ ಈ ಗ್ರಂಥಕ್ಕೆ ಅಧಿಕೃತತೆಯ ಅಂತಸ್ತು ಪ್ರಾಪ್ತವಾದಂತಾಯಿತು. ಹೀಗೆ ಹಳಕಟ್ಟಿ, ನರಸಿಂಹಾಚಾರ್, ಬಸವನಾಳರಂಥ ವಿದ್ವಾಂಸರ ಒಪ್ಪಿಗೆಯ ಮುದ್ರೆಪಡೆಯುತ್ತ ಬಂದುದನ್ನು ನಂಬಿ, ಕರ್ನಾಟಕ ವಿಶ್ವವಿದ್ಯಾಲಯ ಇದನ್ನು ಪ್ರಥಮಸಲ ಪ್ರಕಟಿಸಿದ್ದು, ಇಲ್ಲಿಯ ಕೆಲವು ವಚನಗಳೂ ಮೇಲೆ ಹೇಳಿದ ವಚನಕಾರರೂ ಪ್ರಕ್ಷಿಪ್ತವೆಂದು ಹೇಳಬಹುದಾಗಿದೆ.

೨. ಅಲ್ಲಮಪ್ರಭು ಸಿದ್ಧರಾಮನ ವಾದದ ವಚನಗಳು :

ಈ ಕೃತಿಯಲ್ಲಿ ಕಂಡುಬರುವ ಒಟ್ಟು ವಚನಕಾರರ ಸಂಖ್ಯೆ ೫೯. ಇವುಗಳಲ್ಲಿ ಇರಬಹುದಾದ ಪ್ರಕ್ಷಿಪ್ತವಚನಕಾರರ ಸಂಖ್ಯೆ ೩೭ :

೧. ಅನಂತದೇವ—ಅನಂತಗುರು ಅಲ್ಲಮಹಾಪ್ರಭು

೨. ಅಮರಚಂದ್ರ—ಅಮರಚಂದ್ರಲಿಂಗ

೩. ಅಹಂಕಾರ ಭೀಮಯ್ಯ—ನಿರಹಂಕಾರ ಭೀಮಯ್ಯ

೪. ಆಣತಿ ಚೆಂದಯ್ಯ—ಆಣತಿಲಿಂಗ

೫. ಕನಕದ ನಾಚಯ್ಯ—ಕನಕದ ನಾಚಿಲಿಂಗ

೬. ಕಾಳಿಂಗದೇವ—ಕಾಳಿಂಗದೇವ

೭. ಕಿರಾತ ಸಂಗಯ್ಯ—ಕಿರಾತೇಶ್ವರಲಿಂಗ

೮. ಕುಮಾರ ಸಂಗಯ್ಯ—ಕುಮಾರಸಂಗ

೯. ಕುಪ್ಪಸದ ಸಂಗಯ್ಯ—ಕುಪ್ಪಸದ ಚಂದೇಶ್ವರಲಿಂಗ

೧೦. ಕ್ಷೇತ್ರನಾಥ—ಕ್ಷೇತ್ರನಾಥಲಿಂಗ

೧೧. ನಿಜಗುಣಸ್ವಾಮಿ—ನಿಜಗುಣ

೧೨. ನಿರಂಜನದೇವ—ನಿರಂಜನಲಿಂಗ

೧೩. ನಿರಾಲಂಬದೇವ—ನಿರಾಲಂಬ ಶರಣ/ನಿರಾಲಂಬಲಿಂಗಮೂರ್ತಿ

೧೪. ನೇತ್ರದ ಸಂಗಯ್ಯ—ಕಟಾಕ್ಷ ಸಂಗಲಿಂಗ

೧೫. ಪಂಚಾಕ್ಷರದೇವ—ಪಂಚಾಕ್ಷರಲಿಂಗ
೧೬. ಪಡಿಹಾರಿ ಬಸವಯ್ಯ—ಪಡಿಹಾರಿಪ್ರಿಯಂ ಕೂಡಲಸಂಗ
೧೭. ಪರಾರಿ(=ಕಿ) ದೇವಯ್ಯ—ಮಹಾಲಿಂಗದೇವ
೧೮. ಪರ್ವತನಾಥ—ಪರ್ವತಲಿಂಗ
೧೯. ಪಾಕದ ಭೀಮಯ್ಯ—ಭೀಮೇಶ್ವರಲಿಂಗ
೨೦. ಪುಷ್ಪದ ಸೋಮಯ್ಯ—ಸೋಮೇಶ್ವರಲಿಂಗ
೨೧. ಬೆಡಗಿನ ಸುಂದರಯ್ಯ—ಸುಂದರ ಶಿವಲಿಂಗಯ್ಯ
೨೨. ಮಹಾದೇವಚಂದ್ರ—ಮಹಾದೇವಚಂದ್ರ ಲಿಂಗಮೂರ್ತಿ
೨೩. ಮಾರಯ್ಯ—ಮಾರಲಿಂಗ
೨೪. ಮಿಂಡ ಸಂಗಯ್ಯ—ತರುಣಸಂಗಮಲಿಂಗ
೨೫. ಮುಗ್ಧಸಂಗಯ್ಯ—ಮುಗ್ಧಸಂಗಪ್ರಾಣ ಸಿದ್ಧರಾಮಯ್ಯ
೨೬. ಮೂಲಪ್ರಣಮದೇವ—ಮೂಲಪ್ರಣವದೇವ
೨೭. ಮೌಕ್ತಿಕದ ಸಂಗಯ್ಯ—ಮುತ್ತಿನ ಸಂಗಲಿಂಗ
೨೮. ರತ್ನದ ರಾಚಯ್ಯ—ವೀರರಾಚೋಟಿಲಿಂಗ
೨೯. ಲಿಂಗಸತ್ಯಣ್ಣ—ಲಿಂಗದೇವ
೩೦. ವೀರಚಂಡ—ಚಂಡಲಿಂಗ
೩೧. ಶಂಖದ ಸೋಮಯ್ಯ—ಸಾಂಬ ಸೋಮೇಶ್ವರ
೩೨. ಶಾಂತರಾಮಯ್ಯ—ಶಾಂತರಾಮಲಿಂಗ
೩೩. ಶಾರ್ದೂಲ ಸಂಗಯ್ಯ—ಶಾರ್ದೂಲ ಸಂಗಲಿಂಗ
೩೪. ಶಿವಪೂಜೆಯ ಭೀಮ—ಶಿವಪೂಜೆಯ ಭೀಮಯ್ಯ
೩೫. ಶಿವಾನಂದದೇವ—ಶಿವಾನಂದಲಿಂಗ
೩೬. ಸುಂದರನಾಚಯ್ಯ—ನಿರಹಂಕಾರ ಭೀಮಲಿಂಗ
೩೭. ಸುವರ್ಣದೇವಿ—ಸುವರ್ಣಲಿಂಗ[೨]

ಈ ೩೭ ಜನರಲ್ಲಿ "ಪ್ರಕ್ಷಿಪ್ತವಚನಕಾರರು–೧" ಮತ್ತು "ಪ್ರಕ್ಷಿಪ್ತವಚನಕಾರರು–೨" ಈ ಎರಡೂ ವರ್ಗಗಳಿಗೆ ಸಂಬಂಧಿಸಿದವರಿದ್ದಾರೆ. ಇವರಲ್ಲಿ ಶಿವಪೂಜೆ ಭೀಮಯ್ಯ, ಕಿರಾತಸಂಗಯ್ಯ ಹೆಸರುಗಳು ಮುಕ್ತಿಕಂಠಾಭರಣದಲ್ಲಿಯೂ ಕಂಡುಬರುತ್ತವೆ. ಹೀಗಾಗಿ ಈ ಎರಡು ಕೃತಿಗಳನ್ನು ಒಬ್ಬನೇ

೨ ಈ ಯಾದಿಯಲ್ಲಿ ಗಂಗಾಂಬಿಕೆಯೂ ಸೇರಿಕೊಳ್ಳುವ ಸಾಧ್ಯತೆಯಿದೆ.

ಸಂಯೋಜಿಸಿರಬಹುದು. ಬಹುಶಃ ಎರಡೂ ಕೃತಿಗಳಲ್ಲಿ 'ತೋಂಟದ ಸಿದ್ಧಲಿಂಗ ದೇವ' ಮುದ್ರಿಕೆಯು ವಚನಗಳಿದ್ದು, ಇವುಗಳ ಕರ್ತೃ ಸಿದ್ದವೀರದೇವನೇ ಈ ಕೃತಿ ಗಳನ್ನು ಸಂಯೋಜಿಸಿದಂತಿದೆ. ಇಂದು ಪ್ರಚಾರದಲ್ಲಿರುವ ಬಹುಸಂಖ್ಯೆ ಪ್ರಕ್ಷಿಪ್ತವಚನ ಕಾರರೆಲ್ಲ ಈ ಗ್ರಂಥಕ್ಕೆ ಸಂಬಂಧಿಸಿದವರು. ಈ ಕೃತಿ ಎರಡುಸಲ ಪ್ರಕಟವಾದ ಕಾರಣ ಮೇಲಿನ ವಚನಕಾರರು ಸಹಜವಾಗಿಯೇ ಪ್ರಚಾರ ಪಡೆದರು. ಡಾ। ಹಳ ಕಟ್ಟಿಯವರ ವಚನಶಾಸ್ತ್ರಸಾರದ ಅನುಬಂಧದಲ್ಲಿ, ಆಮೇಲೆ ಕವಿಚರಿತೆಯಲ್ಲಿ ಮನ್ನಣೆ ಪಡೆದು ಅಧಿಕೃತರೆಂಬ ಮುದ್ರೆಹೊಂದಿದರೆಂದು ತೋರುತ್ತದೆ.

ಹೀಗೆ ವಿದ್ವಾಂಸರಿಂದ, ಸಾರ್ವಜನಿಕರಿಂದ ಮನ್ನಣೆಪಡೆಯುತ್ತಬಂದ ಕಾರಣ ಡಾ. ಆರ್. ಸಿ. ಹಿರೇಮಠ ಅವರು ತಮ್ಮ ಸಿದ್ಧರಾಮನ ವಚನಸಂಪುಟಕ್ಕೆ ಇಲ್ಲಿಯ ಸಿದ್ಧರಾಮನ ವಚನಗಳನ್ನು ಬಳಸಿಕೊಂಡರಾದರೂ ಪ್ರಭುದೇವರ ವಚನಸಂಪುಟ ವನ್ನು ಸಿದ್ಧಪಡಿಸುವಾಗ ಈ ಕೃತಿಯನ್ನು ದೂರವಿಟ್ಟರು. ಹೀಗಾಗಿ ಇದರ ಪ್ರಾಮಾಣಿಕತೆಯನ್ನು ಮೊದಲು ಸಂದೇಹಿಸಿದವರು ಡಾ. ಹಿರೇಮಠರೆನ್ನಬೇಕಾಗು ತ್ತದೆ.

೩. ಸಿದ್ಧರಾಮ ಶಾಂತಿಶೆಟ್ಟಿಯವರ ವಾದದ ವಚನಗಳು :

ಈ ಕೃತಿಯಲ್ಲಿ ಕಂಡುಬರುವ ವಚನಕಾರರ ಒಟ್ಟು ಸಂಖ್ಯೆ ೨೧. ಇದರಲ್ಲಿ ಸಿದ್ಧರಾಮನನ್ನುಳಿದು ೨೦ ಜನ ವಚನಕಾರರು ಪ್ರಕ್ಷಿಪ್ತರಿರಬಹುದು :

೧ ಕಲ್ಲವ್ವೆ – ಕಲ್ಲಿನಾಥ

೨ ಕೇದಾರಯ್ಯ – ಕೇದಾರಗುರು

೩ ಗಿರಿಜವ್ವೆ – ಗಿರಿಜೆಯ ಪ್ರಿಯ ಗಿರಿಜಾರಮಣ

೪ ಗುಂಡ್ಡಕುಮಾರ – ಗುಡ್ಡಕುಮಾರಲಿಂಗಪ್ರಿಯ

೫ ಚಿಕ್ಕಗೇರಾದೇವಿ – ಚಿಕ್ಕಗೇರಿ ಪ್ರಿಯಲಿಂಗ

೬ ದೇವಕಿ – ನಿರಾಜ ನಿರಂಜನಬ್ರಹ್ಮ

೭ ಬಿಬ್ಬವ್ವೆ – ರೆಮ್ಮವ್ವೆಪ್ರಿಯ ಮಲ್ಲಿಕಾರ್ಜುನಾ

೮ ಭೀಮವ್ವೆ – ಭೀಮಪ್ರಿಯ ಭೀಮಲಿಂಗ

೯ ರೆಬ್ಬವ್ವೆ – ರೆಬ್ಬವ್ವೆಪ್ರಿಯ ಮಲ್ಲಿಕಾರ್ಜುನಾ

೧೦ ರೆಮ್ಮವ್ವೆ – ಶ್ರೀಶೈಲ ಮಲ್ಲಿಕಾರ್ಜುನಾ

೧೧ ರೇಚವ್ವೆ – ಆದಿಲಿಂಗಪ್ರಿಯ

೧೨ ಶಾಂತಶೆಟ್ಟಿ – ಶಿವಶಾಂತಮಲ್ಲಿಕಾರ್ಜುನಾ

೧೩ ಶಾಂತನ ಪತ್ನಿ ಕಾಮಲೆ – ಕಾಮಲೆಕಾಮಹರಪ್ರಿಯ ಸೋಮಲಿಂಗ

೧೪ ಶಾಂತನ ಪತ್ನಿ ಗುಡ್ಡವೆ – ಗುಡ್ಡವೆಯ ಲಿಂಗ

೧೫ ಶಾಂತಶೆಟ್ಟಿಯ ಪತ್ನಿ ಆದವ್ವೆ – ಆದವ್ವೆಯ ಆದಿಲಿಂಗ

೧೬ ಶಾಂತಶೆಟ್ಟಿಯ ಪತ್ನಿ ಧರ್ಮವತಿ – ಅಮೃತಲಿಂಗ

೧೭ ಶಾಂತಶೆಟ್ಟಿಯ ಪತ್ನಿ ಸಣ್ಣಸುಗ್ಗಲೆ –ಸಣ್ಣಸುಗ್ಗಲೆಪ್ರಿಯ ಮಹಾದೇವ

೧೮ ಶಾಂತಶೆಟ್ಟಿಯ ಹಿರಿಯ ಹೆಂಡತಿ ಉಮ್ಮವ್ವೆ – ಶಾಂತಮಲ್ಲ

೧೯ ಸುಂದರಯ್ಯ – ಸುಂದರಪ್ರಿಯ ಕಪಿಲಸಿದ್ಧ ಮಲ್ಲಿಕಾರ್ಜುನ

೨೦ ಸೋಮವ್ವೆ – ಕಾಮಹರ ಸೋಮಲಿಂಗ/ಶಾಂತಮಲ್ಲಿಕಾರ್ಜುನ[೩]

ಈ ಪ್ರಕ್ಷಿಪ್ತ ವಚನಕಾರರು ಆಧುನಿಕ ಕೃತಿಗಳಲ್ಲಿ ಹೆಚ್ಚು ಸೇರಿಕೊಳ್ಳದಿದ್ದರೂ ಡಾ. ಹಳಕಟ್ಟಿ ಅವರ ವಚನಶಾಸ್ತ್ರಸಾರ, ಡಾ. ಆರ್. ನರಸಿಂಹಾಚಾರ್ ಅವರ ಕರ್ನಾಟಕ ಕವಿಚರಿತೆಗಳಲ್ಲಿ 'ಕೇದಾರಗುರು' ಮುದ್ರಿಕೆಯ ವಚನ ಕಂಡುಬರುವುದ ರಿಂದ ಇಲ್ಲಿಯ ವಚನಕಾರರನ್ನು ನಿಜವಚನಕಾರರೆಂದು ಇವರಿಬ್ಬರೂ ನಂಬಿದ್ದರೆಂದು ತೋರುತ್ತದೆ. ಹೀಗಾಗಿ ತಮ್ಮ ಸಿದ್ಧರಾಮನ ವಚನಸಂಪುಟಕ್ಕೆ ಈ ಕೃತಿಯನ್ನು ಡಾ. ಆರ್. ಸಿ. ಹಿರೇಮಠರು ಬಳಸಿಕೊಂಡಿದ್ದರು. ಆದರೆ ಮುಂದೆ ಎಲ್ಲಿಯೂ ಈ ಪ್ರತಿಯನ್ನು ಬಳಸಿಕೊಂಡಿಲ್ಲವಾಗಿ ಇದರ ಪ್ರಾಮಾಣಿಕತೆಯನ್ನೂ ಮೊದಲು ಸಂದೇಹಿಸಿದವರು ಡಾ. ಆರ್. ಸಿ. ಹಿರೇಮಠರೆಂದೇ ಹೇಳಬೇಕಾಗುತ್ತದೆ.

೪. ಶ್ರೀ ಪ್ರಭುಕೃತ ಮಡಿವಾಳಸ್ತೋತ್ರ ಇತ್ಯಾದಿ :

ಶ್ರೀ ಪ್ರಭುಕೃತ ಮಡಿವಾಳಸ್ತೋತ್ರ, ಶ್ರೀ ಚೆನ್ನಬಸವಕೃತ ಮಡಿವಾಳ ಮಾಹೇಶ್ವರ ಪೂಜಾಪ್ರಕರಣಂ, ಶ್ರೀ ಸಕಲಗಣ ಸಿದ್ಧಾಂತ ಭಕ್ತಿಜ್ಞಾನ ಪ್ರಕರಣಂ, ಶ್ರೀ ಮಹಾಜ್ಞಾನ ಪ್ರಕರಣಂ, ಶ್ರೀ ಶಿವಕಾರುಣ್ಯದೈವಜ್ಞಾನ ಪ್ರಕರಣಂ, ವೈರಾಗ್ಯ ವೈಭವ ಪ್ರಕರಣಂ, ಸಕಲವ್ರತ ಶಿವಪೂಜಾ ಪ್ರಕರಣಂ, ಶ್ರೀ ಜಂಗಮಾರಾಧನ ಮೋಕ್ಷ ಕೈವಲ್ಯಕಾರಣಚಿಂತಿ ಪ್ರಕರಣಂ—ಶೀರ್ಷಿಕೆಯ ಕೃತಿಗುಚ್ಛವೊಂದು ಸಿಗು ತ್ತಿದ್ದು, ಇದರಲ್ಲಿ ಕಂಡುಬರುವ ಒಟ್ಟು ವಚನಕಾರರಲ್ಲಿ ೪೫ ಜನ ಪ್ರಕ್ಷಿಪ್ತರೆಂದು ಕಾಣುತ್ತದೆ :

---

೩ ಅಂಗನೆಯರು—ಆದಿಲಿಂಗಪ್ರಿಯ ಸರ್ವ ಅಂಗನೆಯರಿಗೆ
ಗುಡ್ಡರ ಅಂಗನೆಯರು—ರೆಬ್ಬವ್ವೆಪ್ರಿಯ ಆದಿಲಿಂಗ
— ಹೀಗೆ ಇನ್ನೆರಡು ಮುದ್ರಿಕೆಗಳಲ್ಲಿ ವಚನಗಳಿವೆ.

೧ ಅಮರೇಶ್ವರದೇವ – ಅಮರೇಶ್ವರಲಿಂಗ

೨ ಆಚಾರದ ಭೀಮಯ್ಯ – ಆಚಾರವೇ ಪ್ರಾಣ ರಾಮೇಶ್ವರಲಿಂಗ

೩ ಕಾಶಿಮಠದ ಮಹಾಂತದೇವ – ವಿಶ್ವನಾಥಲಿಂಗ

೪ ಕೈಲಾಸಮಠದ ಶಿವಲಿಂಗದೇವ – ಪರಿಪೂರ್ಣಲಿಂಗ

೫ ಕೆಂಗಣ್ಣ ನೀಲಕಂಠದೇವ – ಶ್ರೀಗುರು ನೀಲಕಂಠೇಶ್ವರ

೬ ಕೆಂಜೆಡೆಯ ಬಸವದೇವ – ಶ್ರೀಗುರು ಬಸವಲಿಂಗ

೭ ಗರುಡಿ ಸಂಗಯ್ಯ – ಗರುಡಿ ಶಿವಲಿಂಗ ಸಂಗಮೇಶ್ವರ

೮ ಗುಂಡಬ್ರಹ್ಮಯ್ಯ – ಶಿವಮಠದಂಡ ಸೋಮಲಿಂಗ/ಗುಂಡಬ್ರಹ್ಮೇಶ್ವರ

೯ ಗುರುಪಾದದೇವ – ಪ್ರಾಣಲಿಂಗೇಶ್ವರ

೧೦ ಗೌರಮ್ಮ – ಚೆನ್ನಬಸವಲಿಂಗ

೧೧ ತೆಲುಗು ಬ್ರಹ್ಮಯ್ಯ – ತೆಲುಗೇಶ್ವರಾ[೪]

೧೨ ದಾಸೋಹಮಠದ ಅನ್ನಪೂರ್ಣದೇವ – ಅನ್ನಪೂರ್ಣೇಶ್ವರ

೧೩ ನಿಜಲಿಂಗದೇವ – ನಿಜಲಿಂಗ ಚಿಕ್ಕೇಶ್ವರ

೧೪ ನಿರಂಜನದೇವ – ನಿರಂಜನ ಸೋಮಗುರುಲಿಂಗದೇವ

೧೫ ನಿರ್ಗುಣದೇವ – ಸಂಗಮೇಶ್ವರ ಸಾಕ್ಷಿಯಾಗಿ ಸಂಗನಬಸವ

೧೬ ನಿರ್ಮಲದೇವ – ನಿರ್ಮಲ ಪರಬ್ರಹ್ಮಲಿಂಗ

೧೭ ನಿರ್ವಾಣದೇವ – ನಿರ್ವಾಣ ಗುರುಶಾಂತಲಿಂಗ

೧೮ ನಿರಾಮಯದೇವ – ನಿರಾಮಯಲಿಂಗ

೧೯ ನಿಶ್ಚಿಂತದೇವ – ನಿಶ್ಚಿಂತಲಿಂಗ

೨೦ ನೀರುಮಠದ ನಾಗಲಿಂಗದೇವ – ಗಂಗಾಜಲ ಸೋಮೇಶ್ವರ

೨೧ ನೀಲಮ್ಮ – ಭಾವಶೂನ್ಯ ಸಂಗಮೇಶ್ವರ[೫]

---

೪ ತೆಲುಗೇಶ್ವರಾ, ಶಂಭುತೆಲುಗೇಶ್ವರಾ ಮುದ್ರಿಕೆ ಮೂಲತಃ ತೆಲುಗೇಶ ಮಸಣಯ್ಯನದು. ತೆಲುಗು ಜೊಮ್ಮಯ್ಯನು ಬಹುಶಃ ವಚನ ಬರೆದಂತಿಲ್ಲ. ಇಲ್ಲಿ ಹೇಳಿದ ತೆಲುಗು ಬ್ರಹ್ಮಯ್ಯ ಹೆಸರಿನ ಶರಣ ಎಲ್ಲಿಯೂ ಕಂಡುಬರುವುದಿಲ್ಲ.

೫ ಬಸವಣ್ಣನವರ ಪತ್ನಿ 'ನೀಲಮ್ಮನ ಮುದ್ರಿಕೆ 'ಸಂಗಯ್ಯ'. ಹೀಗಾಗಿ ಇವಳು ಬೇರೊಬ್ಬ ವಚನಕಾರ್ತಿ ಇರಬಹುದು. ಕೆಲವೊಮ್ಮೆ ಈ ಕೃತಿಗಳು ನಿಜವಚನಕಾರರನ್ನು ಬೇರೊಂದು ಮುದ್ರಿಕೆಯಿಂದ ಉಲ್ಲೇಖಿಸುವವೆಂಬುದನ್ನು ಇಲ್ಲಿ ಗಮನಿಸಬಹುದಾಗಿದೆ. ಉದಾ: ಉಡುತಡಿಯ ಮಹಾದೇವಿ – ಮಹಾದೇವ ಜ್ಯೋತಿರ್ಲಿಂಗ

೨೨ ನೀಲಕಂಠದೇವ—ನೀಲಕಂಠೇಶ್ವರ
೨೩ ಪಂಚವಟಿ ರಾಮಲಿಂಗದೇವ—ಶ್ರೀ ರಾಮಲಿಂಗ
೨೪ ಪುಸ್ತಕವಂಠದ ಪಂಚಾಕ್ಷರದೇವ—ಆಗಮೇಶ್ವರ
೨೫ ಬಡಿಹೋರಿ ಬ್ರಹ್ಮಯ್ಯ—ಬಡಿಹೋರಿ ನಂದೀಶ್ವರ
೨೬ ಬೊಕ್ಕಸದ ಬ್ರಹ್ಮಯ್ಯ—ಭಂಡಾರಿ ಬ್ರಹ್ಮೇಶ್ವರಲಿಂಗ
೨೭ ಮಿಂಡಬ್ರಹ್ಮಯ್ಯ—ಪುಂಡ ಪರಶಿವಲಿಂಗ
೨೮ ಮಂಗಳವಾಡವ ಕಂಬಳಸ್ವಾಮಿ—ಚಂದ್ರಶೇಖರಲಿಂಗ
೨೯ ರುದ್ರಾಕ್ಷಿವಂಠದ ಸಿದ್ಧದೇವ—ತ್ರ್ಯಯಂಬಕೇಶ್ವರ
೩೦ ಲಿಂಗಶಾಂತಯ್ಯ—ಶ್ರೀ ಗುರುಲಿಂಗ ಶಾಂತಪ್ರಭು
೩೧ ವಿಭೂತಿವಂಠದ ಗುರುಲಿಂಗದೇವ—ಗುರುಲಿಂಗೇಶ್ವರ
೩೨ ಶಿಖರೇಶ್ವರಗಂಡಿಯ ಶಾಂತಲಿಂಗದೇವ—ಶಿಖರೇಶ್ವರ
೩೩ ಶಿವಪುರದ ಶಿವದೇವ—ಶಂಭುಲಿಂಗೇಶ್ವರ
೩೪ ಶಿವರಾತ್ರಿ ಸಂಗಣ್ಣ—ಶಿವರಾತ್ರಿ ಸದಾಶಿವ ಸಂಗಮಲಿಂಗ
೩೫ ಶಿವಾಚಾರದ ಸಂಗಯ್ಯ—ಸದಾಶಿವಲಿಂಗೇಶ್ವರ
೩೬ ಶ್ರೀಗಿರಿ ಸಿದ್ಧರಾಮದೇವ—ಶ್ರೀಗಿರಿ ಮಲ್ಲಿಕಾರ್ಜುನ
೩೭ ಸೊನ್ನಲಾಪುರದ ಮಲ್ಲಿಕಾರ್ಜುನ—ಶ್ರೀ ಸಿದ್ಧರಾಮಲಿಂಗ
೩೮ ಸೊಪ್ಪಿಮಠದ ಶಾಂತದೇವ—ಸೋಮೇಶ್ವರ
೩೯ ಸ್ವಪ್ಪಯ್ಯ—ಸ್ವಪ್ಪಯ್ಯಲಿಂಗ
೪೦ ಹಂಪಿಮಠದ ವಿರೂಪಾಕ್ಷದೇವ—ಪಂಪಾ ಪ್ರಾಣೇಶ್ವರ
೪೧ ಹಿಮಾಲಯಂದ ಹಿರಣ್ಯಲಿಂಗದೇವ—ಹಿಮಾಲಯದ ಹಿರಣ್ಯಲಿಂಗ
೪೨ ಹಿಮಾಚಲದ ಕುಮಾರಸ್ವಾಮಿ—ಶ್ರೀಗುರು ಷಣ್ಮುಖೇಶ್ವರ
೪೩ ಹೂವಿನಮಠದ ಶಂಕರದೇವ—ಕಮಲೇಶ್ವರ
೪೪ ಸುಂದರ ಸಖೀಶ್ವರ— ?
೪೫ ಹಾದರದ ಬ್ರಹ್ಮಯ್ಯ—ಹಾದರದ ಬ್ರಹ್ಮ

ಇದು ಗುಳೇದಗುಡ್ಡದಲ್ಲಿ ಲಭಿಸಿದ ಪ್ರತಿ. ಆಧುನಿಕ ನೋಟಬುಕ್ಕಿನಲ್ಲಿ ಬರೆಯಲಾಗಿದೆ. 'ವಚನಸಾಹಿತ್ಯ ಪ್ರಕಟನ ಯೋಜನೆ'ಯಲ್ಲಿ ಸಹಾಯಕ ಸಂಪಾದಕನಾಗಿದ್ದ ನಾನು ಇದನ್ನು ೨೫ ವರ್ಷಗಳ ಹಿಂದೆ ಸಂಗ್ರಹಿಸಿದ್ದೆನು. ಆಗಲೇ ಓದಿ

ಪ್ರಕ್ಷಿಪ್ತವೆಂದು ಅನುಮಾನಿಸಿದ್ದೆನು. ಇದರ ಸ್ವರೂಪ ಜನತೆಯು ಗಮನಕ್ಕೆ ಬರಲೆಂಬ ಉದ್ದೇಶದಿಂದ ಡಾ. ಬಿ. ಆರ್. ಹಿರೇಮಠ ಅವರು ಈ ಬಗ್ಗೆ ಒಂದು ಲೇಖನ ಬರೆದು ಬಸವಪಥದಲ್ಲಿ (೬-೩) ಪ್ರಕಟಿಸಿದ್ದಾರೆ. ಈ ಕೃತಿ ಇನ್ನೂ ಅಪ್ರಕಟಿತ ಸ್ಥಿತಿಯಲ್ಲಿರುವುದರಿಂದ ಮೇಲಿನ ಪ್ರಕ್ಷಿಪ್ತವಚನಕಾರರು ಆಧುನಿಕ ವಚನಸಂಕಲನಗಳಲ್ಲಿ ಸೇರಿಸಿಕೊಂಡಿಲ್ಲವೆಂದು ತೋರುತ್ತದೆ.

ಮೇಲಿನ ವಿವರಣೆಯಿಂದ ೧೨ನೆಯ ಶತಮಾನದವರೆಂಬಂತೆ ಚಿತ್ರಿತರಾದ ಈ ೧೧೨ ಜನರನ್ನು (೧೦+೩೭+೨೦+೪೫) ಪ್ರಕ್ಷಿಪ್ತವಚನಕಾರರೆಂದು ಭಾವಿಸಬಹುದಾಗಿದೆ. ಈ ವರೆಗೆ ಲಭ್ಯವಾದ ನಿಜವಚನಕಾರರ ಸಂಖ್ಯೆಯೊಂದಿಗೆ ಹೋಲಿಸಿದರೆ ಈ ಪ್ರಕ್ಷಿಪ್ತವಚನಕಾರರ ಸಂಖ್ಯೆ ದೊಡ್ಡದೆಂದೇ ಹೇಳಬೇಕು. ಇವುಗಳಲ್ಲಿ ಸಿದ್ಧರಾಮನ ಸುತ್ತ ಹೆಣೆದುಕೊಂಡುವು 'ಅಲ್ಲಮಪ್ರಭು ಸಿದ್ಧರಾಮನ ವಾದದ ವಚನಗಳು' ಮತ್ತು 'ಸಿದ್ಧರಾಮ ಶಾಂತಶೆಟ್ಟಿಯರ ವಾದದ ವಚನಗಳು'. ಮೊದಲಿನಿಂದಲೂ ಸಿದ್ಧರಾಮ ವಾದಗ್ರಸ್ತ ವ್ಯಕ್ತಿಯಾಗಿಯೇ ವೀರಶೈವಸಾಹಿತ್ಯದಲ್ಲಿ ಕಾಣಿಸಿಕೊಂಡಿದ್ದಾನೆ. ಹೀಗಾಗಿ ಇಲ್ಲಿ 'ಸಂವಾದ'ಕ್ಕೆ ಅವಕಾಶವಿದೆಯೆಂಬುದನ್ನು ಗ್ರಹಿಸಿದ ಪ್ರಾಚೀನ ಸಂಯೋಜಕರು ವಿಷಯದ ಕೊರತೆಯನ್ನು ತುಂಬಿಕೊಳ್ಳಲು ಅನೇಕ ಜನ ಪ್ರಕ್ಷಿಪ್ತವಚನಕಾರರನ್ನು ಸೃಷ್ಟಿಸಿಕೊಂಡರೆಂದು ತೋರುತ್ತದೆ.

ಶೂನ್ಯಸಂಪಾದನೆಯಂತೆ ಪ್ರಭುದೇವನನ್ನೇ ಕೇಂದ್ರವಾಗಿಟ್ಟುಕೊಂಡುದು ಮತ್ತು ಸಂವಾದಶೈಲಿಯನ್ನು ಬಳಸಿಕೊಂಡುದು ಈ ಎಲ್ಲ ಕೃತಿಗಳ ಸಾಮಾನ್ಯ ಲಕ್ಷಣವಾಗಿದ್ದು, ಪ್ರಕ್ಷಿಪ್ತವಚನಕಾರರ ದಾಳಿ ಸಾಮಾನ್ಯವಾಗಿ ಇಂಥ ಕೃತಿಗಳಲ್ಲಿ ಜರುಗಿದೆಯೆಂದು ಹೇಳಬಹುದು. ಆದುದರಿಂದ ಪರಿಷ್ಕರಣ ಪ್ರಸಂಗದಲ್ಲಿ ಈ ವರ್ಗದ ಕೃತಿಗಳ ಬಗ್ಗೆ ತುಂಬ ಎಚ್ಚರವಹಿಸಬೇಕಾಗುತ್ತದೆ. ಇವಲ್ಲದೆ ಇನ್ನೂ ಒಂದೆರಡು ಗ್ರಂಥಗಳ ವಿಷಯವಾಗಿ ನನಗೆ ಅನುಮಾನವಿದ್ದು, ಈ ಬಗ್ಗೆ ಅಧ್ಯಯನ ಪೂರ್ಣವಾದ ಬಳಿಕ ಇನ್ನೊಂದು ಲೇಖನ ಬರೆಯಬಹುದಾಗಿದೆ.

"ಪ್ರಕ್ಷಿಪ್ತವಚನಕಾರರ" ವಿವೇಚನೆಯಿದು. "ನಿಜವಚನಕಾರರ ಪ್ರಕ್ಷಿಪ್ತ ವಚನ"ಗಳ ವಿವೇಚನೆ ಬೇರೊಂದು ಲೇಖನದ ವಿಷಯವಾಗಿದೆ.

● ● ●

ಪುರಾಣ ಮತ್ತು ಕ್ರೈಸ್ತಧರ್ಮ
(ಜಾನಪದ ವೈಜ್ಞಾನಿಕ ಅಧ್ಯಯನ)

● ಡಾ. ವಿಲ್ಯಂ ಮಾಡ್ತ

ಪ್ರಸ್ತಾವನೆ :

ಕ್ರೈಸ್ತಧರ್ಮ ಮೂಲಭೂತವಾಗಿ ಐತಿಹಾಸಿಕ ಯೇಸು ಕ್ರಿಸ್ತನ ಬೋಧನೆ ಹಾಗೂ ಜೀವನಶೈಲಿಯು ತಳಹದಿಯ ಮೇಲೆ ಬೇರೂರಿ ನಿಂತರೂ ಅದು ಇಂದು ಹಲವಾರು ಐತಿಹ್ಯ, ಪವಾಡ ಹಾಗೂ ಪೌರಾಣಿಕ ಕಥೆಗಳನ್ನು ಅಳವಡಿಸಿಕೊಂಡು ಸಾವಿರಾರು ಜನಾಂಗಗಳಲ್ಲಿ ಅಭಿವ್ಯಕ್ತಗೊಂಡಿದೆ. ಅದು ತನ್ನ ಬೆಳವಣಿಗೆಯ ಸುಮಾರು ಇಪ್ಪತ್ತು ಶತಮಾನಗಳ ಅವಧಿಯಲ್ಲಿ ಹೊಸ ಪುರಾಣಗಳನ್ನು ಸೃಷ್ಟಿಸಿ ಕೊಂಡಿದೆ. ತನಗೆ ಮಾತೃಕೆ ಸ್ವರೂಪಿಯಾಗಿದ್ದ ಯೆಹೂದಿ ಧರ್ಮದಿಂದ ಹಲವಾರು ಸೃಷ್ಟಿ ಲಯ ಪುರಾಣಗಳು ಕ್ರೈಸ್ತಧರ್ಮಕ್ಕೆ ಬಳುವಳಿಯಾಗಿ ಬಂದಿವೆ.

ಪುರಾಣವೆಂದರೆ ಒಂದು ಕಟ್ಟುಕಥೆ ಎಂಬ ಅಭಿಪ್ರಾಯ ಇನ್ನೂ ಕೆಲವರಲ್ಲಿ ಇದೆ. ಅದು ವಿಜ್ಞಾನಪೂರ್ವಯುಗದ, ಪ್ರಾಗೈತಿಹಾಸಿಕ ಕಾಲದ, ಅವಿದ್ಯಾವಂತ, ಅನಾಗರಿಕ, ಜನಸಮುದಾಯಗಳ ಕಾಲ್ಪನಿಕ ಸೃಷ್ಟಿ ಎಂಬ ಅಭಿಪ್ರಾಯವೂ ಚಾಲ್ತಿ ಯಲ್ಲಿತ್ತು. ಈ ಅಭಿಪ್ರಾಯದ ಪ್ರಕಾರ ಇಂದಿನ ವೈಜ್ಞಾನಿಕ ಹಾಗೂ ತಾಂತ್ರಿಕ ಯುಗದಲ್ಲಿ ಪುರಾಣಕ್ಕೆ ಯಾವ ಸ್ಥಾನಮಾನವೂ ಇಲ್ಲ/ಇರಬಾರದು. ಆದರೆ, ಇತ್ತೀಚೆಗೆ, ಯಾವುದೇ ಧರ್ಮದ ಜಾನಪದೀಯ (Folkloristic) ಅಥವಾ/ಮತ್ತು ದೇವಶಾಸ್ತ್ರೀಯ (Theological) ಅಧ್ಯಯನ ವೈಜ್ಞಾನಿಕ ರೀತಿಯಲ್ಲಿ ನಡೆಯ ಬೇಕಾದರೆ ಪುರಾಣಗಳ ಅಧ್ಯಯನ ಅತ್ಯಂತ ಅಗತ್ಯ ಮತ್ತು ಮಹತ್ವಪೂರ್ಣವೆಂಬ ವಿಚಾರಕ್ಕೆ ಪ್ರಾಮುಖ್ಯತೆ ಸಿಕ್ಕಿದೆ. ಮಾನವನ ಬಹಿಃಸ್ತರ ಜೀವನಕ್ಕೆ ತಳಹದಿ ಪ್ರಾಯವಾಗಿರುವ ಇಂದ್ರಿಯಾನುಭವತೀತ ಮಹಾಶಕ್ತಿ(Spirit/Energy) ಯೊಂದಿದೆ. ಈ ಅವ್ಯಕ್ತ ಶಕ್ತಿಯನ್ನು ಕುರಿತ ವಿಚಾರ ಹಾಗೂ ಅನುಭಾವಗಳನ್ನು ಅಭಿವ್ಯಕ್ತಪಡಿಸಲು ಪುರಾಣ ಒಂದು ಅತ್ಯುತ್ತಮ ಸಾಧನವೆಂದು ತಜ್ಞರು ಅಭಿ ಪ್ರಾಯಪಡುತ್ತಾರೆ (Newman, 515).

ಪುರಾಣದ ವ್ಯಾಖ್ಯೆ :

ಪ್ರಸ್ತುತದಲ್ಲಿ ಪುರಾಣವೆಂಬುದು ಇಂಗ್ಲೀಷಿನ Myth (Muthos<Gk.) ಎಂಬ ಪದಕ್ಕೆ ಸಂವಾದಿ (Equivalent)ಯಾಗಿದೆ. ಮೂಲಭಾಷೆಯಲ್ಲಿ ಈ ಪದಕ್ಕೆ 'ಸುದ್ದಿ, ಭಾಷೆ, ಸಂದೇಶ, ಘಟನೆ, ಇತಿಹಾಸ' ಎಂಬ ಅರ್ಥಗಳೂ ಇದ್ದುವು (Liddel et al). ಪುರಾಣದ ಬಗೆಗಿನ ಸಾಹಿತ್ಯವನ್ನು ಗಮನಿಸಿದಾಗ ಪುರಾಣದ ವ್ಯಾಖ್ಯೆಯನ್ನು ಕುರಿತು ಭಿನ್ನಾಭಿಪ್ರಾಯಗಳು ಕಂಡುಬರುತ್ತವೆ (ನೋಡಿ: ಪೈ: MeKanzie 1963 : 186 ff.).

ಈಗಾಗಲೇ ಪ್ರಚಲಿತವಾಗಿರುವ, ಮೇಲೆ ಉಲ್ಲೇಖಿಸಿದ ವ್ಯಾಖ್ಯೆಗಳನ್ನು ಗಮನಿಸಿ 'ಪುರಾಣ'ವನ್ನು ದೇವರ/ದೇವತೆಗಳ ಕಥೆಗಳು ಅಥವಾ ವೃತ್ತಾಂತಗಳು (Theogonic tales) ಎಂದು ಕ್ವಚಿತ್ತಾಗಿ ಹೇಳಬಹುದು. (Sebeok, 7; Tillich 342). ಈ ಕಥೆಗಳನ್ನು ಹಬ್ಬಹರಿದಿನಗಳಲ್ಲಿ ಹಾಗೂ ಆಚರಣೆ (Rituals)ಗಳ ಸಂಬಂಧದಲ್ಲಿಯು ಪಠನಕ್ಕೆ ಬಳಸುತ್ತಿದ್ದರು. ಈ ಮೂಲಭೂತ ಅರ್ಥವನ್ನು ವಿಸ್ತರಿಸಿಕೊಂಡು 'ಪುರಾಣ'ಕ್ಕೆ ಒಂದು ವಿಸ್ತೃತ ವ್ಯಾಖ್ಯೆಯೂ ಪ್ರಾಪ್ತವಾಗಿದೆ.

ಪುರಾಣದ ವಿಸ್ತೃತ ವ್ಯಾಖ್ಯೆ : ಅನಿರ್ವಚನೀಯವಾದ ಅದ್ಭುತ (Mystery) ವನ್ನು ಎಲ್ಲರೂ ಒಪ್ಪಬಹುದಾದ ರೀತಿಯಲ್ಲಿ ಕಾಲ-ದೇಶಕ್ಕನುಗುಣವಾಗಿ ಅರ್ಥವತ್ತಾಗಿ ಹೇಳುವ ಕಥೆಯೇ ಪುರಾಣ (ನೋಡಿ: Every 7). ಪ್ರಸ್ತುತ ವಿಸ್ತೃತ ವ್ಯಾಖ್ಯೆ ಯಾವುದೇ ವೈಜ್ಞಾನಿಕ ಅಧ್ಯಯನದಲ್ಲಿ, ಅದರಲ್ಲಿಯೂ ಜಾನಪದ ವೈಜ್ಞಾನಿಕ ಅಧ್ಯಯನದಲ್ಲಿ ಬಹಳ ಉಪಯುಕ್ತ. ಆದ್ದರಿಂದ ಕ್ರೈಸ್ತ ಧರ್ಮದ ಪುರಾಣಗಳ ಈ ಅಧ್ಯಯನದಲ್ಲಿ ಪುರಾಣದ ಬಗೆಗಿನ ಈ ವಿಸ್ತೃತ ವ್ಯಾಖ್ಯೆಯನ್ನು ಬಳಸಿಕೊಂಡಿದ್ದೇವೆ.

ಪುರಾಣ ಮತ್ತು ಧರ್ಮ :

ಪುರಾಣ ಮತ್ತು ಧರ್ಮಗಳ ಸಂಬಂಧ ಅನ್ಯೋನ್ಯವಾಗಿದೆ. ಸ್ಮಾರ್ಟ್ (Smart, 1968:52) ಎಂಬ ಅಂತರ್ಧರ್ಮೀಯ ಶಾಸ್ತ್ರಜ್ಞನ ಪ್ರಕಾರ ಪುರಾಣವೆಂಬುದು ಧರ್ಮದ ಒಂದು ಮುಖ. ಧಾರ್ಮಿಕ ಸಂದೇಶಗಳನ್ನು ಪ್ರಕಟಿಸುವುದೇ ಪುರಾಣಗಳ ಕಾರ್ಯ. ಪುರಾಣ ಮತ್ತು ಧರ್ಮಗಳ ನಡುವಿನ ಸಂಬಂಧದ ಬಗೆಗೆ ತಜ್ಞರು ಅನೇಕ ಪ್ರಮೇಯಗಳನ್ನು ಮಂಡಿಸಿದ್ದಾರೆ. ಪುರಾಣಗಳು ಧರ್ಮದ ಅವಿಭಾಜ್ಯಾಂಗ ಹಾಗೂ ಅದಕ್ಕೆ ಅನಿವಾರ್ಯವೆಂದು ಬೌದ್ಧಿಕಪಂಥ (Intellectual school) ಅಭಿಪ್ರಾಯಪಟ್ಟರೆ, ಭಾವಪಂಥ (Emotional school) ದವರು ಈ ಅಭಿಪ್ರಾಯವನ್ನು ಅಲ್ಲಗಳೆಯುತ್ತಾರೆ. ಈ ಎರಡೂ ಅಭಿಪ್ರಾಯಗಳು ದೋಷಯುಕ್ತವಾಗಿವೆ (Tillich, 345).

ಪುರಾಣವೆಂದರೆ ಧರ್ಮವಲ್ಲ; ಧರ್ಮವೆಂದರೆ ಪುರಾಣವಲ್ಲವೆಂಬುದು ನಿಜ. ಧರ್ಮದ ಸ್ಥಲ ಸದಾ ಇಂದ್ರಿಯಾತೀತ 'ಪರವಸ್ತು' (The Beyond). ಇದನ್ನು ಭಾರತೀಯ ಅವಲೋಕನದಲ್ಲಿ ಪರಬ್ರಹ್ಮ/ಪರಶಿವ ಎಂದು ಕರೆದರೆ ಪಾಶ್ಚಾತ್ಯರು ಅದನ್ನು **Mysterium Tremendum** (ಮಹಾದ್ಭುತ) ಎಂದು ಕರೆದಿದ್ದಾರೆ. ಶ್ರೀ ಯೇಸು ಈ ಪರವಸ್ತುವನ್ನು 'ಅಪ್ಪಾಜೀ' (**Abba** < Hb) ಎಂದು ಸಂಬೋಧಿಸಲು ಕರೆನೀಡಿದ್ದಾರೆ. ಈ ಪರತತ್ವವನ್ನು ಸುಲಭವಾಗಿ ಅರ್ಥೈಸಿ ಕೊಳ್ಳಲು ಸಾಧ್ಯವಾಗುವಂತೆ ಅದಕ್ಕೆ ದೇಶಕಾಲಾನ್ವಯವಾದ (Spatio-temporal) ಪ್ರತೀಕಗಳನ್ನು ನೀಡಿ ಸಾಮುದಾಯಿಕವಾಗಿ ಅವುಗಳನ್ನು ಒಪ್ಪಿಕೊಂಡಿದ್ದಾರೆ. ಈ ಪ್ರತೀಕಗಳ ಮೂಲಕ ಪರವಸ್ತು, ಸೃಷ್ಟಿ ಮತ್ತು ವ್ಯಕ್ತಿ ಹೀಗೆ ಮೂವರ ನಡುವಿನ ಸಂಬಂಧಗಳನ್ನು ವಿಭಿನ್ನ ಜನಾಂಗಗಳು ಕಲ್ಪಿಸಿಕೊಂಡಿದ್ದಾರೆ.

ಕಾಲಾನುಗತಿಯಲ್ಲಿ ಜನಾಂಗ ಜನಾಂಗಗಳೊಡನೆ ಸಂಘರ್ಷಣೆ, ಆ ಬಳಿಕ ಸಂಬಂಧಗಳು ಬೆಳೆದುಬಂದಾಗ ಅವರ ಪುರಾಣಗಳಲ್ಲಿ ಕೊಡುಕೊಳ್ಳುವಿಕೆಗಳೂ ಉಂಟಾಗಿವೆ. ಪರಾಭವಗೊಂಡ ಜನಾಂಗಗಳ ದೇವತೆಗಳು ವಿಜಯೀ ಜನಾಂಗಗಳ ದೇವತೆಗಳಿಗೆ ಅಧೀನವಾಗಿ ಸ್ವೀಕೃತಗೊಂಡವು. (ಉದಾ: ಆದಿಶೇಷ, ಗರುಡ, ನಂದಿ...) ಇಲ್ಲವೆ ಅಳಿದುಹೋದುವು. ಅನ್ಯೋನ್ಯ ಸಂಬಂಧ ಕಲ್ಪಿಸಿಕೊಂಡ ಜನಾಂಗಗಳ ಪುರಾಣಗಳಲ್ಲಿ ಪರಸ್ಪರ ಸಂಬಂಧಗಳು ಕಾಣಿಸಿಕೊಂಡವು (ವಿಷ್ಣು-ಲಕ್ಷ್ಮಿ, ಶಿವ-ಪಾರ್ವತಿ...). ಈ ಪ್ರಕ್ರಿಯೆಗೆ ಕ್ರೈಸ್ತ ಸಮುದಾಯ ನಂಬಿಕೊಂಡು ಬಂದಿರುವ ಬೈಬಲ್ ಹೊರತಾಗಿಲ್ಲ (Duncker, 159, Sec. 133 f). ಈ ಪೌರಾಣಿಕ ಪ್ರಕ್ರಿಯೆಯಿಂದಾಗಿ ಬೈಬಲನ್ನು ಒಂದು 'ಕಾವ್ಯಕೃತಿ' (A piece of poetry) ಎಂದು ಕರೆಯುವುದು ಹೆಚ್ಚು ಸೂಕ್ತ (O'Grady, 148). ಬೈಬಲಿನ ಪೌರಾಣಿಕ ಸ್ವರೂಪದ ಅಪೌರುಷೇಯ ಸಂಗತಿಗಳೆಲ್ಲವನ್ನೂ ಐತಿಹಾಸಿಕ ಸತ್ಯವೆಂದು ಭಾವಿಸ ಬೇಕೆಂದು ದ್ವಿತೀಯ ಕ್ರೈಸ್ತ-ವಿಶ್ವಸಭೆ(Vat. II Council)ಯಾದರೂ ಅಪೇಕ್ಷಿಸುವುದಿಲ್ಲ.೧

ಪುರಾಣ ಮತ್ತು ಕ್ರೈಸ್ತಧರ್ಮ :

ತಿಬೇರಿಯುಸ್ ಚೆಸಾರ್ (Tiberius Caesar) ಎಂಬ ರೋಮನ್ ಚಕ್ರಾಧಿಪತಿಯ ಆಳ್ವಿಕೆಯ ಕಾಲದಲ್ಲಿ ಇಸ್ರೇಲ್ ದೇಶದ ಯೂದ (Judea) ಎಂಬ ಪ್ರಾಂತದಲ್ಲಿ ಪಿಲಾತನೆಂಬ ರೋಮನ್ ರಾಜ್ಯಪಾಲನು ಅಧಿಕಾರದಲ್ಲಿದ್ದಾಗ ನಸರೇತ್ ಎಂಬ ಊರಿನ ಯೇಸು ಎಂಬ ಪ್ರವಾದಿಯನ್ನು ಯೆರುಸಲೇಮ್ ಪಟ್ಟಣದ ಹೊರಗೆ ಧರ್ಮಾಧಿಕಾರಿಗಳು ರಾಜಕೀಯ ವ್ಯಕ್ತಿಗಳ ಕೈವಾಡದೊಂದಿಗೆ—ಶಿಲುಬೆಗೇರಿಸಿ ಕ್ರೂರ

ವಾಗಿ ಸಾಯಿಸಿದ ಐತಿಹಾಸಿಕ ಘಟನೆ ಹಾಗೂ ತದನಂತರದಲ್ಲಿ ಯೇಸುಭಕ್ತರ ಜೀವನದಲ್ಲಿ ನಡೆದ ಪರಿವರ್ತನೆ ಹಾಗೂ ಘಟನೆಗಳು ಕ್ರೈಸ್ತಧರ್ಮದ ಬುನಾದಿ.

ಮೃತ್ಯುಂಜಯ ಕ್ರಿಸ್ತನ ಸಂದೇಶ ಪ್ರಥಮವಾಗಿ ತಟ್ಟಿದ್ದು, ಮುಟ್ಟಿದ್ದು ಪಂಡಿತರನ್ನಲ್ಲ. ದೀನದಲಿತರು, ನಿಸ್ಸಹಾಯಕರು, ಶೋಷಣೆಗೆ ಒಳಗಾಗಿ ಮೂಕರಾದವರು, ಸ್ವಂತ ಕಾಲಮೇಲೆ ನಿಲ್ಲಲಾರದೆ ಹೆಳವರಾದವರು, ವ್ಯಕ್ತಿತ್ವದ ಹಾಗೂ ಸಮಾಜದ ಬೆಳವಣಿಗೆಯನ್ನು ಕಾಣಲಾರದ ಕುರುಡರು—ಹೀಗೆ ದೀನದಲಿತರೇ ಅಂದು ಹೆಚ್ಚಾಗಿ ಕ್ರೈಸ್ತ ಸಭೆಯ ಸದಸ್ಯರಾಗಿದ್ದರು. ವೃತ್ತಿಯಿಂದ ಇವರು ರೈತರು, ಬೆಸ್ತರು ಹಾಗೂ ಕುರುಬರು. ಕೆಲವರು ಬಡಗಿ, ಕಮ್ಮಾರ ಮೊದಲಾದ ಕಸಬುಗಳಿಗೆ ಸೇರಿದವರೂ ಇದ್ದರು. ಒಟ್ಟಿನಲ್ಲಿ ಇವರು ದುಡಿಮೆಗಾರರು (Labourers). ಆರಂಭದ ಕ್ರೈಸ್ತ ಸಮುದಾಯದಲ್ಲಿ ಉಳ್ಳವರಿಗಿಂತ ಇಲ್ಲದವರೇ ಹೆಚ್ಚು. ಇವರು ಹೆಚ್ಚು ಕಡಿಮೆ ಅವಿದ್ಯಾವಂತರು (Every, 65). ಇಂಥವರ ಸಾಮುದಾಯಿಕ ಪ್ರಜ್ಞೆಯಲ್ಲಿ ಅಮೂರ್ತ ಸ್ವರೂಪದ 'ಪರವಸ್ತು' ಮತ್ತು ಮೂರ್ತ ಸ್ವರೂಪದ ಸೃಷ್ಟಿ ಇವುಗಳೊಳಗಿನ ಸಂಬಂಧಗಳ ಬಗೆಗೆ ಮೂಡಿಬಂದಿರುವ ಆಲೋಚನೆಗಳನ್ನು ಅಭಿವ್ಯಕ್ತಪಡಿಸಲು ಅವರು ಸಾಂಪ್ರದಾಯಿಕವಾಗಿ ಬಂದಿರುವ ಯೆಹೂದಿ ಜನಾಂಗದ ಸೃಷ್ಟಿ ಹಾಗೂ ಲಯ ಪುರಾಣಗಳನ್ನು ಬಳಸಿಕೊಂಡರಲ್ಲದೆ ಅಲ್ಲಲ್ಲಿ ಹೊಸ ಪುರಾಣಗಳನ್ನೂ ಸೃಷ್ಟಿಸಿಕೊಂಡಿರುವುದನ್ನು ಬೈಬಲಿನಲ್ಲಿ ನಾವು ಕಾಣಬಹುದು. ಕ್ರೈಸ್ತ ಪುರಾಣಗಳಲ್ಲಿ ಯೇಸುವಿನ ಬಗೆಗೆ, ಮರಿಯಮ್ಮನ ಬಗೆಗೆ, ಕ್ರಿಸ್ತ ಶರಣರ ಬಗೆಗೆ—ಹೀಗೆ ಹಲವಾರು ರೀತಿಯಲ್ಲಿ ಹುಟ್ಟಿದ ಕಥೆಗಳನ್ನು, ಪವಾಡಗಳನ್ನು ಸೇರಿಸಬಹುದಾದರೂ ಕ್ರೈಸ್ತ ಪಂಡಿತರಲ್ಲಿ ಅವುಗಳ ಪೌರಾಣಿಕ ಸ್ವರೂಪ ಲಕ್ಷಣಗಳ ಬಗೆಗೆ ಒಮ್ಮತವಿಲ್ಲ. ಆದರೆ, ಬೈಬಲಿನಲ್ಲಿ ನಿರೂಪಿತವಾಗಿರುವ ಸೃಷ್ಟಿ (Beginning) ಹಾಗೂ ಲಯ(End)ಗಳನ್ನು ಕುರಿತ ವೃತ್ತಾಂತಗಳು ಪೌರಾಣಿಕವೆಂಬ ವಿಷಯವನ್ನು ಹೆಚ್ಚು ಕಡಿಮೆ ಎಲ್ಲ ಆಧುನಿಕ ಪಂಡಿತರು ಒಪ್ಪಿಕೊಂಡಿದ್ದಾರೆ (Every, 17). ಈ ಕಾರಣದಿಂದಾಗಿ ಚರ್ಚಾಸ್ಪದ ಪುರಾಣಗಳನ್ನು ಕೈಬಿಟ್ಟು ಬೈಬಲಿನಲ್ಲಿ ನಿರೂಪಿತಗೊಂಡ ಸೃಷ್ಟಿಪುರಾಣಗಳು (Protological myths) ಹಾಗೂ ಲಯ ಪುರಾಣಗಳ(Eschatalogical myths)ನ್ನು ಮಾತ್ರ ಪ್ರಸ್ತುತದಲ್ಲಿ ಅಧ್ಯಯನಕ್ಕೆ ಆರಿಸಿಕೊಳ್ಳಲಾಗಿದೆ.

ಬೈಬಲ್ :

'ಬೈಬಲ್' ಎಂದರೆ ಗ್ರೀಕ್‌ಭಾಷೆಯಲ್ಲಿ ಗ್ರಂಥವೆಂದು ಅರ್ಥ. ಕ್ರೈಸ್ತ ಧರ್ಮಸಭೆಗಳು ಧಾರ್ಮಿಕ ಗ್ರಂಥಗಳೆಂದು ಅಂಗೀಕರಿಸಿದ ಗ್ರಂಥಗಳ ಸಮುದಾಯವನ್ನೇ ರೂಢಿಯಲ್ಲಿ 'ಬೈಬಲ್' ಎಂದು ಕರೆದಿದ್ದಾರೆ. ರಾಚನಿಕವಾಗಿ ಅದೊಂದು

ಸರಳ ಕೃತಿಯಲ್ಲ; ಅದು ಸು. ಕ್ರಿ. ಪೂ. ೯೦೦ ರಿಂದ ಕ್ರಿ. ಶ. ೧೦೦ರ ವರೆಗೆ ರಚಿತವಾದ ಅನೇಕ ಕೃತಿಗಳ ಸಂಪುಟ. ಮೂಲ ಹಿಬ್ರೂ ಬೈಬಲಿನಲ್ಲಿ ಧರ್ಮ (The Penatateuch/The Law) ಪ್ರವಾದಿಗಳು(The Prophets) ಮತ್ತು ಬೋಧಲಿಖಿತಗಳು(Hegiographa/The Writings)— ಎಂಬ ಮೂರು ಪ್ರಮುಖ ವರ್ಗಗಳಿದ್ದು, ಅಲ್ಲಿ ಇಪ್ಪತ್ತನಾಲ್ಕು ಗ್ರಂಥಗಳು ಸಮಾವೇಶ ಗೊಂಡಿವೆ. ಹಿಬ್ರೂ ಬೈಬಲ್ಲಿನ ಗ್ರೀಕ್ ಭಾಷಾಂತರದಲ್ಲಿ. ಕೆಲವು ಹೊಸ ಗ್ರಂಥಗಳ ಸೇರ್ಪಡೆಯಿಂದಾಗಿ, ಗ್ರಂಥಗಳ ಸಂಖ್ಯೆ ಎಪ್ಪತ್ತಕ್ಕೇರಿದೆ. ಅದೇ ಕಾರಣದಿಂದಾಗಿ ಅದನ್ನು 'ಸೆಪ್ತ್ವಾಜಿಂತ್' ಎಂದು ಕರೆಯಲಾಗಿದೆ. ಕ್ರೈಸ್ತ ಧರ್ಮಸಭೆ ಯುಹೂದಿಗಳಿಗೆ ಮಾನ್ಯವಾದ 'ಸೆಪ್ತ್ವಾಜಿಂಸ್' ಬೈಬಲಿನ ಕೆಲವು ಗ್ರಂಥ ಗಳನ್ನು ಅನಧಿಕೃತವೆಂದು ಪರಿಗಣಿಸಿ ಇನ್ನು ಕೆಲವನ್ನು ಅದಕ್ಕೆ ಕೂಡಿಸಿ ಎಪ್ಪತ್ತ ನಾಲ್ಕು ಗ್ರಂಥಗಳ ಸಂಪುಟವನ್ನು ಬೈಬಲ್ ಎಂದು ಪರಿಗಣಿಸಿದರೂ ಕೆಲವೊಂದು ಪ್ರೊಟೆಸ್ಟೆಂಟ ಸಭೆಗಳು ಒಂದೆರಡು ಗ್ರಂಥಗಳಿಗೆ ಬೈಬಲ್ ಮನ್ನಣೆ ನಿರಾಕರಿಸು ತ್ತವೆ. ಆದರೆ ಬೈಬಲ್ಲಿನ 'ಹಳೆಯ ಒಡಂಬಡಿಕೆ' (Old Testament) ಮತ್ತು 'ಹೊಸ ಒಡಂಬಡಿಕೆ' (New Testament) ಎಂಬ ವರ್ಗೀಕರಣವನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ.

ಸೃಷ್ಟಿಪುರಾಣ :

ಬೈಬಲಿನ ಪೂರ್ವ ಭಾಗವಾದ ಹಳೆಯ ಒಡಂಬಡಿಕೆಯಲ್ಲಿ ಆದಿಕಾಂಡವಾಗಿ ಬರುವ ಗ್ರಂಥವೇ ಉತ್ಪತ್ತಿಗ್ರಂಥ (Genesis). ಅಲ್ಲಿ ಉಲ್ಲೇಖಿತವಾದ ಸೃಷ್ಟಿ ಪುರಾಣ ನಮಗೆ ಪ್ರಸ್ತುತ. ಉತ್ಪತ್ತಿ ಗ್ರಂಥದಲ್ಲಿ ನಮೂದಿಸಿದ ಸೃಷ್ಟಿ ಕಥನ, ವೃತ್ತಾಂತವೇ (**Historia**) ಹೊರತು ವೈಜ್ಞಾನಿಕ ದೃಷ್ಟಿಕೋನವುಳ್ಳ, ಆಧುನಿಕ ಪರಿಭಾಷೆಗೆ ಅನುಗುಣವಾದ, ಇತಿಹಾಸ (**Historie**) ಅಲ್ಲ.

ರಚನಾ ನಿರೂಪಣೆ (Syntactics): ಬೈಬಲಿನಲ್ಲಿ ಸೃಷ್ಟಿಯನ್ನು ಕುರಿತು ಏಕರೂಪದ ವೃತ್ತಾಂತದ ಬದಲು ಎರಡು ಮೂರು ರೀತಿಯ ವಿಭಿನ್ನ ಸಂಪ್ರದಾಯ ಗಳಿಗೆ ಸೇರಿರಬಹುದಾದ ವೃತ್ತಾಂತಗಳನ್ನು ಪೋಣಿಸಿರುವುದು ಕಂಡುಬರುತ್ತದೆ. ಅವುಗಳನ್ನು ಈ ಕೆಳಗಿನಂತೆ ನಮೂದಿಸಬಹುದು :

ಅ) ಯ್ಹಾವ್ಹೆ ಸಂಪ್ರದಾಯ (Jahwist/Yahwist)
(ಸು. ಕ್ರಿ. ಪೂ. ೮–೧೦ನೆಯ ಶತಮಾನ)

ಆ) ಎಲೊಹಿ ಸಂಪ್ರದಾಯ (Elohist)

ಇ) ಯಾಜಕ ಸಂಪ್ರದಾಯ (Priesterschrift/Priestly writings)
(ಸು. ಕ್ರಿ. ಪೂ. ೫–೬ನೆಯ ಶತಮಾನ)

ಈ ಮೂರೂ ಸಂಪ್ರದಾಯಗಳಲ್ಲಿ ಯ್ಹಾವ್ಹೆ–ಎಲೊಹಿ (JE) ಸಂಪ್ರದಾಯ (Gn 2. 4b-25) ಪ್ರಾಚೀನವಾಗಿದ್ದು ಯಾಜಕ (P) ಸಂಪ್ರದಾಯ (Gn 1 & 2. 4a) ಅರ್ವಾಚೀನವಾಗಿದ್ದರೂ ಅದು ಉತ್ಪತ್ತಿ ಗ್ರಂಥದಲ್ಲಿ ಪ್ರಥಮ ಸ್ಥಾನವನ್ನು ಆಕ್ರಮಿಸಿದೆ. ಪ್ರಾಚೀನ ಸಂಪ್ರದಾಯವನ್ನು, ಭಗವಂತನಿಗಿತ್ತ ಹೆಸರುಗಳನ್ನು ಗಮನಿಸಿ ಯ್ಹಾವ್ಹೆ ಮತ್ತು ಎಲೊಹಿಗಳೆಂದು ವಿಂಗಡಿಸಬಹುದಾದರೂ ಅವು ಒಟ್ಟಿನಲ್ಲಿ ಪ್ರಾಗೈತಿಹಾಸಿಕ ಕಾಲದಿಂದ ಪ್ರಚಲಿತವಿದ್ದ ಸುತ್ತುಮುತ್ತಲಿನ ಕಥೆಗಳನ್ನು ಒಗ್ಗಿಸಿಕೊಂಡು ಇಸ್ರೇಲ್ ಜನಪದದಲ್ಲಿ ರೂಪುಗೊಂಡ ಜಾನಪದೀಯ ಸೃಷ್ಟಿಪುರಾಣವೇ ಹೊರತು ಇತಿಹಾಸವಲ್ಲ.

ಉತ್ಪತ್ತಿ ಗ್ರಂಥವ ಸೃಷ್ಟಿಪುರಾಣದ ಪ್ರಕಾರ ದೇವರು ಐದು ದಿನಗಳಲ್ಲಿ ಮಾನವೇತರ ಸೃಷ್ಟಿಯನ್ನು ನಿರ್ಮಿಸಿ ಆರನೆಯ ದಿನದಲ್ಲಿ ಮಣ್ಣಿನಿಂದ ಆದಿಮಾನವ-ಆದಾಮ (adamah) 'ಕೆಮ್ಮಣ್ಣು' – ನನ್ನೂ ಆತನ ಪಕ್ಕೆಲುಬಿನಿಂದ ಆದಿಸ್ತ್ರೀ (Hayah) ಹೇವಾ (<Hawwah<Hayah-'ಜೀವಿಸು')ಳನ್ನೂ ಸೃಷ್ಟಿಸಿದನು. ಅವರ ವಾಸ್ತವ್ಯಕ್ಕೆ ಈಡನ್ (Eden) ತೋಟವಿದ್ದು ಅಲ್ಲಿಯ 'ಜ್ಞಾನವೃಕ್ಷ'ದ ಫಲವನ್ನು ಮಾತ್ರ ತಿನ್ನಕೂಡದೆಂದು ಆಜ್ಞಾಪಿಸಿದ ದೇವರು ಏಳನೆಯ ದಿವಸ ವಿಶ್ರಾಂತಿಯನ್ನು ಪಡೆದರು(ಪುರಾಣದ ಪಾಠಕ್ಕೆ ನೋಡಿ : Gn 1 & 2. 4a ಮತ್ತು 2.4b-25).

ಬೈಬಲಿನಲ್ಲಿ ಉಕ್ತವಾದ ಸೃಷ್ಟಿಪುರಾಣಕ್ಕೂ ಸುಮೇರಿಯ, ಬಾಬಿಲೋನಿಯ, ಮೆಸೊಪೊಟೆಮಿಯಾ ಮೊದಲಾದ ಜಾನಪದಗಳಲ್ಲಿ ಪ್ರಚಲಿತವಿದ್ದ ಸೃಷ್ಟಿಪುರಾಣಗಳಿಗೂ ಸಾಮ್ಯಗಳಿವೆ ಎಂಬ ಸತ್ಯ ಇಂದು ಬೆಳಕಿಗೆ ಬಂದಿದೆ (Durant 134, 237, 329). ಮೆಸೊಪೊಟೇಮಿಯನ್ ಪುರಾಣದಲ್ಲಿ ಹೇಳಿರುವಂತೆ ಉತ್ಪತ್ತಿ ಗ್ರಂಥದಲ್ಲಿಯೂ ಮಾನವ ನಿರ್ಮಾಣಕ್ಕೆ ಮೂಲವಸ್ತು ನೆಲದ ಮಣ್ಣೆಂದು ಹೇಳಲಾಗಿದೆ (McKenzie 1963:153 f.n. 39). ಮಾನವನು ದೇವನಿರ್ಮಿತ (ಅದೇ ಅ.ಟಿ. ೪೦–೪೨) ಎಂಬ ವಿಷಯವಾಗಲೀ, ಏಕೈಕ ಆದಿಮಾನವ ದಂಪತಿಯ ಸೃಷ್ಟಿಯಾಗಲಿ (ಅದೇ ಅ. ಟಿ. ೪೩) ಉತ್ಪತ್ತಿ ಗ್ರಂಥಕ್ಕೆ ಮಾತ್ರ ಸೀಮಿತವಾದುದಲ್ಲ. ಇಲ್ಲಿಯ ಬಹುಮೂಲ ಸೃಷ್ಟಿ (Polygenesis 1.26-27) ಸುಮೇರಿಯ ಹಾಗೂ ಬಾಬಿಲೋನಿಯ ಜಾನಪದಗಳಲ್ಲಿಯೂ ಕಂಡುಬರುತ್ತದೆ. ಇಲ್ಲಿಯ ಸರ್ಪ ಸೆಮೆಟಿಕ ಪುರಾಣಗಳಲ್ಲಿ ಲೈಂಗಿಕ ಆಶಯ(Motif)ವಾಗಿ ಬಂದಿರುವುದು ತಿಳಿದುಬಂದಿದೆ. "ಒಳ್ಳೇದ್ದರ, ಕೆಟ್ಟದ್ದರ ಅರಿವು" ಎಂಬ ಬೈಬಲ್ ಪದಪ್ರಯೋಗ (2.17) ಲೈಂಗಿಕ ಜ್ಞಾನಕ್ಕೆ ಸಂಬಂಧಿಸಿದ ಸೆಮೆಟಿಕ್ ಪುರಾಣಗಳಲ್ಲಿಯೂ ಉಲ್ಲೇಖಗೊಂಡಿದೆ.

ಉತ್ಪತ್ತಿ ಗ್ರಂಥದಲ್ಲಿ ಪ್ರಸ್ತಾಪಿಸಲಾದ 'ಆದಿತಾಯಿ'ಯ ಕಲ್ಪನೆ (2.22 ಮತ್ತು 3.20) ಹಾಗೂ 'ಪಕ್ಕೆಲುಬು' ಇವುಗಳನ್ನು ಗಮನಿಸಿದಾಗ, ಸುಮೇರಿಯನ್

ಪುರಾಣದೊಂದಿಗೆ ಬೈಬಲ್ಲಿನ ಸೃಷ್ಟಿಪುರಾಣಕ್ಕಿರುವ ಸಂಬಂಧ ಸ್ಪಷ್ಟಗೊಳ್ಳುತ್ತದೆ. ಇಲ್ಲಿಯ ಜೀವವೃಕ್ಷ (Tree of life : Gn. 2) ಕೂಡಾ ಅನೇಕ ಪೌರ್ವಾತ್ಯ ಪುರಾಣಗಳಲ್ಲಿ ಕಂಡುಬರುತ್ತದೆ (McKenzie 1963 : 165 f.n.69). ಈಡನ್ ನಂದನವನ (Paradise)ದ ಕಲ್ಪನೆ ಈಜಿಪ್ತ, ತಿಬೆಟ್, ಬಾಬಿಲೊನಿಯಂ, ಪರ್ಶಿಯ, ಗ್ರೀಸ್, ಪೊಲಿನಿಶಿಯಂ, ಮೆಕ್ಸಿಕೊ ಮೊದಲಾದ ದೇಶಗಳ ಪುರಾಣಗಳಲ್ಲಿಯೂ ಬಂದಿದೆ (Durant, 329-30; Chudoba).

ಅರ್ಥನಿರೂಪಣೆ (Semantics) : ಮೇಲಿನ ವಿವರಗಳನ್ನು ಗಮನಿಸಿದಾಗ ಬೈಬಲ್ಲಿನ ಸೃಷ್ಟಿ ಪುರಾಣ ಸುತ್ತುಮುತ್ತಲಿನ ಜಾನಪದದಿಂದ ಎರವಲಾಗಿ ಪಡೆದು ರೂಪಿಸಿಕೊಂಡ ಒಂದು ಆಶಯ ಅಥವಾ ಪ್ರತೀಕವೆಂಬುದು ಸ್ಪಷ್ಟ (Every, 17). ಹಳೆಯ ಒಡಂಬಡಿಕೆಯನ್ನು ಪರಿಶೀಲಿಸಿದಾಗ ಅಲ್ಲಿಯ ದೇವನಾದ ಯ್ಹಾವ್ಹೆ/ ಎಲೊಹಿ ಪ್ರಮುಖವಾಗಿ ಇಸ್ರೇಲರ ವಿಮೋಚಕ(Liberator)ನಾಗಿ ತೋರಿಬರು ತ್ತಾನೆಯೇ ಹೊರತು ಸೃಷ್ಟಿಕರ್ತನಾಗಿಯಲ್ಲ. ಈಜಿಪ್ತದ ಗುಲಾಮರಾಗಿ ಬಾಳು ತ್ತಿದ್ದ ಇಸ್ರೇಲರಿಗೆ ಸಂ. ಕ್ರಿ. ಪೂ. ಹನ್ನೆರಡನೆಯ ಶತಮಾನದಲ್ಲಿ ಮೋಸೇಸನ ಮುಂದಾಳುತನದಲ್ಲಿ ಸ್ವಾತಂತ್ರ್ಯ ಸಿಕ್ಕಾಗ ಆದ ಆನಂದ ಅಷ್ಟಿಷ್ಟಲ್ಲ. ಉಳಂವ ಭೂಮಿಗೆ ತಾವು ಆಳುವವರಾದಾಗ, ಕಳೆದುಕೊಂಡ ವ್ಯಕ್ತಿ–ಗೌರವವನ್ನು ಪುನಃ ಪಡೆದುಕೊಂಡಾಗ, "ತಮ್ಮ ವಿಮೋಚನೆಯ ಪವಾಡ ಹೇಗೆ ಸಂಭವಿಸಿತು ? ಇದಕ್ಕೆ ಮೂಲ ಕಾರಣನಾರು ?" ಎಂಬೀ ಪ್ರಶ್ನೆಗಳು ಅಂದಿನ ಜನಮನವನ್ನು ಕಾಡಿರು ವುದು ಸ್ವಾಭಾವಿಕ. ಯ್ಹಾವ್ಹೆಯೇ ತಮ್ಮ ವಿಮೋಚಕನೆಂಬ ಸಾಮೂಹಿಕ ಪ್ರಜ್ಞೆ ಈ ಜನಸಮುದಾಯದಲ್ಲಿ ಉದಯವಾದಾಗ ಆತನೇ ತಮ್ಮ ಹುಟ್ಟಿಗೂ ಜಗತ್ತಿನ ಹುಟ್ಟಿಗೂ ಮೂಲಕಾರಣನೆಂಬ ವಿಚಾರ ಅವರಲ್ಲಿ ತಲೆದೋರಿ ಬೇರೂರಿದೆ. ಈ ಸಮಷ್ಟಿ ಪ್ರಜ್ಞೆಯನ್ನು ಅಭಿವ್ಯಕ್ತಪಡಿಸಲು ಪ್ರಸ್ತುತ ಸೃಷ್ಟಿಪುರಾಣವನ್ನು ಅವರು ಸೃಷ್ಟಿಸಿಕೊಂಡಿದ್ದಾರೆ (Rahner, 314). ಆದುದರಿಂದ, ಬೈಬಲಿನ ಸೃಷ್ಟಿ ಪುರಾಣ ನೇರವಾಗಿ ಸೃಷ್ಟಿಯ ಕುರಿತಾದ ಐತಿಹಾಸಿಕ ಘಟನೆಯನ್ನು ನಿರೂಪಿಸದೆ 'ಪರವಸ್ತು' ವಿಗೆ ಸಂಬಂಧಿಸಿದ ಕೆಲವು ಮೂಲಸತ್ಯಗಳನ್ನು ಸಂಕೇತಿಸುತ್ತವೆ. ಬೈಬಲ್ ತಜ್ಞರ ಪ್ರಕಾರ, ವಿಶ್ವದ ಹುಟ್ಟು, ಆಧಾರ ಹಾಗೂ ಅಂತಿಮ ಗುರಿ ಯ್ಹಾವ್ಹೆ/ ದೇವರು ಎಂಬ ಧಾರ್ಮಿಕ ಸತ್ಯವನ್ನು ಸೂಚಿಸುವುದೇ ಈ ಪುರಾಣದ ಪ್ರಮುಖ ಧ್ಯೇಯ (Every 24). ಈ ಕಾರಣದಿಂದಾಗಿಯೇ ಹಿಬ್ರೂ ಭಾಷೆಯಲ್ಲಿ "ಎಸೆಕ್" ಎಂಬ ಪದ ಸೃಷ್ಟಿಗೆ ಸಂವಾದಿಯಾಗಿ ಬಳಕೆಯಾಗಿದೆ. ಇಸ್ರೇಲರು ಕರ್ತಾರನ ಕ್ರಿಯೆಯನ್ನು 'ಎಸೆಕ್' ಎಂದು ಕರೆಯುತ್ತಿದ್ದರು ಎಂಬುದು ಭಾಷಾವಿಜ್ಞಾನ ದೃಷ್ಟಿ ಯಿಂದ ಬಹಳ ಮಹತ್ವಪೂರ್ಣ.

ಸೃಷ್ಟಿಯೆಂಬುದು ದೇವರ ಸ್ವಯಂಪ್ರೇರಿತ ಬಾಹ್ಯಾಭಿವ್ಯಕ್ತಿ. ಅದು ಯಾವ ಬಾಹ್ಯಕಾರಣ ಸಂಬಂಧಕ್ಕೊಳಪಡದ ಬ್ರಹ್ಮಲೀಲೆ. ಬ್ರಹ್ಮಲೀಲೆಯಿಂದ ಉಂಟಾದ ಸೃಷ್ಟಿ ಸದಾ ಸುಂದರ. ಈ ಸೃಷ್ಟಿ ಮಾನವನಿಗೋಸ್ಕರ; ಆತನ ವಿಮೋಚನೆಗೆ ಅದೊಂದು ಸಾಧನ (Aid). ಕಾರಣ ಸೃಷ್ಟಿಯನ್ನು ಸಾಧನವನ್ನಾಗಿ ಬಳಸಬೇಕೇ ಹೊರತು ಅದನ್ನೇ ಪೂಜಿಸಬಾರದು. ಪೂಜೆ ಕರ್ತಾರನಿಗೆ ಮಾತ್ರ ಸಲ್ಲುತ್ತದೆ ಎಂಬ ಮೂಲಭೂತ ಅನುಭಾವಿಕ ಪಾರಮಾರ್ಥಿಕ ವಿಚಾರಗಳನ್ನು ಅಭಿವ್ಯಕ್ತಪಡಿಸಲು ಇಸ್ರೇಲ್ ಜನಪದರು ಈ ಸೃಷ್ಟಿ ಪುರಾಣವನ್ನು ಬಳಸಿಕೊಂಡಿದ್ದಾರೆ.

ಫಲ ನಿರೂಪಣೆ (Pragmatics) : ಬೈಬಲ್ಲಿನ ಸೃಷ್ಟಿ ಪುರಾಣದಲ್ಲಿ ಏಕೈಕ ದೇವರ ಕಲ್ಪನೆ ಎಲ್ಲದಕ್ಕೂ ಅಡಿಪಾಯವಾಗಿದೆ. ಅಲ್ಲಿಯು ಸೃಷ್ಟಿ ಕ್ರಮ ದೇವರು ಜ್ಞಾನರೂಪಿ (೧.೩) ಎಂಬ ಸತ್ಯವನ್ನು ಸ್ಫುಟಗೊಳಿಸುತ್ತದೆ. ಅದಾಮ ಮತ್ತು ಹೇವಳ ಸಂಬಂಧ, ಸಮಾಜದಲ್ಲಿರಬೇಕಾದ ಗಂಡು ಹೆಣ್ಣಿನ ಸಮಾನತೆಯನ್ನು (Gn. 2.23-24; 3.16) ಒತ್ತಿ ಹೇಳುತ್ತದೆ, ಇಲ್ಲಿ ಮಾನವನ ಸಮಸ್ತ ಸೃಷ್ಟಿಗೆ ಕಿರೀಟಪ್ರಾಯನಾಗಿ ದೈವೀ ಸ್ವರೂಪನಾಗಿ (Gn 3.22) ಚಿತ್ರಿತನಾಗಿದ್ದಾನೆ. (Madtha 1976 f.n. 31). ಪೌರಾಣಿಕ ಕಥೆಗಳು ಹೆಚ್ಚಾಗಿ "ಒಂದಾನೊಂದು ಕಾಲದಲ್ಲಿ" ಎಂದು ಆರಂಭವಾಗುತ್ತವೆಯಾದರೂ ಬೈಬಲ್ಲಿನ ಸೃಷ್ಟಿ ಪುರಾಣ "ಆದಿಯಲ್ಲಿ ದೇವರು" ಎಂದು ಪ್ರಾರಂಭಗೊಳ್ಳುತ್ತದೆ. ಇದನ್ನು ಗಮನಿಸಿದರೆ ಸಕಲಾರ್ಥದಲ್ಲಿ ಸಕಲಕ್ಕೂ ಏಕೈಕ ಸರ್ವೇಶ್ವರನೇ ಆದಿಯೆಂಬ ಸತ್ಯವನ್ನು ಪ್ರತಿಬಿಂಬಿಸುವುದೇ ಹಾಗೂ ಪ್ರತಿಪಾದಿಸುವುದೇ ಈ ಸೃಷ್ಟಿ ಪುರಾಣದ ಉದ್ದೇಶವೇ ಹೊರತು ಸೃಷ್ಟಿಯ ಹುಟ್ಟಿನ ಬಗೆಗೆ ಐತಿಹಾಸಿಕ ಮಾಹಿತಿಯನ್ನು ಕೊಡುವುದು ಅಲ್ಲವೆಂಬುದು ಖಚಿತವಾಗುತ್ತದೆ (Every, 129).

ಸೃಷ್ಟಿ ಪುರಾಣದ ಕರ್ತೃ/ಸಂಪಾದಕ ವಿಜ್ಞಾನಿಯೂ ಅಲ್ಲ, ಇತಿಹಾಸಕಾರನೂ ಅಲ್ಲ. ಆತನೊಬ್ಬ ಪ್ರೇರಿತ ಕವಿ. ಆತ ತನ್ನ ಸಮಕಾಲೀನ ವಾಸ್ತವಿಕ ಸ್ಥಿತಿಯನ್ನು ಕಂಡು, ಅನುಭವಿಸಿ ಅದರ ಕಾರ್ಯಕಾರಣಗಳನ್ನು ಪೌರಾಣಿಕವಾಗಿ, ಕಾವ್ಯಮಯವಾಗಿ ಚಿತ್ರಿಸಿದ್ದಾನೆಯೇ ಹೊರತು ಸೃಷ್ಟಿ ನಿರ್ಮಾಣವನ್ನು ಕಣ್ಣಾರೆ ಕಂಡು ಅಥವಾ ವೈಜ್ಞಾನಿಕವಾಗಿ ಸಂಶೋಧನೆ ಮಾಡಿ ಅಥವಾ ಐತಿಹಾಸಿಕ ಘಟನೆಗಳನ್ನು ಹಾಗೂ ಪುರಾವೆಗಳನ್ನು ಕಲೆಹಾಕಿ 'ಇದಮಿತ್ಥಂ ಸತ್ಯಂ' ಎಂದು ಬರೆದಿಲ್ಲ—ಎಂಬ ಸತ್ಯ ಸಂಗತಿಯೇ ಸೃಷ್ಟಿ ಪುರಾಣದ ಜಾನಪದ ವೈಜ್ಞಾನಿಕ ವಿಶ್ಲೇಷಣೆಯ ಮೂಲಕ ನಾವು ಪಡೆಯಬಹುದಾದ ಮುಖ್ಯ ಫಲ.

ಲಯ ಪುರಾಣ:

ಸೃಷ್ಟಿಯ ಅಂತ್ಯದ ಬಗೆಗೆ, ಸಾವು ಮತ್ತು ಸಾವಿನಾಚೆಗಿನ ಇರವಿನ ಕುರಿತ ವೃತ್ತಾಂತಗಳನ್ನು ಲಯಪುರಾಣವೆಂದು ಕರೆಯಲಾಗಿದೆ (Rahner 1968,

2.242-46). ಮರಣ, ಪುನರುತ್ಥಾನ, ಅಂತಿಮ ತೀರ್ಪು, ಸ್ವರ್ಗ, ನರಕ—ಇವುಗಳ ಬಗೆಗಿನ ಪುರಾಣಗಳು ಕ್ರೈಸ್ತ ಧರ್ಮದ ಪ್ರಸಿದ್ಧ ಲಯ ಪುರಾಣಗಳು. ಇವುಗಳ ಬಗೆಗಿನ ವಿಶ್ಲೇಷಣೆ ಕ್ವಚಿತ್ತಾಗಿ ಪ್ರಸ್ತುತದಲ್ಲಿ ಮಾಡಲಾಗಿದೆ.

ಮರಣ (Death) :ಹೊಟ್ಟೆಪಾಡಿಗೋಸ್ಕರ ಗಂಡಸು ದುಡಿಯುವುದಕ್ಕಾಗಲಿ ಹೆಂಡತಿಯಾಗಿ, ತಾಯಿಯಾಗಿ ಹೆಣ್ಣು ಅನುಭವಿಸಬೇಕಾದ ಕಷ್ಟ ನೋವು ತೊಂದರೆಗಳಿಗಾಗಲಿ (Gn 4d) ಹೇಗೆ ದುಷ್ಟಾತ್ಮ (Ws 2n; 1.13; 24a; Rm 5.12f; 8.3-4; Ga 3.13) ಅರ್ಥಾತ್ ಸೈತಾನ(Satan: Jb 1.6+)ನೇ ಮೂಲಕಾರಣನೋ ಅದೇ ರೀತಿಯಲ್ಲಿ ಮಾನವನ ಸಾವಿಗೆ ಕಾರಣವಾದ ಆದಿ ತಾಯ್ತಂದೆಯರ (Gn 2.17; 3.5, 19; Pr 23.12-14; Rm 5.12) ಪಾಪಕ್ಕೂ ದೇವ-ದ್ರೋಹಿಯಾದ ಸೈತಾನನೇ ಮೂಲ ಕಾರಣ (Heb 2h). ಹೀಗೆ ಮರಣಕ್ಕೂ, ಪಾಪಕ್ಕೂ ಮೂಲಭೂತ ಸಂಬಂಧ (Ws 11; Jm 1.15) ಇದೆ ಎಂಬ ನಂಬಿಕೆ ಕ್ರೈಸ್ತ ಸಾಮೂಹಿಕ ಪ್ರಜ್ಞೆಯಲ್ಲಿ ಬೇರೂರಿ ನಿಂತಿದೆ. ಪ್ರತಿ ಪ್ರಾಣಿಯ ಪ್ರಾಣವೂ ಸಮಸ್ತ ಮನುಷ್ಯರ ಆತ್ಮಗಳೂ ದೇವರ ಕೈಯಲ್ಲಿರುವುದರಿಂದ (Jb 12.10), ನಮ್ಮ ಜೀವ ಸರ್ವಶಕ್ತನ ಶ್ವಾಸದಿಂದುಂಟಾದುದರಿಂದ (Jb 33.4) ಆತ ನಮ್ಮಿಂದ ತನ್ನ ಶ್ವಾಸವನ್ನು ಹಿಂದಕ್ಕೆ ತೆಗೆದುಕೊಂಡಾಗ ನಾವು ಸಾಯುತ್ತೇವೆ (Jb 34.14-15). ದುರ್ಮರಣಗಳು (೨ ಸಮು ೨೧.೮-೯) ವೈಯಕ್ತಿಕ ಪಾಪಕ್ಕಾಗಿ ಸಿಗುವ ಪ್ರತಿಫಲ (Jb 15.32; Ps 73.19; 102.24; Is 38.10; Jr 17.11; 22.17-19). ನೀತಿವಂತರನ್ನು ದೇವರು ಅಕಾಲ ಮೃತ್ಯು ಹಾಗೂ ದುರ್ಮರಣಗಳಿಂದ ಕಾಪಾಡುತ್ತಾನೆ (Dt 5.16; 30.20; Ps 21.4; 23.6; 73k; 91.16; Pr 3.2 ಇತ್ಯಾದಿ). ದೀರ್ಘಾಯುಷ್ಯವೆಂಬುದು ದೈವೀಕೃಪೆ (Pr 10.27). ಭಕ್ತರು ಸತ್ತಾಗ ದೇವರು ಮರುಗುತ್ತಾನೆ (Ps 116.15).

ಸಾವಿನಿಂದ ಮಾನವನ ಭೌತಿಕಾಂಶ ಇಹದಲ್ಲಿ ಸೇರಿಕೊಂಡು ಹೋದರೆ ಆತನಲ್ಲಿರುವ ಪಾರಮಾರ್ಥಿಕಾಂಶ ಪರಮಾತ್ಮನಲ್ಲಿ ಹೋಗುತ್ತದೆ (Qo 12 e). ಸತ್ಯವೆಂಬುದು ದುಷ್ಟ ವ್ಯಕ್ತಿಗೆ ಮಾತ್ರ ಕೇಡು. ಶಿಷ್ಟರಿಗೆ ಅದು ಅನಂತತೆಯ ವರವಾಗುತ್ತದೆ (Ws 1.1+; 11,o,l; Rm 5.12.2-1; Co 15.35-37; Rv 20.14—15; 21.4,8). ಐಹಿಕ ಜೀವನ ಮುಂಬರುವ ಶಾಶ್ವತ ಜೀವನಕ್ಕೆ ಒಂದು ತರಬೇತಿ ಮಾತ್ರ. ಅಲ್ಲಿ ಶಿಷ್ಟರಿಗೆ ಮಾತ್ರ ದೈವೀ ಜೀವನ ಲಭಿಸುವುದು. ದುಷ್ಟರಿಗೆ ತಕ್ಕ ಶಾಸ್ತಿ ಸಿಕ್ಕೇ ಸಿಗುತ್ತದೆ (Ws 3.9-10). ಸಾವು ಎಲ್ಲರನ್ನೂ ಐಹಿಕ ಕಷ್ಟಕಾರ್ಪಣ್ಯಗಳಿಂದ ಮುಕ್ತಗೊಳಿಸುತ್ತದೆ (Rm 6.7; 7.1-3).

ಅರ್ಥನಿರೂಪಣೆ : ಕ್ರೈಸ್ತ ಸಮುದಾಯಂದಲ್ಲಿಯು ಮೇಲೆ ವಿವರಿಸಿದ ಮಂರಣದ ನಿರೂಪಣೆಯನ್ನು ಗಮನಿಸಿದಾಗ ಅದಕ್ಕೆ ಈ ಕೆಳಗಿನ ಅರ್ಥವನ್ನು/ಭಾಷ್ಯವನ್ನು ನೀಡಬಹುದೆಂದು ತೋರುತ್ತದೆ.

ಸಾವೆಂಬುದು ಖಚಿತ. ಹುಟ್ಟಿದವನು ಸಾಯಲೇಬೇಕು. ಸಾವಿನ ಕಾಲವನ್ನು ಖಚಿತವಾಗಿ ಹೇಳುವುದು ಬಹುಮಟ್ಟಿಗೆ ಅಸಾಧ್ಯ. ಎಷ್ಟೋ ಸಲ ಯಾವ ಸೂಚನೆಯೂ ಕೊಡದೆ ಮೃತ್ಯು ಸಂಭವಿಸುತ್ತದೆ (Mt 24.44; 1 Th 5.2). ಆದ್ದರಿಂದ ಮಾನವನು ಸಾವಿನ ಅನಿಶ್ಚಿತತೆಯನ್ನು ಗಮನಿಸಿ ಅದರ ಬಗೆಗೆ ಬಹಳ ಎಚ್ಚರದಿಂದಿರಬೇಕು. ಅದು ಯಾವಾಗ ಬರಬಹುದೆಂಬುದು ಯಾರಿಗೂ ತಿಳಿಯದು (Mk 13.35-36).

ಮರಣದಿಂದಾಗಿ ಮಾನವ, ದೇಶ ಕಾಲ ಮಿತಿಯನ್ನು ದಾಟುತ್ತಾನೆಯಾದುದರಿಂದ ಆತನ ಮರಣಾನಂತರದ ಸ್ಥಿತಿಯಲ್ಲಿ ಯಾವುದೇ ಬದಲಾವಣೆಗೆ ಆಸ್ಪದವಿಲ್ಲ. ಅರ್ಥಾತ್ ತನ್ನ ಮರಣದ ಕಾಲದ ಸ್ಥಿತಿಯಲ್ಲಿ ಆತ ಶಾಶ್ವತನಾಗುತ್ತಾನೆ. ಈ ಮೂಲ ಸತ್ಯವೇ ಮರಣದ ಕುರಿತಾದ ಪೌರಾಣಿಕ ವೃತ್ತಾಂತದ ತಿರುಳು.

ಪುನರುತ್ಥಾನ (Resurrection) : ದೈಹಿಕ ಪುನರುತ್ಥಾನದ ಕಲ್ಪನೆ ಪಾಲೆಸ್ತೀನ್ ಯೆಹೂದಿಯರು ಝುರತುಷ್ಟ ಪರ್ಷಿಯಾದಿಂದ ಕ್ರಿ. ಪೂ. ೮ನೆಯ ಶತಮಾನದಿಂದ ಈಚೆಗೆ ಬ್ಯಾಬಿಲೋನಿಯರ ಮುಖಾಂತರ ಪಡೆದ ಬಳುವಳಿ (Durant, **op. cit.**, **etiam** Rahner 1975: 144-5; Luke 1977:332-54; 1978:579-80). ಮಖಾಬಿ ಸಹೋದರರು (2M 7.9,11,14; 12.44) ಮತ್ತು ದಾನಿಯೇಲ (12.2) ಈ ವಿಷಯದಲ್ಲಿ ಪಾಲೆಸ್ತೀನ್ ದೇಶದ ಯೆಹೂದಿಗಳ ಪ್ರತಿನಿಧಿಗಳೆನ್ನಬಹುದು. ಸಾದ್ದೂಸಿಯರು (Saducees) ಹಾಗೂ ಗ್ರೀಕ್ ಯೆಹೂದಿಗಳು ಪುನರುತ್ಥಾನವನ್ನು ಸಂಪೂರ್ಣವಾಗಿ ಅಲ್ಲಗಳೆಯುತ್ತಾರೆ (Mk 12.18; Ac 4.1, 23.6-8). ಆದರೆ ಯೇಸುವಿನ ಬೋಧನೆಯಲ್ಲಿ ಮಾತ್ರ ಪುನರುತ್ಥಾನಕ್ಕೆ ಅಗ್ರ ಸ್ಥಾನವಿದೆ (Mk 12.16-27; Mt 22.23-33; Lk 20.27—38, 23.43). ಯೇಸುವಿನ ಶಿಷ್ಯಂದಿರು ಪುನರುತ್ಥಾನಗೊಂಡ ಯೇಸುವಿನ ಬಗೆಗೆ ಬಹಿರಂಗವಾಗಿ ಯಾವ ಮುಲಾಜೂ ಇಲ್ಲದೆ ಮಾತನಾಡುತ್ತಿದ್ದರು. (Ac 3.15, 26.23; Ac 15). ಅಷ್ಟೇ ಅಲ್ಲದೆ ಯೇಸುವಿನಲ್ಲಿ ಜೀವಿಸುವ ವ್ಯಕ್ತಿಗಳೂ ಪುನರುತ್ಥಾನರಾಗುತ್ತಾರೆಂದು ಅವರು ಸಾರಿದ್ದಾರೆ (Jn 6.39, 43, 11.25; Ac 24.15; 2C 5.3; Ph 3.21 Heb 6.2; Rv 1.7, 20.4-6, 11-19). ಯೇಸುಭಕ್ತರಿಗೆ ಯೇಸುವಿನ ಮರಣದ ನಂತರ ಆತ ಹೆಚ್ಚುಚ್ಚು ಜೀವಂತನಾಗಿ ಕಂಡದ್ದು (Mk 16.1—20: Mt 28.1—20;

Lk 24.1—53, Jn 20.1—29; Ac 1.3—14; Cunningham, 127) ಪ್ರಸ್ತುತ ಪುರಾಣಕ್ಕೆ ಮೂಲ ಕಾರಣ.

ಅರ್ಥನಿರೂಪಣೆ : ಮಾನವನ ಹಾಗೂ ಆತನ ಮೂಲಕ ಸೃಷ್ಟಿಯಲ್ಲಿ ಆಗ ಬೇಕಾದ ಆಮೂಲಾಗ್ರ ರೂಪಾಂತರ (Radical transformation) ಅರ್ಥಾತ್ ದೈವೀಕರಣ (Spiritualization)ವೇ ಪುನರುತ್ಥಾನದ ಆಶಯಂದ ಸಾಂಕೇತಿಕಾರ್ಥ (Ph 3.21). ದಿನನಿತ್ಯವೂ ಸಾಧಕನು ತನ್ನ ಅಹಂಭಾವಕ್ಕೆ ಸತ್ತು ಈ ಸಮಗ್ರ ಪರಿವರ್ತನೆಗೋಸ್ಕರ ಪ್ರಯತ್ನಿಸಿದಾಗ ಅದು ಆತನಿಗೆ ಮರಣಾನಂತರ ಶಾಶ್ವತ ರೂಪದಲ್ಲಿ ಪ್ರಾಪ್ತವಾಗುತ್ತದೆ (Rahner 1975:1450). ಅಹಂಕೇಂದ್ರೀಯ ಜೀವನಕ್ಕೆ ಸಾಯುವುದೇ ಪುನರುತ್ಥಾನದ ಹಾದಿಯೇ ವಿನಹ ಸತ್ತವನ ಹೆಣಕ್ಕೆ ಜೀವ ತುಂಬಿಸುವುದು ಎಂದು ಪುನರುತ್ಥಾನದ ಅರ್ಥವಲ್ಲ (Gn 3.19); ಅಥವಾ ಸಾವಿ ನಾಚೆ ಐಹಿಕ ಭೌತಿಕ ಜೀವನ (Biological life)ವೊಂದಿದೆ ಎಂದೂ ಅಲ್ಲ (1Co 15.50; Rahner 1975: 1431 ಮತ್ತು 1439). ವ್ಯಷ್ಟಿ ಹಾಗೂ ಸಮಷ್ಟಿ ಪ್ರಜ್ಞೆ ತನ್ನ ಸ್ಥಲಸ್ವರೂಪಿ ಅಂತಃಸ್ಥರದೊಡನೆ ಸಮಗ್ರವಾಗಿ ಸಾಮರಸ್ಯವನ್ನು ಹೊಂದುವುದೇ ಪುನರುತ್ಥಾನ (1 Co 15.28).

ಅಂತಿಮ ತೀರ್ಪು (Last Judgement) : ಪ್ರತಿಯೊಬ್ಬರೂ ಸತ್ತ ಬಳಿಕ ತನ್ನ ಜೀವನದ ಲೆಕ್ಕಾಚಾರ ಕೊಡಲಿಕ್ಕಿದೆ (Si 3.17). ಈ ವ್ಯಷ್ಟಿರೂಪದ ತೀರ್ಪಲ್ಲದೆ ವಿಶ್ವದ ಇತಿಹಾಸದ ಕೊನೆಯಲ್ಲಿ ಸಮಷ್ಟಿ ರೂಪದ ಅಂತಿಮ ತೀರ್ಪೊಂದನ್ನು ಸೃಷ್ಟಿಯ ಕರ್ತಾರನು ಕೊಡುತ್ತಾನೆ.೩ ಈ ಶಿಕ್ಷಾರ್ಹ ದಿನ (Jb 34c; Ps 75d; Cf.Am 5.18+)ವನ್ನು ಕಣ್ಣುಕುಕ್ಕುವಂತೆ ಬೈಬಲಿನಲ್ಲಿ ವರ್ಣಿಸಲಾಗಿದೆ (Ex 13.21+; 19.16+; Am 8.9+). ಅಂತಿಮ ತೀರ್ಪಿನ ಕಾಲ ಒಂದು ಪರಮ ರಹಸ್ಯ (Mk 13.32; Mt 24.36; Ac 1.7)ವಾದರೂ ಯ್ಹಾವ್ಹೆಯ ಈ ಭಯಂಕರಳ ಹಾಗೂ ಉಗ್ರ (Ln 2.22: Ezk 22.24; Zp 1.15) ದಿನದ ಮುನ್ಸೂಚನೆಯಾಗಿ ಮಿಡತೆಗಳ ಪೀಡೆ (Plague of locusts) ಉದ್ಭವಿಸುತ್ತದೆ.

ಕಾಲ ಪ್ರಾಪ್ತವಾದಾಗ ಅಂತಿಮ ತೀರ್ಪಿನ ದಿನವನ್ನು ಸಾರಲಾಗುವುದು (Cf Jl 1.15; 2.1-2, 10). ಈ ಕೊನೆಯ ದಿನ ಕಹಳೆಯನ್ನು ಊದಿ ಶಿಷ್ಟರೆಲ್ಲರನ್ನೂ ಒಂದು ಕಡೆ ಕೂಡಿಸುವರು (IS 11.12, 27.13, 19: Jr 29.14: Ezk 20.34, 41; 1 Co 15.52, 1 Th 4.16—17). ಆಗ ಪವಿತ್ರಾತ್ಮನು ತನ್ನ ದಿವ್ಯ ಅನುಗ್ರಹದಿಂದ ಎಲ್ಲರನ್ನೂ ಬೆಳಗಿಸುವನು (Ez 36.27+). ದೇವರ ಸಿಂಹಾಸನವೂ ಸಮಸ್ತ ಲೋಕಗಳೂ ಆಗ ಕಾಣುವುವು (Rv 4a). ಇಸ್ರೇಲರನ್ನು ಶೋಷಣೆ

ಗೊಳಪಡಿಸಿದ ರಾಷ್ಟ್ರಗಳನ್ನು ದೇವರು ಶಿಕ್ಷಿಸುವನು.೫ ಇಸ್ರೇಲ್ ಜನಾಂಗ ವಿಜಯಿಯಾಗುವುದು (Is 11.11, 12.1, 30.26; Jl 3.4, 4.1; Am 9.11; Ob 5.17).

ಸತ್ತವರು ಮತ್ತೆ ಏಳುವರು (1 Co 5.12—23, 51 f; 1 Th 4.13—18). ಸಮಸ್ತ ಮಾನವಕೋಟಿಯ ವಿಚಾರಣೆ ದೇವರ (Rm 14.10)/ಕ್ರಿಸ್ತನ (Mt 25.31 f; 2 Co 5.10; Rm 2.6 + ; Jm 5.8—9) ನ್ಯಾಯಪೀಠದ ಎದುರಿಗೆ ನಡೆಯುವುದು. ಸತ್ತಿರುವ ಹಾಗೂ ಬದುಕಿರುವ ಎಲ್ಲರ ವಿಚಾರಣೆಯನ್ನು ಆತ ಮಾಡುವನು (Ac 10.42; 2 Tm 4.1; 1 P 4.5). ಆತ ವಿಚಾರಣೆಯಲ್ಲಿ ಜನರ ಅಂತಃಕರಣ ವನ್ನು ನೋಡುತ್ತಾನೆ (1 Co 4.5; Rv 2.23)ಯಲ್ಲದೆ ಎಲ್ಲರನ್ನೂ ಕರ್ಮಕ್ಕನು ಗುಣವಾಗಿ, ತಾರತಮ್ಯವಿಲ್ಲದೆ ಗಮನಿಸುತ್ತಾನೆ (Mt 16.27; 1 Co 3.8; 2 Co 5.10, 11.15; Ep 6.8; 1 P 1.17; Rv 2.23; 20.12, 22.12. ಭಾರತೀಯ ಕರ್ಮಸಿದ್ಧಾಂತವನ್ನು ಇಲ್ಲಿ ನೆನಪಿಸಬಹುದು.) ಸದ್ಗುಣಿಗಳಿಗೆ ಸ್ವಾತಂತ್ರ್ಯ (Rm 8.23; Ep 4.30), ಸ್ವಾಸ್ಥ್ಯ (Ac 3.20; 1 Th 1—7; Heb 4.5—11) ಪ್ರತಿಫಲ (Mt 5.12; Rv 11.18), ಮುಕ್ತಿ (1 P 1.5, ಗೌರವ (1 P 5.6), ಪ್ರಶಂಸೆ (1 Co 4.5) ಮತ್ತು ಮಹಿಮೆ (Mt 13.43; 1 Co 15.43; Rm 8.18 f; Col 3.4)ಗಳೆಲ್ಲವೂ ಪ್ರಾಪ್ತವಾಗುವುವು. ಪಾಪಿಗಳು ನಾಶವಾಗುವರು (Jb 21.30; Pr 11.4; Is 13.6 - 9; Jr 46.10; Ezk 7.7—19; Mt 3.19—23; 2 P 2೮; Jn 5.24, 29, 12.48; 2 P 3.7). ಸೊಕ್ಕಿನವರನ್ನು ತಗ್ಗಿಸುವರು (Is 2.12—15; 40 e). ದೇವರು ದುಷ್ಟ ಶಕ್ತಿ (1 Co 15.24—26; 2 Th 2.8) ಹಾಗೂ ವ್ಯಕ್ತಿಗಳನ್ನು (Mt 13.41; 2 Th 1.7—10; Mt 5.6; 2 P 3.7 Rv 11.18) ಉಗ್ರವಾಗಿ ಧ್ವಂಸ ಮಾಡುವರು. ಜಗತ್ತಿನ ಜನರೆಲ್ಲರ ಎದುರಿನಲ್ಲಿಯೇ ಈ ತೀರ್ಪು ನಡೆಯುವುದು (Is 26.20—27, 33.10—16; Zp 1.7—18; Mt 24.1 + ; Rv 20.11—15).

ಯ್ಯಾಹ್ವೆಯ ಈ ದಿನದಲ್ಲಿ ವಿಶ್ವದಾದ್ಯಂತ ಭೂಕಂಪ (Is 2.10; Jr 4.24; Am 8.8). ಸೂರ್ಯಗ್ರಹಣ (Jr 4.23; Am 8.9; Mt 27 w) ಪ್ರಳಯ ಮೊದಲಾದ ಅನಾಹುತಗಳುಂ ಸಂಭವಿಸುವುವು.

ಹೊಸ ಒಡಂಬಡಿಕೆಯಲ್ಲಿ ಈ ನಿಷ್ಠುರ ನ್ಯಾಯಾಧೀಶನ ಕುರಿತು ಹೆಚ್ಚಿನ ವಿವರಗಳು ಇಲ್ಲ.೭ ಜನಪರ ಪ್ರೀತಿಯೇ ಈ ವಿಚಾರಣೆಯಲ್ಲಿ ಮಾನದಂಡ. ಪ್ರಸ್ತುತ ವಿಚಾರಣೆ ಅನಿವಾರ್ಯ (Rm 2.3, 13.12; Ga 5.10; 1 Th 5.3, 5, 8; Heb 10.25; Jm 5.8; 1 P 4.7) ಹಾಗೂ ನಿಷ್ಪಕ್ಷಪಾತ ಸ್ವರೂಪದ್ದು (Col 3.25;

Cf 1: P 1.17). ಅದು ಜರಗುವ ಕಾಲ ಅನಿರೀಕ್ಷಿತ (1 Th 5.14 Cf. Mk 13.32; Mt 24.36; Ac 1.7). ಈ ಕಾರಣದಿಂದಾಗಿ ಸರ್ವರೂ ಸದಾ ಸಿದ್ಧರಾಗಿರಬೇಕು (2 Co 6.24). ಅದು ಕಳ್ಳನಂತೆ ಗುಪ್ತವಾಗಿ ಬರುತ್ತದೆ (Mt 24.43 p). ಆದುದರಿಂದ ಸದಾ ಎಚ್ಚರದಿಂದಿರಬೇಕು.[೯] ಆ ದಿನ ಅತಿ ಶೀಘ್ರವಾಗಿ ಬಂದುಬಿಡುವುದು (2 Co 6.24). ಕಷ್ಟಕಾರ್ಪಣ್ಯಗಳಿಂದ ಕೂಡಿದ (Ep 5.16, 6.13) ವರ್ತಮಾನವೆಂಬ ಈ ಯಾತ್ರಾಕಾಲ ಬಹು ಅಲ್ಪಕಾಲದ್ದು (1 Co 7.26, 31; 1 P 1.17 Cf Rv 10.16; 12.12, 20.3). ಕಾರಣ, ಜಗತ್ತಿನ ಅಂತ್ಯಕಾಲ ಇಷ್ಟರಲ್ಲಿಯೇ ಬರಲಿದೆ (1 Co 16.22; Ph 4.5; Jm 5.8; 1 P 4.7; Cf Rv .3 +). ಇಗೋ ಇದು ಸಮೀಪಿಸುತ್ತಿದೆ.[೧೦] ಈಗಾಗಲೇ ಅಂತ್ಯಕಾಲ ಆರಂಭಗೊಂಡಿದೆ (Rm 3.26 +). ನಾವು ಸಧ್ಯ ಈ ಕರಾಳ ಯುಗದಲ್ಲಿಯೇ ಜೀವಿಸುತ್ತಿದ್ದೇವೆ (Mt 26·41; Cf 1 Co 7.26; Ep 5.6; 6.13; Jm 5.3; 1 Jn 2.18, 4.13; 2 Jn 7).

ಅರ್ಥನಿರೂಪಣೆ : ಸಾವಿನಾಚೆ ಅನಂತತೆ ಇರುವುದಾದರೆ ಅಂತಿಮ ತೀರ್ಪು ಎಂಬುದಕ್ಕೆ ವಾಚ್ಯಾರ್ಥಕ್ಕಿಂತ ಭಿನ್ನವಾದ ಲಕ್ಷಣಾರ್ಥವಿರಲೇಬೇಕು. ಎಲ್ಲಾ ಕಾಲದ ಎಲ್ಲಾ ವ್ಯಕ್ತಿಗಳೂ ತೀರ್ಪಿಗೆ ಗುರಿಯಾಗಬೇಕು ಎಂಬುದೇ ಆ ಲಕ್ಷಣಾರ್ಥ (Ryan 74—75; **ST.** I, lxiv, 4).

ಸ್ವರ್ಗ ;

ಸ್ವರ್ಗ (Heaven)ವೆಂಬುದು ಯಥಾರ್ಥ ದೇವಸ್ಥಾನ (Ws 9e; Ps 11.4, 18.6; Mt 6.9; Rv 3.12). ಅದು ದೇವಪುತ್ರನ ವಾಸಸ್ಥಾನ (Jn 6.82; Heb 8.1—5, 9.11 f; Ep 1 b); ದೇವದೂತರ (Angels)[೧೧] ಹಾಗೂ ಸಂತಭಕ್ತರ (Saints) ಬೀಡು (Mt 5.12). 'ಇಲ್ಲಿ' ನಮ್ಮ ಸಂಪತ್ತನ್ನೂ ನಮ್ಮನ್ನೂ ಹಂಚಿಕೊಂಡು ಬಾಳಿದರೆ 'ಅಲ್ಲಿ' ನಾವು ನಾಶವಿಲ್ಲದ 'ಆಸ್ತಿ'ಯನ್ನು ಪಡೆದುಕೊಳ್ಳುತ್ತೇವೆ. ಅದನ್ನು ಯಾರೂ ದೋಚಿಕೊಳ್ಳಲಾರರು (Mt 22.30).

ಸ್ವರ್ಗದಲ್ಲಿ ದಾಂಪತ್ಯ ಜೀವನವಿಲ್ಲ (Mt 22.30). ಭೂಲೋಕದಲ್ಲಿ ಯೇಸುವಿಗೆ ಅಧಿಕಾರವಿರುವಂತೆ ಸ್ವರ್ಗಲೋಕದಲ್ಲಿಯೂ ಅಧಿಕಾರವಿದೆ (Mt 28.18). ಶಿಷ್ಯರಿಗೆ ಅಲ್ಲಿ ಸದಾ ದೇವಾನುಗ್ರಹಗಳು ಪ್ರಾಪ್ತವಾಗುತ್ತವೆ (Ep 1 p). ಭೂಲೋಕದಲ್ಲಿ ಪಾಪಿಯಾದವನು ದುರ್ಮಾರ್ಗವನ್ನು ತೊರೆದು ಸನ್ಮಾರ್ಗದಲ್ಲಿ ನಡೆಯಲು ಸಂಕಲ್ಪಿಸಿದರೆ, ತನ್ನ ಜೀವನದಲ್ಲಿ ಪರಿವರ್ತನೆ ಹೊಂದಿದರೆ, ಸಮಸ್ತ ಪರಲೋಕವು ಆನಂದದಿಂದ ತುಂಬಿ ತುಳುಕಾಡುತ್ತದೆ.

ಅರ್ಥನಿರೂಪಣೆ : ಸ್ವರ್ಗವೆಂಬುದು ಪ್ರದೇಶ / ಸ್ಥಳ (place) ಅಲ್ಲ;

ಅದೊಂದು ಅಸ್ತಿತ್ವದ ಸ್ಥಿತಿ (State of being). ವ್ಯಕ್ತಿ ತನ್ನ ಸ್ಥಲದೊಡನೆ ಸಾಮರಸ್ಯಭಾವದಿಂದ, ತಾದಾತ್ಮ್ಯ ಭಾವದಿಂದ ಕೇಂದ್ರೀಕೃತನಾಗಿರುವುದೇ ಸ್ವರ್ಗಾನುಭವ (Heavenly bliss/Unitive experience). ಈ ಐಕ್ಯ ಸ್ಥಲದಲ್ಲಿ ವ್ಯಕ್ತ ಅವ್ಯಕ್ತಗಳಲ್ಲಿ ಭಿನ್ನತೆ (Distinction) ಇದ್ದರೂ ದ್ವೈತಭಾವ (Separativeness) ವಿಲ್ಲ. ಪ್ರಜ್ಞಾ ಪಾತಳಿಯಲ್ಲಿ ವ್ಯಕ್ತ ಅವ್ಯಕ್ತಗಳೆರಡೂ ಸಮರಸವಾಗಿ ಒಂದಾಗಿರುವುದೇ ಅಲೌಕಿಕ ಪಾರಮಾರ್ಥಿಕ ಜೀವನ-ಶೈಲಿ. ಆದ್ದರಿಂದ ಸ್ವರ್ಗವೆಂಬುದು ಇಲ್ಲಿ ಮತ್ತು ಈಗ (Mt 6.10) ನಡೆಯಬೇಕಾದ ಅಸ್ತಿತ್ವದ ಸ್ಥಿತ್ಯಂತರ (Transformation of)ವೇ ಹೊರತು ಅದರ ಸ್ಥಳಾಂತರ ((Transfer to) ಅಲ್ಲ.

ಜೀವಾತ್ಮರು ಪರಮಾತ್ಮನಲ್ಲಿ ಸಾಮರಸ್ಯಭಾವದಿಂದ
ಇದ್ದಾಗ ಪರಮಾತ್ಮನೇ ಅವರ ಅಸ್ತಿತ್ವನಾಗಿ ಉಳಿಯುತ್ತಾನೆ
—Eckhart I.330

ಎಂಬ ಅಮೂರ್ತ ಅನುಭಾವವನ್ನು ಅಭಿವ್ಯಕ್ತಗೊಳಿಸುವ ಪ್ರತೀಕವೇ ಸ್ವರ್ಗ.

ನರಕ :

ನರಕ (Hell) ಎಂಬುದು ದುಷ್ಟರನ್ನು ಶಿಕ್ಷೆಗೊಳಪಡಿಸುವ ಸ್ಥಳ (Mt 13.42, 50; 15.22, 29, 18.9, 18d, 22.13 etc.; Rv 14 k, 19.20, 20.10, 21.8). ಅಲ್ಲಿ ಶಾಶ್ವತವಾಗಿ ಉರಿಯುವ ಬೆಂಕಿರಾಶಿ ಇದೆ (Mt 5.22, 13.42, 50, 18.9 etc.) ಆದರೂ, ಅಲ್ಲಿ ಪತ್ತೆತ್ತಲೂ ಕಾರ್ಗತ್ತಲು, ಎಂದೆಂದಿಗೂ ರೋದನ ಹಾಗೂ ಹಲ್ಲು ಕಡಿಯುವಿಕೆ. (Mt 8.12, 22.13, 25.30 ಇ., Rv 14.10, 20.10, 21.8). ನರಕವೆಂಬುದು ಕೊನೆಯಿಲ್ಲದ ಅಪಾರ ನಾಶ ಹಾಗೂ ನಷ್ಟಗಳ ಆಗರ (Rm 9.22; 2 Th 1.9; 2 Th 1.9, 2.10 ಇ., Ph 3.19 Cf, **etiam D 16,** 40, 211. 410, 429, 531, 693, 717, 835 ಮತ್ತು 840).

ಅರ್ಥನಿರೂಪಣೆ : ವ್ಯಕ್ತಿ ಪ್ರಜ್ಞಾಪೂರ್ವಕವಾಗಿ ತನ್ನ ಸ್ಥಲಪ್ರಾಯವಾಗಿರುವ ಮಹಾಶಕ್ತಿಯನ್ನು/ದೈವೀ-ಇರವನ್ನು (**Presentia Dei**) ಅಲ್ಲಗಳೆದಾಗ ಆತನಲ್ಲುಂಟಾಗುವ ಪ್ರಜ್ಞಾಸ್ಥಿತಿಯೇ ನರಕ. ಅರ್ಥವಿಲ್ಲದ ಬರಡು ಜೀವನದಿಂದಾಗಿ ತನ್ನ ಅಂತಃಸ್ಸತ್ವದೊಡನೆ ಸಂಬಂಧ ಕಡಿದುಕೊಂಡ ವ್ಯಕ್ತಿ ಒಸರಿಲ್ಲದ ಬಾವಿಯಂತೆ, ಅಡಿಪಾಯವಿಲ್ಲದ ಮಹಾಮನೆಯಂತೆ ಸದಾ ತತ್ತರಿಸುವಸ್ಥಿತಿಯಲ್ಲಿರುತ್ತಾನೆ. ಇದೇ ಆತನಿಗೆ ನರಕ.

ಸಮಾರೋಪ :

ಕ್ರೈಸ್ತ ಧರ್ಮದಲ್ಲಿಯ ಪುರಾಣಗಳನ್ನು ಪ್ರಮುಖವಾಗಿ ಸೃಷ್ಟಿ ಪುರಾಣ ಮತ್ತು ಲಯ ಪುರಾಣಗಳೆಂದು ವಿಂಗಡಿಸಬಹುದು. ಇವುಗಳ ನಿರೂಪಣೆ ಬೈಬಲನಾದ್ಯಂತ

ನಾವು ಗಮನಿಸುತ್ತೇವೆ. ಈ ಪುರಾಣಗಳ ಉದ್ದೇಶ ಸೃಷ್ಟಿಯ ಹುಟ್ಟು ಲಯ ಗಳನ್ನು ವೈಜ್ಞಾನಿಕವಾಗಿ ಐತಿಹಾಸಿಕ ಆಧಾರಗಳ ಮೇಲೆ ವಿವರಿಸುವುದಲ್ಲ. ಕಾರಣ, ಸೃಷ್ಟಿ ಮತ್ತು ಲಯ ಪುರಾಣಗಳು ವೈಜ್ಞಾನಿಕ ಘಟನೆಗಳೂ ಅಲ್ಲ, ಐತಿಹಾಸಿಕ ವೃತ್ತಾಂತವೂ ಅಲ್ಲ. ವಿಶ್ವದ ಸೃಷ್ಟಿ ಹಾಗೂ ಲಯಕ್ಕೆ ಮೂಲ ಕಾರಣ ಏನು ?— ಎಂಬ ಸದಾ ಮಾನವನನ್ನು ಕಾಡಿದ ಪ್ರಶ್ನೆಗೆ ಸಮಕಾಲೀನ ಸಂಸ್ಕೃತಿಯಲ್ಲಿ ದೊರಕಿದ ಪ್ರತೀಕ (Symbol)ಗಳ ಮೂಲಕ ಉತ್ತರವನ್ನು ಕೊಡುವುದೇ ಈ ಪುರಾಣಗಳ ಧ್ಯೇಯ. ಆದ್ದರಿಂದ ಪುರಾಣವೆಂಬುದು ವಿಚಾರಗಳನ್ನು ಅಭಿವ್ಯಕ್ತಪಡಿಸುವ ಒಂದು ತಂತ್ರ (Technique). ಅಮೂರ್ತ ಅನುಭವ ಅನುಭಾವಗಳನ್ನು ಮೂರ್ತೀಕರಿಸಲು ಪುರಾಣ–ತಂತ್ರ ಅನಿವಾರ್ಯವೂ ಹೌದು.

ಮಾನವ ತನ್ನ ಬಾಲ್ಯಾವಸ್ಥೆಯಿಂದ ಪ್ರೌಢಾವಸ್ಥೆಗೆ ಬಂದಾಗ ಪುರಾಣವೇ ಇತಿಹಾಸವಲ್ಲ—Myth is not History— ಎಂಬುದನ್ನು ಮನಗಾಣಬೇಕು. ಇದು ಧಾರ್ಮಿಕ ಸಂದರ್ಭದಲ್ಲಿ ಬಹು ಮುಖ್ಯ. ಈ ಮನೋಸ್ಥಿತಿ ಇಲ್ಲದೆ ಹೋದರೆ ಧಾರ್ಮಿಕ ಶೋಷಣೆಗೆ ವ್ಯಕ್ತಿ ಹಾಗೂ ಆತನ ಸಮಾಜ ಬಲಿಪಶುವಾಗಿ ತನ್ನ ವ್ಯಕ್ತಿತ್ವ ವನ್ನು ರೂಪಾಂತರಿಸುವ ಬದಲಾಗಿ ಅದನ್ನು ಆತ ಕಳೆದುಕೊಳ್ಳಬೇಕಾಗುತ್ತದೆ.

ಪುರಾಣಗಳ ಗರ್ಭದಲ್ಲಿರುವ ಸತ್ಯವನ್ನು ಕಂಡುಹಿಡಿಯದ ಮುಗ್ಧ ಜನರಿಗೆ ಪುರಾಣವೇ ಇತಿಹಾಸವೆಂದು ನಂಬುವಂತೆ ಮಾಡಿ, ಅವರಲ್ಲಿ ಸಾವಿನಾಚೆಯ ಬದುಕಿನ ಬಗೆಗೆ ಭಯ ಭೀತಿಯನ್ನುಂಟುಮಾಡಿ, ಅದಕ್ಕೆ ಸೂಕ್ತ ಪರಿಹಾರಗಳನ್ನು ಸೂಚಿಸಿ ತಮ್ಮ ಹೊಟ್ಟೆ ತುಂಬಿಸುವ ಆಸಕ್ತರ ಬಗೆಗೆ ಎಚ್ಚರಿಕೆಯಿಂದಿರಬೇಕು ಎಂದು ಡುರಾಂಟನು (ಪು. ೧೨೯, ೨೪೦, ೩೭೦ ಇತ್ಯಾದಿ) ಜಾಗೃತಗೊಳಿಸುತ್ತಾನೆ, ಇಂದಿನ ವೈಜ್ಞಾನಿಕ ಯುಗದಲ್ಲಿ ಜಾನಪದ ವಿಜ್ಞಾನದಂತಹ ಶಿಸ್ತು ಡುರಾಂಟನ ಈ ಎಚ್ಚರಿಕೆಯನ್ನು ಜನಜಾಗೃತಿಯನ್ನಾಗಿ ಮಾಡುವಲ್ಲಿ, ಅಂತೆಯೇ ಪುರಾಣಗಳನ್ನು ವೈಜ್ಞಾನಿಕ ರೀತಿಯಲ್ಲಿ ವಿಶ್ಲೇಷಿಸಿ ಅರ್ಥೈಸುವಲ್ಲಿ ಹಾಗೂ ಅವುಗಳ ಫಲಪ್ರಯೋಜನ ಗಳನ್ನು ನಿರೂಪಿಸುವಲ್ಲಿ ಒಲವನ್ನು ತೋರಿಸುತ್ತದೆ. ಯಂತ್ರಸದೃಶ ವಿಧೇಯತೆ (Reflexive submission)ಗೆ ತಿಲಾಂಜಲಿಯನ್ನಿತ್ತು ವಿವೇಕಶೀಲ ಸ್ವಾತಂತ್ರ್ಯ (Reflective freedom)ವನ್ನು ಮಾನ್ಯ ಮಾಡುವ ಇಂದಿನ ಕಾಲ ಸಂದರ್ಭದಲ್ಲಿ ಪುರಾಣಗಳನ್ನು ಯಥಾವತ್ತಾಗಿ ಸ್ವೀಕರಿಸುವುದು ಅಸಾಧ್ಯ. ಅವುಗಳ ಅರ್ಥನಿರೂ ಪಣೆ (semantics) ಅತ್ಯಗತ್ಯ. ಧರ್ಮಗಳು ತಮ್ಮ ಅನುಯಾಯಿಗಳ ಕಾಲದ ಚಿಹ್ನೆಗಳನ್ನು (Signs of the times) ಗಮನಿಸಿ ಆಯಾಯ ಕಾಲದ ಪರಿಭಾಷೆ ಒಂದು ಸಮಾಜದ ಮೂಲಭೂತ ಸತ್ಯಗಳನ್ನು ತಿಳಿಸಬೇಕೇ ಹೊರತು ಓಬಿರಾಯನ ಕಾಲದ ರೀತಿಯಲ್ಲಿ, ಭಾಷೆಯಲ್ಲಿ, ಅಲ್ಲ (Moran, 123). ಈ ದೃಷ್ಟಿಯಿಂದ

ಕ್ರೈಸ್ತ ಧರ್ಮದಲ್ಲಿಯು ಪುರಾಣದ ಅಧ್ಯಯನ ಇಲ್ಲಿ ಮಾಡಲಾಗಿದೆ ಎಂಬುದನ್ನು ಪ್ರಸ್ತುತದಲ್ಲಿ ಗಮನಿಸಬೇಕು.

ಅಡಿಟಿಪ್ಪಣಿಗಳು

1. Cf. The Constitution on Divine Revelation art. 11-12; **etiam** K. Rahner, "Inspiration in the Bible". *Inquiries* (New York: Herder and Herder 1964) pp. 7-86.

2. Cf. Gn 2.7, 1 Co 15.45 *adamah* (Hb.) > *ben adam* > Adam

3. Ex 3.16+: Ws.3d; Is 2a. It is also known as 'Day of Yahveh' : Ezk 7e; Am 5.18+. 'Great Day': Rv 4a, 11.24, 12.48; 1Co 1.8+; Rm 2.6. 'The Day of Visitation': 1P 2.12. 'Last Judgement': Mt 7e; Rm 2.6+. 'Day of the Lord': 1Co 1.8+; 5.5; 2Co 1.14; 1 Th 5.2; 2 Th 2.2; Cf. 2P 3.4, 9-10, 12-13. 'Day' 1 Co 3.13; 1 Th 5.4; Heb 10.25. 'That Day': 2 Th 1.10; 2 Tm 1.12, 18, 4.8; Cf. Mt 7.22, 24.36; Lk 10.12, 21.34; Heb 10.25, 27. 'The Day of the Son of Man': Lk 17.24. 'The Day of Judge ment': Mt 10.15; 11.22,24, 12.36; 2 P 2.4, 9, 4.7, 1 Jr 4.17.

4. Gn 2.1-2, 11; Ex 15.3; 2 S 5.24; Ps 18.7-14; Is 2.6-22; Jr 30.5-7; Jl 1.15-20; 2.1-11; Am 2.16; 5.18-20; 8.9-10, 13, 2P 1.4-18.

5. Is 13.6, 9, 19.16, 34.8, 63.4; Jr 46.10-21, 47.4, 50.27, 51.2; Lm 1.21; Ezk 30.2; Je 4a; Am 5.18+; Ob 15.21.

6. Is 13.10, 13, 34.4; Ezk 32.7, 8; Je 2.10, 11, 3.3,4,4.15,16; Hab 3.6; Zp 1.15; Mt 19.28, 24.29; Rm 8.20-22; 2 Th 2.3-12; Rv 20.11, 20.1.

7. Christ is Judge: Mt 25.31f, 26.34; 2Co 5.10; Rm 2.6+; Jm 5.8-9; See in contrast Mk 8.38; Mt 10.32, 33 where Christ is only a witness of the Judgement ! God judges (:Mt 7.1 p; 1Co 4.5 Rm 12.19, 14.10) through Christ (Jn 5.22; Ac 17.31; 2 Tm 4.1). Hence that day is also called as the day of Christ: 1P 1.6, 10, 2.16.

8. Mk 9.42, Mt 5.21-48, 12.11-12; 15.18-20, 18.10-35, 19.17-22, 22.39-40, 23.23; Lk 10.16; Jn 13.20.

9. Cf. Mk 13.33; Mt 24.43p, 50, 25-13 Cf. Rm 13.11; 1Co 16.13; Col 4.2; 1 Th 5.6; 1P 1.13, 5.8; Rv 3.2f, 16.15.

10. Rm 13.11; 2 Co 6.2; Heb 10.25. St. Paul was expecting that he would live to see the Last Day (Cf. 1 Co 15.51; 1 Th 4.15-17). Later he realized that he might die before it (2 Co 5.3; Ph 1.23). Hence he warned his people about its non-imminence (2 Th 2.1+).

11. Gn 28.12, 17; Ex 20.22; Jos 2.11; 1 K 8.27; Is 66.1; Mt 3.16, 18.10, 28.2; Lk 2.15, 10.18, 23.43; Jn 11.5.

ಉಲ್ಲೇಖಿಸಿದ ಬೈಬಲ್ ಗ್ರಂಥಗಳು
(ಅಕಾರಾದಿ ಸೂಚಿ)

Ac	Acts	ಅಪೋಸ್ತಲರ ಕೃತ್ಯಗಳು
Am	Amos	ಅವೋಸನು
1 Co	1 Corinthians	೧ ಕೊರಿಂಥದವರಿಗೆ
2 Co	2 Corinthians	2 ಕೊರಿಂಥದವರಿಗೆ
Col	Colossians	ಕೊಲೊಸ್ಸೆಯವರಿಗೆ
Dn	Daniel	ದಾನಿಯೇಲನು
Dt.	Deuteronomy	ಧರ್ಮೋಪದೇಶ ಕಾಂಡ
Ep	Ephesians	ಎಫೆಸದವರಿಗೆ
Ex	Exodus	ವಿಮೋಚನಾ ಕಾಂಡ
Ezk	Ezekiel	ಯೆಹೆಜ್ಕೇಲನು
Ga	Galatians	ಗಲಾತ್ಯದವರಿಗೆ
Gn	Genesis	ಆದಿಕಾಂಡ
Hab	Habacuc	ಹಬಕ್ಕೂಕನು
Heb	Hebrews	ಇಬ್ರಿಯರಿಗೆ
Is	Isaiah	ಯೆಶಾಯನು
Jb	Job	ಯೋಬನು
Jl	Joel	ಯೋವೇಲನು
Jm	James	ಯಾಕೋಬನು
Jn	John	ಯೋಹಾನ
1 Jn	1 John	೧ ಯೋಹಾನನು

2 Jn	2 John	೨ ಯೋಹಾನನು
Jos	Joshua	ಯೆಹೋಶುವನು
Jr	Jeremiah	ಯೆರೆಮಿಾಯನು
1 K	1 Kings	೧ ಅರಸುಗಳು
2 K	2 Kings	೨ ಅರಸುಗಳು
Lk	Luke	ಲೂಕನು
Lm	Lamentations	ಪ್ರಲಾಪಗಳು
Lv	Leviticus	ಯಾಜಕ ಕಾಂಡ
1 M	1 Machabees	೧ ಮೆಖಾಬಿ
2 M	2 Machabees	೨ ಮೆಖಾಬಿ
Mk	Mark	ಮಾರ್ಕನು
Mt.	Mathew	ಮತ್ತಾಯನು
Nb	Numbers	ಅರಣ್ಯಕಾಂಡ
Ob	Obadiah	ಒಬದ್ಯನು
1 P	1 Peter	೧ ಪೇತ್ರನು
2 P	2 Peter	೨ ಪೇತ್ರನು
Ph	Philippians	ಫಿಲಿಪ್ಪಿಯವರಿಗೆ
Pr	Proverbs	ಸುಭಾಷಿತಕಾಂಡ
Ps	Psalms	ಕೀರ್ತನೆಗಳು
Qo	Qoholeth (Ecclesiastes)	ಪ್ರಸಂಗಿ
Rm	Romans	ರೋಮಾಪುರದವರಿಗೆ
Rv	Revelation	ಪ್ರಕಟನೆ
1 S	1 Samuel	೧ ಸಮುವೇಲನು
2 S	2 Samuel	೨ ಸಮುವೇಲನು
Si	Sirach (Ecclesiasticus)	ಸಿರಾಖ್ (ಎಕ್ಲೆಸಿಯಾಸ್ಟಿಕಸ್)
1 Th	1 Thessalonians	೧ ಥೆಸಲೋನೀಕದವರಿಗೆ
2 Th	2 Thessalonians	೨ ಥೆಸಲೋನೀಕದವರಿಗೆ
1 Tm	1 Timothy	೧ ತಿಮೋಥೆಯನಿಗೆ
2 Tm	2 Timothy	೨ ತಿಮೋಥೆಯನಿಗೆ
Ws	Wisdom	ಜ್ಞಾನೋಕ್ತಿಗಳು
Zp	Zephanian	ಸೆಫನ್ಯನು

ಸಂಕೇತಗಳು :

D Denzinger
\+ note or further reference in Jerusalem Bible is indicated.
* These books are not acceptable to some of the churches.

ಆಕರ ಸೂಚಿ :

Bonhoeffer, Dietrich

1971 (reprinted) **No Rusty Sword**, Collins : Fontana Library.

Boyd, Robin

1977, **Kristadvaita, A Theology for India**, Madras : the Christian Literature Society.

Chudoba, Bohdan

1968, **Early History and Christ,** New York: Alba House.

Cornyn, John Hubert

1956, "Mythology", **The Encyclopedia Americana,** Vol, 19, New York, Chicago, Washington, DC. : Americana Corporation.

Cox, Harvey

1968, **The Secular City,** Penguin Books.

Cunningham, Adrian

1973, **The Theory of Myth,** London : Sheed and Ward.

Dewart, Leslie,

1967 (fifth imprint) **The Future of Belief,** Herder and Herder, First published in 1966.

Dunchen (O.P.), P. G.

July 1975 "Introduction to the Pentateuch", in **A New Catholic Commentary on Holy Scripture,** Rev. R. G. Fuller (G.Ed.).

Durant, Will

1954, **Tha Story of Civilization : Our Oriental Heritage,** New York : Simon and Schuster.

Edwards, Daniel L.

1973, June, (second impression), **What Is Real in Christianity ?** Collins : Fontana Books.

Every, George
1987, **Christian Mythology,** Hamlyn.

Ferm, Vergilius (Ed.)
1956, **An Encyclopedia of Religion,** London : Peter Owen Ltd.

Fuller, Reginald, C. (Rev.) (Gen. Ed.)
July 1975, (first published Feb. 1953), **A New Catholic Commentary on Holy scripture.**

Greely, Andrew M.
1975, **The Sinai Myth,** New York, Image Books.

Guttierrez, Gustavo,
1977 (third impression) first published 1974), **A Theology of Liberation,** SCM Press, Ltd.

Jones, Alexander (Gen. Ed.)
1966, **The Jerusalem Bible,** London : Darton, Longman and Todd.

Kee, Howard Clark and Young, Franklin, W.
1974, (reprinted) **The Living World of the New Testament,** London: Darton, Longman and Todd.

Liddel, Henry George and Scott, Robert,
1968 (first published in 1843) **A Greek English Lexicon,** Oxford: At the Clarendon Press.

Lindbeck, George A.
The Future of Roman Catholic Theology, Vatcican II-Catalyst for Change, Philadelphia: Fortress Press.

Luke, K. (Ed).
March-April 1977 **Jeevadhara,** Vol. VII, No. 38, Alleppy: Theology Centre.

March-April 1977 **Jeevadhara,** Vol. VIII, No. 44, Alleppy: Theology Centre.

Madtha William

1976 "Virasaivism and Christianity (an ecumencial dialogue on doctrine)" **The Karnatak University Journal, Humanities.**

1977 "Conscientization: The Aim of University Education", **Journal of Higher Education,** New Delhi, Vol 2 No. 3.

Mc Kenzie John L.

1963 **Myths and Realities: Studies in Biblical Theology**, London Geofrey Chapman.

1966 The Two-Edged Sword, An Interpretation of the Old Testament, New York, Garden City: Image Books.

Moran, Gabriel

1970 **Vision and Tactics,** Burns and Oates.

Neil, William

1972 (first published in 1956) **The Plain Man Looks at the Bible**. Collins: Fontana Books.

Newman, Eva May

MCMLVI "Mythology" in **An Encyclopedia of Religion,** London: Peter Owen Ltd.

O'Grady, John F.

1977 (Oct.) **Biblical Theology Bulletin,** Vol. VII No. 4, New York, Albany.

Pai, C. C. A. (S. J.)

(a) 1977 "Puranagalu: Ondu Adhyayana" (in Kannada), **Karnataka Bharati,** Vol. 10, No. 2, Dharwad: Karnatak University.

(b) "Myth Recognized and Identified by Modern Scholarship" An unpublished monograph.

Pelikan, Jaroslav (Ed.)

1971 (second impression) **Twentieth Century Theology in the Making Vol. II,** Collins: Fontana Library.

Perry, Whitall N.
1971, **A Treasury of Traditional Wisdom,** New York: Simon & Schuster.

Rahner, Karl (Ed.)
1975 **An Encyclopedia of Theology,** London: Burns and Oates.

Robinson, John A. T.
1974 (fourth impression) (first published in 1972) **The Difference in Being a Christian Today,** Collins: Fontana Books.

Ryan, Mary Perkins
1968 (May 9) **Towards Moral Maturity,** Toronto: Paulist Press, Deus Books.

Sebeok, Thomas A.
1974 (Seventh Printing) **Myth: A Symposium,** Blooming-ton and London: Indiana, University Press.

Smart, Ninian
1968 **The Yogi and the Devotee.** (The Interplay Between the Upanishad and Catholic Theology), London: Allen and Unwin.

1969 **The Religious Experience of Mankind,** Collins: The Fontana Library.

The Bible Society of India
1976 **Good News Bible: Today's English Version,** Bangalore, India.

Tillich, Paul
1971 "Myth and Mythology: The Concept and Religious Psychology of Myth" in **Twentieth Century Theology in the Making Vol. II,** Jaroslav Pelickan (Ed.), R. A. Wilson (Tr.), Collins. The Fontana Library.

● ● ●

ಶಿವರುದ್ರಪ್ಪನವರ ಕವಿತೆಗಳಲ್ಲಿ ಕಾವ್ಯಮೀಮಾಂಸೆ

● ಜಿ. ಎಂ. ಹೆಗಡೆ

ಹೊಸಗನ್ನಡ ಸಾಹಿತ್ಯದಲ್ಲಿ ಜಿ. ಎಸ್. ಶಿವರುದ್ರಪ್ಪನವರದು ವಿಶಿಷ್ಟವಾದ ವ್ಯಕ್ತಿತ್ವ. ಅವರು ಪ್ರಖ್ಯಾತ ಕವಿಗಳೂ ವಿಮರ್ಶಕರೂ ಆಗಿದ್ದಾರೆ. ಕಾವ್ಯ ಮತ್ತು ವಿಮರ್ಶನ ಕ್ರಿಯೆಗಳೆರಡೂ ಒಂದೇ ಪ್ರತಿಭೆಯ ಮೂಲದಿಂದ ಪ್ರಚುರ ಗೊಂಡಿರುವದು ಅವರ ವ್ಯಕ್ತಿತ್ವದ ವಿಶಿಷ್ಟತೆಯಾಗಿದೆ. ವಿಮರ್ಶೆಯೆನ್ನುವದು ಕವಿಯಲ್ಲೇ ಇರತಕ್ಕ ಲಕ್ಷಣವೆಂದೂ ಕವಿ ವಿಮರ್ಶಕನೂ ಆದಾಗ ಅವನ ಸಾಹಿತ್ಯ ಸಹಜವಾಗಿಯೇ ಶ್ರೇಷ್ಠವಾಗುತ್ತದೆಂದೂ ಹೊಸಗನ್ನಡದ ಹಿರಿಯ ಲೇಖಕರಾಗಿದ್ದ ಮಾಸ್ತಿಯವರು ಒಂದೆಡೆ ಹೇಳಿದ್ದಾರೆ.೧ ಇದಕ್ಕೆ ಉತ್ತಮ ನಿದರ್ಶನವೇ ಶಿವರುದ್ರಪ್ಪ ನವರು. ಶಿವರುದ್ರಪ್ಪನವರು ಕಾವ್ಯಕೃಷಿಗೆ ತೊಡಗಿ ನಾಲ್ಕು ದಶಕಗಳೇ ಕಳೆದು ಹೋಗಿವೆ. ಈ ಸುದೀರ್ಘವಾದ ಅವಧಿಯಲ್ಲಿ ಅವರ ಕಾವ್ಯಪ್ರತಿಭೆ ನಿರಂತರವಾಗಿ ಬತ್ತದ ತೊರೆಯಾಗಿ ಹರಿದಿರುವದು ಕನ್ನಡದ ಭಾಗ್ಯವೆಂದೇ ಹೇಳಬೇಕು.

ಶಿವರುದ್ರಪ್ಪನವರು ಕಾವ್ಯೋದ್ಯೋಗದ ಆರಂಭದಿಂದಲೂ ಕಾವ್ಯರಚನೆ ಹಾಗೂ ಕಾವ್ಯಮೀಮಾಂಸೆಗೆ ಸಂಬಂಧಿಸಿದಂತೆ ತಮ್ಮ ಚಿಂತನೆಗಳನ್ನು ಕವಿತೆಗಳ ಮೂಲಕ ಅಭಿವ್ಯಕ್ತಿಸುತ್ತ ಬಂದಿರುವದೊಂದು ವಿಶೇಷ. ಅವರ ಸಮಗ್ರ ಕವಿತಾ ಸಂಕಲನಗಳನ್ನು ಗಮನಿಸುತ್ತ ಹೋದರೆ ಅನೇಕ ಕವನಗಳಲ್ಲಿ ಕಾವ್ಯಮೀಮಾಂಸೆಯ ದರ್ಶನ ನಮಗಾಗುತ್ತದೆ. ತಮ್ಮ ಸಾಹಿತ್ಯಜೀವನದುದ್ದಕ್ಕೂ ಶಿವರುದ್ರಪ್ಪನವರು ಕಾವ್ಯ ಮತ್ತು ವಿಮರ್ಶೆಗಳೆರಡನ್ನೂ ಸೃಜಿಸುತ್ತ, ಆ ಕುರಿತು ಆಲೋಚಿಸುತ್ತ ಬಂದಿ ರುವದು ಕಾಣುತ್ತದೆ. ಸಮಗ್ರಕಾವ್ಯ ಹಾಗೂ ಅವರ 'ವಿಮರ್ಶೆಯ ಪೂರ್ವ ಪಶ್ಚಿಮ', 'ಕಾವ್ಯಾರ್ಥಚಿಂತನ' ಗ್ರಂಥಗಳು, 'ಸೌಂದರ್ಯ ಸಮೀಕ್ಷೆ'ಯಂಥ ಮಹಾಪ್ರಬಂಧ ಈ ದಿಶೆಯಲ್ಲಿ ಗಮನಾರ್ಹ ಕೃತಿಗಳು. ಶಿವರುದ್ರಪ್ಪನವರ ವಿಮರ್ಶೆಯಲ್ಲಿ ಕವಿಮನೋಧರ್ಮವನ್ನೂ ಕಾವ್ಯದಲ್ಲಿ ವಿಮರ್ಶನ ವಿಚಾರಗಳನ್ನೂ ಅಧ್ಯಯನ ಮಾಡಬೇಕಾದ ಅಗತ್ಯವಿದೆ. ಶಿವರುದ್ರಪ್ಪನವರ ಕವಿತೆಗಳಲ್ಲಿ ಕಾವ್ಯ ಮೀಮಾಂಸೆಯ ಚಿಂತನೆಗಳನ್ನು ಅನುಸಂಧಾನ ಮಾಡುವದು ಈ ಪ್ರಬಂಧದ ಉದ್ದೇಶ.

---

೧ ನೋಡಿ ಶ್ರೀನಿವಾಸ : ಸಾಹಿತ್ಯದಲ್ಲಿ ವಿಮರ್ಶೆಯ ಕಾರ್ಯ-ವಿಮರ್ಶೆ. ೧,

ಕನ್ನಡ ಕಾವ್ಯದ ವಿವಿಧ ಪರಂಪರೆಗಳಲ್ಲಿ ನಿರಂತರವಾಗಿ ಕಾವ್ಯರಚನೆಯನ್ನು ಶಿವರುದ್ರಪ್ಪನವರು ಮಾಡುತ್ತ ಬಂದಿದ್ದಾರೆ. ಬದುಕನ್ನು, ಪ್ರಕೃತಿಯನ್ನು ತೆರೆದ ಕಣ್ಣಿನಿಂದ ನೋಡುವ ಕವಿ ಯಾವುದೇ ಬದ್ಧತೆಗೆ ತಮ್ಮನ್ನು ಅರ್ಪಿಸಿಕೊಂಡವರಲ್ಲ. ನವೋದಯ, ನವ್ಯ, ಸಮನ್ವಯ ಕಾವ್ಯಮಾರ್ಗಗಳಲ್ಲಿ ಅವರ ಕಾವ್ಯನದಿ ಸಾವಿರಾರು ದೃಷ್ಟಿದರ್ಶನಗಳನ್ನು ಚೆಲ್ಲಿ ಮುನ್ನಡೆದಿದೆ. ಆದ್ದರಿಂದ ಶಿವರುದ್ರಪ್ಪನವರ ಕವಿತೆಗಳಲ್ಲಿಯ ಕಾವ್ಯಮೀಮಾಂಸಾ ವಿಚಾರಗಳನ್ನು ನೋಡುವಾಗ ಕಾವ್ಯದ ಬಗೆಗಿನ ಸಮಗ್ರದೃಷ್ಟಿಯನ್ನಿಟ್ಟುಕೊಳ್ಳಬೇಕಾದುದು ಬಹಳ ಅವಶ್ಯಕ.

ಕವಿಜೀವನದ ಆರಂಭದಲ್ಲಿ ಎಂದರೆ ಶಿವರುದ್ರಪ್ಪನವರ ಮೊದಲ ಕವಿತಾ ಸಂಕಲನ 'ಸಾಮಗಾನ'ದ ಕವಿತೆಗಳಲ್ಲಿ ಕಾವ್ಯ ಹಾಗೂ ಅದರ ಸೃಷ್ಟಿಕ್ರಿಯೆಯ ಕುರಿತು ಕವಿ ಚಿಂತನೆ ನಡೆಸಿರುವದು ಕಂಡುಬರುತ್ತದೆ. 'ಕಾವ್ಯಕೃಪೆ'೨ ಎಂಬ ಕವಿತೆಯು ಕವಿಯ ಅಂತರಂಗ ಕಾವ್ಯಾಗಮನಕ್ಕಾಗಿ ಸತತವಾಗಿ ಪುಟಿಯುತ್ತಿರುವದನ್ನು ತಿಳಿಸುತ್ತದೆ. ಪ್ರತಿಯೊಬ್ಬ ಕವಿಗೂ ಕಾವ್ಯಸಂಸಾರದಲ್ಲಿ ಪ್ರವೇಶಿಸಿದೊಡನೆಯೇ ಅನಂತಲೋಕದ ದರ್ಶನವಾಗುತ್ತದೆ. 'ಕಾವ್ಯಕೃಪೆ' ಪಡೆದು ಕೃತಾರ್ಥನಾಗಬೇಕೆಂಬ ಹಂಬಲ ಬಲವತ್ತರವಾಗುತ್ತದೆ. "ಹೃದಯಾಂತರಾಳದಲ್ಲಿ ಹೊಮ್ಮುವ ನೋವನ್ನು ಶ್ರೀಮಂತವಾದ ಅನುಭವ ಸಾರವನ್ನು ಸಾಂತವಾದ ಭಾಷೆಯಲ್ಲಿ ಪ್ರಕಟಿಸುವ ಕವಿಕಾರ್ಯ ಬಹುದೊಡ್ಡದು. ಜಗದ ಶ್ರೀಮಂತಿಕೆಯನ್ನು ಅಂತರಂಗದ ಅನಂತ ಧೀಮಂತಲೋಕದಲ್ಲಿ ತನ್ನದಾಗಿಸುತ್ತ ಸಾಗುವ ಕವಿಯ ಕಾರ್ಯ ಲೋಕಸಂಗತಿಯನ್ನು ಮಿಡಿಯುತ್ತದೆ. ಅದಕ್ಕಾಗಿಯೇ ಒಳದನಿಯನ್ನು ಪ್ರತಿಮಿಸುವ ಕಾವ್ಯಕೃಪೆಗೆ ಕವಿಹೃದಯ ಸದಾ ಹಂಬಲಿಸುವದ"ೆಂದು ಶಿವರುದ್ರಪ್ಪನವರು ಅಭಿವ್ಯಕ್ತಿಸಿದ್ದಾರೆ.

ಕಾವ್ಯವನ್ನು ಬರೆಯಲು ಹೊರಟ ಕವಿಗೆ 'ಕಾವ್ಯಮಾರ್ಗ'ದ ಶೋಧನೆಯ ವಿಚಾರ ಬರುವದು ಸಹಜ. ತಾನು ಯಾವ ರೀತಿಯಲ್ಲಿ ಮುನ್ನಡಿಯಿಡಬೇಕೆಂಬ ಸಂದರ್ಭದಲ್ಲಿ ಶಿವರುದ್ರಪ್ಪ 'ಕಾವ್ಯಮಾರ್ಗ'೩ ಎಂಬ ಕವಿತೆಯಲ್ಲಿ ಹೀಗೆ ಹೇಳುತ್ತಾರೆ : 'ಕಾವ್ಯವೆನ್ನುವದು ನಿತ್ಯನಿರಂತರ, ನಿತ್ಯನೂತನವಾದುದು. ಕಾವ್ಯವು ಯಾವುದೇ ಕೃತಕ ಕಟ್ಟುಪಾಡಿಗೆ ಒಳಗಾಗಿ ಉಳಿಯಬಾರದು. ಕವಿಗೆ ತನ್ನ ದನಿ ಎತ್ತರಿಸಲು, ಹಾಡಲು ಸ್ವಾತಂತ್ರ್ಯ ಬೇಕು. ಗಿರಿಯಲ್ಲಿ ಹುಟ್ಟಿದ ನದಿಗೆ ಹರಿಯುವಾಗ ಯಾವ ಭೂಗೋಳಶಾಸ್ತ್ರವಿರುವದಿಲ್ಲ. ಅದು ತನ್ನ ಮಾರ್ಗವನ್ನು ಕಂಡುಕೊಂಡು ಕಡಲು ಸೇರುತ್ತದೆ. ಅದಕ್ಕೆ ಕೈಮರದ ನೆರವು ಬೇಡ. ಆದ್ದರಿಂದ

೨ ಜಿ. ಎಸ್. ಶಿವರುದ್ರಪ್ಪ : 'ಕಾವ್ಯಕೃಪೆ', ಸಾಮಗಾನ, ಸಮಗ್ರಕಾವ್ಯ, ಪುಟ ೨೬-೨೭.

೩ ಜಿ. ಎಸ್. ಶಿವರುದ್ರಪ್ಪ : 'ಕಾವ್ಯಮಾರ್ಗ', ಸಾಮಗಾನ, ಸಮಗ್ರಕಾವ್ಯ, ಪುಟ ೫೬.

ಕಾವ್ಯನದಿಗೆ ಯಾವುದೇ ಶಾಸ್ತ್ರಮಾರ್ಗದ ಕಟ್ಟುಕಟ್ಟಳೆ ಇಲ್ಲದೆ ಸಹಜವಾಗಿ ಪ್ರವಾಹ ದೋಪಾದಿಯಲ್ಲಿ ಹರಿಯಬೇಕು' ಎಂದು ಹೇಳುವಲ್ಲಿ ಶಿವರುದ್ರಪ್ಪನವರು ಕವಿ ಸ್ವಾತಂತ್ರ್ಯ ಮತ್ತು ಕಾವ್ಯಸ್ಫೂರ್ತಿಯ ಪ್ರಕಾಶನಕ್ಕೆ ಹೆಚ್ಚು ಒತ್ತುಕೊಟ್ಟಿದ್ದಾರೆ.

ಕವಿಗೆ ತನ್ನ ಹಾಡು ಹಳೆಯದೆಂಬ ಭಾವನೆ ಸಲ್ಲದು. 'ಹಳೆಯಹಾಡು'[೪] ಎಂಬ ಪ್ರಸಿದ್ಧ ಕವಿತೆ ಇದನ್ನು ಚೆನ್ನಾಗಿ ಪ್ರತಿಬಿಂಬಿಸುತ್ತದೆ. "ಹಾಡು ಹಳೆಯ ದಾದರೇನು, ಭಾವ ನವನವೀನ, ಎದೆಯು ಭಾವ ಹೊಮ್ಮುವದಕೆ ಭಾಷೆ ಒಂದು ಸಾಧನ. ಜೀವನವನು ಕಟ್ಟುವದಕೆ ಕಾವ್ಯ ಒಂದು ಸಾಧನ." ಎದೆಯು ಭಾವ ತುಂಬಿಬಂದ ಹಾಡನ್ನು ಕೇಳುವ ತೆರೆದ ಹೃದಯ ಸಹೃದಯನಿಗಿದೆ. ಹಮ್ಮು ಬಿಮ್ಮುಗಳಿಲ್ಲದೆ ಹೃದಯ ತೆರೆದು ಹಾಡುವದು ಹಾಗೂ ಹಾಡಿನಲ್ಲಿ ಮನವು ಲೀನ ವಾಗುವಂತೆ ಕವಿ ಸದಾ ತಪಿಸಬೇಕೆಂದು, ತನ್ನ ಮನವು ಆ ರೀತಿ ಆಶಿಸುವದಾಗಿ ಶಿವರುದ್ರಪ್ಪನವರು ಹೇಳಿದ್ದಾರೆ. ಕವಿ ತನ್ನ ನವನವೀನ ಭಾವ ಪ್ರಕಾಶನಕ್ಕೆ ಸದಾ ತಪಿಸಬೇಕೆಂಬ ಸಂದೇಶ ಇಲ್ಲಿದೆ.

'ಕವಿಯ ಮನಸು'[೫] ಎಂಬ ಕವಿತೆಯಲ್ಲಿ ಕವಿಯ ಅಂತರಂಗವನ್ನು ಶಿವ ರುದ್ರಪ್ಪನವರು ತೆರೆದಿಟ್ಟಿದ್ದಾರೆ. ಪ್ರಕೃತಿಲೋಕದಂತೆ ಕವಿಯ ಮನಸ್ಸು ವಿಪುಲ ರೂಪಧಾರಿಣಿ. ಬ್ರಹ್ಮನು ಕಂಡ ಕನಸಿನಂತೆ ಕೋಟಿಕಲ್ಪನೆಗಳ ಗುಪ್ತಗಾಮಿನಿ ಯಾಗಿದೆ. ಕವಿಯ ಮನಸ್ಸು ಕಡಲಿನಂತೆ ವಿಸ್ತಾರ, ಆಳ ಹಾಗೂ ರತ್ನಗರ್ಭ ಧಾರಿಣಿಯಾಗಿದೆ. ಕಡಲಿನ ನೀರೆಲ್ಲಾ ಉಪ್ಪಾದರೂ ಅದರ ಒಡಲಲ್ಲಿ ಮುತ್ತು ರತ್ನಗಳ ಅಮೋಘ ಭಂಡಾರವೇ ಅಡಗಿರುತ್ತದೆ. ಯುಗಯುಗಗಳ ನಶ್ವರವನ್ನು ಶಾಶ್ವತಗೊಳಿಸುವ ಕೆಲಸ ಕವಿಯದಾಗಿದೆ. ಕವಿಯ ಮನಸ್ಸು ಆಕಾಶದಂತೆ. ಮೋಡಗಳು ಇಳೆಗೆ ಮಳೆ ತರುವಂತೆ ಕವಿ ಭಾವಮೇಘಗಳ ಮೂಲಕ ಕಾವ್ಯಮಳೆ ಸುರಿಸಿ ಸಹೃದಯನ ಮನವನ್ನು ಹಸಿರಾಗಿಸುತ್ತಾನೆ. ಬೆಂದ ಭೂಮಿಯನ್ನು ಹಸುರಿ ನೆಡೆಗೆ ರುಚಿರ ವರ್ಷರೂಪಕ್ಕೆ ತರುವ ಮಳೆಯಂತೆ ಕಾವ್ಯವೂ ನೊಂದವರ ಹೃದ ಯದ ದನಿಯಾಗಲಿದೆ. ಹೀಗೆ ಕವಿಯ ಮನಸ್ಸು ಪ್ರಕೃತಿ, ಕಡಲು, ಆಕಾಶದ ವಿಸ್ತಾರಕ್ಕೆ ಹಬ್ಬಿನಿಲ್ಲುವ ಭಾವಗಳನ್ನು ಶಿವರುದ್ರಪ್ಪನವರು ಸೆರೆಹಿಡಿದ ರೀತಿ ಅನ್ಯಾದೃಶ.

'ತೃಪ್ತಿ'[೬] ಎಂಬ ಕವಿತೆಯಲ್ಲಿ ಶಿವರುದ್ರಪ್ಪನವರು ಕವಿಯಾದವನ ಬಾಳಿನ ಗಂತವ್ಯವನ್ನು ಪ್ರಚುರಪಡಿಸಿದ್ದಾರೆ. ಕವಿ ಎದೆ ತುಂಬಿ ಹಾಡುವದು ಸಹೃದಯನ

---

೪ ಜಿ. ಎಸ್. ಶಿವರುದ್ರಪ್ಪ : 'ಹಳೆಯಹಾಡು', ಸಾಮಗಾನ, ಸಮಗ್ರಕಾವ್ಯ ಪುಟ ೫೭.

೫ ಜಿ. ಎಸ್. ಶಿವರುದ್ರಪ್ಪ : 'ಕವಿಯ ಮನಸು', ಸಾಮಗಾನ, ಸಮಗ್ರಕಾವ್ಯ ಪುಟ ೬೧.

೬ ಜಿ. ಎಸ್. ಶಿವರುದ್ರಪ್ಪ : 'ತೃಪ್ತಿ', ಸಾಮಗಾನ, ಸಮಗ್ರಕಾವ್ಯ ಪುಟ ೬೨.

ಮನಃಸಂತೋಷಕ್ಕಾಗಿ, ರಸಿಕರ ಆನಂದವೇ ಕವಿಗೆ ತೃಪ್ತಿ. ಆದ್ದರಿಂದ ಹಾಡುವ ಹಕ್ಕಿಗೆ ಬೇರೆ ಬಿರುದು ಸನ್ಮಾನ ಬೇಕಿಲ್ಲ. ಎಲ್ಲರೂ ಕೇಳಲೆಂದು ಕವಿ ಹಾಡುವದಿಲ್ಲ. ಆದರೆ ಹಾಡುವದು ಅಂದರೆ ಕಾವ್ಯರಚನೆಯನ್ನು ಮಾಡುವದು–ಕವಿಗೆ–ಅನಿವಾರ್ಯ ವಾದ ಕರ್ಮ. ಯಾರು ಕಿವಿ ಮುಚ್ಚಿದರೂ ಕವಿಗೆ ಚಿಂತೆಯಿಲ್ಲ. ಕವಿ ತನ್ನ ಕೆಲಸ ಎಡಬಿಡದೆ ಮಾಡುತ್ತಿರುತ್ತಾನೆ. ಹಕ್ಕಿಹಾಡಿಕೊಳ್ಳುವಂತೆ ಹಾಡುವ ತನ್ನ ಕರ್ತವ್ಯ ದಲ್ಲಿ ತೃಪ್ತಿಯನ್ನು ಸಾಧಿಸುವ ಬಗೆಯನ್ನು ಶಿವರುದ್ರಪ್ಪನವರು ಹೇಳಿರುವದು ಭಾರತೀಯ ಕಾವ್ಯಮೀಮಾಂಸೆಯಲ್ಲಿ ಹೇಳಿದ 'ಕಾವ್ಯಂ ಸಹೃದಯಂ ಆನಂದಾಯ' ಹಾಗೂ 'ಕಾವ್ಯಂ ಸ್ವಾಂತ ಸುಖಾಯ' ಎಂಬುದನ್ನು ಸ್ಮರಣೆಗೆ ತಂದುಕೊಡುತ್ತದೆ.

ಶಿವರುದ್ರಪ್ಪನವರ ಎರಡನೆಯ ಕವಿತಾಸಂಕಲನ 'ಚೆಲುವು ಒಲವು'. ಇದರಲ್ಲಿ ನಿಸರ್ಗದ ಸೌಂದರ್ಯೋಪಾಸನೆಗೆ ಕವಿ ತೊಡಗಿರುವದು ಕಾಣುತ್ತದೆ. ಇದರಲ್ಲಿ ಬರುವ 'ಪ್ರಕೃತಿ–ಕವಿ'೭ಯೆಂಬ ಕವಿತೆಯಲ್ಲಿ ಕವಿಗೂ ನಿಸರ್ಗಕ್ಕೂ ಇರುವ ಸಂಬಂಧ ವನ್ನು ಮಾರ್ಮಿಕವಾಗಿ ಹೇಳಲಾಗಿದೆ. ಶಿವನ ಜಡೆಯಿಂದ ಗಂಗೆ ಭುವಿಗೆ ಇಳಿದು ಬಂದಂತೆ ಪ್ರಕೃತಿ ಕವಿಯ ಹತ್ತಿರ ಬಂದಿದೆ. ಆದ್ದರಿಂದ ಕವಿಯ ತೃಪ್ತಿ, ಸಂತಸ ಹೆಚ್ಚಿದೆ. ನಿಸರ್ಗದ ನೂರಾರು ಭಾವಗಳು ಕಾವ್ಯರೂಪ ಪಡೆದಿವೆ. ಹೂ ಹಣ್ಣು, ಚಿಗುರು, ಋತುಗಾನದಲ್ಲಿ ನೂರು ಬಗೆಯ ಅಚ್ಚರಿಗಳ ರಸಕೋಶ ನಿರ್ಮಿಸಿದೆ. ಹಕ್ಕಿಗೊರಲಿನಲ್ಲಿ ಪ್ರಕೃತಿ ವಿವಿಧ ಮಧುರರಾಗವಾಗಿ ಹೊಮ್ಮಿದೆ. ಗಾಳಿಯೊಡನೆ ವಿಶ್ವವನೆ ಸುತ್ತಿಸುಳಿಯುವಂತಾಗಿದೆ. ನಿಸರ್ಗಲೋಕದ ಸೌಂದರ್ಯಾರಾಧನೆ ಕವಿಯ ಮೂಲಕ ಬೆಳಗುವಂತಾಗಿದೆ. ಹೀಗೆ ಶಿವರುದ್ರಪ್ಪನವರು ಕವಿಯಾದವನು ನಿಸರ್ಗ ಸೌಂದರ್ಯಾರಾಧನೆಯಿಂದ ಹೆಚ್ಚಿನ ಅನುಭೂತಿ ಪಡೆದುಕೊಳ್ಳಬೇಕೆಂದು ಕರೆಕೊಟ್ಟಿ ದ್ದಾರೆ. ಕವಿಯಾದವನಿಗೆ ನಿಸರ್ಗದ ಅವಿನಾಭಾವಿಯಾದ ನಂಟು ಇರಲೇಬೇಕೆಂಬ ಅವರ ಆಶಯ ಗಮನಾರ್ಹ.

'ಚೆಲುವು ಒಲವು' ಕವಿತಾ ಸಂಕಲನದ ಕೊನೆಯಲ್ಲಿ ಶಿವರುದ್ರಪ್ಪನವರು 'ಕಾವ್ಯಕೆ ನಮನ'೮ ಎಂಬ ಕವಿತೆಯಲ್ಲಿ ಕಾವ್ಯದ ಅನಂತ ವೈಭವಕ್ಕೆ ಶರಣು ಹೇಳಿ ದ್ದಾರೆ. ಕಾವ್ಯ ಸ್ಫೂರ್ತಿಯ ಆವೇಶದ ಫಲ. ಕನಸು ನನಸಾದಂತೆ ಕಾವ್ಯಸ್ಫೂರ್ತಿ ಚಿಮ್ಮಿದೆ. ಮಂದಾರದ ಸುಗಂಧ ಹರಡಿದಂತೆ ಆನಂದದ ಸೌಂದರ್ಯ ಬಿಂದು ಕಾವ್ಯದ ಮೂಲಕ ಬಂದಿಳಿದಿದೆ. ಕಾವ್ಯದಿಂದಾಗಿಯೇ ಕವಿ ಜಗದೊಲವನ್ನು ಪಡೆಯುತ್ತಾನೆ ಅದಕ್ಕಾಗಿಯೇ ಕಾವ್ಯಕೆ ನಮನ.

---

೭. ಜಿ. ಎಸ್. ಶಿವರುದ್ರಪ್ಪ : 'ಪ್ರಕೃತಿ ಕವಿ', ಚೆಲುವು ಒಲವು, ಸಮಗ್ರ ಕಾವ್ಯ, ಪುಟ ೬೯, ೭೦, ೭೧, ೭೨.

೮. ಜಿ. ಎಸ್, ಶಿವರುದ್ರಪ್ಪ : 'ಕಾವ್ಯಕೆ ನಮನ', ಚೆಲುವು ಒಲವು, ಸಮಗ್ರ ಕಾವ್ಯ, ಪುಟ ೧೦೭.

ಶಿವರುದ್ರಪ್ಪನವರ ಮೂರನೆಯ ಕವಿತಾ ಸಂಕಲನ 'ದೇವಶಿಲ್ಪ'. ಕನ್ನಡ ನಾಡು, ನುಡಿ, ಸಾಂಸ್ಕೃತಿಕ ಪರಂಪರೆಯ ವೈಭವವನ್ನು ಪ್ರತಿಬಿಂಬಿಸುವ ಈ ಸಂಕಲನದ 'ಕವಿ ಕಾವ್ಯಕೆ'[೯] ಎಂಬ ಕವಿತೆಯಲ್ಲಿ ಶಿವರುದ್ರಪ್ಪನವರು ಹೇಳುವ ವಿಚಾರಗಳಿವು : 'ಕವಿಗೂ ಸಹೃದಯನಿಗೂ ಇರುವ ಸಂಬಂಧದಂತೆ ಕವಿಗೂ-ಕಾವ್ಯಕ್ಕೂ ಇರುವ ಸಂಬಂಧ ಅವ್ಯಾಜವಾದುದು. ಅದು ಬಲ್ಬು ಸ್ವಿಚ್ಚುಗಳಿದ್ದಂತೆ. ಈ ನಂಟು ಇರದಿದ್ದರೆ ಬರಿ ಗಾಜಿನ ಬುರುಡೆಯಂತಾಗುತ್ತದೆ. ಅಂದರೆ ಕವಿ-ಕಾವ್ಯಕ್ಕೂ ಮೀರಿದ ಒಂದು ಮೂಲಶಕ್ತಿ ಒಳಗೆ ನಿಂತು ಬೆಳಕನ್ನು ನಿರ್ಮಿಸುತ್ತದೆ. ಅಲ್ಲದಿದ್ದರೆ ಬಾಳು ಬರಿ ಶೂನ್ಯವೆನ್ನಬಹುದು. ದೈವಾಯತ್ತವಾದ ಪ್ರತಿಭೆ ಕವಿ-ಕಾವ್ಯಗಳ ನಂಟಿಗೆ ಕಾರಣವಾಗುತ್ತದೆ. ಈ ಪ್ರತಿಭೆ ಬೆಳಕಿದ್ದಂತೆ. ಇದರಿಂದಲೇ ಕಾವ್ಯದ ಸೃಜನಕ್ರಿಯೆ ನಿರಂತರವಾಗುತ್ತದೆ'ಯೆಂದು ಶಿವರುದ್ರಪ್ಪನವರು ಮಾರ್ಮಿಕವಾಗಿ ಹೇಳಿದ್ದಾರೆ.

'ಕವಿತೆಗೆ'[೧೦] ಕುರಿತ ಶಿವರುದ್ರಪ್ಪನವರ ಚಿಂತನೆ ಆಕರ್ಷಕವಾದುದು. 'ಕಾವ್ಯ ಸ್ಫೂರ್ತಿಯ ಫಲ. ಈ ಕಾವ್ಯಸ್ಫೂರ್ತಿ (Inspiration) ಸದಾ ಚಂಚಲೆಯೆಂಬುದು ಕವಿಯ ಭಾವ. ತಾನು ಹೃದಯ ತೆರೆದು ಬರೆಯಲಾರ. ಮಿಂಚಿನ ಕ್ಷಣಗಳನ್ನು ಹಿಡಿದಿಡಲಾಗುವದಿಲ್ಲ. ಬೂದಿಯಲ್ಲಿ ಬಿದ್ದ ಕಿಡಿಗಳನ್ನು ಹುಡುಕಲಾಗುವದಿಲ್ಲ. ಆದ್ದರಿಂದ ಕವಿಗೆ ಯಾರ ಕೃಪೆಯೂ ಬೇಕಿಲ್ಲ. ಯಾರ ಹಂಗಿಗೂ ಪಕ್ಕಾಗುವದು ಬೇಡ. ಯಾಕೆಂದರೆ ಈ ಕಾವ್ಯಸ್ಫೂರ್ತಿ ಚಂಚಲೆ. ಹಾಗಿದ್ದರೆ 'ಕವಿತೆ ಬರೆಯುವುದು ಹೇಗೆ ?'[೧೧] ಎಂಬುದರ ಜಿಜ್ಞಾಸೆಯೂ ಶಿವರುದ್ರಪ್ಪನವರನ್ನು ಕಾಡದೇ ಇಲ್ಲ. ಕವಿತೆ ಬರೆಯುವುದು ಬಹು ಸುಲಭ. ಈ ಕಾಲದಲ್ಲಿ ಇದರಿಂದ ಲಾಭವಿದೆ. ಕವಿತೆ ಬರೆಯುವುದು ಹೇಗೆ ? ಐದು ರೂಪಾಯಿ ಮನಿಯಾರ್ಡರ್ ಮಾಡಿದರೆ ಎಲ್ಲ ಸುಲಭೋಪಾಯ ಸಾಮಗ್ರಿಗಳು ಉಪಲಬ್ಧ. ಸೂರ್ಯೋದಯದ ದರ್ಶನಕ್ಕೆ ಕವಿ ಕುಳಿತುಕೊಳ್ಳಬೇಕಿಲ್ಲ. ಕವಿಗೆ ಬಚ್ಚಲು ಮನೆಯ ರೊಚ್ಚೆ ಬೀದಿ ಧ್ವನಿಯು, ಹಾಡಲು, ಕವಿತೆ ಬರೆಯಲು ತೊಡಕನ್ನುಂಟು ಮಾಡಲಾರದು. ಕವಿಯಾದವನು ಸೂರ್ಯೋದಯ, ಸೂರ್ಯಾಸ್ತಕ್ಕಾಗಿ ಕಾದು ಕುಳಿತು ಬರೆಯದೆ ಜನಸಾಮಾನ್ಯರ ಧ್ವನಿಗೆ ಸ್ಪಂದಿಸಬೇಕು. ಕಾವ್ಯವೆನ್ನುವುದು ಜನಸಾಮಾನ್ಯರ ನಿಜದನಿಯಾದಾಗ ಮಾತ್ರ ಅದರ ಆಶಯ ಪರಿಪೂರ್ಣವಾಗುವದೆಂಬ ಶಿವರುದ್ರಪ್ಪನವರ ವಿಚಾರಕ್ಕೆ ಎರಡು ಮಾತುಗಳಿಲ್ಲ.

---

೯. ಜಿ. ಎಸ್. ಶಿವರುದ್ರಪ್ಪ : 'ಕವಿ ಕಾವ್ಯಕೆ', ದೇವಶಿಲ್ಪ, ಸಮಗ್ರಕಾವ್ಯ ಪುಟ ೧೨೩

೧೦. ಜಿ. ಎಸ್. ಶಿವರುದ್ರಪ್ಪ : 'ಕವಿತೆಗೆ' ಕಾರ್ತೀಕ, ಸಮಗ್ರಕಾವ್ಯ, ಪುಟ ೨೪೯.

೧೧. ಜಿ. ಎಸ್. ಶಿವರುದ್ರಪ್ಪ : 'ಕವಿತೆ ಬರೆಯುವುದು ಹೇಗೆ ?'. ಅನಾವರಣ, ಸಮಗ್ರಕಾವ್ಯ, ಪುಟ ೨೮೦, ೨೮೧ ಮತ್ತು ೨೮೩.

ಸಮಕಾಲೀನ 'ಕವಿತೆ ಸೃಷ್ಟಿ'ಯ ಬಗೆಗೆ ಶಿವರುದ್ರಪ್ಪನವರ ವಿಡಂಬನೆ ಅರ್ಥಪೂರ್ಣ. ಅವರು ಹೇಳುತ್ತಾರೆ : 'ಹೊರದೇಶದ ಅನುಭವಗಳನ್ನು ಆಮದು ಮಾಡಿ ಅಪರೂಪ ರಾಗ ತೆಗೆಯಬೇಕು. ಯಾರಿಗೂ ತಿಳಿಯದಂತೆ ಬರೆದರೆ ಅದೇ ಕವಿತೆ. ಅದು ಗಹನ, ಗಂಭೀರ, ಗೂಢ, ಗುಹ್ಯಾತ್ ಗುಹ್ಯತರ. ಬೃಹಸ್ಪತಿಗೂ ತಿಳಿಯದಂತಿದ್ದರೆ ಅದೇ ಕವಿತೆ. ಹುಟ್ಟಿತು ಕವಿತೆ ! ನ ಭೂತೋ ನ ಭವಿಷ್ಯತಿ ! ಹಾಳಾದ ಓದುಗ ಅರ್ಥಮಾಡಿಕೊಳ್ಳಲಿ. ಅರ್ಥವಾಗದಿದ್ದರೆ ಅವನೇ ಕೆಟ್ಟ ಮುಂದೆ ನಿನ್ನ ಕವಿತೆಯನ್ನು ಅರ್ಥೈಸುವವನೊಬ್ಬ ಬರುತ್ತಾನೆ. ಅಲ್ಲಿಯ ವರೆಗೆ ಕವಿತೆಯ ಹಿಂದೆ ಮುಂದೆ ಸುತ್ತಬೇಕು'.

'ಈ ಕವಿತೆ'[೧೨]ಯಲ್ಲಿ ಶಿವರುದ್ರಪ್ಪನವರು ಕಾವ್ಯದಲ್ಲಿ ಯಾವ ಸತ್ವ ಶ್ರೀಮಂತಿಕೆ ಇರಬೇಕೆಂಬ ಜಿಜ್ಞಾಸೆಯನ್ನು ಯುವ ಕವಿಗಳಿಗೆ ಕಿವಿಮಾತು ಹೇಳಿದ್ದಾರೆ. 'ಈ ಕವಿತೆ ಯಾವಳೋ ಹೆಣ್ಣ ಕಣ್ಣ ಬೆಳಕಿನ ಕಿರಣವಾಗಿ ಪುಟಿದದ್ದಲ್ಲ. ಪ್ರಣಯಾಲಾಪಗಳ ಬಳ್ಳಿಯನು ತಬ್ಬಿ ಹಬ್ಬಿದ್ದಲ್ಲ. ಯೌವ್ವನೋನ್ಮತ್ತ ವಿಕೃತ ಭ್ರಮೆಗಳಿಗೆ ಕೋಡಂಗಿ ವೇಷಕಟ್ಟಿ ಕುಣಿಸಿದ್ದಲ್ಲ. ಬೆಟ್ಟದಿಂದ ಅಕಸ್ಮಾತ್ತಾಗಿ ಸುರಿದ ತಡಸಲು ಇದಲ್ಲ... ಇದು ಬಾವಿಯ ತೋಡಿ ಯಾತವ ಹೊಡೆದ ರಾಗ'. ಇದು ಅನುಭವದ ಪರಿಪಾಕವೆಂದೂ ಕಾವ್ಯ ಅನುಭವದ ಪರಿಪಾಕವಾಗಿ ಮೂಡಿಬಂದಾಗ ಮಾತ್ರ ಅದರ ಆಶಯ ಸಾರ್ಥಕವೆಂಬ ಕವಿಯ ವಿಚಾರ ಎಲ್ಲ ಮಾರ್ಗ, ಪಂಥದ ಕವಿಗಳಿಗೆ ದಾರಿದೀಪ.

ಕವಿಯಾದವನು ಸಮಕಾಲೀನ ಸಂದರ್ಭದಲ್ಲಿ ಒತ್ತಡಕ್ಕೆ ಮಣಿದು ಕವಿತೆ ಗೀಚಬೇಕಾಗುತ್ತದೆ. ಅಂಥ ಸಂದರ್ಭವನ್ನು ಶಿವರುದ್ರಪ್ಪನವರು 'ಸಂಪಾದಕರಿಗೆ'[೧೩] ಎಂಬ ಕವಿತೆಯಲ್ಲಿ ಹೇಳಿದ್ದಾರೆ.

ಪದ್ಯಬೇಕು ಪದ್ಯಬೇಕು ಹಾಳುಪತ್ರ ಬರುತ್ತಿರುತ್ತದೆ.
ನಾವೇನು ಯಂತ್ರಗಳೇ ನೀವೇ ಹೇಳಿ ನಮಗೆ ಬಿಡುವಿಲ್ಲ.
ಸದ್ಯ ಈಗ ಕಾವ್ಯ ಕೃಷಿ ಇಲ್ಲವೆಂದರೂ ಇವರಿಗೆ ತಿಳಿಯುವದಿಲ್ಲ.
೨೦ನೆಯ ಶತಮಾನ ಸ್ವಾತಂತ್ರ್ಯ ಬಂದರೂ ನಮಗೆ ಸುಮ್ಮನೆ
ಇರಲು ಬಿಡುವದಿಲ್ಲ.
ಬರೆಯದೆಯೇ ವಿಧಿಯಿಲ್ಲ ತಗೊಳ್ಳಿ ಕವಿತೆ.
ಕೊನೆಗೆ ಒಂದು ಪ್ರತಿಯನ್ನಾದರೂ ಕಳಿಸಿಕೊಡಿ.

---

೧೨. ಜಿ. ಎಸ್. ಶಿವರುದ್ರಪ್ಪ : 'ಈ ಕವಿತೆ', ಅನಾವರಣ, ಸಮಗ್ರಕಾವ್ಯ, ಪುಟ ೨೯೧.
೧೩. ಜಿ. ಎಸ್. ಶಿವರುದ್ರಪ್ಪ : 'ಸಂಪಾದಕರಿಗೆ', ಅನಾವರಣ, ಸಮಗ್ರಕಾವ್ಯ, ಪುಟ ೩೦೧-೩೦೨.

ಇಂಥ ಕವಿತೆ ಅರವತ್ತು ಗಳಿಗೆಯ ಅಮರರಂತೆ ಆಗುತ್ತದೆಂದು ಶಿವರುದ್ರಪ್ಪನವರು ಹೇಳಿರುವದು ಸತ್ಯನಿಷ್ಠ ಸಂಗತಿಯಾಗಿದೆ. ಕವಿತೆ ಯಾಂತ್ರಿಕವಾದರೆ ಅದಕ್ಕೆ ಸಾರ್ವಕಾಲಿಕ ಮಹತ್ವ ಬರುವದಿಲ್ಲವೆಂತಲೂ ಅವರು ಸ್ಪಷ್ಟಪಡಿಸಿದ್ದಾರೆ.

'ಕವಿ–ಕಿವಿ'[೧೪] ಎಂಬ ಕವಿತೆಯಲ್ಲಿ ಶಿವರುದ್ರಪ್ಪನವರು ಆಧುನಿಕ ಕವಿಯ ಬಯಕೆಯನ್ನು ಪ್ರಕಟಿಸಿದ ರೀತಿ ಆಪ್ಯಾಯಮಾನ.

"ಈ ಮನೆಯಲ್ಲಿ ನನಗೆ ಒಂದಿಷ್ಟು ಜಾಗ ಕೊಡಿ
ನಾನೊಬ್ಬ ಕವಿ, ನನಗೆ ಬೇಕಾದದ್ದು ಹೃದಯವಿರುವಂಥ
ಐದೋ ಆರೋ ಕಿವಿ, ನಾನು ನೆಲ ಅಗೆದು
ಶೋಧಿಸುವ ಸಂಶೋಧಕನಲ್ಲ. ಇತಿಹಾಸದ
ಚಿನ್ನದ ಗೆರೆಯ ಹಾಳು ಕಪಾಟಿನ ತಾಳೆಗರಿ ಶೋಧಿಸಿ
ಹುಡುಕಿ ಹೇಳಲಾರೆ. ನನಗೆ ಬೇಕಾದದ್ದು ಹೃದಯವಿರುವಂಥ
ಕಿವಿ, ಅದಕ್ಕಿಂತ ದೊಡ್ಡದು ಇನ್ನಿಲ್ಲ".

ಇದು ಎಲ್ಲ ಕವಿಗಳ ಆಶಯವೂ ಆಗಿರಬೇಕೆಂದು ಹೇಳಿದ ಶಿವರುದ್ರಪ್ಪನವರು ಕವಿಗೆ ಸಹೃದಯ ಸಿಗದಿದ್ದರೆ ಅವನ ಕಾವ್ಯ ಅವನಲ್ಲೇ ಉಳಿಯುತ್ತದೆ; ಕಾವ್ಯ ಸಹೃದಯನ ಮೂಲಕವೇ ಸಾರ್ಥಕ್ಯ ಪಡೆಯಬೇಕೆಂಬುದನ್ನು ವಿದಿತಪಡಿಸಿದ್ದಾರೆ.

ಶಿವರುದ್ರಪ್ಪನವರು ಸ್ವತಃ ಕವಿಯಾಗಿ ಯಾವ ಉದ್ದೇಶಕ್ಕಾಗಿ ತಾವು ಕಾವ್ಯ ರಚನೆ ಮಾಡುವದಾಗಿ ತಮ್ಮ ಅಂತರಂಗವನ್ನೇ ತೆರೆದಿಟ್ಟು, 'ನಾನೇಕೆ ಬರೆಯುತ್ತೇನೆ'[೧೫] ಎಂಬ ಕವಿತೆಯಲ್ಲಿ ಪ್ರಕಟಿಸಿದ್ದಾರೆ.

'ಕವಿ ಕವಿತೆ ರಚಿಸುವದು ಸುಮ್ಮನಿರಲಾರದ್ದಕ್ಕೆ,
ನನ್ನ ಸಂವೇದನೆ ಕ್ರಿಯೆ, ಪ್ರತಿಕ್ರಿಯೆಗಳನ್ನು ದಾಖಲಿಸುವದಕ್ಕೆ,
ನಿಂತನೀರಾಗದೆ ಮುಂದಕ್ಕೆ ಹರಿಯುವದಕ್ಕೆ
ಎಲ್ಲರ ಜತೆ ಬೆರೆಯುವದಕ್ಕೆ ನಾನು ಬರೆಯುತ್ತೇನೆ.

ನನ್ನನ್ನು ಕಂಡುಕೊಳ್ಳುವದಕ್ಕೆ, ಕಾಣುವದಕ್ಕೆ,
ನಿಮ್ಮೊಂದಿಗೆ ಸಂವಾದಿಸುವದಕ್ಕೆ ನಾನು ಬರೆಯುತ್ತೇನೆ.
ಖುಷಿಗೆ, ನೋವಿಗೆ, ರೊಚ್ಚಿಗೆ, ಹುಚ್ಚಿಗೆ ನಂದಿಸೂರದ ಹುಚ್ಚಿಗೆ ಇತ್ಯಾದಿ."

---

೧೪. ಜಿ. ಎಸ್. ಶಿವರುದ್ರಪ್ಪ : 'ಕವಿ-ಕಿವಿ', ಅನಾವರಣ, ಸಮಗ್ರಕಾವ್ಯ, ಪುಟ ೩೧೩-೩೧೪.

೧೫. ಜಿ. ಎಸ್. ಶಿವರುದ್ರಪ್ಪ : 'ನಾನೇಕೆ ಬರೆಯುತ್ತೇನೆ' ಕಾಡಿನ ಕತ್ತಲಲ್ಲಿ, ಸಮಗ್ರಕಾವ್ಯ, ಪುಟ ೪೫೦

ಹೀಗೆ ಕವಿ ಕಾವ್ಯಲೋಕವನ್ನು ನಿರ್ಮಾಣಮಾಡುವ ಹಿನ್ನೆಲೆಯನ್ನು ಅದರ ವಿವಿಧೋದ್ದೇಶಗಳನ್ನು ಶಿವರುದ್ರಪ್ಪನವರು ಬಹು ವಸ್ತುನಿಷ್ಠವಾಗಿ ಇಲ್ಲಿ ಹೇಳಿದ್ದಾರೆ. 'ಸ್ಫೂರ್ತಿಪ್ರತಿಭೆ'[೧೬] ಎಂಬ ಎರಡು ಸಾಲಿನ ಕವಿತೆಯಲ್ಲಿ ಅವೆರಡರ ಸಾವಯವ ಸಂಬಂಧದಿಂದ ಉಂಟಾಗುವ ಕಾವ್ಯದ ಅಮೃತಧಾರೆಯನ್ನು ಸುಂದರ ಪ್ರತಿಮೆಯ ಮೂಲಕ ಅಭಿವ್ಯಕ್ತಿಸಿದ್ದಾರೆ. "ಸ್ಫೂರ್ತಿಯು ಕರು ಬಾಯಿಕ್ಕಲು ಪ್ರತಿಭೆಯು ಕೆಚ್ಚಲಿಗೆ ಶಬ್ದಾರ್ಥದ ಹಾಲಿಳಿವುದು ಕವಿಪಾತ್ರೆಯ ಒಳಗೆ." ಸ್ಫೂರ್ತಿಯನ್ನು ಕರುವಿಗೂ ಪ್ರತಿಭೆಯನ್ನು ಕೆಚ್ಚಲಿಗೂ ಪ್ರತಿಮಿಸಿ ಕಾವ್ಯಧಾರೆ ಹಾಲಿನ ಅಮೃತಸಿಂಚನದಂತೆ ಸುರಿಯುವದನ್ನು ಮನೋಜ್ಞವಾಗಿ ಬಣ್ಣಿಸಲಾಗಿದೆ. ಹಾಗೆಯೇ 'ಪ್ರತಿಭೆ ಪಾಂಡಿತ್ಯ'[೧೭] ಎಂಬ ಕವಿತೆಯಲ್ಲಿ ಅವೆರಡರ ಸಂಬಂಧದ ಮೂಲಕ ಕಾವ್ಯ ಸಾಧಿಸುವ ಉತ್ಕೃಷ್ಟತೆಯನ್ನು ಶಿವರುದ್ರಪ್ಪನವರು ವರ್ಣಿಸಿದ್ದಾರೆ. ಋತುಪರ್ಣ ಮಹಾರಾಜನನ್ನು ಕಾರ್ಕೋಟಕ ವಿಷಹಿಡಿದ ನಳ ಒಂದೇ ಸುಳಿಯಲ್ಲಿ ಸ್ವಯಂವರಕೆ ಸಾಗಿಸಿದ್ದು ಮಿಂಚಿನಪ್ರತಿಭೆ. ನಳನ ಈ ಅಶ್ವವಿದ್ಯೆ ಋತುಪರ್ಣನನ್ನು ಮೆಚ್ಚಿಸಿತು. ಆತನು ತನ್ನ ಪಾಂಡಿತ್ಯ ಪ್ರದರ್ಶಿಸಲು ಶಾಖೋಪಶಾಖೆಗಳಲ್ಲಿ ಚಾಚಿರುವ ಮರದಲ್ಲಿ ಎಲೆಗಳೆಷ್ಟೆಂಬುದನ್ನು ಕ್ಷಣಾರ್ಧದಲ್ಲಿ ಹೇಳಬಲ್ಲೆ ಎಂದ. ಮರದ ಎಲೆಗಳ ಸಂಖ್ಯೆ ಎಂಬತ್ತು ಸಹಸ್ರ ಲಕ್ಷದ ಮೇಲೆ ನಾನೂರುತೊಂಬತ್ತು ಎಂದ. ಋತುಪರ್ಣನ ಪಾಂಡಿತ್ಯಕ್ಕೆ ಬಾಹುಕ ತಲೆದೂಗಿದ. ಹೀಗೆ ಪ್ರತಿಭೆ ಪಾಂಡಿತ್ಯಗಳೆರಡೂ ನಳ-ಋತುಪರ್ಣರ ಸಂಬಂಧದಂತೆ ವಿಶಿಷ್ಟ ಶಕ್ತಿವಿಶೇಷಗಳಾಗಿವೆ. ಅವೆರಡೂ ಸಹೃದಯನನ್ನು ಸದಾ ಬೆರಗುಗೊಳಿಸುತ್ತಿರುತ್ತವೆಂಬುದರಲ್ಲಿ ಸಂದೇಹವಿಲ್ಲ.

ಕವಿಜೀವನದ ಅಂತರಂಗದ ವ್ಯಥೆಯ ಕಥೆಯ ಅಭಿವ್ಯಕ್ತಿ 'ಯಾವ ಹಾಡ ಹಾಡಲಿ ?'[೧೮] ಕವಿತಯಲ್ಲಿ ಮೂಡಿಬಂದಿದೆ. ಬರಿ ಮಾತಿನ ಜಾಲದಲ್ಲಿ, ಶೋಷಣೆಗಳ ಶೂಲದಲ್ಲಿ, ವಂಚನೆಗಳ ಸಂಚಿನಲ್ಲಿ, ಹಸಿದಹೊಟ್ಟೆ ನರಳುವಲ್ಲಿ ಯಾವ ಹಾಡ ಹಾಡಲಿ ? ಎಂಬ ಕವಿಪ್ರಶ್ನೆ ಅವನನ್ನು ಅಂತರ್ಮುಖಿಯಾಗಿಸಿದ್ದನ್ನು ನಿವೇದಿಸುತ್ತದೆ. ಸಮಕಾಲೀನ ಸಾಮಾಜಿಕ ಸನ್ನಿವೇಶ ಕಾವ್ಯದ ಸಾಂಸ್ಕೃತಿಕ ಅಭಿವ್ಯಕ್ತಿಗೆ ಆವರಣವನ್ನೂ ನಿರ್ಮಿಸುವ ಪರಿಸ್ಥಿತಿಯಿಲ್ಲವೆಂಬ ಶಿವರುದ್ರಪ್ಪನವರ ಅಭಿಮತವು ಎಲ್ಲ ಕವಿಗಳೂ ಎದುರಿಸುವ ಸಮಸ್ಯೆಯಾಗಿದೆ ಎಂಬುದು ಗಮನಾರ್ಹ.

---

೧೬. ಜಿ. ಎಸ್. ಶಿವರುದ್ರಪ್ಪ : ಸ್ಫೂರ್ತಿಪ್ರತಿಭೆ, ತೆರೆದದಾರಿ, ಸಮಗ್ರಕಾವ್ಯ ಪುಟ ೩೪೯.

೧೭. ಜಿ. ಎಸ್. ಶಿವರುದ್ರಪ್ಪ ; 'ಪ್ರತಿಭೆಪಾಂಡಿತ್ಯ' ಪ್ರೀತಿ ಇಲ್ಲದ ಮೇಲೆ, ಸಮಗ್ರಕಾವ್ಯ ಪುಟ ೪೬೭.

೧೮. ಜಿ. ಎಸ್. ಶಿವರುದ್ರಪ್ಪ : 'ಯಾವ ಹಾಡು ಹಾಡಲಿ ?' ಪ್ರೀತಿ ಇಲ್ಲದ ಮೇಲೆ. ಸಮಗ್ರಕಾವ್ಯ ಪುಟ ೪೫೬.

ಕವಿ ತನ್ನ ಆಂತರಿಕ ನೋವನ್ನು ನುಂಗಿ, ಸಾಮಾಜಿಕ ಸ್ಪಂದನಕ್ಕೆ ವಾಣಿಯಾಗಿ ನಿಲ್ಲಬೇಕೆಂಬ ಅಗತ್ಯವನ್ನು ಶಿವರುದ್ರಪ್ಪನವರು ಒತ್ತಿ ಹೇಳುತ್ತ ಬಂದಿದ್ದಾರೆ. 'ಬನ್ನಿ ನನ್ನ ಹೃದಯಕೆ'[೧೯] ಎಂಬ ಕವಿತೆಯು ಸಾಮಾಜಿಕನನ್ನು ಕವಿಯ ಅಂತರಂಗಕ್ಕೆ ಕರೆತಂದು ಅವನ ಮೂಕವೇದನೆಯ ಮಿಡಿತವನ್ನು ಶೃತಿಗೊಳಿಸುವ ವಿಧಾನ, ಇಂದಿನ ಸಮಕಾಲೀನ ಸಂದರ್ಭದಲ್ಲಿ ಅತ್ಯಗತ್ಯವಾಗಿ ಮಾಡಬೇಕಾದ ಕಾರ್ಯವೆಂದು ಶಿವರುದ್ರಪ್ಪನವರು ವಿದಿತಪಡಿಸಿರುವದು ಪ್ರಚಲಿತ ಸನ್ನಿವೇಶದಲ್ಲಿ ಇತರ ಕವಿಗಳಿಗೆ ಮಾರ್ಗದರ್ಶಕವಾಗಿದೆ.

ಶಿವರುದ್ರಪ್ಪನವರು ಭಾರತೀಯ ಕಾವ್ಯಮೀಮಾಂಸೆಯ ತತ್ವಗಳ ನೆಲೆಯಲ್ಲಿ ಕಾವ್ಯಶೋಧ ನಡೆಸಿರುವರಾದರೂ ಪಾಶ್ಚಾತ್ಯ ವಿಚಾರ ಚಿಂತನೆಗಳನ್ನು ಅವರು ಪಡೆಯದೇ ಇಲ್ಲ. ಭಾವಲೋಕದ ವಿಹಾರಿಗಳಾಗಿದ್ದ ಕವಿ ಸಾಮಾಜಿಕ ಸ್ಪಂದನಕ್ಕೆ ಮುಖಮಾಡಿ ನಿಂತುದು ಕನ್ನಡ ಕಾವ್ಯ ನಡೆದು ಬಂದ ದಾರಿಯ ಪ್ರತೀಕವೇ ಸರಿ. ಅವರ ಸಮಗ್ರಕಾವ್ಯದ ಅನ್ವೇಷಣೆಯಲ್ಲಿ ಕಾವ್ಯ ಕರ್ಮಕ್ರಿಯೆಯ ವ್ಯಾಪಕ ಚಿಂತನೆ ಸಾಗುತ್ತ ಬಂದುದನ್ನು ನಾವು ಕಂಡು ಬೆರಗಾಗುತ್ತೇವೆ. ಜೀವನವನ್ನು ಪ್ರೀತಿಸಿದಂತೆ ಕಾವ್ಯವನ್ನು ಸದಾ ಪ್ರೀತಿಸುತ್ತ ಬಂದ ಶಿವರುದ್ರಪ್ಪನವರ ಕವಿಪ್ರತಿಭೆ ಕನ್ನಡ ಕಾವ್ಯಮೀಮಾಂಸೆಯ ಕವನಗಳಿಗೆ ವಿಶಿಷ್ಟ ಕೊಡುಗೆಯನ್ನು ನೀಡಿದೆ. ಅದರ ಬಗ್ಗೆ ಹೆಚ್ಚಿನ ಚರ್ಚೆ ನಡೆಯಬೇಕಾದುದು ಅವಶ್ಯಕ.

● ● ●

---

೧೯. ಜಿ. ಎಸ್. ಶಿವರುದ್ರಪ್ಪ : 'ಬನ್ನಿ ನನ್ನ ಹೃದಯಕೆ', ಪ್ರೀತಿ ಇಲ್ಲದ ಮೇಲೆ, ಸಮಗ್ರ ಕಾವ್ಯ, ಪುಟ ೪೬೬.

ಗುಲಬರ್ಗಾ ಕನ್ನಡ ವಿಮರ್ಶೆ : ಒಂದು ಸಮೀಕ್ಷೆ

● ಸದಾನಂದ ಪಾಟೀಲ

ಕಾಯು ಕಟ್ಟು ನೋಯು ಈಯು ಎಂಬ ಪ್ರಸವ ಪೂರ್ವೋತ್ತರ ಸೃಷ್ಟಿಯ ಚಿತ್ರಣವೇ ಕಲೆಗೆ ಸಂಬಂಧಿಸಿದ ಎಲ್ಲಾ ಕಲಾಸೃಷ್ಟಿಗೂ ಅನ್ವಯವಾಗುವ ವ್ಯಾಖ್ಯಾನವಾಗಿದೆ. ಚಿತ್ರವಿರಲಿ, ಕಾವ್ಯವಿರಲಿ, ಸಂಗೀತವಿರಲಿ – ಅವೆಲ್ಲಕ್ಕೂ ದಟ್ಟವಾದ ಅನುಭವ, ಮಾನಸಿಕ ತೊಳಲಾಟ ಹೊರಹಾಕಬೇಕೆನ್ನುವ ಒತ್ತಡಕ್ರಿಯೆ ಕಾರಣವಾಗಿದೆ.

ಮನಸಲ್ಲಿ ಹೊಳೆದು, ಹೊಸೆದು, ಬೆಳೆದು ಬೇರೊಡೆಯುವುದು ಕಾವ್ಯವಾದರೆ, ಪದರು ಪದರಾಗಿ ಬಿಚ್ಚಿಕೊಂಡು ಅದರ ಸೌಂದರ್ಯವನ್ನು ಹರಹಿಕೊಳ್ಳುವುದು ವಿಮರ್ಶೆಯೆನಿಸುತ್ತದೆ. ಹಾಗೆಯೇ ಅದರೊಳಗಿನ ವಸ್ತುನಿಷ್ಠವಾದ ಸತ್ಯವನ್ನು ಪ್ರದರ್ಶಿಸುವುದು ಚಿರಂತನ ಮೌಲ್ಯದ ಸಂಶೋಧನೆಯೆನಿಸಿದರೆ, ಹಾಗೆ ಕಟ್ಟಿಕೊಟ್ಟ ಗಂಟನ್ನು ಬಿಚ್ಚಿ ಹರವಿಟ್ಟಿರುವ ಸತ್ಯ ಮತ್ತು ಸೌಂದರ್ಯವನ್ನು ಪುನರಪಿ ನಿರೀಕ್ಷಿಸುವ ಕ್ರಿಯೆ ಪರಾಮರ್ಶೆಯೆನಿಸುವುದು. ಈ ಹಿನ್ನಲೆಯಲ್ಲಿ ಗುಲಬರ್ಗಾ ಕನ್ನಡ ವಿಮರ್ಶೆಯ ಸಮೀಕ್ಷೆಯನ್ನು ಇಲ್ಲಿ ಮಾಡಲಾಗಿದೆ.

ಬೆಳೆಯುತ್ತಿರುವ ಸಸಿಗೆ ಕಿತ್ತು ಹೋಗುವ ಏಟು ಬೀಳುವಂತೆ ಇಂದಿನ ವಿಮರ್ಶೆ ನಡೆದಿದ್ದು ಸರ್ವವಿದಿತ. ಬೆಳೆದಿರುವಂತಹ ಮರ ತನ್ನ ಅಜೀರ್ಣ ಅವಸ್ಥೆಯಲ್ಲೂ ಪೋಷಣೆ ಮಾಡಿಕೊಳ್ಳುವ ಕೃತಕ ವ್ಯವಸ್ಥೆಯಂತೆ ಗುಂಪುಗಾರಿಕೆಯ ಪರಸ್ಪರ ಒಪ್ಪಂದದ ವಿಮರ್ಶೆಯೂ ಹುಲುಸಾಗಿ ಬೆಳೆದಿದೆ. ಆದರೆ ಆಗಬೇಕಾದದ್ದು ಹೀಗಲ್ಲ, ಶೂನ್ಯಮನಸ್ಸಿನಿಂದ ಸಮಷ್ಟಿದೃಷ್ಟಿಯಿಂದ, ಸಮತೋಲದ ತಕ್ಕಡಿ ಭಾವದಿಂದ ಸಾಹಿತ್ಯಕೃತಿಗಳನ್ನು ತೂಗಿ ನೋಡಬೇಕಾಗಿದೆ. ಹಾಗೆ ತೂಗಿದ ಕೆಲವಾದರೂ ಪುಸ್ತಕಗಳು ಗುಲಬರ್ಗಾದಲ್ಲಿ ಪ್ರಕಟವಾಗಿವೆ.

ಸಾಹಿತ್ಯ ಮತ್ತು ಚಿತ್ರಕಲೆ : ಪ್ರೊ. ಎಂ. ವಿ. ಸೀತಾರಾಮಯ್ಯನವರ ಈ ಚಿಕ್ಕಪುಸ್ತಿಕೆ, ಸಾಹಿತ್ಯ ಅಂದರೇನು ? ಚಿತ್ರಕಲೆಗೂ–ಸಾಹಿತ್ಯಕ್ಕೂ ಇರುವ ಸಂಬಂಧವೆಂತಹದು ಎಂಬುದರ ಸ್ಥೂಲಪರಿಚಯ ಮಾಡಿಕೊಡುತ್ತದೆ. ಹಾರ್ಡ್ಸ್‌ಲಿಟ್, ರಸ್ಕಿನ್, ಆರ್ನಾಲ್ಡ್, ಕಾರ್ಲೈಲ್, ವಿಲ್ಸನ್, ಬ್ರೌನಿಂಗರವರ ಅಭಿಪ್ರಾಯಂಗಳನ್ನು

ತಮ್ಮ ಬರಹದುದ್ದಕ್ಕೂ ಕಾಣಿಸುತ್ತ, ಅಲ್ಲಲ್ಲೇ ಎಂದಿನಂತೆ ಭಾರತೀಯ ಪರವಾದ ಒಬ್ಬರನ್ನೋ ಇಬ್ಬರನ್ನೋ ಉಲ್ಲೇಖಿಸಿದ್ದಾರೆ. ಉತ್ತಮ ಸಾಹಿತ್ಯವು ಜೀವನದ ವಿಮರ್ಶೆಯಾಗಿರಬೇಕು. ಆನಂದದಾಯಿಯಾಗಿರಬೇಕು. ಇವೆರಡನ್ನೊಳಗೊಂಡು ಮನಸ್ಸನ್ನು ಸಂಸ್ಕರಿಸುವ ಶಕ್ತಿವಿಶೇಷ ಕಾವ್ಯಕ್ಕಿರಬೇಕು. ಹಾಗೆಯೇ ಚಿತ್ರವೊಂದನ್ನು ನೋಡಿದಾಗ ಅದು ಪ್ರಕೃತಿಯ ಅನುಕರಣೆಯಾದರೂ ಸಹೃದಯನ ಮನಸ್ಸನ್ನು ತಟ್ಟನೆ ಹಿಡಿದು ನಿಲ್ಲಿಸುವ ಸೌಂದರ್ಯಾತಿಶಯ ಅಥವಾ ಆಕರ್ಷಣೆ ಆ ಚಿತ್ರಕ್ಕಿರಬೇಕು. ಕಾವ್ಯ ಚಿತ್ರಗಳೆರಡೂ ನೂತನ ಸೃಷ್ಟಿಯೇ. ಒಂದು ಶಬ್ದ ಸಾಕ್ಷಾತ್ಕಾರ, ಇನ್ನೊಂದು ದೃಶ್ಯ ಸಾಕ್ಷಾತ್ಕಾರವಾಗಬೇಕೆನ್ನುತ್ತಾರೆ— ಎಂ. ವಿ. ಈ ಮಾತಿಗೆ ಪೋಷಕವಾಗಿ ಮಿಲ್ಟನ್ನನ "ಒಂದು ಉತ್ತಮ ಗ್ರಂಥವು ಮಹಾಚೇತನನೊಬ್ಬನ ಅನರ್ಘ್ಯವಾದ ಜೀವಸಾರ. ಜೀವಿತದ ಮುಂದಿನ ಜೀವಿತಕ್ಕಾಗಿ ಶೇಖರಿಸಿದ ಜೀವಸಾರ" ಎಂಬ ಮಾತನ್ನು, ರಸ್ಕಿನ್ನನ "ಎಲ್ಲಾ ಶ್ರೇಷ್ಠ ಕಲೆಯೂ ಸಾಕ್ಷಾತ್ಕಾರ. ಎಲ್ಲಾ ಶ್ರೇಷ್ಠ ಕಲೆಯೂ ಸ್ತುತಿ" ಎಂಬ ಮಾತನ್ನು ಉದ್ಧರಿಸುತ್ತಾರೆ. ಹೀಗೆ ನೋಡುವ, ಕೇಳುವ, ಆ ಮೂಲಕ ಸಂಸ್ಕರಿತವಾಗುವ ಮನಸ್ಸಿನ, ಹೃದಯದ ಪುಟ್ಟ ವಿವೇಚನೆ ಈ ಪುಸ್ತಕದಲ್ಲಿದೆ.

೧೯೨೯ರಷ್ಟು ಹಿಂದೆ ಬರೆದು ಈಗ ಪ್ರಕಟಗೊಂಡಿರುವ ಈ ೨೮ ಪುಟಗಳ ಪ್ರಬಂಧ ತನ್ನ ಸರಳ ನಿರೂಪಣೆಯಿಂದ ಮನಸೆಳೆಯುತ್ತಾದರೂ ತನ್ನ ಹಳೆಯತನವನ್ನು ಅದು ಎಂದಿಗೂ ಕಳೆದುಕೊಳ್ಳಲಾರದು. ಇನ್ನೊಂದು ಮಾತು : ಈ ಪುಸ್ತಕ, ವಿಮರ್ಶೆಯ ಕೃತಿಯೆನಿಸದು; ಮೀಮಾಂಸೆಗೆ ಸಂಬಂಧಿಸಿದ ಪುಸ್ತಕದಂತೆ ಭಾಸವಾಗುತ್ತದೆ.

ಸಮಾಹಿತ ; ಡಾ. ಸರೋಜಿನಿ ಚವಲಾರರ ಈ ಪುಸ್ತಕ ಸಾಹಿತ್ಯ ಮತ್ತು ಸಾಹಿತ್ಯೇತರ ಲೇಖನಗಳಿಂದ ಕೂಡಿದೆ. ಒಮ್ಮೆ ಕಣ್ಣಾಡಿಸಿ ಮುಚ್ಚಿಡುವಷ್ಟು ಮಾತ್ರ ಕೈಗೆತ್ತಿಕೊಳ್ಳುವ ಹಾಗೆ ಅಸಮರ್ಪಕ ಬಾಲಿಶ ಬರವಣಿಗೆಯಿರುವ ಈ ಕೃತಿಯಲ್ಲಿ 'ಕವಿಗಳು ಕಂಡ ಚಂದ್ರ', 'ಸಾಹಿತ್ಯದಲ್ಲಿ ನಿರೂಪಿತ ಶೋಷಣೆಯ ಸ್ವರೂಪ' ಎಂಬ ಲೇಖನಗಳು ಮನಸೆಳೆಯುತ್ತವೆ. ಕಾಯಕತತ್ವಕ್ಕೆ ಸಂಬಂಧಿಸಿ ಇಂದಿನ ಕಾರ್ಮಿಕ ಪದಕ್ಕೆ ಸಂವಾದಿಯಾಗಿ 'ಶರಣ' ಪದವನ್ನು ಪರಿಭಾವಿಸಬೇಕೆನ್ನುವ ಅವರ ಅಭಿಪ್ರಾಯ ಸರಿಯಲ್ಲ. ಸ್ತ್ರೀಪರವಾದ ಅಭಿಮಾನ ಮೆಚ್ಚಿಕೊಳ್ಳುವಂತಹದೇ.

ಶಿವಶರಣ-ಶರಣೆಯರ ವಚನೋಲ್ಲೇಖದೊಂದಿಗೆ ಮೂರುನಾಲ್ಕು ಲೇಖನಗಳು ಬಂದಿವೆ. ಅವುಗಳಲ್ಲಿ ಇತಿಹಾಸ ಪ್ರಜ್ಞೆ ಇರದಿರುವುದು ಕಂಡುಬರುತ್ತದೆ. ವಿಮರ್ಶಕ ಕೇವಲ ಮೇಲಮೇಲಿನ ಬರಹ ಬರೆಯುವುದಕ್ಕಿಂತ ಕಲ್ಪನೆಯ ರಕ್ತಮಾಂಸ ತುಂಬುವಾಗಲೂ ವಾಸ್ತವತೆಯನ್ನು ಮರೆಯಬಾರದು. ಹಾಗೆಯೇ ಅಂದಿನ ಕಾಲದೊಡನೆ

ಹೆಜ್ಜೆ ಹಾಕುವ ಜಾಣ್ಮೆಯೂ ಇರಬೇಕಾಗುತ್ತದೆ. 'ಸಾಹಿತ್ಯದಲ್ಲಿ ನಿರೂಪಿತ ಕನ್ನಡಿಗರ ಶೋಷಣೆಯ ಸ್ವರೂಪ' ಎಂಬ ಲೇಖನವಾದರೂ ಇಡಿಯಾಗಿ ಮೆಚ್ಚಿಕೊಳ್ಳಬೇಕು, ಬಿಡಿಯಾಗಿ ಓದುತ್ತ ನಡೆದರೆ ದೀನದಲಿತರ, ಅಸ್ಪೃಶ್ಯರ ಶೋಷಣೆಯನ್ನು ಕನ್ನಡ ಕಾವ್ಯಗಳು, ವಚನಗಳು, ದಾಸರ ಹಾಡುಗಳು ಹೇಗೆ ಪ್ರತಿಭಟಿಸಿವೆಯೆಂಬುದನ್ನು ವಿವರಿಸುತ್ತದೆ ಹೊರತು, ಲೇಖನಕ್ಕೆ ನೀಡಿದ ಶಿರೋನಾಮೆಯ ಹಾಗೆ ಲೇಖನವಿಲ್ಲ. ಏನಿದ್ದರೂ ಸ್ತ್ರೀಪರವಾದ ಅವರ ಸಾತ್ವಿಕ ಸಂತಾಪ, ಸಂದರ್ಭ ಬಂದಾಗಲೆಲ್ಲ ವ್ಯಕ್ತಗೊಂಡಿದೆ. ಹರಕಾಮುರುಕಾ ರೀತಿಯಲ್ಲಿ ವಚನಗಳ ವಿಶ್ಲೇಷಣೆ ಇದೆ. ಅಷ್ಟೇ ಅಶಿಸ್ತಿನ ಬರವಣಿಗೆ 'ನಿಜಭಕ್ತಿ ನೀಲಾಂಬಿಕೆ' ಎಂಬ ಜನಪದ ಹಾಡಿನ ನಿರೂಪಣೆಯಲ್ಲೂ ಇದೆ. ದೊಡ್ಡ ಹೆಸರಿರುವ ಡಾ. ಸರೋಜಿನಿ ಚವಲಾರರ ಈ ಸಮಾಹಿತ ಸಾಧಾರಣ ಪುಸ್ತಕವಾಗಿದೆ.

ಸಾರಸ : ತಾಳ್ತಜೆ ವಸಂತಕುಮಾರ ಅವರ ಈ ಪುಸ್ತಕದಲ್ಲಿ ೧೨ ಲೇಖನಗಳಿವೆ. ನಾಲ್ಕು ಸಂಶೋಧನ ಲೇಖನಗಳು, ಎರಡು ಜನಪದಕ್ಕೆ ಸಂಬಂಧಿಸಿದವುಗಳು, ಆರು ಸಾಹಿತ್ಯ ವಿಮರ್ಶೆಗೆ ಮೀಸಲಾದವುಗಳು. ಸಾಹಿತ್ಯ ವಿಮರ್ಶೆಗೆ ಸಂಬಂಧಿಸಿ 'ಆದಿಪುರಾಣದ ಒಂದು ರಸಪ್ರಸಂಗ' ಲೇಖನದಲ್ಲಿ ಪಂಪ ಕೊಡುವ ಪ್ರಣಯದ ಸನ್ನಿವೇಶಗಳ ರಸವತ್ ಚಿತ್ರಣವನ್ನು ವಿವರವಾಗಿ ನೀಡಿದ್ದಾರೆ. ವಜ್ರಜಂಗ, ಶ್ರೀಮತಿ, ಲಲಿತಾಂಗ, ಸ್ವಯಂಪ್ರಭೆಯರ ಪ್ರಣಯದ ಕೆಲಮುಖಗಳನ್ನು ಸಾವಿನ ದುರಂತತೆಯನ್ನು ಹಂತಹಂತವಾಗಿ ಲೇಖನದಲ್ಲಿ ಕಂಡರಿಸಿದ ಬಗೆ ಸಾಮಾನ್ಯ ಓದುಗನನ್ನು ಸೆರೆಹಿಡಿಸುತ್ತದೆ. ಕಾವ್ಯದಲ್ಲಿ ಒಡಮೂಡುವ ಪ್ರಣಯದ ವ್ಯವಹಾರ ಲೌಕಿಕದಲ್ಲಿ ಅನುಭವಿಸುವದಕ್ಕಿಂತ ಭಿನ್ನವೋ ಹೇಗೆಂಬುದನ್ನು ಲೇಖನದ ಪ್ರಾರಂಭದಲ್ಲಿ ವಿವರಿಸಿದ್ದಾರೆ, ಬದುಕಿನ ಮುಖ್ಯ ಘಟ್ಟ ತಾರುಣ್ಯ. ತಾರುಣ್ಯದ ಅವಸ್ಥೆಗಳಲ್ಲಿ ಸಿಂಗಾರ, ಕಾಮ ಮತ್ತು ಅಸ್ವಸ್ಥ ಮನಸ್ಸುಗಳ ವಿಶ್ಲೇಷಣೆ: ನಂತರ ಪರಸ್ಪರರಲ್ಲಿ ಹುಟ್ಟುವ ಪ್ರೀತಿಯ ಆವೇಶ, ಅದರಿಂದ ಮುಂದಾಗುವ ದಾಂಪತ್ಯದ ವಿವೇಚನೆ—ಲೌಕಿಕದಿಂದ ಭಿನ್ನವಾಗದ ಹಾಗೆ ಕಾವ್ಯದಲ್ಲಿ ಮೂಡಿದ್ದನ್ನು ಬಿಡಿಬಿಡಿಯಾಗಿ ಹೇಳಿದ್ದಾರೆ. ಆ ಅರ್ಥದಲ್ಲಿ ವಿಮರ್ಶೆ ಪದರುಪದರಾಗಿ ಬಿಚ್ಚಿಕೊಂಡು ಅವು ಹೇಳಬೇಕಾದ್ದನ್ನು ಓದುಗನು ಸರಳವಾಗಿ ಅರ್ಥೈಸುವಂತೆ, ಆನಂದಿಸುವಂತೆ ಮಾಡುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ. ಅವರ ಆಯ್ಕೆ ನೋಡಿ : ಲಲಿತಾಂಗನಿಲ್ಲದ ಸ್ವರ್ಗ: ಅವನ ಸಾಮಿಪ್ಯ ಕಳೆದುಕೊಂಡ ಸ್ವಯಂಪ್ರಭೆಯ ವಿರಹದ ವಿಕಳಾವಸ್ಥೆಯ ಪಂಪ ಚಿತ್ರಣವನ್ನು ಆಯ್ದ್ಯುವ, ರಸಜ್ಞತೆ ಲೇಖಕರ ರಸರುಚಿಗೆ ಸಾಕ್ಷಿಯಾಗಿದೆ.

"ಅಲಕಂ ಮಂದಾರ ಶೂನ್ಯಂ ಕದಪು ಮಕರಿಕಾಪತ್ರ ಶೂನ್ಯಂ ಲಲಾಟಂ ತಿಲಕಾಲಂಕಾರ ಶೂನ್ಯಂ ಘನಕುಚಯುಗಲಂ ಹಾರ ಶೂನ್ಯಂ ನಿತಂಬಂ ಕಲಕಾಂಚೀದಾಮ ಶೂನ್ಯಂ, ಚರಣಯುಗಲಂ ನೂಪುರಾಳಾಪ ಶೂನ್ಯಂ ಲಲಿತಾಂಗಂ

ಪೋದೊಡಾಯ್ತಾಕೆಗೆ ದಿವಮನಿತುಂ ನಿರ್ಜರಾರಣ್ಯ ಶೂನ್ಯಂ". ಪ್ರಿಯಕರನಿಲ್ಲದ ಸ್ವರ್ಗವು ಕಾಡಾದ ಬಗೆಯಲ್ಲಿ ಶೂನ್ಯದ ಬೇರೆ ಬೇರೆ ಅರ್ಥವಲಯಗಳು ವಿಸ್ತಾರ ವಾಗುವ ರೀತಿ ಇದು. ಮಾನಸಿಕ ತುಮುಲಗಳ ತಾರುಣ್ಯಾವಸ್ಥೆಗಳ ಈ ಸುಂದರ ಚಿತ್ರ ಎಲ್ಲರ ಮನದಲ್ಲೂ ಉಳಿಯುತ್ತದೆ. ಇನ್ನು ಸಾವು. ಸಾವು ನಿಜಕ್ಕೂ ಒಂದು ಬೆರಗು. ಇನ್ನೂತನಕ ತಿಳಿಯಲಸಾಧ್ಯವಾದ ಸಾವು ಯಾವ ಯಾವ ರೂಪದಲ್ಲಿ ಬಂದೊದಗುತ್ತದೆ. ಧೂಪದ ಹೊಗೆಯಿಂದ ಸಾವು ಬರುವುದು ಅಸಾಧ್ಯ. ಆದರೆ ಕವಿಕಲ್ಪನೆಯು ಈ ಸಾವಿನಲ್ಲಿ ಅಪ್ಪುಗೆಯ ಈ ಮಧುರ ಚಿತ್ರವಿದೆ. ಅಮರ ಪ್ರೀತಿಯ ಕಾಣ್ಕೆ ಇದೆ.

'ರನ್ನನಲ್ಲಿ ರಸಾಭಿವ್ಯಕ್ತಿ' ಲೇಖನವೂ ಅಷ್ಟೇ. ಪಂಪನ ಗಾಢ ಛಾಯೆಯಲ್ಲಿ ರನ್ನ ತನ್ನ ಕೃತಿ ರಚಿಸಿದ್ದರೂ ನಾಟಕೀಯತೆ ಮತ್ತು ವೈಜ್ಞಾನಿಕ ದೃಷ್ಟಿಯಿಂದಾಗಿ ರನ್ನ ಕೃತಿ ಪರಿಣಾಮಕಾರಿಯಾಗಿದೆ. ಎಲ್ಲರನ್ನು ಕಳೆದುಕೊಂಡ ಕೌರವ ಅಂದು ಕೊಳ್ಳುವ ಅವನ ಸ್ಥಿತಿ ಶೂನ್ಯವಾಗಿದೆ. ಆ ಶೂನ್ಯದ ವಿಷಯವಾದರೂ ಪಂಪನಲ್ಲಿ ಮೊದಲೇ ಬಂದಿದೆ. ರನ್ನನಲ್ಲಿ ಬೇರೆ ರೂಪಧರಿಸಿ ಅಭಿವ್ಯಕ್ತಗೊಂಡಿದೆ. ಥಟ್ಟನೆ ನಮ್ಮನ್ನು ಹಿಡಿದಿಡುವ ಮಾನವೀಯ ಭಾವಗಳನ್ನು ಗುರುತಿಸಿ, ಅವಕ್ಕೆ ಜೀವ ತುಂಬುವ ಕಾರ್ಯ ರನ್ನನಿಗೆ ಚೆನ್ನಾಗಿ ಗೊತ್ತಿತ್ತು. ಅನುಭವವೂ ಕಾವ್ಯವೂ ಅಭಿನ್ನವಾದಾಗ ಇದು ಸಾಧ್ಯ.

'ಹರಿಹರನ ರಗಳೆಗಳು' ಸಂಕ್ಷೇಪವಾದ ಸಿಂಹನೋಟದ ಲೇಖನ. ಒಂದು ಸಂಕ್ರಮಣ ಘಟ್ಟದಲ್ಲಿ ಕ್ರಾಂತಿಕಾರಕ ಪ್ರವೃತ್ತಿಯಲ್ಲಿ ಹರಿಹರನಿಂದ ರಗಳೆ ಹುಟ್ಟಿ ಬಂದು, ಕನ್ನಡ ಸಾಹಿತ್ಯಕ್ಕೆ ಚಿರಂತನ ಕಾಣಿಕೆ ಸಲ್ಲಿಸಿತು. ಭಕ್ತಿಯ, ವೀರದ ಸಾಂಸ್ಕೃತಿಕ, ರಾಜನ, ನಾಡಿನ ಸಮಗ್ರ ಅಂಶಗಳನ್ನು ಹರಿಹರ ನೀಡಿದಷ್ಟು ವಿವರ ಗಳನ್ನು ನಮ್ಮಲ್ಲಿ ಇನ್ನಾರೂ ಕೊಟ್ಟಿರಲಿಕ್ಕಿಲ್ಲ. ಅವುಗಳ ಪುಟ್ಟ ಪರಿಚಯಾತ್ಮಕ ವಿವೇಚನೆ ಈ ಲೇಖನದಲ್ಲಿ ಬಂದಿದೆ. ಚರ್ವಿತಚರ್ವಣವೆನಿಸಿದರೂ ಹೊಸ ಓದು ಗರಿಗೆ ಕುತೂಹಲಕಾರಿ ಲೇಖನವಾಗಿದೆ.

'ಶ್ರೀಯುವರ ಅಶ್ವತ್ಥಾಮನ್' ಲೇಖನವು ಶ್ರೀಯುವರ ರುದ್ರನಾಟಕದ ರಚನೆ ಕುರಿತು, ನಾಟಕ ಕುರಿತು ರಚನೆಗೊಂಡಿದೆ. ಒಂದು ಕ್ಷಣ ಬಂದು ಮಿಂಚಿ ಹೋಗ ಬಲ್ಲ ಪಾತ್ರಗಳು ಎಷ್ಟು ಗಾಢವಾದವುಗಳೆಂಬುದನ್ನು ಕಂಡುಕೊಂಡ ಗ್ರೀಕ್ ರುದ್ರ ನಾಟಕದಂತೆಯೇ ಅಶ್ವತ್ಥಾಮನ್ ರಚಿಸಿದ್ದಾರೆ. ತಾಳ್ತಜೆಯವರು ಶ್ರೀಯುಂತೆಯೇ ಶ್ರೀಯುವರ ಲೋಪದೋಷಗಳನ್ನೂ ವಿವೇಚನೆಗಿಟ್ಟಿದ್ದಾರೆ. ಮಹಾಭಾರತದಲ್ಲಿ ಈ ಅಶ್ವತ್ಥಾಮನ ಪಾತ್ರವಾದರೂ ಎಂತಹದು ? ತಂದೆಯ ಮೇಲಿನ ಪ್ರೀತಿಯೊ ? ಅವನ ದೌರ್ಬಲ್ಯವೊ ? ಒಡೆಯನ ಉಪ್ಪಿನ ಋಣವೊ ? ಏನಿದ್ದರೂ ಹೊಸದಾಗಿ

ರಚನೆಗೊಂಡಂತಿರುವ ಏಕಲವ್ಯನ ಪಾತ್ರ; ದೈವದ ವಿರೋಧಿಯಾದವನ ಕೇಡು; ಭೀಮನ ಅಸಹ್ಯ ವರ್ತನೆ ಮುಂತಾದವು ಹೃದಯಕಲಕುವಂತೆ ಮಾಡಿದ್ದರ ಚಿತ್ರಣ ವನ್ನು ಪ್ರಸ್ತುತ ಲೇಖಕರು ಗಮನಕ್ಕೆ ತಂದಿದ್ದಾರೆ.

ಚಿಕವೀರ ರಾಜೇಂದ್ರ ಮತ್ತು ಇತಿಹಾಸ : ಮಾಸ್ತಿಯವರ ಜ್ಞಾನಪೀಠ ಪ್ರಶಸ್ತಿ ವಿಜೇತ ಕಾದಂಬರಿ ಕುರಿತಾದ ಇಣುಕು ನೋಟದ ಈ ಲೇಖನದಲ್ಲಿ ತಾಳ್ತಜೆಯವರು 'ಅನೈತಿಕತೆಯಿಂದ ದುರಂತ ಪರಂಪರೆಗಳು ಆರಂಭವಾಗುತ್ತವೆ ಎಂಬ ಸತ್ಯವನ್ನು ದಾಖಲೆಗೊಳಿಸಿದ ಕಲಾಕೃತಿ ಚಿಕವೀರ' ಎಂದು ಹೇಳಿದ್ದಾರೆ. ಇತಿಹಾಸದಂತಹ ಸಿದ್ಧವಸ್ತುಗಳ ಒಳಗೆ ಕಲಾತ್ಮಕವಾದ ಕುಸರೀ ಕೆಲಸಕ್ಕೆ ಮಾಸ್ತಿ ಯವರು ತೊಡಗಿದ್ದುದು ಪೂರ್ವಾಗ್ರಹಪೀಡಿತದಿಂದ ಎಂದು ನಾನು, ನನ್ನಂಥವರು ಎಣಿಸುತ್ತೇವೆ. ಕುಂಟ ಬಸವಯ್ಯನ ಪಾತ್ರವಾಗಲಿ, ಚಿಕವೀರ ರಾಜನ ಪಾತ್ರವಾಗಲಿ ಇತಿಹಾಸದಲ್ಲಿ ಇಲ್ಲದ್ದನ್ನೊಳಗೊಂಡೆ ಚಿತ್ರಣಗೊಂಡಿದೆ. ಎಂತಹ ದುಷ್ಟನಾದರೂ, ಎಷ್ಟೋ ಅನೀತಿಯ ವ್ಯಕ್ತಿಯಾದರೂ, ಒಡಹುಟ್ಟಿದ ಸೋದರಿಯನ್ನು ವ್ಯಭಿಚಾರಿ ಯಂತೆ ಆಪ್ತೇಷ್ಟನಿಗೆ ನಡೆಸಿಕೊಳ್ಳಲು ಹೇಳುವುದಿಲ್ಲ. ಹಾಗೆ ಮಾಸ್ತಿಯವರು ಮಾಡಿ ದ್ದಾರೆ. ಸಿದ್ಧವಸ್ತುವಿನ ಮಿತಿ ದಾಟಿ ಅನೀತಿಯ ದುಷ್ಟಪರಂಪರೆಯನ್ನು ಚಿತ್ರಿಸಲು ಹೊರಟ ಕಾದಂಬರಿಕಾರರು ಇನ್ನೂ ಜೀವಂತವಿರುವ ಆ ಅರಸುಮನೆತನದವರ ಮಾನವನ್ನು ಮೂರು ಕಾಸಿಗೆ ಮಾರಾಟ ಮಾಡಿದ್ದಾರೆ. ಇತಿಹಾಸದ ಮಿತಿಯಲ್ಲೇ ಪಾತ್ರಗಳ ಅನೀತಿಯನ್ನು ಹೆಚ್ಚು ಪರಿಣಾಮಕಾರಿಯಾಗಿ ಚಿತ್ರಿಸಬಲ್ಲ ತಾಕತ್ತಿದ್ದರೂ ಮಾಸ್ತಿಯವರು ಯಾವುದೋ ವಿಕ್ಷಿಪ್ತಮನಸಿನ ದುರಾಗ್ರಹಕ್ಕೆ ಒಳಗಾಗಿ ಅನೇಕ ಮನಸುಗಳ ನೋವಿಗೆ ಕಾರಣರಾಗಿದ್ದಾರೆ. ಧರ್ಮಗಳ ಪ್ರಭಾವ ಸಣ್ಣತನ ಸೂಕ್ಷ್ಮ ವಾಗಿಯಾದರೂ ನಿಂದನೆ ಮಾಡುವಂತೆ ಮಾಡಿದ್ದು ನಮ್ಮ ದುರ್ದೈವ ಅಷ್ಟೇ. ಇನ್ನು ಈ ಲೇಖಕರು ಅಂತಹ ಕೆಟ್ಟ ಕಾದಂಬರಿಯೊಂದನ್ನು ಆದರ್ಶ ಕಲಾಕೃತಿಯೆಂಬಂತೆ ಮಾಸ್ತಿಯವರಿಗೆ ಶಹಬಾಸಗಿರಿ ಕೊಟ್ಟಿದ್ದಾರೆನಿಸುತ್ತದೆ.

'ಇನಾಂದಾರರ ಕಾದಂಬರಿಗಳು' : ಕಥೆಯೂ ಮುಖ್ಯ, ಕಥೆ ಹೇಳುವ ಕ್ರಮವೂ ಮುಖ್ಯವೆಂಬುದಕ್ಕೆ ಚಿತ್ರಲೇಖಾ ಮತ್ತು ಊರ್ವಶಿ ಕಾದಂಬರಿಗಳನ್ನು ಆಯ್ದಿದ್ದಾರೆ. ಭಾವಭಾವನೆಗಳ ಒಳಿತು ಕೆಡಕುಗಳ ನೀತಿಯ ಪತನದ ಹಾಗೂ ದರ್ಶನದ ಪರಿಣಾಮಗಳನ್ನು ಓದುಗ ಕಂಡುಕೊಳ್ಳುವಂತೆ ಕಾದಂಬರಿಗಳು ಮನ ಸೆಳೆದ ವಿವರಗಳನ್ನು ಸೋದಾಹರಣವಾಗಿ ತಾಳ್ತಜೆ ವಿವರಿಸಿದ್ದಾರೆ.

ತಾಳ್ತಜೆಯವರ ವ್ಯಾಪಕವಾದ ಅಧ್ಯಯನಕ್ಕೆ 'ಕನ್ನಡದಲ್ಲಿ ಬೌದ್ಧ ಸಾಹಿತ್ಯ ಸಮೀಕ್ಷೆ' ಎಂಬ ಲೇಖನ ಸಾಕ್ಷಿಯಾಗಿದೆ. ಈ ಸಮೀಕ್ಷೆ ಬುದ್ಧಪರವಾದ ಸಾಹಿತ್ಯ ವಿಮರ್ಶೆಯಂತಿದೆ. ಕೈ ಬೆರಳವೋಲೆ ಎಣಿಸುವಷ್ಟಾದರೂ ಬುದ್ಧಸಾಹಿತ್ಯ ವಿಮರ್ಶೆ ಬರದಿದ್ದಾಗ ತಾಳ್ತಜೆಯವರು ಕೈಕೊಂಡ ಈ ಕೆಲಸ ಶ್ಲಾಘನೀಯವಾಗಿದೆ. ಇಡಿ

ಯಾಗಿ ಓದದ ಸಹೃದಯರನೇಕರಿಗೆ ಈ ವಿಮರ್ಶೆಯಲ್ಲಿಯೇ ಬುದ್ಧನ, ಅವನ ಸುತ್ತಲಿನ ಚರಿತ್ರೆಯನ್ನು ಕಂಡುಕೊಳ್ಳಬಹುದಾಗಿದೆ. ಬುದ್ಧನನ್ನು ಕುರಿತು ರಚಿಸಿದ ಪೈ, ಮಾಸ್ತಿ, ಕಾರಂತ, ಕುವೆಂಪು ಆಗಲಿ ಇವರು ಹಿಂದೂಧರ್ಮದ ಆಧ್ಯಾತ್ಮ ಪರಿಧಿಯನ್ನು ಮೀರಿ ನಿಂತಿಲ್ಲ; ಅದರ ಆವರಣದೊಳಗೆ ಬುದ್ಧನನ್ನು ಇರಿಸಿ ಸಾಹಿತ್ಯ ರಚಿಸಿದ್ದಾರೆ. ಎಲ್ಲರ ವಿಶೇಷ ಒತ್ತು ಯಶೋಧರೆಯ ಮೇಲೆ. ಪಾಂಡವರ ಜೂಜಿನಲ್ಲಿಯ ದ್ರೌಪದಿ, ಏಕಾಕಿಯಾಗುಳಿದ ರಾಮಾಯಣದ ಊರ್ಮಿಳೆಯ ಪರವಾಗಿ ಎದ್ದೇಳುವ ಪ್ರಶ್ನೆಗಳೇ ಯಶೋಧರೆ ಕುರಿತು ಬೇರೊಂದು ರೂಪ ಧರಿಸಿ ನುಗ್ಗಿ ಬಂದಿವೆ. ವ್ಯಥೆಯ ಕಥೆಯಾದ, ನಶ್ವರದ ಹಾಡಾದ ಬದುಕಿನ ಬಂಧನದಿಂದ ಪಾರಾಗುವುದೇ ಭಾರತೀಯರ ಗುರಿಯಾಗಿರುವುದು ಒಟ್ಟು ಧರ್ಮಗಳ ಸಾರದಂತೆ ಭಾಸವಾಗುತ್ತದೆ. ಅವಕ್ಕೆ ಬುದ್ಧ ಹೊರತಾಗಲಿಲ್ಲ. ಬುದ್ಧನ ಪರ ಸಾಹಿತ್ಯ ಹೊರತಾಗಲಿಲ್ಲ.

ಅಂತರಂಗ : ಡಾ॥ ಉಪ್ಪಂಗಳ ರಾಮಭಟ್ಟರ ಈ ಕೃತಿ ವಿಮರ್ಶಾತ್ಮಕ ಪ್ರಬಂಧಗಳಿಂದ ಕೂಡಿದೆ. ಮಂಗಳೂರಿನ ಮಲೆಯ ಮಕ್ಕಳಾಗಿರುವ ಭಟ್ಟರು ಶರತ್ಕಾಲದ ಶುಭ್ರತೆಯನ್ನು ಕುರಿತು ಕವಿಗಳು ನೀಡಿದ ಅನುಭವಿಕ ಬರವಣಿಗೆಯನ್ನು ವಿವೇಚಿಸುತ್ತಾ ಹೋಗಿದ್ದಾರೆ ಮೊದಲ ಲೇಖನದಲ್ಲಿ. ಕಾಲಾನುಗುಣವಾಗಿ ಬದಲಾಗುವ ಸೃಷ್ಟಿಯ ವಿಚಿತ್ರಗಳಂತೆ ಮನುಷ್ಯ ಭಾವಗಳು ನಿಸರ್ಗವನ್ನು ಅನುಸರಿಸುತ್ತವೆ. ಕವಿಯಾದವನು ತಟ್ಟನೆ ಬರೆದಿಡುವಷ್ಟು ತಾದಾತ್ಮ್ಯಯಾಗುತ್ತಾನೆ. ಹಳೆಯ ಕವಿಗಳ ಉದಾಹರಣೆ ಕೊಡುತ್ತಾ ನಂತರ ಕುವೆಂಪು, ಜಿ. ಎಸ್ಸೆಸ್, ಚನವೀರ ಕಣವಿ, ಪು.ತಿ.ನ., ವಿ.ಸಿ ಯವರ ಕವಿತೆಯ ಭಾಗಗಳನ್ನು ಎತ್ತಿದ್ದಾರೆ. ಕುವೆಂಪು ಅವರಿಂದ ಎತ್ತಿದ ಒಂದು ಸಾಲುನೋಡಿ. ಶರತ್ಕಾಲದ ಮೋಡಿಗಳನ್ನು ಪರಿಭಾವಿಸಿದಾಗ "ತಾಳ್ದು ನಾನಾಕೃತಿಗಳು ಕಪಿಯಾಯಿತೆನ್ನುತಿರೆ ಪುಲಿಯಾಯ್ತು ! ಪುಲಿಯೆನುತ್ತಿರೆ ಕರಡಿಯಾಯ್ತು ಕಾಣ್ ಕರಡಿಯೆಂಬನಿತರೊಳೆ ಭೀಮ ರಾಕ್ಷಸಮಾಯ್ತು !" ಕವಿಗಳು ಕೇವಲ ಕವಿಸಮಯಗಳಾಗದೆ ನಿತ್ಯದ ಬದುಕಿನಲ್ಲಿ ಪ್ರಕೃತಿಯ ಪಾತ್ರವೇನು ? ನಿಸರ್ಗದೊಡನಿರುವ ನಮಗೆ ಗೊತ್ತಿರದ ಸಂಬಂಧವೆಂತಹದೆಂಬುದನ್ನು ಇಂತಹ ಬರವಣಿಗೆಯಿಂದ ಕಾಣಿಸುತ್ತಾರೆ. ಕನಕದಾಸರ ಕೀರ್ತನೆಗಳು—ಕನ್ನಡ ವಾಙ್ಮಯದಲ್ಲಿ ಎಂದೂ ಅಳಿಯದ ಅಪ್ಪಟ ಕನಕ ಸಾಹಿತ್ಯ ಎಂಬ ಲೇಖಕರ ಮಾತಿನಂತೆ ಕನಕದಾಸರ ಕೀರ್ತನೆಗಳನ್ನು ವಿವರವಾಗಿ ಚರ್ಚಿಸಿದ್ದಾರೆ ಎರಡನೆಯ ಲೇಖದಲ್ಲಿ. ಭಾಷೆಯ ಪ್ರಾಮುಖ್ಯತೆ ಮತ್ತದರ ಪರಿಣಾಮಗಳು ಎಂತಹವು ಎಂಬುದಕ್ಕೆ ವೀರಶೈವರೇ ಆದಿ ಹರಿಕಾರರಾಗಿದ್ದಾರೆ. ಆ ಹಿನ್ನೆಲೆಯಲ್ಲಿ ಜೀವನ ಮೌಲ್ಯಗಳನ್ನು ಬೀದಿಬೀದಿಗೂ ಮನೆಮನೆಗೂ ಮುಟ್ಟಿಸುವ ಕೆಲಸವನ್ನು ಮುಂದಣ ಹರಿದಾಸರು ಮಾಡಿದರು. ದಾಸರದ್ದೇನಿದ್ದರೂ ಕಿವಿಯಿಂದ ಕೇಳಿ ಆನಂದಿಸುವ ಗೀತ ಸಂಗೀತ ಹಾಡುಗಳಾದುವೇ

ಹೊರತು ವೈಚಾರಿಕ ಭಾವವನ್ನು ತುಂಬುವಷ್ಟು ಪ್ರಭಾವಶಾಲಿಯಾಗಿ ಅವು ಉಳಿಯು ಲಿಲ್ಲ; ಈಗಲೂ ಉಳಿದಿಲ್ಲ. ಮನುಷ್ಯಬದುಕನ್ನು ಅರಳಿಸಲು ವಚನ ಸಾಹಿತ್ಯ ಬಂದರೆ ತಮ್ಮ ಮತ ಪಂಥ ಉಳಿಸಲು ಹೆಣಗಾಡುತ್ತ ದಾಸಸಾಹಿತ್ಯ ಬಂದಿದೆ ಎಂದರೆ ತಪ್ಪೇನಿಲ್ಲ. ಇದಕ್ಕೆ ಹೊರತಾಗಿ ಕನಕದಾಸರು ಬರುತ್ತಾರೆ. ವಿಜಯ ನಗರದ ಕೇಂದ್ರ ಬಿಂದುವಿನ ಸುತ್ತ ಸಂಸ್ಕೃತದ ವ್ಯಾಸಕೂಟ ಕನ್ನಡದ ದಾಸಕೂಟ ವೃತ್ತದಲ್ಲಿ ತನ್ನ ಪಾಂಡಿತ್ಯದಿಂದ ಭಕ್ತಿ ಭಾವಗಳಿಂದ ಸಾಧನೆಗೆ ತಾನೇನೂ ಕಡಿಮೆ ಯಿಲ್ಲದ, ಪ್ರತಿಭಟನಾ ಶಕ್ತಿಯಿಂದ ಮಿಂಚಿದ ವ್ಯಕ್ತಿ ಕನಕದಾಸ. ಜಾತಿಯ ಕ್ರೂರ ತನಗಳನ್ನು ಅನುಭವಿಸಿ ನಲುಗಿ ತಮ್ಮ ಅನುಭವಗಳನ್ನು ಹಾಡಾಗಿಸಿ ಎಲ್ಲರ ಮೆಚ್ಚು ಗೆಗೆ ಪಾತ್ರರಾದ ಕನಕದಾಸರು ಕೇವಲ ವೈಷ್ಣವ ಮತಾನುಯಾಯಿಯಾಗಿರದೆ ಎಲ್ಲ ಮತಧರ್ಮಗಳನ್ನು ಟೀಕಿಸುವ, ಅವುಗಳಲ್ಲಿಯ ಉತ್ತಮಾಂಶಗಳನ್ನು ಸ್ವೀಕರಿಸಿ ಸಮನ್ವಯವಾದಿಯಾಗಿರುವ ಅಂಶವನ್ನು ಲೇಖಕರು ಸರಿಯಾಗಿ ಹೇಳಿದ್ದಾರೆ. ಹೀಗಿದ್ದಿದ್ದಕ್ಕಾಗಿಯೇ ಕನಕರನ್ನು ಉಡುಪಿಯ ಕೃಷ್ಣಮಂದಿರದ ಒಳಗಡೆ ಬಿಡದಿದ್ದು; ಈಗಲೂ ಪುರಂದರದಾಸರ ಹಾಡುಗಳನ್ನು ಸಂಗೀತಕ್ಕೆ ಅಳವಡಿಸಿದಷ್ಟು ಕನಕರ ಹಾಡುಗಳನ್ನು ಅಳವಡಿಸದೇ ಇದ್ದದ್ದು. ಸಮಾಜದ ಕೆಳಸ್ತರದಲ್ಲಿದ್ದುಕೊಂಡು ನಿಟ್ಟಿ ಸಿದ ಕನಕರ ದೃಷ್ಟಿಕೋನ ಅವರ ಸಾಹಿತ್ಯದಲ್ಲಿ ಪ್ರಭಾವಶಾಲಿಯಾದ ಬರವಣಿಗೆಯ ಮೂಲಕ ಕಾಣಿಸಿಕೊಂಡಿವೆ. ಒಂದೊಂದು ಮಾತು ಹಸಿಗೋಡೆಯಲ್ಲಿ ಹರಳಿಟ್ಟಂತೆ ಹೃದಯವೇದಕ; ಹೃದಯ ಸ್ಪರ್ಶಕ. ಕನಕದಾಸರು ಹೇಗೆ ಸಮಕಾಲೀನ ಅಂಶ ಗಳನ್ನು ಕವಿತೆಯಾಗಿಸುತ್ತಿದ್ದರೆಂಬುದನ್ನು ನೋಡಿ : ಸುತ್ತಲವರ ಮಾತು ಕೇಳಿ ಗುತ್ತಿಯ ಎಲ್ಲಮ್ಮಗೊಲಿದು ಬತ್ತಲಿಂದ ಬಂದವಳ ನೋಡಿ ಎಲ್ಲರು ಮತ್ತೆ ಬೇವಿ ನುಡುಗೆಯುಟ್ಟು ಮುಕ್ತಿ ತಾವು ಪಡೆವೆವೆಂಬ ತೊತ್ತು ಮಾಯಕಾರಿಯವಳಿಗೆ ಛೀ ಥೂ ಎಂಬರು ಚಂದ್ರಗುತ್ತಿಯ ಬತ್ತಲೆ ಸೇವೆಯಂತಹ ಅನಾಚಾರಗಳನ್ನು ಸುಟಿಯಾಗಿ ಟೀಕಿಸುತ್ತಾರೆ. ಕುಲ ಜಾತಿ ಭಕ್ತಿ ಹದಗೆಟ್ಟ ಮನಸ್ಸಿನ ಸ್ಥಿತಿ, ಲೋಕದ ಡಂಭಾ ಚಾರ ಸಂಸಾರದ ಹೇಯತೆ ಮುಂತಾದವನ್ನು ಕುರಿತು ಬರೆದ ಕನಕರ ಸಾಹಿತ್ಯ ಕನಕ ಸಾಹಿತ್ಯವಾಗಿದೆಯೆಂಬುದರ ಸಂಕ್ಷಿಪ್ತ ನೋಟವನ್ನು ಭಟ್ಟರು ಈ ಲೇಖನದಲ್ಲಿ ನೀಡಿದ್ದಾರೆ.

ರುದ್ರನಾಟಕದ ಶ್ರೀಕಾರ ಶ್ರೀಯವರು : ಕನ್ನಡದ ಕಣ್ವರೆಂದೇ ಪ್ರಸಿದ್ಧ ರಾದ ಶ್ರೀಯವರು ಭಾವಗೀತೆಗಳಿಗೆ, ರುದ್ರನಾಟಕಗಳಿಗೆ, ಸೂಚ್ಯವಾಗಿ ಬಂದ ಎಲೆಮರೆಯ ಕಾಯಿಯಾಗಿ ಹಾಗಿರುವ ಪಾತ್ರಕ್ಕೆ ವಿಶೇಷ ಸ್ಥಾನ ನೀಡಿದ ವಿಷಯಕ್ಕೆ ನಾಂದಿ ಹಾಡಿದವರು. ಗ್ರೀಕ ನಾಟಕ ಎಜಾಕ್ಸ ಮಾದರಿಯಲ್ಲಿ ಕನ್ನಡಕ್ಕೆ ಬಂದ ಅಶ್ವತ್ಥಾಮನ್ ಇಲ್ಲಿಯ ಪರಿಸರಕ್ಕೆ ಹೊಂದಿಕೊಂಡು ಚಿರಂತನ ಸ್ಥಾನಗಳಿಸಿತು. ಬನವಾಸಿ ಪ್ರಾಂತವನ್ನು ಎಲ್ಲ ಪಾತ್ರಧಾರಿಗಳ ಸ್ಥಳವನ್ನಾಗಿ ಮಾಡಿಕೊಂಡು ತಮ್ಮ

ಕನ್ನಡನಾಡ ಪ್ರೀತಿಯನ್ನು ಆ ಮೂಲಕ ಶ್ರೀಯವರು ತೋರಿದ್ದು ವೈಶಿಷ್ಟ್ಯಪೂರ್ಣವೇ. ಎಲ್ಲರೂ ಬಲ್ಲ ಚಿರಂಜೀವಿ ಅಶ್ವತ್ಥಾಮ ಶ್ರೀಯವರಲ್ಲಿ ತನ್ನ ಪಾಪ ಕೃತ್ಯದಿಂದಾಗಿ ಆತ್ಮಹತ್ಯೆ ಮಾಡಿಕೊಂಡು ಸಾಯುವ ಸಹಜ ಕಲ್ಪನೆಯೂ ಹೊಸತನದಿಂದ ಕೂಡಿದೆ. 'ಗದಾಯುದ್ಧ ನಾಟಕಂ' ಆದರೂ ಮಹಾಕಾವ್ಯದಿಂದ ಹೊರಗೆಳೆದ ಮೊದಲ ನಾಟಕ. ಕಾವ್ಯ ಪ್ರಬಂಧಕ್ಕೆ ಕಾರಣವಾದ ವಾಕ್ಯಗಳನ್ನು ತೆಗೆದು ಹಾಕಿ ಇರುವ ಸಂಭಾಷಣೆಗಳಿಗೆ ಪಾತ್ರಗಳ ಹೆಸರಿಟ್ಟರೆ ರನ್ನನ ಗದಾಯುದ್ಧವೇ ಕನ್ನಡದ ಮೊದಲ ನಾಟಕವೆಂಬುದನ್ನೂ ಶ್ರೀಯವರು ಅಲ್ಪ ಬದಲಾವಣೆಯೊಂದಿಗೆ ಸಾಧಿಸಿ ತೋರಿಸಿದ್ದಾರೆ.

ರನ್ನನ ಕರುಣಾಮಯ ಮಾನವೀಯ ಅಂಶಗಳಲ್ಲಿ ಕರಗಿ ಚಿನ್ನವಾದ ಗುಣಾಗ್ರಣಿ ಕೌರವ ರುದ್ರನಾಟಕದ ವೀರನಂತೆ ಕಂಗೊಳಿಸಿದ್ದಾನೆ. ಕೊನೆಯವರೆಗೂ ಮಹಾನುಭಾವ ಪಾತ್ರಕ್ಕೆ ತಕ್ಕಂತೆ ಕೌರವ ಮಿಂಚಿ ದುರಂತ ಸಾವನ್ನಪ್ಪುತ್ತಾನೆ. ಪಂಪನಿಗಿಂತಲೂ ವೀರೋಚಿತವಾದ ಸಾಂದರ್ಭಿಕವಾದ, ಸಂಭಾಷಣಾ ಚಾತುರ್ಯದಿಂದ ಮಿಗಿಲಾಗಿ ರೂಪುಗೊಂಡ ರನ್ನನ ಗದಾಯುದ್ಧ ಕೆಲ ಮಾರ್ಪಾಟುಗಳೊಡನೆ ಶ್ರೀಯವರಲ್ಲಿ ಅಪ್ಪಟ ರುದ್ರನಾಟಕವಾಗಿ ಪರಿವರ್ತನೆಗೊಂಡ ವಿವರವನ್ನೆಲ್ಲ ಲೇಖನ ನಮ್ಮ ಮುಂದಿಡುತ್ತದೆ.

'ಮರಣವೃಕ್ಷದ ಅಮೃತಫಲ'ವೆಂಬ ಲೇಖನ ಗೋವಿಂದ ಪೈಗಳ ಬದುಕು ಬರಹವನ್ನು ಸಂಕ್ಷಿಪ್ತವಾಗಿ ಪರಿಚಯಿಸಿಕೊಡುತ್ತದೆ. ಪತ್ನಿಯ ಮರಣದಿಂದಾಗಿ ಪೈಯವರಿಗೆ ಅಪಾರವಾದ ವಾಙ್ಮಯಸೇವೆಸಲ್ಲಿಸುವ ಅವಕಾಶ ಸಿಕ್ಕಂತಾಯಿತೆಂಬ ಅಂಶ ಅವರ ಬದುಕಿನಿಂದ ಬೆಳೆದುಬಂದಿದೆ. ಯಾವ ಮನುಷ್ಯನು ಕಾರಣವಿಲ್ಲದೆ ಬೆಳೆಯಲಾರನೆಂಬುದಕ್ಕೆ ಪೈಯವರೊಂದು ಸಾಕ್ಷಿ. ಪ್ರಕೃತಿಯ ತುಂಬ ಪರಮಾತ್ಮನನ್ನು ಕಂಡ ಪೈಯವರು ಧರ್ಮಸಮನ್ವಯವಾದಿಗಳಾಗಿದ್ದರು. ವೈಶಾಖಿ, ಗೊಲ್ಗೊಥಾ ಮತ್ತು ಅನೇಕ ಕಥನಕವನಗಳೇ ಸಾಕ್ಷಿ ಅವರ ಮನೋಭಾವವನ್ನು ತಿಳಿಯಪಡಿಸಲಿಕ್ಕೆ. ಹೀಗೆ ಅವರ ಕಾವ್ಯಪರಿಚಯ ಲೇಖನದುದ್ದಕ್ಕೂ ಜಗತ್ತಿನ ಮಹಾಮಾನವರ ಮಹಾನಗುಣಗಳನ್ನು ಮೆಚ್ಚಿಕೊಂಡು ಸ್ವೀಕರಿಸಿಕೊಂಡು ಆ ರೀತಿ ಬದುಕಿನಲ್ಲಿ ನಡೆದರು ಪೈಯೆಂಬುದನ್ನು ಲೇಖಕರು ವಿವರಿಸುತ್ತಾರೆ. ಆ ಅರ್ಥದಲ್ಲಿ ಅವರು ಮರಣವೃಕ್ಷವನೇರಿದ ಅಮೃತಫಲವಾಗಿದ್ದಾರೆಂಬ ಮಾತು ಸರಿಯಾಗಿದೆ. ಏಕಲವ್ಯನ ಮೂರು ಮುಖಗಳು—ಮಹಾಭಾರತದಲ್ಲಿಯ ಶೂದ್ರವ್ಯಕ್ತಿಯಾದ ಏಕಲವ್ಯನನ್ನು ಕುರಿತು ಪೈ, ಕುವೆಂಪು, ಕೈಲಾಸಂ ರಚಿಸಿದ ಹೆಬ್ಬೆರಳು, ಬೆರಳ್ಗೆಕೊರಳ್, ಪರ್ಪಸ್‌ಗಳ ಸಂಕ್ಷಿಪ್ತಾವಲೋಕನೆಯೇ ಈ ಲೇಖನ. ಉತ್ತಮವರ್ಗದವರಿಂದ ಕೆಳವರ್ಗದ ವ್ಯಕ್ತಿಗಳ ಶೋಷಣೆಯ ಪರಿ ಹೇಗಿತ್ತೆಂಬುದಕ್ಕೆ ಏಕಲವ್ಯ ಬೆರಳು ತೋರಿದಂತಿದ್ದಾನೆ.

ತಮ್ಮ ಸ್ವಾರ್ಥದ ಆಕಾಂಕ್ಷೆಯನ್ನು ತೀರಿಸಿಕೊಳ್ಳಲು ಅರ್ಜುನ ದ್ರೋಣಾದಿಗಳು ಏಕಲವ್ಯನ ಬೆರಳನ್ನು ಬಲಿತೆಗೆದುಕೊಂಡುದು ಸರ್ವವಿದಿತ.

ಕುವೆಂಪು ಅವರು ಏಕಲವ್ಯನನ್ನು ಕಾಡುರಕ್ಷಿಸುವ ಪ್ರಾಣಿದಯೆಯ ಶ್ರೀಮಂತ ಗುಣದ ವೀರನಂತೆ, ಮಾತೃವಾತ್ಸಲ್ಯದ ಮಗನಂತೆ, ಗುರುದಕ್ಷಿಣೆಯನ್ನು ಪ್ರಾಮಾಣಿಕವಾಗಿ ಅರ್ಪಿಸಿದ ತ್ಯಾಗಿ ಶಿಷ್ಯನಂತೆ ಚಿತ್ರಿಸಿದ್ದಾರೆ. ಮಗನ ಬೆರಳಿಗೆ ಬದಲಿಯಾಗಿ ತಾಯಿಯ ಕರುಳ ಸಂಕಟ ಮಿಗಿಲಾಗಿ 'ಕೊರಳ ಶಾಪ'ವನ್ನು ನೀಡುವಲ್ಲಿ ಕುವೆಂಪು ಸಹಜತೆ ನೀಡಿದ್ದಾರೆ. ಪೈಗಳ ಹೆಬ್ಬೆರಳು ಮಹಾಭಾರತದ ಪ್ರಸಂಗದಂತಿದ್ದರೂ 'ತಮಾಷೆಗೆ ಹೆಬ್ಬೆರಳು ಕೇಳಿದೆ' ಎಂದು ಮರುಗುವ ಪರಿ ಕೃತಕವಾಗುತ್ತದೆ. ಹಾಗೆಯೇ ಕುವೆಂಪು ಅವರಲ್ಲಿ ಏಕಲವ್ಯನು ಸಕ್ಕದದ ಬಿಜ್ಜೆ ಕಲಿತುದು ಹಾಸ್ಯಾಸ್ಪದವಾಗುತ್ತದೆ. ಕೈಲಾಸಂರ ಪರ್ಪಸ ಹೆಚ್ಚು ಯತಾರ್ಥವಾದುದು. ನೋಡಿ, ಕೇಳಿ, ದೂರದಿಂದ ಕಲಿತು ಕೊನೆಗೆ ಪ್ರತಿಮೆಯ ಮುಂದೆ ಅಭ್ಯಸಿಸಿದ ಏಕಲವ್ಯನನ್ನು ಚನ್ನಾಗಿ ಕಂಡರಿಸಿದ್ದಾರೆ ಕೈಲಾಸಂ. ಪ್ರಕೃತಿಪ್ರಿಯ ಕುವೆಂಪು ನಾಟಕದುದ್ದಕ್ಕೂ ನಿಸರ್ಗವನ್ನು ಹಿಡಿದಿಟ್ಟಿದ್ದಾರೆ. ಆದರೆ ಲೇಖಕರು ಹೇಳಿದಷ್ಟು ಕುವೆಂಪು ಅವರ ಏಕಲವ್ಯ ಪರಿಪೂರ್ಣವಾಗಿಲ್ಲ. ಆ ಕಾಲದೊಂದಿಗೆ ಸ್ಪಂದಿಸುವ ಮನೋಭಾವದಿಂದ ನೋಡಿದರೆ ಯಾರಿಗಾದರೂ ಹಾಗೆ ಅನ್ನಿಸದೇ ಇರದು. ಆದರೆ ಪಾತ್ರಗಳ ಮೂಲಕ ಕಲ್ಪನೆಯ ಕುಸುರೀ ಕೆಲಸ ಮಾಡುತ್ತ ತಮ್ಮ ಕಲಾಪ್ರೌಢಿಮೆಯನ್ನು, ತನ್ಮೂಲಕ ಜೀವನ ಮೌಲ್ಯಗಳನ್ನು ಸಾರುವ ರೀತಿ ಕುವೆಂಪು ಅವರಲ್ಲಿ ಎದ್ದು ಕಾಣುತ್ತದೆ.

ಮಹಾಶ್ವೇತೆಯ ವೃತ್ತಾಂತ : ಇಡೀ ಕಾವ್ಯವನ್ನು ಓದಿದಾಗ ನೆನಪುಳಿಯಂದ ಕೆಲಭಾಗಗಳು ಪುಟ್ಟ ಪುಟ್ಟ ಅನ್ನಿಸಿಕೆಯಾಗಿ ಬಂದ ಲೇಖನಭಾಗ ಹೆಚ್ಚು ಪ್ರಭಾವಶಾಲಿಯಾಗಬಲ್ಲುದು. ಅಂತಹ ಒಂದು ಲೇಖನ ಇದು. ಪುಂಡರೀಕ ಮಹಾಶ್ವೇತೆಯರ ಮಧ್ಯ ನಡೆದ ಅಕ್ಷಮಾಲೆ ಮತ್ತು ಕೊರಳಹಾರದ ಅದಲು ಬದಲಾವಣೆ; ಮತ್ತು ಪುಷ್ಪಮಂಜರಿಯನ್ನು ತೊಡಿಸುವಿಕೆಯ ಪ್ರಸಂಗ, ದೇವತೆಗಳಿಂದ ಕಾಣಿಕೆಯಾಗಿ ಬಂದ ಪುಷ್ಪಮಂಜರಿಯನ್ನು ನೋಡಿದ ಮಹಾಶ್ವೇತೆ ಆ ಕುರಿತು ಪ್ರಶ್ನಿಸಿದಾಗ ಪುಂಡರೀಕನ ನಸುನಗು, (ಕೋಪದ ಬದಲಿ) ಅವಳಿಗದು ಬೇಕಾಗಿರಬೇಕೆಂಬ ಭಾವದ ನಗು; ಅದೇ ಭಾವದಲ್ಲಿ ಪುಂಡರೀಕ ಪುಷ್ಪಮಂಜರಿಯನ್ನು ಅವಳ ಕಿವಿಗೆ ತೊಡಿಸಹೋಗುತ್ತಾನೆ. ಚಿತ್ತವೆಲ್ಲ ಅವಳ ಮೇಲಿದ್ದಾಗ ನಾಚಿಕೆ ಮಾನ ಯತಿತ್ವವೇ ಕಳಬೀಳುವಂತೆ ಅಕ್ಷಮಾಲೆ ಕಳಬಿದ್ದಿತ್ತೆಂಬ ಸಹೋಕ್ತಿಯನ್ನು ಗಮನಿಸಬೇಕು. ಬೀಳಲಿರುವ ಅಕ್ಷಮಾಲೆಯನ್ನು ಅವಳು ಹಿಡಿದುಕೊಂಡು ಕೊರಳಲ್ಲಿ ಧರಿಸಿಕೊಂಡುದು ಅವಳು ವಹಿಸುವ ಯತೀತ್ವಕ್ಕೆ ಭವಿಷ್ಯ ಸೂಚಕವಾಗಿದೆ. ನಂತರ ಪುಂಡರೀಕ ಅಕ್ಷಾವಳಿಯನ್ನು ಕೇಳಿದಾಗ ಅವಳು ಸಹಜವಾಗಿಯೇ ಕಂಠಿಗೆಯಿಂದ ತೆಗೆದುಕೊಡಲು

ತ್ತಾಳೆ; ಅಕ್ಷಮಾಲೆಯನ್ನಲ್ಲ ತನ್ನ ಕೊರಳ ಹಾರವನ್ನು. ಹೀಗೆ ಆತ ಹೂ ತೊಡಿಸಿದುದು ಅವಳು ಹಾರ ನೀಡಿದುದು, ಅಕ್ಷಮಾಲೆ ಬದಲಾದುದು—ಇಲ್ಲೆಲ್ಲ ಎಳೆಯ ತರುಣ ತರುಣಿಯರ ಭಾವಗರ್ಭಿತ ಆಕರ್ಷಣೆಯ ಚಿತ್ರಣ ಭವ್ಯವಾಗಿ ಮೂಡಿದೆ. ಈ ಅದಲುಬದಲುವಿಕೆಗಳು ಕತೆ ಹೆಣೆಯುವಿಕೆಗೆ ನೀಡಿದ ಸೊಗಸಾದ ಕಲ್ಪನೆಗಳಾಗಿವೆ. ಪ್ರಸ್ತುತ ಲೇಖಕರ ಆಯ್ಕೆಯ ಈ ಪ್ರಸಂಗ, ವಿವರಿಸಿದ ಬಗೆ ಮೆಚ್ಚುವಂತಹದು. ಇದು ಈ ಪುಸ್ತಕದ ಉತ್ತಮ ಲೇಖನವೆಂದರೆ ತಪ್ಪೇನಿಲ್ಲ.

ಇನಾಂದಾರರ ಎರಡು ಕಾದಂಬರಿಗಳು : 'ಕಾದಂಬರಿ ಜೀವನಾನುಭವದ ಸಂಶೋಧನೆ. ಜೀವನ ಯಥಾವತ್ ಚಿತ್ರಮಾತ್ರವಾಗಿರದೆ ಅದರ ಒಂದಿಲ್ಲೊಂದು ಮೈಯ್ಯಮೇಲೆ ಅದು ಹೊಸಬೆಳಕನ್ನು ಬೀರಬೇಕು' ಎಂದು ಕಾದಂಬರಿ ಕುರಿತು ಹೇಳಿದ ಪ್ರಸಿದ್ಧ ವಿಮರ್ಶಕರಾದ ಇನಾಂದಾರರ ಮಂಜು ಮುಸುಕಿದ ದಾರಿ, ಈ ಪರಿಯ ಸೊಬಗು ಕಾದಂಬರಿಗಳು ಇಲ್ಲಿ ಪರಿಚಯ ರೂಪದ ವಿಮರ್ಶೆಯಾಗಿ ಬಂದಿವೆ. ಎರಡೂ ಕಾದಂಬರಿಗಳು ದುಃಖಾಂತಗಳಿಂದ ಕೂಡಿವೆ. ಮೂಕಜೀವಿ ನಾಯಿ ಕೊಂದ ಶ್ರೀಧರನ ಹೆಂಡತಿ ಲಕ್ಷ್ಮಿಯ ಮನೋರೋಗದ, ಡಾ. ಗೋಪಾಲನ ಆತುರದ ನಿರ್ಣಯದಿಂದಾಗಿ ಹೆಂಡತಿ ಸುಮಿತ್ರೆ ಸುಬ್ಬರಾಯನನ್ನು ಪ್ರೀತಿಸಿ ಹಾದಿ ತಪ್ಪುವ ಪಾಪಪ್ರತಿಜ್ಞೆಯ ದುರಂತ ಚಿತ್ರಣ ಓದುಗರನ್ನು ಕನಿಕರಿಸುವಂತೆ ಮಾಡುತ್ತದೆ ಮಂಜುಮುಸುಕಿದ ದಾರಿ. 'ಈ ಪರಿಯ ಸೊಭಗು' ಕಾದಂಬರಿ ಕೂಡಾ 'ನಿಸರ್ಗ ರಮಣೀಯ ಚಲುವಿನ ಸುತ್ತಲೂ ಹೆಣೆದ, ಪ್ರೀತಿಯ ಒಳ್ಳೆಯ ಗುಣನಡತೆಗಳ ಗೋಪಿಯ' ದುರಂತ ಬಾಳನ್ನು ಚಿತ್ರಿಸುವಲ್ಲಿ ಯಶಸ್ವಿಯಾಗಿದೆ. ಹಳೆಯ ತಲೆಮಾರಿನ ಇನಾಂದಾರರು ಅನೇಕ ಹೊಸಬರಿಗೆ ಬರವಣಿಗೆ ಹೇಗಿರಬೇಕೆಂಬುದನ್ನು ತೋರಿಸಿದಂತಿದೆ ಈ ಕೃತಿಗಳಲ್ಲಿ. 'ತನ್ನ ಜೀವನದರ್ಶನವನ್ನು ತಾನು ಮಾಡಿಕೊಂಡ ಅಭಿಪ್ರಾಯವನ್ನು ಓದುಗನಿಗೆ ಕತೆಯ ಮೂಲಕ ತಿಳಿಸಬೇಕು' ಎಂಬ ಎಂ.ವಿ. ಅವರ ಉದ್ದೇಶದಂತೆಯೆ ಅವರ ಕಾದಂಬರಿಗಳು ಮೂಡಿವೆ ಎಂಬುದನ್ನು ಲೇಖಕರು ವಿಮರ್ಶಿಸುತ್ತ ಸೂಚಿಸಿದ್ದಾರೆ. ಒಟ್ಟಾರೆ 'ಅಂತರಂಗ' ಇತರರ ಅಂತರಂಗಕ್ಕೆ ಮುಟ್ಟುವಷ್ಟು ಸಫಲವಾದ ಕೃತಿಯಾಗಿದೆ.

ರಾಜರತ್ನಂ 'ರತ್ನನ ಪದಗಳು' : ಚಿ. ನ. ಮಂಗಳಾ, ಎನ್. ಬಿ. ಪರಿಮಳಾ ಬಾಯಿ ಸಂಪಾದಿಸಿದ ಪುಸ್ತಕವಿದು. ರತ್ನನಪದಗಳ ಕರ್ತೃತ್ವ ವಿಷಯವಾಗಿ ಎತ್ತಿದ ಗುಡಿಬಂಡೆ ಪೂರ್ಣಿಮಾ ಅವರ ಆಕ್ಷೇಪಕರ ಪ್ರಶ್ನೆಗಳಿಗೆ ಉತ್ತರವಾಗಿ ಸಿದ್ಧಪಡಿಸಿದ ಪುಸ್ತಕವಿದು. ೧೯೨೧ರಲ್ಲಿ ಶ್ರೀಯವರ ಇಂಗ್ಲೀಷ ಗೀತೆಗಳು, ೧೯೨೨ರಲ್ಲಿ ಬೇಂದ್ರೆಯವರ 'ಕೃಷ್ಣಕುಮಾರಿ' ೧೯೨೨ ರಿಂದ ೨೮ರ ಅವಧಿಯಲ್ಲಿ ಎಲ್ಲೆಲ್ಲೂ ಮಿಂಚಿದ ಬೇಂದ್ರೆ ಕುವೆಂಪು ಅವರ ಸಮಾನ ಅವಧಿಯಲ್ಲೆ ೧೯೩೪ರಲ್ಲಿ ರತ್ನನ ಪದ

ಗಳು ಪ್ರಕಟವಾಯಿತು. ಸಮೃದ್ಧ ಪ್ರಯೋಗಗಳ ಕಾಲದಲ್ಲಿ ರಚನೆಗೊಂಡ ಈ ಕೃತಿಯ ಕರ್ತೃ ರಾಜರತ್ನಂ ಅವರೇ ಎಂಬುದನ್ನು ಅವರ ಕವಿತೆಗಳ ಸಂದರ್ಭದ ಅವರ ಮಾತುಗಳ, ಅವರ ಬದುಕಿನ ನಿಕಟವರ್ತಿಗಳ ಅಭಿಪ್ರಾಯದ ಬೇರಿತರ ದಾಖಲೆಗಳ ಮೂಲಕ ಪ್ರೊ. ಶೇಷಗಿರಿರಾವ, ಪರಿಮಳಾಬಾಯಿ, ಶ್ರೀಧರ, ರಾಜರತ್ನಂ, ಶ್ರೀ ಕಸ್ತೂರಿ, ಡಾ॥ ಗೊರೂರು, ಡಾ॥ ಪು. ತಿ. ನ., ಮಾಧವ ಮೂಲ್ಯ, ಎಚ್. ಎಸ್. ಪಾರ್ವತಿಯವರು ಸಿದ್ಧಪಡಿಸಿದ್ದಾರೆ.

> ಯೋಳ್ಕೊಳ್ಳಾಕ್ ಒಂದು ಊರು / ತಲೆ ಮೇಗ್ ಒಂದ್ ಸೂರು
> ಮಲಗಾಕೆ ಭೂಮ್ತಾಯಿ ಮಂಚ / ಎಂಬ ಸರಳ ಬದುಕಿನ ಸೂತ್ರದಂತೆಯೇ

ಬದುಕಿದವರು ರಾಜರತ್ನಂ. ಮನುಷ್ಯನ ಮಾತುಗಳು ಹೇಗಿರಬೇಕು ? 'ಕವಣೆ ಗುರಿ ಇದ್ದಂಗೆ' 'ಮಕ್ಕಳ ಮುತ್ ಇದ್ದಂಗಿರಬೇಕು' ಎಂದು ಶುಚಿತ್ವವನ್ನು ಕುರಿತು ಹಾಡಿದವರು ರಾಜರತ್ನಂ. ಸಾಹಿತಿ ಶಾಸನ ಸಪ್ತಕವನ್ನು ಬಸವಣ್ಣನ ವಚನ ವೊಂದರ ಮೂಲಕ ಹೇಳಿಕೊಟ್ಟ ರಾಜರತ್ನಂ ಕೃತಿಚೌರ್ಯದಂತಹ ಅಪಚಾರ ಮಾಡಿಯಾರೆ ? ಹಾಗೆ ನೋಡಿದರೆ ಪೂರ್ಣಿಮಾ ಅವರೇ ತಾವು ಎತ್ತಿದ ಆಕ್ಷೇಪದ ಮೂಲಕ ಕೈಲಾಸಂರಿಗೂ ರತ್ನಂರಿಗೂ ಮಸಿ ಬಳಿದಿದ್ದಾರೆ. ಹೀಗಿದ್ದರೂ ಈ ಸಂಕಲನ ದಲ್ಲಿ ಪೂರ್ಣಿಮಾ ಅವರನ್ನು ಕುರಿತು ನಿಂದನೆಯ ಮಾತಿಲ್ಲ. ಬಲುಸೂಚ್ಯವಾಗಿ ರತ್ನಂ ಅವರ ಮಾತನ್ನೇ ಅನ್ವಯಿಸಿದ್ದಾರೆ ಪರಿಮಳಾಬಾಯಿಯವರು.

> ನಾನ್ ಇನ್ಯಾರ್ದೋ ಕದ್ದೇಂತೇಳಿ / ಇಲ್ದಿದ್ ಆತ್ರೀನ್ ಇಂಜಿ
> ಸಿಕದಿದ್ ಬಿತ್ರಾನ್ ಎತ್ತ್ಕೋಕ್ ನೋಡಿ / ರಾಂಗ್ ಮಾಡಬಾರ್ದು ತಂಗಿ

ಎಂದು ಅಪಸ್ವರಗಳೇನೇ ಇರಲಿ ರತ್ನ ಅವರ ಪೂರ್ಣ ಪರಿಚಯ ನೀಡಿದ ಈ ಕೃತಿ ಯಿಂದ ಯಾರಾದರೂ ರತ್ನಂ ಬಗ್ಗೆ ಅನುಮಾನ ವ್ಯಕ್ತಪಡಿಸಲಾರರು. ಈ ಪುಸ್ತಕದ ಕೊನೆಯ ಮೂರು ಲೇಖನಗಳು ರತ್ನನ ಪದಗಳ ವಿಮರ್ಶೆಗೇ ಮೀಸಲಾಗಿವೆ.

ರಾಜರತ್ನಂ ನೀಡಿದ ಅಪೂರ್ವ ಕೊಡುಗೆ ಹೆಂಡ್ಕುಡುಕ ರತ್ನ. ಕುಡುಕನ ಮನೋಭಾವದಲ್ಲಿ ನಿಂತು ಅವನೇ ಆಗಿ ಪರಿಭಾವಿಸಿ, ಅವನಿಗೊಂದು ಸಂಸಾರ ಕಲ್ಪಿಸಿ ಪ್ರೀತಿಪ್ರೇಮ ಸುಖದುಃಖಗಳೊಡ್ಡಿ, ಆಶೆ-ನಿರಾಶೆ ತಂದು, ಅದರೊಡನೆ ನಾಡ ನುಡಿಯ ಅಭಿಮಾನವನ್ನೂ ತುಂಬಿ ಬದುಕಿನ ಎಲ್ಲಾ ಸ್ತರಗಳ ಪರಿಚಯ ಮಾಡಿ ಕೊಡುತ್ತಾರೆ ರಾಜರತ್ನಂ ಕುಡುಕ ರತ್ನನ ಮೂಲಕ, ಹೆಂಡತಿ ನಂಜಿಯ ಮೂಲಕ. ಅದರ ವಿವರಣೆಯೊಳಗೊಂಡದ್ದೇ ಕು. ವತ್ಸಲಾ ಅವರ 'ರತ್ನನ ಪದಗಳು' ಲೇಖನ. ದೇವರು ದಿಂಡರು, ಬಡತನ, ಪ್ರೇಮ, ಬದುಕಿನ ನಶ್ವರತೆ, ಸುಂಡುಸುಂಡುವ ದುಃಖ ದೊಡ್ಡವರ ಕ್ಷುಲ್ಲಕತನ, ಮೋಸದ ಪ್ರಪಂಚ, ಜೀವನದ ನಿಷ್ಠುರ ಅನುಭವಗಳೆಲ್ಲ ರತ್ನನ ಪದಗಳಲ್ಲಿ ಸೋದಾಹರಣವಾಗಿ ಬಂದಿವೆ. ಹಾಗೆಂದು ಬದುಕನ್ನು ದೂರು

ವುದಿಲ್ಲ; ನಿರಾಶೆಯಿಂದ ತಣ್ಣಗಾಗುವುದಿಲ್ಲ. 'ಲೋಕಾನೆ ಇಂಗ್ಯತೆ ನಾನ್ಯಾಕೆ ದಂಖ್ಪಡಲಿ' ಎಂಬ ನಗುಮೊಗದ ಸ್ಥಿತಪ್ರಜ್ಞಭಾವವೇ ವ್ಯಕ್ತವಾಗುತ್ತದೆ – ಎಂಬುದರ ವಿಶ್ಲೇಷಣೆ ಚನ್ನಾಗಿ ನಿರೂಪಗೊಂಡಿದೆ. ಎಚ್. ಎನ್. ಆರತಿಯವರ ಲೇಖನದಲ್ಲಿ ರಾಜರತ್ನಂ ಅವರ ಬದುಕು ಬರಹದ ಸಮಗ್ರ ಸಂಕ್ಷಿಪ್ತ ಪರಿಚಯವಿದೆ. ಕೃಷ್ಣಕುಮಾರಿಯವರ ರತ್ನನ ಪದಗಳು ಒಂದು ಅವಲೋಕನ ಲೇಖನದಲ್ಲಿ ಹೆಂಡದ Spirituality ಕಾವ್ಯದ ತುಂಬ ಪ್ರವಹಿಸಿದ್ದರ ಕುರಿತು ವಿಸ್ತಾರವಾದ ವಿವರ ಕೊಡುತ್ತದೆ. ಜಗತ್ತೆಲ್ಲವನ್ನು ರವಿ ಕಂಡ; ರವಿ ಕಾಣದ್ದನ್ನು ಕವಿ ಕಂಡ; ಕವಿ ಕಾಣದ್ದನ್ನು ಕುಡ್ಕ ಕಂಡ ಎಂಬ ಹೊಸ ಗಾದೆ ರಚಿಸಿದ ರತ್ನಂನ ಹೊಸತನವೆಲ್ಲ ರತ್ನನ ಪದಗಳಲ್ಲಿವೆ. ಸಾಮಾನ್ಯ ಮನುಷ್ಯನ ಬದುಕಿಗೆ ಹತ್ತಿರವಾದ ಭಾಷೆ, ಬದುಕಿನ ವಿಷಯವನ್ನು ಒಳಗೊಂಡಿದ್ದರಿಂದ ರತ್ನನ ಪದಗಳು ಪುಸ್ತಕ ಇಂದಿಗೂ ಹೊಸದೆಂಬಂತಿದೆ. ವಾಸ್ತವತೆಯನ್ನು ಕಂಡು ಸುಖವನ್ನೋ ದುಃಖವನ್ನೋ ಅನುಭವಿಸುವ ಸಾದಾ ಮನುಷ್ಯನ ಸ್ಥಿತಿಯನ್ನು ಕುಡುಕನ ಮಾನಸ್ಸಿನ ಸ್ಥಿತಿಯನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿದ ಬಗೆಯನ್ನು ರತ್ನಂ ಅವರಲ್ಲಿ ಕಾಣಬಹುದಾಗಿದೆ; ಚಂದ್ರೋದಯ ಸೂರ್ಯೋದಯಗಳನ್ನೂ ರತ್ನಂ ಕಂಡ ಪದ್ಯ ಓದುವಾಗ. ಎಂಡದ ಮುನಿಯನ ಟೀಕೆಯಲ್ಲಿ ಸಮಾಜದ ಅನ್ಯಾಯದ ಬಗ್ಗೆ ಸಿಡಿದೇಳುವ ಪ್ರತಿಭಟನೆಯನ್ನು, ವಿಷಾದದ ಹಾಡುಗಳಲ್ಲಿ, ಕಠಿಣ ಪ್ರಸಂಗಗಳನ್ನು ಎದುರಿಸಿದಾಗ ಉಂಟಾದ ಮನೋಭಾವಗಳನ್ನು ಹೆಂಡತಿ ನಂಜಿ ಮತ್ತು ಕನ್ನಡಾಭಿಮಾನ ಕುರಿತಾದ ಪದಗಳಲ್ಲಿ ರತ್ನಂ ಅವರ ಬದುಕಿನ ದರ್ಶನವು ಎದ್ದು ತೋರುತ್ತದೆ. ಕುಡುಕ ರತ್ನನ ಸಾಂಪ್ರದಾಯಿಕ ಕೌಟುಂಬಿಕ ಜೀವನವನ್ನು ಹೊರತುಪಡಿಸಿದ ಅನೇಕ ಕವಿತೆಗಳು ರತ್ನನನ್ನಾಧರಿಸಿಯೇ ಇವೆ. ಒಂದು ಕವಿತೆಯ ಈ ಸಾಲು ನೋಡಿ. ಸಾಮಾಜಿಕ ಜೀವನದ ದೊಡ್ಡವರ ಲಕ್ಷಣವನ್ನು ಎಷ್ಟು ಚಂದವಾಗಿ ರತ್ನಂ ಟೀಕಿಸಿದ್ದಾರೆ.

ಲಕ್ಸ ಚಿಕ್ಕೋರ್ ಮಾಡಿದ ಕೆಲ್ಸ / ದೊಡ್ಡೋನ್ ಒಬ್ಬಂಗ್ ಎಸರು
ಇಂತಾ ದೊಡ್ಡೋರ್ ದೊಡ್ಡ ಎಸರೊಂದ್ರೆ / ಲಗ್ನ ಆಗ್ದೇನೇ ಬಸರು.

ಇದಕ್ಕಿಂತ ಮಿಕ್ಕಿ ಕಠೋರವಾಗಿ ಹೇಗೆ ಹೇಳಲು ಸಾಧ್ಯ ?

ಏನೇ ಇರಲಿ ರಾಜರತ್ನಂರ ರತ್ನನಿಗೆ ಹಾಡಲು ಸ್ಫೂರ್ತಿ ಹೆಂಡದ ಬುಂಡೆ; ಪ್ರಸ್ತುತ ಈ ಪುಸ್ತಕಕ್ಕೆ ಸ್ಫೂರ್ತಿ ಪೂರ್ಣಿಮಾ ಗುಡಿಬಂಡೆ.

ಮನೋಗತ : ಎಸ್. ಆರ್. ವಿಜಯಶಂಕರ ಅವರ ಗಂಭೀರ ವಿಮರ್ಶೆಯ ಪುಸ್ತಕ. ಅವರ ಚಿಂತನೆಗಳನ್ನು 'ಸಾಹಿತ್ಯದಲ್ಲಿ ಒಳದಾರಿಗಳು' 'ಕನ್ನಡ ಸಾಹಿತ್ಯದಲ್ಲಿ ಹೊಸಧ್ವನಿಗಳು' 'ನವ್ಯೋತ್ತರ ಕಾವ್ಯ-ಬದಲಾವಣೆಯ ನೆಲೆಬೆಲೆ' ಎಂಬ

ಲೇಖಗಳಲ್ಲಿ ಕಂಡುಕೊಳ್ಳಬಹುದು. ಸೃಷ್ಟಿಶೀಲ ಮನಸ್ಸಿಗೆ ಮಾರಕವಾಗಬಲ್ಲ ಅಪಾಯಕರ ವಿಮರ್ಶೆಯ ವಾತಾವರಣವನ್ನು ತರ್ಕಬದ್ಧವಾಗಿ ಖಂಡಿಸುತ್ತ ವಿಮರ್ಶೆಯ ಒರೆಗಲ್ಲು ಹೇಗಿರಬೇಕೆಂಬುದನ್ನು ವಿವೇಚಿಸಿದ್ದಾರೆ. ತಾತ್ವಿಕ ನಿಷ್ಠೆಯಿಂದ ಒಂದು ಕೃತಿಯನ್ನು ನಮ್ಮದಾಗಿಸಿಕೊಳ್ಳುವ ಅಪೇಕ್ಷೆಯಿಂದ ಅಭ್ಯಾಸ ಮಾಡುವುದು; ಸಾಹಿತ್ಯದ ಸೂಕ್ಷ್ಮತೆಗೆ ತನ್ನನ್ನು ತೆರೆದುಕೊಳ್ಳುವುದು ಮತ್ತು ತೌಲನಿಕವಾಗಿ ಬೆಳೆಯುವುದು ಒಳ್ಳೆಯ ಮಾರ್ಗವೆನಿಸುತ್ತದೆ ಹೊರತು ಇತರರ ಕುಚೋದ್ಯ ವಿಮರ್ಶೆ, ಹೋಲಿಕೆರೂಪದ ಹತ್ತಿಕ್ಕುವ ವ್ಯಂಗ್ಯದ ಬರವಣಿಗೆಯನ್ನು ಸೃಜನಶೀಲನೂ ಮಾಡಬಾರದು, ವಿಮರ್ಶಕನೂ ಮಾಡಬಾರದು. ಈ ದಿಢೀರ್ ಕೀರ್ತಿಯ ಚಪಲದಂತಹ ಒಳದಾರಿ ಒಳ್ಳೆಯದಲ್ಲವೆನ್ನುತ್ತಾರೆ ಶಂಕರ ಅವರು. ಆದರೆ ಶ್ರೀಯುತರು ಈ ಚಪಲಕ್ಕಂಟಿದವರ ಮನೋಗತವನ್ನು ಸರಿಯಾಗಿ ಅರ್ಥೈಸಿಕೊಂಡು ಈ ಮಾತನ್ನು ಹೇಳಿದರೆ ಹೆಚ್ಚು ಸಮಂಜಸವಾಗುತ್ತದೆ. ಲೋಹಿಯಾರನ್ನು ಅಭ್ಯಸಿಸಿದ ವಿಜಯಶಂಕರರೇ ಹೇಗೆ ದ್ವಂದ್ವಕ್ಕೊಳಗಾಗುತ್ತಾರೆ ನೋಡಿ : 'ನಿಜವಾದ ಕ್ರಾಂತಿಯಾಗಬೇಕಾದರೆ ಕೇವಲ ವರ್ಗನಿರ್ಮೂಲನ ಮಾತ್ರವಲ್ಲ; ಕೆಳಜಾತಿಯ ಕಿರುಸಂಸ್ಕೃತಿಯು ಸಾಮಾಜಿಕ ಸ್ಥಾನಮಾನ ಹಾಗೂ ನಿರ್ಣಾಯಕ ಅಧಿಕಾರವನ್ನು ಪಡೆಯುವುದರ ಮೂಲಕ ಯಜಮಾನಸಂಸ್ಕೃತಿಯನ್ನು ಸ್ಥಾನಪಲ್ಲಟಗೊಳಿಸಬೇಕಾಗುತ್ತದೆ. ಈ ಮಾತಿನೊಂದಿಗೆ ಕನ್ನಡ ಸಾಹಿತ್ಯದ ವಿಮರ್ಶೆಗೆ, ಕಾವ್ಯಕೃಷಿಗೆ ತೊಡಗುವಾಗ ಚಂಪಾ ಆಗಲಿ, ಬರಗೂರರಾಗಲಿ, ಅಲ್ಲಮಪ್ರಭುವಾಗಲಿ, ಸದಾನಂದ ಪಾಟೀಲ ಆಗಲಿ, ಅರವಿಂದ, ಸಿದ್ಧಲಿಂಗಯ್ಯ, ನಾಗವಾರರಾಗಲಿ ಬಂಡಾಯ ಮತ್ತು ದಲಿತ ಭೂಮಿಕೆಯ ಮನೋಗತಿಯಲ್ಲಿ ನಿಂತು 'ಒಳದಾರಿ'ಯಲ್ಲಿ ಹೆಜ್ಜೆ ಸರಿಸುವುದು ಅನಿವಾರ್ಯವಾಗುತ್ತದೆ. ಅನಿವಾರ್ಯವೆಂದರೆ ಕೇವಲ ಕುಚೋದ್ಯ, ಬಂಡತನ, ವ್ಯಂಗ್ಯ, ವಿಡಂಬನೆಯಲ್ಲ. ಪ್ರಗತಿಪರ ಅಂಶಗಳನ್ನು ಸ್ವೀಕರಿಸಬಲ್ಲ ಹಾಗೆ ನಡೆಯಬಲ್ಲವರನ್ನು ಒಪ್ಪುವುದು; ಅದಾಗದಿದ್ದರೆ ಅವರ ಧೋರಣೆಗಳನ್ನು ಸ್ಪಷ್ಟ ಮಾತುಗಳ ಕಟುವಿಮರ್ಶೆಗೆ ಗುರಿಮಾಡುವಲ್ಲಿ ತಪ್ಪೇನಿಲ್ಲ. ಹಾಗೆಯೇ ಸೃಜನಕ್ರಿಯೆಗೆ ತೊಡಗುವಲ್ಲಿಯೂ ಪ್ರಮಾದವಿಲ್ಲ. ಈ ಅನುಮಾನಬಿಟ್ಟರೆ ಇನ್ನುಳಿದ ವಿಷಯಂಗಳೆಲ್ಲಾ ಹೊಸಧ್ವನಿಗಳ ಲೇಖನ, ಮೌಲಿಕ ಬರಹವಾಗಿದೆ.

ಕನ್ನಡದಲ್ಲಿ ದಲಿತ ಸಾಹಿತ್ಯ— ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಲೇಖಕರೆಂದಂತೆ ದಲಿತ ಸಾಹಿತ್ಯದ ಹೊಸ ಕೊಡುಗೆ. ಯಜಮಾನಸಂಸ್ಕೃತಿಯನ್ನು ಪ್ರತಿಭಟಿಸಿ ಅಂತಹದೊಂದು ಸಾಹಿತ್ಯ ಕ್ಷೇತ್ರ ರಚನೆಗೊಂಡ ಕಾಲ ೧೯ನೆಯ ಶತಮಾನ. ಅದರ ನಂತರದ್ದೆಂದರೆ ಈ ೨೦ರ ಉತ್ತರಭಾಗ. ಕಿರು ಸಂಸ್ಕೃತಿಯ ಪ್ರತಿನಿಧಿಗಳಾಗಿ, ಅನುಭವಗಳ ಅನುಭವಿಗಳಾಗಿ ಸ್ವತಃ ಬರೆಯುವ ದಲಿತ ಸೃಜನಶೀಲರು ನಮ್ಮಲ್ಲಿ ಬೇಕಾದಷ್ಟಿದ್ದಾರೆ. ಅವರನ್ನು ಗುರುತಿಸುವುದೇ ಈಗ ಮುಖ್ಯವಾಗಬೇಕು.

ನಿಸ್ಸಾರ ಅಹ್ಮದರಂಥ ಮುಸ್ಲಿಂ ಬಾಂಧವರು ಎಲೆಯ ಮರೆಯ ಹಣ್ಣಿನಂತಿದ್ದಾರೆಂಬುದನ್ನು ಎಲ್ಲರೂ ಗಮನಿಸಬೇಕು. ಒಡಲಾಳದ ದೇವನೂರು, ಸಿದ್ಧಲಿಂಗಯ್ಯ, ಅರವಿಂದ, ಡಾ. ರಾಮಣ್ಣ, ನಾಗವಾರ ಇವರೆಲ್ಲ ಮುಂದಣ ಪೀಳಿಗೆಯನ್ನು ಸಿದ್ಧಗೊಳಿಸುವುದು ತುಂಬಾ ಮುಖ್ಯವಿದೆ,

ವಿಜಯ ಶಂಕರ ಅವರು ಗಂಭೀರ ವಿಮರ್ಶಕನ ಪಾತ್ರವಹಿಸುತ್ತ ಅನಂತ ಮೂರ್ತಿಯವರ, ತಿರುಮಲೇಶಭಟ್ಟರ, ಭೈರಪ್ಪನವರ ಬರವಣಿಗೆಯ ವಿಮರ್ಶೆಗೆ ತೊಡಗಿದ್ದಾರೆ. ನನ್ನ ಪ್ರಶ್ನೆ ಯಜಮಾನಸಂಸ್ಕೃತಿಯ ಈ ಮೇಲಿನ ವ್ಯಕ್ತಿಗಳಿಂದ ಹೊರತುಪಡಿಸಿದ ಕಿರುಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಬೆಳೆದವರು, ಬೆಳೆಯ ಬಲ್ಲವರು ಯಾರೂ ಕಾಣಿಸಲೇ ಇಲ್ಲೇನು ?

ಅನಂತಮೂರ್ತಿಯವರ ಮೌನಿ, ಭೈರಪ್ಪನವರ ಪರ್ವದ ನಿರೂಪಣಾ ತಂತ್ರ. ತಿರುಮಲೇಶರ ಕಾವ್ಯ ವಿಮರ್ಶೆ–ಲೇಖನಗಳು ಚನ್ನಾಗಿ ಬಂದಿವೆ. ಮೌನಿ ಕತೆಯ ಸಂಕ್ಷಿಪ್ತ ಪರಿಚಯ ನೀಡಿದ್ದರೆ ಚನ್ನಾಗಿತ್ತೇನೋ ಎನಿಸುತ್ತದೆ. ಪರ್ವ ಕುರಿತು ಬರೆದ ಲೇಖನ ಶುದ್ಧ ವಿಮರ್ಶೆಗೆ ಒಂದು ಮಾದರಿ. ಮನಮುಟ್ಟುವಂತಹ ವಿವರಣೆಯೊಂದಿಗೆ ಕೃತಿಯ ಲೋಪದೋಷಗಳನ್ನು ಕಾದಂಬರಿಕಾರರೂ ಅರಿಯುವ ರೀತಿಯಲ್ಲಿ ಬಿಚ್ಚಿಟ್ಟ ಬಗೆ ಮೆಚ್ಚುವಂತಹದು. "ಮಹಾಭಾರತದ ಘಟನೆಗಳಿಗೆಲ್ಲಾ ಬುದ್ಧಿಶಕ್ತಿಯ ಹೊಸಲೇಪ ಹಚ್ಚಲಾಗಿದೆ." "ಮಾನವ ಸ್ವಭಾವಗಳ ಬಗ್ಗೆ ಪರಿಭಾವಿಸುವ ಸಾಧ್ಯತೆಗಳನ್ನು ತಾನಾಗಿಯೇ ಕೃತಿ ನಿರ್ಮಿಸಿಕೊಡುವುದಿಲ್ಲ" "ಪರ್ವದಲ್ಲಿ ಸಂಶೋಧನೆ ಮತ್ತು ಸೃಷ್ಟಿಶೀಲ ಕಲ್ಪನೆ ಎರಡೂ ಅಸಮರ್ಪಕ ತಂತ್ರ ಸಂಯೋಜನೆಯಿಂದಾಗಿ ಒಂದಕ್ಕೊಂದು ಪೂರಕವಾಗಿ ಹೊಂದಿಕೊಳ್ಳದೆ ಒಂದು ಇನ್ನೊಂದನ್ನು ಯಶಸ್ವಿಯಾಗಲು ಬಿಡುವುದಿಲ್ಲ." ಎಂಬ ಮಾತುಗಳು ಪರ್ವದ ವಿಷಯಕ್ಕೆ ಸತ್ಯವಾದವುಗಳೇ. ಕೊನೇಪಕ್ಷ ಕಾದಂಬರಿಕಾರರು ಮಹಾಭಾರತದ ಸಾಲುಘಟನೆ ಆಯದೆ ಅದರ ಚೌಕಟ್ಟಿನಲ್ಲಿಯೇ ಮನುಷ್ಯ ಸ್ವಭಾವದ ಸತ್ಯಗಳನ್ನು ಶೋಧಿಸುತ್ತ ಹೊಸ ಘಟನೆಗಳನ್ನು ಹೆಣೆದಿದ್ದರೆ ಪರ್ವ ಉತ್ತಮ ಕೃತಿಯಾಗುತ್ತಿತ್ತು ಎಂಬ ಲೇಖಕನ ಮಾತು ಕೊನೆಯದೆಂಬಂತಿದೆ,

ತಿರುಮಲೇಶರ ಕಾವ್ಯ : ಅಡಿಗರ ನವ್ಯಮಾರ್ಗದಲ್ಲಿ ಹೊಯ್‌ಕೈಯಾಗಿ ಕೃತಿ ಸೇರಿಸಿದ ತಿರುಮಲೇಶರ ಕಾವ್ಯಕರ್ಮ ಕ್ರಮೇಣ ನವ್ಯರಿಂದ ಬೇರ್ಪಡುವ ಅವರ ಕಾವ್ಯವನ್ನೇ ಉದಾಹರಿಸುತ್ತ ಅಡಿಗರ ಪಡಿನೆಳಲಿನಿಂದ ಮರೆಯಾಗಬೇಕೆನ್ನುವ ವಿವರವನ್ನು ಲೇಖಕರು ಈ ಲೇಖನದಲ್ಲಿ ಕೊಟ್ಟಿದ್ದಾರೆ. ನವೋದಯದ ಎಲ್ಲಾ ಲಾಭ ಪಡೆದು ನವ್ಯದ ಆದ್ಯ ಪ್ರವರ್ತಕರಾದ ಅಡಿಗರೊಡನೆ 'ಹುಡುಕುವಿಕೆಯ' ಶೋಧನೆಯಲ್ಲಿ ಅನುಭವವೇ ಗಟ್ಟಿ ದ್ರವ್ಯವಾಗುವ ಅಂಶಗಳನ್ನು ಲೇಖಕರು ಲೇಖನ

ದ್ವಂದ್ವಕ್ಕೂ ತಿರುಮಲೇಶರನ್ನು ಕುರಿತು ಚರ್ಚಿಸಿದ್ದಾರೆ. ಈ ಲೇಖನದ ಭಾಷೆ ಇನ್ನೂ ಸಹೃದಯನಿಗೆ ತಿಣುಕಾಡಿಸುವಂತೆ ಮಾಡುತ್ತದೆಯೆಂಬ ಸಂಶಯ ನನಗೆ ಇನ್ನೂ ಸಾಂದ್ರವಾಗಿ ಸ್ಪಷ್ಟ ಮಾತುಗಳಲ್ಲಿ, ಗೊಂದಲವೇಳದಂತೆ, ಬರೆಯುವುದು ಅವಶ್ಯ ಇದೆ. ನಿಜವೆಂದರೆ ಕಾವ್ಯ ಜನಪ್ರಿಯವಾಗದ್ದಕ್ಕೆ ತಂತ್ರಗಳ ಕಿತಾಪತಿ, ಬಳಸುವ ಭಾಷೆಯ ಬೆಡಗೇ ಗೊತ್ತಿಲ್ಲದ್ದು, ಅನುಭವ ನಿವೇದನೆಯ ಪರಿಯೇ ಗೊತ್ತಿಲ್ಲದ್ದು ಕಾರಣವಾಗಿದೆ. ನವ್ಯವಾಗಲಿ, ಬಂಡಾಯವಾಗಲಿ ಸೋತಿದ್ದು ಇಲ್ಲಿಯೇ. ಹಾಗೆಯೇ ವಿಮರ್ಶೆ ಕೂಡಾ. ಜನಮಾನಸವನ್ನು ಮುಟ್ಟದ ಉತ್ತಮ ಬರವಣಿಗೆಯಿಂದ ಏನು ಪ್ರಯೋಜನ ? ಕಾವ್ಯ ವಿಷಯಕ್ಕೆ ಕಂಬಾರ ಸಿದ್ಧಲಿಂಗಯ್ಯ ಚಂಪಾರ ಕವಿತೆಗಳು ಹೆಚ್ಚು ಯಶಸ್ವಿಯೆನ್ನಿಸುವುದಿಲ್ಲವೆ ? ಅನುಭವದ ಸರಳತೆ, ಗೇಯತೆ, ನೀಡುವ ಪರಿಣಾಮದೆಡೆಗೆ ಕವಿ ಲಕ್ಷ್ಯ ಹಾಕಬೇಕು ಅಷ್ಟೇ. ಅದು ಇಂದಿನ ಅವಶ್ಯಕತೆ ಕೂಡಾ.

ಸದ್ಯದ ಕಾಲ ಕಂಡ ಕ್ರೀಯಾಶೀಲ ಅನುಭವವನ್ನು ಸಾಹಿತ್ಯದಲ್ಲಿ ಇದ್ದಕ್ಕಿದ್ದಂತೆ ಹಿಡಿದಿಡುವ ಒಳ್ಳೆಯ ಕತೆಗಾರ ದೇವನೂರ ಮಹಾದೇವ. ಅವರ ಕತೆಗಳಲ್ಲಿ 'ದಲಿತಪ್ರಜ್ಞೆ' ಎಂಬ ಲೇಖನದಲ್ಲಿ ಲೇಖಕರು ತಾತ್ವಿಕ ನಿಲುವಿನಲ್ಲಿ ಚರ್ಚಿಸಬೇಕಾದ ಅಗತ್ಯತೆಯನ್ನು ಹೇಳಿದ್ದಾರೆ. ಆದರೆ ಕ್ರಿಯಾಶೀಲ ಬರಹಗಾರನಾದವನು ಮುಖ್ಯವಾದುದನ್ನು ನೋಡುತ್ತ ಅದರ ಶೋಧನೆಗೆ ತೊಡಗಿ ಕೃತಿರಚನೆಗೆ ಕೈ ಹಚ್ಚಿದರೆ ಅಮೂರ್ತ ರೂಪದಲ್ಲಿ ತಾತ್ವಿಕ ನೆಲೆಯೊಂದು ರೂಪುಗೊಂಡೇ ಇರುತ್ತದೆ. ದ್ಯಾವನೂರರ, ಒಡಲಾಳದಲ್ಲಿ ನಾವು ಕಾಣುವುದು ಅದನ್ನೇ. ಯಜಮಾನಸಂಸ್ಕೃತಿಯ ಶಿಖರಭಾಗದಲ್ಲಿ ಶ್ರೀಮಂತವರ್ಗ, ಅಧಿಕಾರವರ್ಗ, ಆಡಳಿತವರ್ಗ, ಮೇಲ್ಜಾತಿವರ್ಗ – ಇವರಡಿಯಲ್ಲಿ ಬಡವರು, ಸೇವಕರು, ಆಳಿಸಿಕೊಳ್ಳುವವರು, ಕೆಳಸ್ತರದ ದಲಿತಾದಿ ಶೂದ್ರರು – ಈ ಎಲ್ಲರಿಗೂ ಸ್ತ್ರೀ ಸಮಾನ ಅಂಶದಲ್ಲಿ ಶೋಷಣೆಗೊಳಪಡುವುದನ್ನು ಗಮನಿಸಬೇಕು. ನವ್ಯೋತ್ತರ ಕಾವ್ಯ – ಬದಲಾವಣೆಯ ನೆಲೆ ಬೆಲೆ – ವಿಜಯಶಂಕರ ಅವರ ಈ ಲೇಖನ ಓದಿದ ಮೇಲೆ ನನಗನಿಸಿತು – ಇದಕ್ಕಾದರೂ ಕಂಬಾರ, ಚಂಪಾ, ಸಿದ್ಧಲಿಂಗಯ್ಯ ಇಂತಹವರನ್ನು ಉದಾಹರಿಸಿಕೊಂಡೇ ಮುಂದೆ ಹೋಗುವ ಅನಿವಾರ್ಯತೆಯಿದೆಯೆಂದು. ಸುಳ್ಳು ಪೋಸುಗಳಿಂದ, ನಕಲಿ ಮಾತುಗಳಿಂದ, ಶಬ್ದಗಳ ಗೊಂದಲಗಳಿಂದ ಅವರು ಹೊರಬಂದಂತೆ ನಮ್ಮಲ್ಲಿ ಹೊರಬಿದ್ದವರು ಕಡಿಮೆ. 'ಚಂದ್ರಶೇಖರ ಪಾಟೀಲರಂತೆ ಕೀಟಲೆ ಮಾಡುವ ಕೇವಲ ಬುದ್ಧಿವಂತಿಕೆಯ, ಪೋಲ್ಮೈಯ್ಯ ಲೇವಡಿ' ಎಂಬ ಲೇಖಕರ ಮಾತು ಸರಿಯಾದುದಲ್ಲ. ಚಂಪಾ ಅವರನ್ನು ತಾತ್ವಿಕ ನೆಲೆಗಟ್ಟಿನಲ್ಲಿ ಅಭ್ಯಾಸ ಮಾಡಿದ್ದರೆ ಈ ಮಾತು ಬರುತ್ತಿರಲಿಲ್ಲವೆನಿಸುತ್ತದೆ. ನವ್ಯೋತ್ತರಕಾವ್ಯದ ಗಂಭೀರ ಮುಖದಲ್ಲಿ ಹೆಸರಿಸಿಕೊಂಡ ಎಚ್. ಎಸ್. ಬಿಳಿಗಿರಿಯವರ ದಾಪುಗಾಲುಗಳನ್ನು ಎಲ್ಲರೂ ಕಾಯೋಣ. ಹಳೆಯ

ದನ್ನು ಹಳಸಲು ಬಿಡದೆ ಹೊಸತರ ಒಳ್ಳೆಯದನ್ನು ಬಿಡದೆ ಬರಲಿರುವುದಕ್ಕೆ ಸಾಮಗ್ರಿ ಮಾಡಿಕೊಂಡು ಸಾಹಿತ್ಯಸೃಷ್ಟಿ ನಡೆಯಲಿ. ಅಂತಹದೇ ಮಾದರಿಯಲ್ಲಿ ವಸ್ತುನಿಷ್ಠ ವಿಮರ್ಶೆ ಬರಲಿ.

ಒಟ್ಟಾರೆ ೧೯೮೫ರ ಈ ಕೃತಿಗಳ ಅವಲೋಕನೆಯಿಂದ

೧) ಮೂಲ ಕೃತಿಗಳನ್ನು ವಿಮರ್ಶಿಸುವ ವಿಮರ್ಶಕನ ಪಾತ್ರ ಪೂರ್ವಗ್ರಹ ಪೀಡಿತವಾಗಿರದೆ ಸಮತೋಲವಾಗಿರಬೇಕು.

೨) ಬರೀ ಕುಚೋದ್ಯ ಲೇವಡಿಗಳಿಗೆ ವಿಮರ್ಶನ, ಸೃಜನಕ್ರಿಯೆ ಮೀಸಲಾಗಿರಬಾರದು. ಇಲ್ಲಿನ ಬಹಳಷ್ಟು ವಿಮರ್ಶೆ ಹಳಗನ್ನಡ, ನಡುಗನ್ನಡ, ನವೋದಯ ಸಾಹಿತ್ಯ ಕುರಿತು ಬಂದಿವೆ ಹೊರತು ಹೊಸ ಪೀಳಿಗೆಯವರ ಕುರಿತು ಬರೆಯದಿರುವುದು ಕೊರತೆ ಎನಿಸುತ್ತದೆ.

೩) ಕೆಲವು ಲೇಖನಗಳಲ್ಲಿ ತಲಸ್ಪರ್ಶಿಯಾದ ವಿಮರ್ಶನಕ್ರಿಯೆ ಇಲ್ಲದ್ದು ಕಂಡುಬರುತ್ತದೆ.

ಈ ದೃಷ್ಟಿಯಿಂದ ೧೯೮೫ರ ಸಾಹಿತ್ಯ ವಿಮರ್ಶೆಯ ಕ್ಷೇತ್ರ ತೀರ ಸೀಮಿತ ಮತ್ತು ಜಡಪ್ರವೃತ್ತಿಯದೆನಿಸುತ್ತದೆ ಎಂದು ಹೇಳಬಹುದು.

● ● ●

ಮುಗ್ದೂರಿನ [ಸಂಪಿಕೇರಿ] ಎರಡು ಪ್ರಾಚೀನ ಶಿಲ್ಪಗಳು

● ಗಣಪತಿಗೌಡ ಎಸ್.

ಮುಗ್ದೂರು ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪುರ ತಾಲೂಕಿನ ಒಂದು ಚಿಕ್ಕ ಹಳ್ಳಿ. ಸಿದ್ಧಾಪುರದಿಂದ ಸುಮಾರು ೫ ಕಿ.ಮಿ. ದೂರದಲ್ಲಿದೆ. ಇಲ್ಲಿಯೇ ಹತ್ತಿರದ ಸಂಪಿಕೇರಿಯ ಶಿವದೇವಾಲಯದ ಎದುರುಗಡೆ ಎರಡು ವೀರಗಲ್ಲು, ವಿಷ್ಣು ಮತ್ತು ನರಸಿಂಹನ ಒಂದೊಂದು ಮೂರ್ತಿಗಳಿವೆ. ವೀರಗಲ್ಲು ಹಾನಗಲ್ಲು ಕದಂಬ ಕೀರ್ತಿವರ್ಮನ ಕಾಲದ್ದಿದ್ದು ಕಲಚುರಿ ಸೋವಿದೇವನ ೧೬ನೇಯ ಆಳ್ವಿಕೆ ವರ್ಷದ ಉಲ್ಲೇಖ ನೀಡುತ್ತದೆ. ವಿಷ್ಣು ಮತ್ತು ನರಸಿಂಹ ವಿಗ್ರಹಗಳು ಪ್ರಾಚೀನ ಲಕ್ಷಣಗಳನ್ನೊಳಗೊಂಡಿದ್ದು ಅವುಗಳ ಮಹತ್ವವನ್ನಿಲ್ಲಿ ಚರ್ಚಿಸಲಾಗಿದೆ.

ವಿಷ್ಣು ಮೂರ್ತಿ (ಚಿತ್ರಗಳು ೧ ಮತ್ತು ೨) :

ಈ ಮೂರ್ತಿಯು ಇಲ್ಲಿಯ ಶಿವದೇವಾಲಯದ ಹೊರಗಡೆ ಎಡಬದಿಯಲ್ಲಿದೆ. 'ಮಾಧವ' ರೂಪದಲ್ಲಿ ವಿಷ್ಣುವಿನ ಮೂರ್ತಿಯು ಚತುರ್ಭುಜನಾಗಿ ಸಮಭಂಗದಲ್ಲಿರುವ ದುಂಡುಶಿಲ್ಪ. ಮುಂದಿನ ಬಲಗೈಯಲ್ಲಿ ಗದೆಯು ಇದ್ದು, ಮುಂದಿನ ಎಡಗೈಯನ್ನು ಸೊಂಟದ ಮೇಲೆ ಇರಿಸಿದೆ. ಮೇಲಿನ ಬಲ ಮತ್ತು ಎಡಕೈಗಳಲ್ಲಿ ಕ್ರಮವಾಗಿ ಚಕ್ರ ಮತ್ತು ಶಂಖಗಳಿವೆ. ರತ್ನಖಚಿತ ಕಿರೀಟ ಮುಕುಟ, ತೋಳ್ಬಂದಿ, ಬಳೆ, ಉದರಬಂಧ, ಯಜ್ಞೋಪವೀತ ಮೂರ್ತಿಯನ್ನು ಅಲಂಕರಿಸಿವೆ. ಮಂದಹಾಸ ಚೆಲ್ಲುವ ಮುಖ, ತುಸು ನಿಮೀಲಿತ ನೇತ್ರಗಳು, ನೀಳನಾಸಿಕ, ವಿಶಾಲವಾದ ಎದೆಗೆ ತಕ್ಕಂತೆ ಪ್ರಮಾಣಬದ್ಧವಾದ ಉದರ, ನೆರಿಗೆ ನೆರಿಗೆಯಾಗಿ ಮೊಣಕಾಲಿನವರೆಗೂ ಇಳಿಬಿಟ್ಟ ಧೋತಿಯ ಮೇಲೆ ಅಲಂಕೃತವಾದ ವೈಜಯಂತೀ ಮಾಲೆಯು ಶೋಭಿಸುತ್ತಿದೆ. ಹಿಂಭಾಗವೂ ಅಷ್ಟೇ ಸರಳ ಸುಂದರವಾಗಿದೆ. ತಲೆಯ ಹಿಂಬದಿಯಲ್ಲಿ ಸರಳ ಕೇಶಾಲಂಕಾರವಿರುವ ಶಿರಶ್ಚಕ್ರವಿದೆ. ವಿಶಾಲವಾದ ಎದೆಗೆ ತಕ್ಕಂತೆ ಬೆನ್ನು ಹಾಗೂ ಸಡಕಲಾದಂತೆ ತೋರುವ ನಡು, ಮೂರ್ತಿಯ ಸೌಂದರ್ಯವನ್ನು ಹೆಚ್ಚಿಸಿವೆ. ಸುಂದರವಾದ ಈ ಮೂರ್ತಿಯ ದೈಹಿಕ ಲಕ್ಷಣಗಳು ಸ್ಪಷ್ಟವಾಗಿವೆ. ಇಂತಹದೇ ಮೂರ್ತಿಯನ್ನು ಅ. ಸುಂದರ ಅವರು ಸುಂಕೇರಿಯಲ್ಲಿ [ಅಂಕೋಲಾ

ತಾಲೂಕು, ಉತ್ತರ ಕನ್ನಡ ಜಿಲ್ಲೆ] ಶೋಧಿಸಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.೧

ಮೂರ್ತಿಯು ಕೆತ್ತನೆ ಅಪೂರ್ಣ. ಸೊಂಟಕ್ಕಿಂತ ಕೆಳಗಿನ ಭಾಗವು ಕೆತ್ತನೆಯ ದೃಷ್ಟಿಯಿಂದ ಅಷ್ಟೊಂದು ಪರಿಪೂರ್ಣಗೊಂಡಿಲ್ಲ. ಆದರೂ ಮೂರ್ತಿಯ ಸೌಂದರ್ಯಕ್ಕೆ ಕೊರತೆಯೇನೂ ಇಲ್ಲ. ಸುಂಕೇರಿಯ ಮೂರ್ತಿಯು ಹಾಗೇ ಹಿಂಬದಿ ಚಕ್ರ ಹಾಗೂ ಗದಾ ಇವುಗಳನ್ನು ಪೂರ್ಣವಾಗಿ ಬಿಡಿಸಿಲ್ಲ.

ಉತ್ತರಕನ್ನಡ ಜಿಲ್ಲೆಯ ಕೊಂತಪಾಲ, ಹೈಗುಂದದ (ಹೊನ್ನಾವರ ತಾಲ್ಲೂಕು) ವಿಷ್ಣುಮೂರ್ತಿಗಳು ಸುಮಾರು ೩ ಮತ್ತು ೫ನೆಯ ಶತಮಾನದ ವೆಂದೂ, ಸುಂಕೇರಿಯ ವಿಷ್ಣುಮೂರ್ತಿ ಕ್ರಿ.ಶ. ೬ನೆಯ ಶತಮಾನದ್ದೆಂದೂ ವರದಿ ಯಾಗಿದೆ.೨ ಈ ಮೂರ್ತಿಯು ಸಹ ಸುಂಕೇರಿಯ ಮಾಧವನ ಮೂರ್ತಿಗೆ ಅತೀ ಹತ್ತಿರದ ಶಿಲ್ಪಸಾಮ್ಯವನ್ನು ಹೊಂದಿರುವದರಿಂದ ಮುಗ್ದೂರಿನ ವಿಷ್ಣು ಶಿಲ್ಪ ಕೂಡ ಬಹುಶಃ ೬ನೆಯ ಶತಮಾನಕ್ಕೆ ಸೇರಿದ್ದೆಂದು ತರ್ಕಿಸಬಹುದು.

ಸುಂಕೇರಿ ಮತ್ತು ಮುಗ್ದೂರಿನ ಮಾಧವಮೂರ್ತಿಗಳು ಶೈಲಿ ಮತ್ತು ಕೆತ್ತನೆಯಲ್ಲಿ ಒಬ್ಬನೇ ಶಿಲ್ಪಿಯಿಂದ ಕೆತ್ತಲ್ಪಟ್ಟಿದ್ದವೆನ್ನುವಷ್ಟು ಮಟ್ಟಿಗೆ ಸಾಮ್ಯವನ್ನು ಹೊಂದಿವೆ. ಆದರೆ ಸುಂಕೇರಿಯು ಕಾರವಾರದಿಂದ ಸುಮಾರು ೧೦೦ ಕಿ.ಮಿ. ವಾಯುವ್ಯಕ್ಕಿದೆ. ಇವೆರಡೂ ಮೂರ್ತಿಗಳು ಬಹುಮಟ್ಟಿಗೆ ಈ ಭಾಗದ ಒಂದು ಶಿಲ್ಪಸಂಪ್ರದಾಯವನ್ನು ಸೂಚಿಸುವಂತೆ ತೋರುತ್ತವೆ. ಇದು ಗೊತ್ತಿರುವ ಬೇರೆ ಸಮಕಾಲೀನ ಶಿಲ್ಪ ಶೈಲಿಗಳಿಗಿಂತ ಸ್ಪಷ್ಟವಾಗಿ ಭಿನ್ನವಾಗಿದೆ. ಆದ್ದರಿಂದ ಇದು ಈ ಪ್ರದೇಶದ ಒಂದು ಸ್ವತಂತ್ರ ಸಂಪ್ರದಾಯ ಶೈಲಿ ಇರಬಹುದೋ ಎನ್ನುವಷ್ಟರ ಮಟ್ಟಿಗಿನ ಊಹೆಗೆ ಎಡೆಮಾಡಿಕೊಡುತ್ತದೆ. ಮುಗ್ದೂರಿನ ಮೂರ್ತಿಯು ಈ ಭಾಗದಲ್ಲಿ ವೈಷ್ಣವಪಂಥದ ಇತಿಹಾಸವನ್ನೂ, ಮೂರ್ತಿಶಿಲ್ಪ ಬೆಳವಣಿಗೆಯ ಪ್ರಾಚೀನ ಹಂತವನ್ನೂ ತಿಳಿಯಲು ಉತ್ತಮ ಆಕರವಾಗಿದೆ. ಆದರೆ ಈ ದೃಷ್ಟಿ ಯಿಂದ ಇನ್ನೂ ಹೆಚ್ಚಿನ ಸಂಶೋಧನೆ ಅಗತ್ಯವಿದೆ.

ನರಸಿಂಹಮೂರ್ತಿ (ಚಿತ್ರ ೩ ಮತ್ತು ೪) :

ದ್ವಿಭುಜ ನರಸಿಂಹನು ಬಲಗಾಲನ್ನು ಪೀಠದ ಮೇಲೆ ಊರ್ಧ್ವವಾಗಿಯೂ, ಎಡಗಾಲನ್ನು ಅಡ್ಡಲಾಗಿ ಮಡಚಿ ಸುಖಾಸನದಲ್ಲಿ ಕುಳಿತಿದ್ದಾನೆ. ಬಲಗೈಯನ್ನು

---

೧. ಅ. ಸುಂದರ : 'ಸಿದ್ಧರ ಮತ್ತು ಸುಂಕೇರಿ ಗ್ರಾಮಗಳಲ್ಲಿಯ ಎರಡು ಅಪರೂಪದ ಶಿಲಾ ಮೂರ್ತಿಗಳು', ಕರ್ನಾಟಕ ಭಾರತಿ, ಪುಟ ೧೧೯. (೧೯೮೦)

೨. ಅದೇ " "

ಮೊಣಕಾಲ ಮೇಲೆ ಸಡಿಲವಾಗಿ ಬಿಟ್ಟು, ಬಿಚ್ಚಿದ ಎಡಗೈಯನ್ನು ತೊಡೆಯ ಮೇಲೆ ಊರಿದೆ. ಧೋತ್ರದ ಮಂಡಿಕೆಯುಳ್ಳ ಅಡ್ಡಪಟ್ಟಿಯನ್ನು ಸೊಂಟಕ್ಕೆ ಬಿಗಿಯಲಾಗಿದೆ. ಅಷ್ಟೊಂದು ಅಲಂಕೃತವಲ್ಲದ ಕಂಠಹಾರವಿದೆ. ಪ್ರತಿ ಕೈಗೆ ಒಂದೊಂದರಂತೆ ಸರಳವಾದ ಬಳೆಗಳಿವೆ. ಸ್ಥೂಲದೇಹ ಉಬ್ಬಿದ ಹೊಟ್ಟೆಯಿಂದ ಸ್ವಲ್ಪ ಕುಬ್ಜನಾಗಿ ಕಂಡರೂ ಪ್ರಮಾಣಬದ್ಧ ಸಹಜವಾಗಿ ಲಕ್ಷಣವಾಗಿರುವ ಆಕರ್ಷಕ ಮೈಕಟ್ಟು, ಅಗಲವಾದ ಸಿಂಹಮುಖ, ದೊಡ್ಡ ಕಣ್ಣುಗಳು, ಎರಡೂ ಕಿವಿಯ ಮೇಲೆ ಹಾಗೂ ಹಿಂಬದಿಯಲ್ಲಿ ಅಸ್ಪಷ್ಟವಾಗಿ ತೋರುವ ಕೂದಲುಗಳು ಮುಚ್ಚಿವೆ. ಮೂರ್ತಿಯ ಕೆತ್ತನೆಯ ದೃಷ್ಟಿಯಿಂದ ಅಷ್ಟೊಂದು ಪರಿಪೂರ್ಣವಿಲ್ಲ.

ಸಮಕಾಲೀನ ಈ ಮಾದರಿಯ ವಿಗ್ರಹಗಳು ಈಗಾಗಲೇ ಶಿವಮೊಗ್ಗಾ-ಉತ್ತರ ಕನ್ನಡ-ದಕ್ಷಿಣಕನ್ನಡ ಜಿಲ್ಲಾ ಪ್ರದೇಶದಲ್ಲಿ ಹಲವು ಸ್ಥಳಗಳಲ್ಲಿ ಶೋಧವಾಗಿವೆ. ಆದರೆ ಈ ನರಸಿಂಹ ವಿಗ್ರಹವು ಬಿದನೂರು, ಕಂಪ್ಪಗದ್ದೆ, ಹಲಸಿ, ಚಿಂಗಣಿ, ಕಾರಗಲ್ ಮೊದಲಾದ ಸ್ಥಳಗಳಲ್ಲಿ ದೊರೆತ ಒಂದೆರಡು ಆಭರಣಗಳಿಂದ ಅಲಂಕೃತವಾದ ಸರಳಶೈಲಿಯ ನರಸಿಂಹನ ವಿಗ್ರಹಕ್ಕೆ ಹೋಲುತ್ತದೆ. ಮೂರ್ತಿಯ ಲಕ್ಷಣ ಹಾಗೂ ಶೈಲಿಯ ಆಧಾರದ ಮೇಲೆ ಈ ಮೇಲಿನ ನರಸಿಂಹ ವಿಗ್ರಹಗಳೆಲ್ಲವೂ ಸಾಮಾನ್ಯವಾಗಿ ೪-೬ನೆಯ ಶತಮಾನದ್ದೆಂದು ತರ್ಕಿಸಲಾಗಿದೆ. ಬಹುಮಟ್ಟಿಗೆ ಇದುಕೂಡ ೫-೬ನೇ ಶತಮಾನಕ್ಕೆ ಸೇರಿದ್ದೆಂದು ಹೇಳಬಹುದು.

ಮೈಮಾಟ, ಉಬ್ಬಿದ ಉದರ, ಬಲಿಷ್ಠವಾಗಿರುವ ದೇಹದ ಅಂಗಾಂಗಗಳು ಕ್ರಿ. ಶ. ೨-೩ನೇ ಶತಮಾನದ ನಾಗಾರ್ಜುನಕೊಂಡ ಮಿಥುನ ಶಿಲ್ಪದಲ್ಲಿರುವದನ್ನು ಗಮನಿಸಬಹುದು.*

ಆಧಾರ ಗ್ರಂಥಗಳು

ಗುರುರಾಜ ಭಟ್ಟ ಪಿ: ೧೯೭೫ : ಸ್ಟಡೀಸ ಇನ್ ತುಳುವ ಹಿಸ್ಟ್ರಿ ಆ್ಯಂಡ್ ಕಲ್ಚರ್, ಉಡುಪಿ.

ಸುಂದರ ಅ : ೧೯೭೬ : "ಇತ್ತೀಚಿನ ಕೆಲವು ಮುಖ್ಯ ಪುರಾತತ್ವ ಶೋಧನೆಗಳು" ಕರ್ನಾಟಕ ಭಾರತಿ, ಸಂ. ೮, ಸಂಚಿಕೆ ೭ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

* ಈ ಲೇಖನ ಬರೆಯುವಲ್ಲಿ ಉಪಯುಕ್ತ ಸಲಹೆ ನೀಡಿದ ಡಾ. ಅ. ಸುಂದರ, ಡಾ. ಶ್ರೀನಿವಾಸ ಪಾಡಿಗಾರ ಹಾಗೂ ಸಿ. ಕೆ. ರಮೇಶ್ ಅವರಿಗೆ ಕೃತಜ್ಞತೆಗಳು.

ಸುಂದರ ಅ : ೧೯೭೭ : ನರಸಿಂಹ ಸ್ಕಲ್ಪಚರ್ಸ್ ಪ್ರವ್ ಮಾಹಾಕೂಟ ಕಂಪಟೂರು : "ಸಮ್ ಅರ್ಲಿ ಟೈಪ್ಸ್" ಜರ್ನಲ್ ಆಫ್ ಕರ್ನಾಟಕ ಹಿಸ್ಟಾರಿಕಲ್ ರಿಸರ್ಚ್ ಸೊಸೈಟಿ, ಧಾರವಾಡ.

ಸುಂದರ ಅ : ೧೯೯೦ : "ಸಿದ್ಧರ ಮತ್ತು ಸಂಕೇರಿ ಗ್ರಾಮಗಳಲ್ಲಿಯ ಎರಡು ಅಪರೂಪದ ಶಿಲಾಮೂರ್ತಿಗಳು" ಕರ್ನಾಟಕ ಭಾರತಿ, ಸಂ. ೨೨ ಸಂಚಿಕೆ–೩ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

● ● ●



ಚಿತ್ರ ೧. ವಿಷ್ಣುಮೂರ್ತಿ (ಮುಂಬದಿ)



ಚಿತ್ರ ೨. ವಿಷ್ಣುಮೂರ್ತಿ (ಹಿಂಬದಿ)



ಚಿತ್ರ ೩. ದ್ವಿಭುಜ ನರಸಿಂಹ (ಮುಂಬದಿ)



ಚಿತ್ರ ೪. ದ್ವಿಭುಜ ನರಸಿಂಹ (ಹಿಂಬದಿ)

ಸೋದೆಯ ಸದಾಶಿವರಾಯನ ಸ್ವರವಚನಗಳಲ್ಲಿ ಐತಿಹಾಸಿಕ ಸಂಗತಿಗಳು

● ಬಿ. ಆರ್. ಹಿರೇಮಠ

ಇತಿಹಾಸ ರಚನೆಯಲ್ಲಿ ಶಾಸನಗಳನ್ನು ಮೂಲ ಆಕರ ಸಾಮಗ್ರಿ (Primary Source) ಗಳನ್ನಾಗಿಯೂ ಕಾವ್ಯಗಳನ್ನು ಪೂರಕ ಆಕರ ಸಾಮಗ್ರಿ (Secondary Source)ಗಳನ್ನಾಗಿಯೂ ಇತಿಹಾಸಕಾರರು ಬಳಸುತ್ತ ಬಂದಿದ್ದಾರೆ. ಕೆಳದಿ ನೃಪ ವಿಜಯ, ಕಂಠೀರವ ನರಸರಾಜವಿಜಯ, ನಿಂಬಸಾಮಂತ ಚರಿತೆ, ಸಿರುಮನ ಸಾಂಗತ್ಯ, ಇಮ್ಮಡಿ ಚಿಕ್ಕಭೂಪಾಲ ಸಾಂಗತ್ಯ, ಸರಜಾ ಹನಮೇಂದ್ರ ಚರಿತೆ ಮೊದಲಾದವು ಕನ್ನಡದಲ್ಲಿ ರಚಿತವಾದ ಚಾರಿತ್ರಿಕ ಕಾವ್ಯಗಳು. ಕರ್ನಾಟಕದ ಇತಿಹಾಸಕಾರರು ಈ ಒಂದೊಂದು ಕೃತಿಗಳನ್ನೇ ಸ್ವತಂತ್ರವಾಗಿ ಅಭ್ಯಸಿಸಿ, ಆಯಾ ಅರಸುಮನೆತನದ ಚರಿತ್ರೆಗೆ ಇವುಗಳನ್ನೇ ಮೂಲ ಆಕರ ಸಾಮಗ್ರಿಯಾಗಿ ಉಪಯೋಗಿಸಿಕೊಳ್ಳುವುದು ಹೆಚ್ಚು ಪ್ರಯೋಜಕಾರಿಯೆನಿಸುತ್ತದೆ. ಇದಲ್ಲದೆ ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಕಲಚುರಿ, ಯಾದವ, ಹೊಯ್ಸಳ, ವಿಜಯನಗರ, ಕೆಳದಿ, ಇಕ್ಕೇರಿ, ಸ್ವಾದಿ, ಮೈಸೂರು, ಕಿತ್ತೂರು, ಸಿರಸಂಗಿ ಮುಂತಾದ ಅರಸುಮನೆತನಗಳ ಅವಧಿಯಲ್ಲಿ ಹುಟ್ಟಿದ ಸಮಸ್ತಸಾಹಿತ್ಯಕೃತಿಗಳಲ್ಲಿಯ ಐತಿಹಾಸಿಕ ಸಂಗತಿಗಳನ್ನು ಗುರುತಿಸುವ, ಸಂಗ್ರಹಿಸುವ, ವಿವೇಚಿಸುವ, ಪುನರ್‌ಪರಿಶೀಲಿಸುವ ಕಾರ್ಯವು ಸಮಗ್ರವಾಗಿ ನಡೆಯಬೇಕಾಗಿದೆ. ಈ ನಿಟ್ಟಿನಲ್ಲಿ ಅಲ್ಲಲ್ಲಿ ಕೆಲವು ಪ್ರಯತ್ನಗಳು ನಡೆದಿದ್ದರೂ ತಲಸ್ಪರ್ಶಿಯಾದ ಅಧ್ಯಯನ ಇನ್ನೂ ಆಗಬೇಕಾಗಿದೆ. ಇದರಿಂದ ಪ್ರಾಚೀನ ಕರ್ನಾಟಕದ ಸಮಗ್ರಚರಿತ್ರೆಗೆ ಇನ್ನೂ ಹೆಚ್ಚಿನ ವಿಷಯ ಸೇರ್ಪಡೆಯಾಗುವ ಸಾಧ್ಯತೆಯಿದೆ.

ಪ್ರಾಚೀನ ಕರ್ನಾಟಕದ ಸುಪ್ರಸಿದ್ಧ ಅರಸುಮನೆತನಗಳಲ್ಲಿ ಸ್ವಾದಿಯೂ ಒಂದಾಗಿದೆ. ಹದಿನೈದನೆಯ ಶತಮಾನದ ಪಶ್ಚಿಮ ಕರ್ನಾಟಕದ ಸ್ವಾದಿಯಲ್ಲಿ ಉದಯವಾದ ಈ ಅರಸುಮನೆತನ ರಾಜಕೀಯ, ಧಾರ್ಮಿಕ, ಸಾಹಿತ್ಯಿಕ, ಸಾಮಾಜಿಕ ಹಾಗೂ ಶಿಲ್ಪ-ಸಂಗೀತ ಕ್ಷೇತ್ರಗಳಿಗೆ ನೀಡಿದ ಕೊಡುಗೆ ಅಪಾರವಾದುದಾಗಿದೆ. ಆದರೆ ಈ ಕ್ಷೇತ್ರಗಳನ್ನು ಕುರಿತು ವಿವರವಾದ ಅಧ್ಯಯನ ಇಲ್ಲಿಯವರೆಗೆ ನಡೆಯದಿರುವುದು, ನೀಡಿದ ಕೊಡುಗೆಯನ್ನು ಗುರುತಿಸದಿರುವುದು ತೀರ ವ್ಯಸನದ ಸಂಗತಿಯಾಗಿದೆ.

ಸ್ವಾದಿ ಅರಸುಮನೆತನದ ಅರಸರಲ್ಲಿ ಅತ್ಯಂತ ಪ್ರಖ್ಯಾತನೆನಿಸಿದವನು ಸದಾಶಿವ ರಾಯ-I (ಕ್ರಿ. ಶ. ೧೬೭೪-೧೭೯೭). ಶಿವಭಕ್ತನಾದ ಈತನು ವ್ಯವಹಾರ ಚತು ರನೂ ದಕ್ಷಆಡಳಿತಗಾರನೂ ಆಗಿದ್ದಂತೆ ವಿದ್ಯಾಪಕ್ಷಪಾತಿಯೂ ಕಾವ್ಯಪೋಷಕನೂ ದಾರ್ಶನಿಕನೂ ಆಗಿದ್ದುದಲ್ಲದೆ ಸ್ವತಃ ಕವಿಯೂ ಸಂಗೀತಗಾರನೂ ಆಗಿ ಕನ್ನಡ ಸಾಹಿತ್ಯ, ಸಂಗೀತ ಕ್ಷೇತ್ರಗಳಿಗೆ ಮೌಲಿಕಕೃತಿಗಳನ್ನು ನೀಡಿದ್ದಾನೆ.

ಸ್ವಾದಿಯ ಅರಸರ ಆಶ್ರಯದಲ್ಲಿ ಸಾಹಿತ್ಯ ಸೃಷ್ಟಿಯಾಗಿರಬಹುದಾದರೂ ಅಧಿ ಕೃತ ದಾಖಲೆಗಳು ಮಾತ್ರ ಸಧ್ಯ ಸಿಗುವುದಿಲ್ಲ. ಕಂದ, ವೃತ್ತ, ಷಟ್ಪದಿಗಳಲ್ಲಿರುವ 'ಸದಾಶಿವನೀತಿ'ಯೊಂದೇ ಸದಾಶಿವರಾಯನ ಸಾಹಿತ್ಯಕೃತಿಯೆಂದೂ ಈ ಅರಸು ಮನೆತನದ ಕಾಲದಲ್ಲಿ ಸೃಷ್ಟಿಯಾದಂದೆಂದೂ ವಿದ್ವಾಂಸರು ಇಲ್ಲಿಯವರೆಗೆ ಭಾವಿಸುತ್ತ ಬಂದಿದ್ದಾರೆ. ಆದರೆ ಈತನ ಉಳಿದ ಸಾಹಿತ್ಯಕೃತಿಗಳ ಪ್ರಕಾರವಾಗಲೀ, ಸಂಖ್ಯೆ ಯಾಗಲೀ, ಸತ್ವವಾಗಲೀ ಇಲ್ಲಿಯವರೆಗೆ ಯಾರಿಗೂ ಗೊತ್ತಿರಲಿಲ್ಲ. ಆದರೆ ಇತ್ತೀಚೆ ಲಭಿಸಿದ ಅಪೂರ್ವ ತಾಳೆಗರಿ ಹಸ್ತಪ್ರತಿ, ಈತನ ೧೭ ಹೊಸ ಸಾಹಿತ್ಯಕೃತಿಗಳನ್ನು ನಮಗೆ ತಿಳಿಸಿಕೊಡುತ್ತದೆ. ಇತಿಹಾಸಕಾರರ, ಸಂಶೋಧಕರ ಕಣ್ಣುತಪ್ಪಿಸಿ ಉಳಿ ದಿರುವ ಅರಸನೊಬ್ಬನು ಬರೆದ ಅಧಿಕ ಸಂಖ್ಯೆಯ ಹೊಸಕೃತಿಗಳು ಒಂದೇ ಹಸ್ತ ಪ್ರತಿ ಕಟ್ಟಿನಲ್ಲಿ ದೊರೆಯುತ್ತಿರುವುದು ಅತ್ಯಂತ ಸಂತಸದ, ಶುಭದ ಸಂಗತಿ. ಇದು ಇತ್ತೀಚಿನ ಗಮನಾರ್ಹ ಶೋಧವೆನಿಸಿದೆ. ಈ ಮೂಲಕ ಸ್ವಾದಿ ಅರಸುಮನೆತನದ ರಾಜಕೀಯ, ಧಾರ್ಮಿಕ, ಸಂಗೀತ ಹಾಗೂ ಸಾಹಿತ್ಯಿಕ ವಿಷಯಗಳನ್ನು ಕುರಿತು ಅಪೂರ್ವ ಅಂಶಗಳು ಬೆಳಕು ಕಾಣುತ್ತಲಿವೆ. ಇದು ನೆನೆಯುವಂತಹ ಚಾರಿತ್ರಿಕ ದಾಖಲೆಯೆಂದೇ ಹೇಳಬೇಕು.

ಸೋದೆಯ ಸದಾಶಿವರಾಯನು ರಚಿಸಿದ ಈ ಹೊಸಕೃತಿಗಳು ಹೀಗಿರುತ್ತವೆ : ೧. ಸ್ವರವಚನಗಳು ೨. ಸಮಸ್ಯಾಪೂರ್ಣ ವೃತ್ತಕಂದ ೩. ರಾಗಮಾಲಿಕೆ ೪. ಪಂಚವಿಂಶತಿ ಲೀಲೆಯ ರಗಳೆ ೫. ತ್ರಿವಿದಿ ೬. ಉಳುಮೆಯ ಮಹಾತ್ಮೆ ೭. ಜೋಗುಳಪದಗಳು ೮. ನವರಸ ಜಕ್ಕಿಣಿ ೯. ಪಂಚವಿಂಶತಿ ಲೀಲೆಗಳ ಮೂಲಪದ್ಯಗಳು ೧೦. ಜಾವಡಿ ೧೧. ಭಿಕ್ಷಾಟನ ಲೀಲೆಯ ಕಂದ ೧೨. ಖಡ್ಗ ಪ್ರಬಂಧ ೧೩. ಮಂಗಲಾಷ್ಟಕಗಳು ೧೪. ಪ್ರಭುಲಿಂಗಲೀಲೆಯ ಜಾವಡಿ ೧೫. ಮಹಾಚದುರಂಗ ಲಕ್ಷಣ ೧೬. ಕಲಹಕೇತಯ್ಯಗಳ ಲಕ್ಷಣ ೧೭. ಕಂದ ಪದ್ಯಗಳು.

ಸದಾಶಿವರಾಯನ ಈ ಹದಿನೇಳೂ ಕೃತಿಗಳಲ್ಲಿ ಪ್ರಮುಖವಾದುವು ಹಾಗೂ ನಮ್ಮ ಗಮನ ಸೆಳೆಯುವಂಥವುಗಳೆಂದರೆ ಸ್ವರವಚನಗಳು. ಈತನ ಹೆಸರಿನಲ್ಲಿ ಸಧ್ಯ ೧೬೦ ಸ್ವರವಚನಗಳು ಲಭಿಸುತ್ತಿದ್ದು, ಇವುಗಳ ಸಂಖ್ಯೆ ಇನ್ನೂ ಅಧಿಕವಾಗಿ

ರುವ ಸಾಧ್ಯತೆಯಿದೆ. ಪ್ರತಿಯೊಂದು ಸ್ವರವಚನದ ಆರಂಭದಲ್ಲಿ 'ಪಲ್ಲ' ಇದೆ. ಇವು ಗಾತ್ರದಲ್ಲಿ ೨ ನುಡಿಯಿಂದ ೧೧ ನುಡಿಯವರೆಗೂ, ಪ್ರತಿಯೊಂದು ನುಡಿ ೨ ರಿಂದ ೧೦ ಸಾಲಿನ ವರೆಗೂ ವಿಸ್ತಾರವನ್ನು ಪಡೆದಿರುತ್ತವೆ. ಪ್ರತಿಯೊಂದು ಸ್ವರವಚನದಲ್ಲಿ ಆದಿಪ್ರಾಸ ನಿಯತವಾಗಿದ್ದು, ನುಡಿಯಿಂದ ನುಡಿಗೆ ಬೇರೆಬೇರೆ ಆಗಿರುತ್ತದೆ. ಇದರಿಂದ ಸ್ವರವಚನಗಳಲ್ಲಿ ಪ್ರಾಸವೈವಿಧ್ಯ ಸಹಜವಾಗಿ ಕಂಡುಬರುತ್ತದೆ. ಅನುಪ್ರಾಸ, ಅಂತ್ಯಪ್ರಾಸಗಳೊಂದಿಗೆ ವಡಿಯನ್ನೂ ಇಲ್ಲಿ ಬಳಸಲಾಗಿದೆ. ಹೀಗೆ ಈ ಸ್ವರವಚನಗಳು ಛಂದೋವೈವಿಧ್ಯದಿಂದ ಕೂಡಿದವುಗಳಾಗಿರುತ್ತವೆ.

ಇಲ್ಲಿಯ ಪ್ರತಿಯೊಂದು ಸ್ವರವಚನ 'ಮಳೆಯಗುರು ನಂದೀಶ', 'ಗುರು ನಂದಯ್ಯ' ಅಂಕಿತದಲ್ಲಿರುತ್ತವೆ. ಈತನ ಉಳಿದ ಎಲ್ಲ ಕೃತಿಗಳೂ ಇದೇ ಅಂಕಿತ ಹೊಂದಿರುತ್ತವೆ. ಈ ಅಂಕಿತದ 'ಸೋದೆಯ ಮಳೆಯಗುರು ನಂದೀಶ'ನು ಸದಾಶಿವರಾಯನ ಕುಲಗುರು, ರಾಜಗುರು, ಧರ್ಮಗುರು ಹಾಗೂ ವಿದ್ಯಾಗುರುವಾಗಿದ್ದನು. ಈತನನ್ನು 'ನಂದಿಕೇಶ್ವರ'ನೆಂದೂ ಕರೆಯುತ್ತಿದ್ದರು. ಸದಾಶಿವರಾಯನ ಸ್ವರವಚನಗಳಲ್ಲಿ ಈತನನ್ನು ಸುಧೆಪುರವಾಸ, ಮೃಡನಗರಪುರವಾಸ, ಇಂದುಕರಪುರವಾಸ, ಇಷ್ಟಗುರು, ಸುಧಾನಗರವಾಸ, ಸೋದೆಯ ಭೂಪ, ಪಟ್ಟಣಾಧಿಕ ಸೋದೆಪಾಲ, ಯೋಗಿ, ಮೃಡ, ಸೋದೆ ಗುರು, ಕುಲಗುರು, ಸ್ವಾಮಿ, ಗುರುಲಿಂಗ ಜಂಗಮ, ಸೋದೆಯ ಅರಸು, ಸೋದೆಪುರ ನೆಲೆವಾಸ, ಜಂಗಮರೂಪ, ಸೋದೆಯ ಸಿಂಹಾಸನಾಧೀಶ, ಆದಿಮೂರುತಿ, ಸೋದೆಪುರವರ ಗುರು, ಗುರುಮೂರ್ತಿ, ಸದ್ಗುರು, ಸೋದಾಪುರ ನಿವಾಸ, ದೊರೆ, ಗುರುರಾಯ, ಮೃಡಾಗಾರ ಪುರವಾಸ, ಸೋದಾ ನಗರದ ರಾಜಗುರು ಎಂದು ಹೆಸರಿಸಲಾಗಿದೆ. ದಕ್ಷಿಣಕಾಶಿಯೆನಿಸಿದ್ದ ಬನವಾಸಿಯ ಹಿರಿಯಮಠ, ವೀರಶೈವ ಮಳೆಯ ಬಗೆಯದು. 'ಗುರು ಮಳೆಯ ಮಲ್ಲೇಶ', ಈ ಮಠದ ಅಧಿಪತಿ*ಯಾಗಿದ್ದನು. ಸದಾಶಿವರಾಯನ ಗುರುವಾದ 'ಮಳೆಯಗುರು ನಂದೀಶ'ನು ಸೋದೆಯ 'ಹಿರಿಯ ಮಠ'ದ ಅಧಿಪತಿ. ಈ ಅರಸನ ಕಾಲದಲ್ಲಿ ಸೋದೆಯಲ್ಲಿಯೂ ವೀರಶೈವ 'ಮಳೆಯ ಬಗೆ'ಯ ಹಿರಿಯಮಠ ಪ್ರಖ್ಯಾತಿ ಪಡೆದಿದ್ದಿತು. ಈಗ ಸೋದೆಯಲ್ಲಿರುವ 'ನಂದಿಕೇಶ್ವರಮಠ'ವೇ 'ಮಳೆಯಗುರು ನಂದಯ್ಯ'ನ ಮೂಲ ಹಿರಿಯಮಠವಾಗಿರುತ್ತದೆ. ಬನವಾಸಿಯಲ್ಲಿಯೂ 'ಮಳೆಯ ಬಗೆ'ಯ ಹಿರಿಯಮಠವಿದ್ದುದು ಬೇರೆ ಮೂಲಗಳಿಂದ

---

* ಪ್ರೌಢರಾಯನ ಕಾವ್ಯದ ಕರ್ತೃ ಅದೃಶ್ಯ (ಕ್ರಿ. ಶ. ಸು. ೧೫೨೫) ಕವಿಯ ಧರ್ಮಗುರು, ವಿದ್ಯಾಗುರು, ದೀಕ್ಷಾಗುರುವಿನ ಹೆಸರೂ ಮಳೆಯ ಮಲ್ಲೇಶ. ವಿಜಾಪುರ ಜಿಲ್ಲೆಯ ಬೆಳ್ಳುಬ್ಬಿ ಗ್ರಾಮದ ಹಿರಿಯಮಠದ ಅಧಿಪತಿಯಾಗಿದ್ದ ಈತನು ಕೋಲಾರ ದೇಸಾಯರ ಕುಲಗುರುವೂ ಆಗಿದ್ದನು. ಬನವಾಸಿ ಹಾಗೂ ಬೆಳ್ಳುಬ್ಬಿಯ ಮಳೆಯ ಮಲ್ಲೇಶರು ವೀರಶೈವ 'ಮಳೆಯ ಬಗೆ'ಯ ಮೂಲದವರಾಗಿದ್ದರೂ ಭಿನ್ನವ್ಯಕ್ತಿಗಳಾಗಿರುತ್ತಾರೆ.

ಗೊತ್ತಾಗುತ್ತದೆ. ಹೀಗೆ ಸ್ವಾದಿಯ ಅರಸರ ಕಾಲದಲ್ಲಿ ಬನವಾಸಿ ಹಾಗೂ ಸ್ವಾದಿಗಳಲ್ಲಿ 'ಮಳೆಯ ಬಗೆ'ಯ ಹಿರಿಯಮಠಗಳಿದ್ದು, ಸ್ವಾದಿಯ ಮಠಾಧಿಪತಿ 'ನಂದಿಯಯ್ಯ'ನು ಸದಾಶಿವರಾಯನ ಗುರುವಾಗಿದ್ದುದು ಗೊತ್ತಾಗುತ್ತದೆ. ಆದುದರಿಂದ ಸೋದೆಯ ಸದಾಶಿವ ಭೂಪಾಲನು ಗುರುವಿನ ಹೆಸರನ್ನೇ ತನ್ನ ಎಲ್ಲ ಕೃತಿಗಳಿಗೂ 'ಅಂಕಿತ'ವಾಗಿಟ್ಟುಕೊಂಡು ಗುರುಭಕ್ತಿ ಸಲ್ಲಿಸಿದ್ದಾನೆ, ಗುರುವಿನ ಹೆಸರನ್ನು ಚಿರಸ್ಥಾಯಿಗೊಳಿಸಿದ್ದಾನೆ.

ಸೋದೆಯ ಸದಾಶಿವರಾಯನ ಸ್ವರವಚನಗಳಿಗೆ ಸಾಹಿತ್ಯಮುಖ, ಸಂಗೀತ ಮುಖ ಹಾಗೂ ಐತಿಹಾಸಿಕಮುಖಗಳಿರುವುದನ್ನು ನಾವು ಗುರುತಿಸುತ್ತೇವೆ. ಕೆಲವು ಸ್ವರವಚನಗಳು ಸಾಹಿತ್ಯಗುಣದಿಂದ ಸೊರಗಿದಂತೆ ಕಂಡಬಂದರೂ ಇವುಗಳ ಒಡಲಲ್ಲಿ ಮಿಂಚುವ 'ಕುರುಡ ನರಕದಲಿರ್ದ ಕೋಲ ಸೆಳಕೊಂಬನೆ', 'ಕಾಗೆಯ ಕಣ್ಣಿನಂತೆ ಚಿತ್ರ ಕಳವಳಿಸಿ', 'ಬೇಗೆ ಹಿಡಿದ ಬೆಟ್ಟದಂತೆ', 'ನಾಗ ಧನವ ಕಾವ ತೆರದಿ', 'ಹೂವ ಮಾರುವ ಸ್ಥಳದಲ್ಲಿ ಹುಲ್ಲ ಮಾರಿಸಬೇಡ', 'ಆನೆಯ ಮಾರುವ ಸ್ಥಳದಿ ಆಡ ಮಾರಿಸಬೇಡ', 'ಕೆಂಪು ಮಾರುವ ಸ್ಥಳದಿ ಕಾಜ ಮಾರಿಸಬೇಡ', 'ಜಾರಿಕೆಯೊಳು ಜಟ್ಟಿಯಿಂದ್ದ ವುಂಟೆ', 'ಹಬ್ಬದೊಳು ವಿಘ್ನವಾದಂತೆ', 'ಗುಬ್ಬಿ ಕೊರಳಿಗೆ ಗೋದಿಗಲ್ಲೆ', 'ಕುಂಜರ ಕಂಕುಶದಂತೆ', 'ಒಣಗೋಡೆಗೆ ಮರಳು ನಡುವುದೆ'. 'ನೀರಿನೊಳಗಿಟ್ಟ ಶಿಲೆ ನೆನೆಸಿದ ರದು ಮೃದು ತೋರಬಲ್ಲುದೆ', 'ಒತ್ತಿ ಹಣ್ಣು ಮಾಡಲು ಒಳಿತಾಗಿ ರುಚಿಪುದೆ', 'ಮುತ್ತು ಒಡೆದ ಮೇಲೆ ಮುನ್ನಿನ ಬೆಲೆಯುಂಟೆ', 'ನೆರೆಮನೆಯ ಜಗಳಗಳು ಗೀತ ವಲ್ಲ', 'ಒಡಲೊಳಗೆ ಕತ್ತರಿಯು ವಾಕ್ಯದಲಿ ನಿಷ್ಠುರ', 'ಹಾಯಿ ಹರಿದ ಹಡಗಿನಂತೆ', 'ಜರೆ ಬಂದ ಕಾಲದಲಿ ಜಲದೊಳಗೆ ಕೈಬಿಟ್ಟ ತೆರ', 'ಹಡಗಿನೊಳಗಿರುತಿಹ ಹಯತತಿಯ ಸುಖದಂತೆ', 'ಕಾಳಗದ ಸ್ತ್ರೀಯರಿಗೆ ಕರುಣವಿಲ್ಲ' ಮುಂತಾದ ಲೋಕೋಕ್ತಿಗಳು ಸಾಹಿತ್ಯಗುಣವನ್ನು ಸಾಬೀತುಪಡಿಸುತ್ತವೆ. ಇದಲ್ಲದೆ ಸೂತ್ರ ರೂಪದ ವಾಕ್ಯಗಳನ್ನೊಳಗೊಂಡ ಸ್ವರವಚನಗಳೂ ಇಲ್ಲಿದ್ದು, ಸ್ವರವಚನಗಳ ಸಾಹಿತ್ಯ ವೌಲ್ಯವನ್ನು ಸಾದರಪಡಿಸುತ್ತವೆ. ಇಂಥ ಒಂದು ಸ್ವರವಚನವನ್ನು ಮಾದರಿಗಾಗಿ ಇಲ್ಲಿ ಉದಾಹರಿಸಬಹುದು :

ಪುರಕೆ ಹೋದ ಮೇಲೆ ಪಥವ ಕೇಳುವುದೇಕೆ
ಹರಕೆ ಮಾಡಿದ ಮೇಲೆ ಹುಸಿವುದೇಕೆ ॥ಪಲ್ಲ॥

ಭಕುತಿಯಿಲ್ಲದ ಮೇಲೆ ಭಜನೆ ಲಿಂಗದೊಳೇಕೆ
ರಕುತಿಯಿಲ್ಲದ ಮೇಲೆ ರಮಿಸಲೇಕೆ
ಯುಕುತಿಯಿಲ್ಲದ ಮೇಲೆ ಯೋಗಶಾಸ್ತ್ರವಿದ್ಯೆಯೇಕೆ
ಮುಕುತಿಯಿಲ್ಲದ ಮೇಲೆ ಮಂತ್ರವೇಕೆ ॥೧॥

ಗಾನವರಿಯದ ಮೇಲೆ ಗೀತ ಸ್ವರ ತಾಳವೇಕೆ
ದಾನವರಿಯಂದ ಮೇಲೆ ದೇಹವೇಕೆ
ಮಾನವರಿಯದ ಮೇಲೆ ಮತಿವಂತನಾಗಲೇಕೆ
ಮೌನಿಯಾದ ಮೇಲೆ ಮುನಿವುದೇಕೆ ॥೨॥

ನುಡಿಯು ಎರಡಾದಮೇಲೆ ನಂಬಿಗೆಯು ಬಿಡಲೇಕೆ
ಒಡವೆ ಹೋದಮೇಲೆ ವ್ಯಥೆಗಳೇಕೆ
ಮಡದಿ ಮುನಿಸಿದ ಮೇಲೆ ಮದನಕಲೆ ಬಂಧವೇಕೆ
ಮೃಡ ನಂದೀಶ್ವರನ ಮೇಲೆ ಮಹಾದೈವವೇಕೆ ॥೩॥

ತ್ರಿಭಾಷಾವಿಶಾರದನಾದ ಸದಾಶಿವರಾಯನ ಸ್ವರವಚನಗಳ ಸಾಹಿತ್ಯಗುಣಕ್ಕಿಂತ ಸಂಗೀತಗುಣ ಅತ್ಯಂತ ಹಿರಿದಾದುದಾಗಿರುತ್ತದೆ. ಇಲ್ಲಿಯ ಸ್ವರವಚನಗಳಲ್ಲಿ ಕಂಡುಬರುವ ಕಾಂಬೋದಿ, ಯದುಕುಲ ಕಾಂಬೋದಿ, ಭೈರವಿ, ಶಂಕರಾಭರಣ, ಮೋಚುಬಾಳಿ, ಸಾರಂಗ, ಕಲ್ಯಾಣಿ, ತೋಡಿ, ದೇಶಿ, ಅಹೇರಿ, ಕೇದಾರ, ಗುಮ್ಮ ಕಾಂಬೋದಿ, ಮಾರವಿ, ಕಾಪಿ, ಲಲಿತ, ಆನಂದ ಭೈರವಿ, ಸಾವೇರಿ, ಘಂಟಾರ, ಗೌಳಿಪಂತು, ಶುದ್ಧವಸಂತ, ಹಿಂದೋಳ ವಸಂತ, ನಾರನ ಗೌಳ, ನಾದರಾಮಕ್ರೀ, ವಸಂತಭೈರವಿ, ಕೇದಾರಗೌಳ, ರೇಗುಪ್ತಿ, ನಾಟಿ, ಕನ್ನಡ, ಮಧುಮಾಧವಿ, ಮಾರ ಧನ್ಯಾಸಿ, ಪಂತುವರಾಳಿ, ಮಾಧವಿ, ಶ್ರೀರಾಗ, ಸೌರಾಷ್ಟ್ರ, ಮೋಹನ, ಮೋಚುಬವುಳಿ, ಸಾಳಂಗ, ಪೂರ್ವಿ, ಮೋಹನ ಕಲ್ಯಾಣ, ಮಿಶ್ರ, ಪಂಚವರ್ಣ ರಾಗಗಳೂ ಝಂಪೆ, ತ್ರಿವಿಡೆ, ಆದಿ, ಅಟ್ಟ, ಏಕ, ರೂಪಕ, ಧ್ರುವ, ಚೌತಾಳಗಳೂ ಮೇಲಿನ ಅಭಿಪ್ರಾಯವನ್ನು ಬೆಂಬಲಿಸುತ್ತವೆ. ಇದಲ್ಲದೆ ಇಲ್ಲಿಯ ಸಂಗೀತಪ್ರಧಾನವಾದ ಸ್ವರವಚನಗಳೂ ಇದನ್ನು ಪುಷ್ಟೀಕರಿಸುತ್ತವೆ.

ಈ ಸ್ವರವಚನಗಳಲ್ಲಿ ಶೃಂಗಾರ ಹಾಗೂ ಭಕ್ತಿ ಭಾವಗಳೇ ವಿಶೇಷವಾಗಿ ಕಂಡು ಬರುತ್ತಿದ್ದರೂ ಆತ್ಮನಿವೇದನೆ, ಧರ್ಮ, ಮೋಕ್ಷ, ಸಂಸಾರ, ಸಂಕಷ್ಟ, ನೀತಿಬೋಧೆ ಭರತನಾಟ್ಯ, ಸಂಗೀತ, ಸ್ತ್ರೀಸಮಾಜ, ಸಮಾಜ ವಿಮರ್ಶೆ, ಶಿವನ ಮಹಾತ್ಮೆ, ಶಿವ–ಪಾರ್ವತಿ–ಮಧುಕೇಶ್ವರ ಸ್ತುತಿ, ಶಿವಶರಣರ ಸ್ತೋತ್ರ, ಗುರುಸ್ತುತಿ, ಮುರಿಗಾ ಶಾಂತವೀರ, ಇಮ್ಮಡಿ ಮುರಿಗಾ ಗುರುಸಿದ್ಧರ ಸ್ತುತಿ, ಕಾಳಹಸ್ತಿ ನಿರ್ವಾಣೇಶನ ಸ್ತುತಿಗಳಿಗೆ ಸಂಬಂಧಿಸಿದ ಸ್ವರವಚನಗಳು ಇಲ್ಲಿರುತ್ತವೆ. ಆದರೆ ಇವುಗಳಲ್ಲಿ ಸಮಕಾಲೀನ ರಾಜಕೀಯ ಘಟನೆ, ಅರಸುಮನೆತನದ ಅಧಿಕಾರಿವರ್ಗ, ಸೋದೆಯ ಧರ್ಮಸಿಂಹಾಸನದ ರಾಜರು, ರಾಜಕೀಯ ಸಂಘರ್ಷ ಮೊದಲಾದ ಹಲವಾರು ಮಹತ್ವದ ಐತಿಹಾಸಿಕ ಸಂಗತಿಗಳನ್ನೊಳಗೊಂಡ ಸ್ವರವಚನಗಳು ಮಾತ್ರ ವಿದ್ವಾಂಸರ, ಇತಿಹಾಸಕಾರರ ತೀವ್ರ ಗಮನ ಸೆಳೆಯುತ್ತವೆ. ಹೀಗೆ ಸದಾಶಿವರಾಯನ ಸ್ವರವಚನ

ಗಳಿಗೆ ಸಾಹಿತ್ಯಮುಖ, ಸಂಗೀತಮುಖಗಳಿರುವಂತೆ ಚಾರಿತ್ರಿಕಮುಖವೂ ಇರುವುದು ವಿಶೇಷವೆಂದೇ ಹೇಳಬೇಕು.

ಸೋದೆಯ ಸದಾಶಿವರಾಯನ ಸ್ವರವಚನಗಳಲ್ಲಿ ಉಕ್ತವಾದ ಐತಿಹಾಸಿಕ ಸಂಗತಿಗಳಿಗೆ ವಿಶೇಷ ಮನ್ನಣೆ ಇದೆ. ಸ್ವತಃ ಅರಸನೇ ಈ ಸ್ವರವಚನಗಳನ್ನು ರಚಿಸಿರುವುದರಿಂದ, ಇವು ಸ್ವಾದಿಯ ಅರಸುಮನೆತನದ ಇತಿಹಾಸ ರಚನೆಗೆ ಮೂಲ ಆಕರಸಾಮಗ್ರಿಗಳಾಗಿ ನಿಲ್ಲುತ್ತವೆ. ಇವುಗಳಲ್ಲಿ ವೈಭವೀಕರಣವಾಗಲೀ, ಅತಿಶಯೋಕ್ತಿಯಾಗಲೀ ಇರದೆ ಸಮಕಾಲೀನ ರಾಜಕೀಯ ವಾಸ್ತವ ಸಂಗತಿಗಳು ನೇರವಾಗಿ ದಾಖಲಾಗಿರುತ್ತವೆ. ಇಂಥ ಚಾರಿತ್ರಿಕ ಮಹತ್ವವುಳ್ಳ ಈ ಸ್ವರವಚನಗಳು ತಿಳಿಯಪಡಿಸುವ ಐತಿಹಾಸಿಕ ಅಂಶಗಳನ್ನು ಹೀಗೆ ವಿವೇಚಿಸಬಹುದಾಗಿದೆ :

ಸದಾಶಿವರಾಯನ ಕಾಲದ ಸ್ವಾದಿಯ ಅರಸುಮನೆತನದಲ್ಲಿದ್ದ ಮಂತ್ರಿ, ಸೇನಾಪತಿ, ನಿಯೋಗಿ, ರಾಯಸದವ, ಕರಣಿಕ, ಪಟ್ಟೆಯವ, ಸೇನಾವಾರ್ತೆಯವ, ದಂಡನಾಯಕ, ಶಾಸನಿಕ, ಕಂದಾಚಾರದವ, ಊಳಿಗದವ, ಜ್ಯೋತಿಷಿ, ಪುರೋಹಿತ, ವಿದ್ವಾಂಸ, ಪುರಾಣಿಕ, ಕವೀಶ್ವರ, ವೈದ್ಯ, ಭರತಜ್ಞ, ಗಾಯಕ, ಪರಿಹಾಸಕ, ತಳವಾರ, ಹರಕೆಕಾರರ ಉಲ್ಲೇಖ ಇಲ್ಲಿಯ ಸ್ವರವಚನವೊಂದರಲ್ಲಿದೆ. ಇದು ಅರಮನೆಯ ಅಧಿಕಾರಿಗಳನ್ನೂ ಪರಿವಾರದವರನ್ನೂ ವಿವರವಾಗಿ ಪರಿಚಯಿಸುವುದರೊಂದಿಗೆ ಅರಮನೆಯಲ್ಲಿರುವವರ ಚಿತ್ರವನ್ನು ನಮಗೆ ಒದಗಿಸಿಕೊಡುತ್ತದೆ. ಗಮನಾರ್ಹವೆನಿಸುವ ಐತಿಹಾಸಿಕ ವಿವರಗಳನ್ನು ಬಿಡಿಸಿ ಹೇಳುವ ಈ ಸ್ವರವಚನ ಹೀಗಿದೆ :

ಮಂಗಳವು ಸೋದೆಪುರದರಸುಗಳಿಗೆ
ಮಂಗಳವಾಗಲಿ ಸೋಮವಂಶಜರಿಗೆ ॥ಪಲ್ಲ॥

ಮಂಗಳವು ಧರ್ಮಸಿಂಹಾಸನಕೆ ಬೊಕ್ಕಸಕೆ
ಮಂಗಳವು ಮಹಾರಾಜ್ಯ ಮಂತ್ರಿಗಳಿಗೆ
ಮಂಗಳವು ಚದುರಂಗ ವಿಚಾರಿ ಸೇನಾಪತಿಗೆ
ಮಂಗಳವು ನಿಯೋಗಿ ರಾಯಸದವರಿಗೆ ॥೧॥

ಮಂಗಳವು ಕೋಟೆ ಕರಣಿಕ ಪಟ್ಟೆಯವರಿಗೆ
ಮಂಗಳವು ಸೇನಾವಾರ್ತೆ ದಂಡನಾಯಕರಿಗೆ
ಮಂಗಳವು ಶಾಸನಿಕ ಕಂದಾಚಾರದವರಿಗೆ
ಮಂಗಳವು ಅಧಿಕಾರಿ ಊಳಿಗದವರಿಗೆ ॥೨॥

ಮಂಗಳವು ಜ್ಯೋತಿಷಿ ಪುರೋಹಿತ ವಿದ್ವಾಂಸರಿಗೆ
ಮಂಗಳವು ಪುರಾಣಿಕ ಕವೀಶ್ವರರಿಗೆ
ಮಂಗಳವು ವೈದ್ಯ ಭರತಜ್ಞ ಪಾಠಕರಿಗೆ
ಮಂಗಳವು ಗಾಯಕ ಪರಿಹಾಸಕರಿಗೆ ॥೩॥

ಮಂಗಳವು ತಳವಾರ ಹರಕೆಕಾರ ನಿವಹಕ್ಕೆ
ಮಂಗಳವು ಮಾನಾಡ ಪುರ ಪರಿಜನರಿಗೆ
ಮಂಗಳವು ವರ್ಣಾಶ್ರಮಾಚಾರ ನಿರತರಿಗೆ
ಮಂಗಳವು ನೂರೆಂಟುಮೀ ನಿಯೋಗದವರಿಗೆ ॥೪॥

ಮಂಗಳವು ಬಸವಲಿಂಗರಾಜ ರಘುನಾಥರಿಗೆ
ಮಂಗಳವು ಶ್ರೀ ಶಾಂತವೀರಲಿಂಗೇಂದ್ರಗೆ
ಮಂಗಳವು ಚೆನ್ನಬಸವಲಿಂಗಾದಿ ಸಂತರಿಗೆ
ಮಂಗಳವು ನಂದೀಶ ಭಕುತ ಗರತಿಯರಿಗೆ ॥೫॥

ತಂದೆ ಮಧುಲಿಂಗರಾಜನು ಕೆಳದಿ ಹಾಗೂ ಬಿದರೂರು ಅರಸರೊಂದಿಗೆ ಯುದ್ಧಮಾಡಿ, ಕವಲೆಯ ದುರ್ಗದ ವರೆಗೆ ವೈರಿಗಳನ್ನು ಹಿಮ್ಮೆಟ್ಟಿಸಿ, ಪೂರ್ವಜರು ಕಳೆದುಕೊಂಡ ಸ್ವಾದಿ ಸಾಮ್ರಾಜ್ಯದ ಪ್ರದೇಶವನ್ನು ಮರಳಿಪಡೆದು, ಧರ್ಮಕಹಳೆ ಮೊಳಗಿಸುತ್ತಾನೆ. ಈ ಮಧುಲಿಂಗರಾಜನ ತಂದೆಯ ಹೆಸರು ರಘುನಾಥ. ಸ್ವಾದಿಯ ಅರಸರದು ಚಂದ್ರಕುಲ. ಈ ಮನೆತನದ ರಘುನಾಥನು ಇಂದ್ರ(ಚಂದ್ರ) ಕುಲತಿಲಕನೆನಿಸಿದ್ದನು. ಆಪಸ್ತಂಭಸೂತ್ರ, ಕೌಶಿಕಗೋತ್ರದ ಮಧುಲಿಂಗರಾಜನು ಮಂದರಾಚಲ ಧೈರ್ಯನೂ ರಾಜಕಾರ್ಯಚತುರನೂ ನೃಪರಿಗಾಚಾರ್ಯನೂ ಬನವಾಸಿಯ ಮಧುಕೇಶ್ವರ(ವೈಜಯಂತೀಶ)ನ ಪರಮಭಕ್ತನೂ ಆಗಿದ್ದ. ಈತನ ವಜೀರ(ಮಂತ್ರಿ)ನ ಹೆಸರು ಶರಜಾಖಾನ. ಪರಮಗುರು ನಂದಿಯಯ್ಯ. ಸ್ವರವಚನದಲ್ಲಿಯ ಈ ವಿವರಗಳು ಕೆಳದಿನೃಪವಿಜಯ ಹಾಗೂ ಬೀಳಗಿ ಅರಸರ ವಂಶಾವಳಿ ಕೃತಿಗಳಲ್ಲಿಯೂ ದಾಖಲಾಗಿರುತ್ತವೆ. ಹೀಗಾಗಿ ಈ ವಿವರಗಳು ಇನ್ನೂ ಗಟ್ಟಿಯಾದ ಖಚಿತತೆಯನ್ನು ಪಡೆಯುತ್ತವೆ. ಈ ಎಲ್ಲ ಐತಿಹಾಸಿಕ ದಾಖಲೆಗಳನ್ನು ತಿಳಿಸುವ ಸ್ವರವಚನ ಹೀಗಿದೆ :

ಅಹುದೊ ಮಧುಲಿಂಗ ರಾಜೇಂದ್ರಗಿಂದು
ಬಹುಗುಣಗಳನು ಕಂಡೆ ಭಾಪು ಸುಖಸಾಂದ್ರ ॥ಪಲ್ಲ॥

ದೊರೆಯತನವ ಮಾಡುತಿರಲಲ್ಲಿಯದುಲ್ಲಸವು
ನೆರೆವ ವಜೀರರ ಕಳುಹಿ ದೇಶವನಾಕ್ರಮಿಸೆ
ಸರಸ ಚತುರೋಪಾಯದಿಂದವರ ಗೆಲಿದು
ಧರೆಯನಾಳಿದೆ ಪೂರ್ವಜರಂತೆ
ಮರಳಿ ಕೆಳದಿನೃಪರು ಬಂದು ಯುದ್ಧವ ಮಾಡೆ
ಸರಿಮಿಗಿಲಾಗಿ ಕದನದಲವರೊಡನೆ ಕಾದಿ
ಉರುಬಿ ಕೌಲೆಯದುರ್ಗತನ ಕರಂ ಬೆನ್ನಟ್ಟಿ
ಧರಮ ಕಹಳೆಗಳನು ಪಿಡಿಸಿ ಕೀರ್ತಿಯನಂ
ಪರಿಪರಿಯಲಿ ಪಡೆದೆ ಪರಮ ಪುಣ್ಯಶೀಲ ॥೧॥

ಪಾದುಶಹರ ಬಳಿಗೆ ಕಳುಹಿ ಸಾಮಾಜಿಕರ
ಮೋದದಿ ವಜೀರ ಶರಜಾಖಾನನಂ ಕರೆಸಿ
ಭೇದದಲಿ ಬಿದರೂರ ದೊರೆಗಳನು ಮುರಿಗಡಿದು
ಪೋದ ಮೇದಿನಿಯ ಸಾಧಿಸಿದೆ.
ಆದರದಿ ಬಂದವರ ಕಳುಹಿ ರಾಜ್ಯವನ್ನು ವಿ
ನೋದದಿಂದಾಳಿ ಪ್ರಜೆ ಪರಿವಾರವನಂ ಸಲುಹಿ
ವೇದಶಾಸ್ತ್ರವ ತಿಳಿದು ಸಕಲಮತಗಳ ನಡೆಸಿ
ನಾದ ಬಿಂದ್ವಾತ್ಮಕನ ಪೂಜೆಯಲಿ ನಿರತ
ವಾದ ಶಶಿವಾರ ವ್ರತವನು ನಡೆಸಿದರಸೆ ॥೨॥

ಇಂದುಕುಲತಿಲಕ ರಘುನಾಥೇಂದ್ರ ವರ ಪುತ್ರ
ವಂದಿತಾಪಸ್ತಂಭಸೂತ್ರ ಕೌಶಿಕಗೋತ್ರ
ಚೆಂದದ ಯಜುರ್ವೇದಿ ವಿಜಯಂತೀಶ ಭಕ್ತ
ಹೊಂದಿರ್ದ ಜನ ಕಲ್ಪವೃಕ್ಷ.
ಅಂದದಿ ಸೋದೆಯನಾಳ್ವ ಅಧಿಕಪುತ್ರ ಸಮೇತ
ನಿಂದು ಖ್ಯಾತಿಯಂ ಪಡೆದ ಮಧುಲಿಂಗರಾಜೇಂದ್ರ
ನಂದಿಯಯ್ಯನ ಪಾದವಿಡಿದೆ ಗುರುಭಕ್ತಿಯಲಿ
ಕುಂದಿಲ್ಲದವನು ನೀನಹುದೊ ಭಳಿರೆ
ಮಂದರಾಚಲಧೈರ್ಯ ನೃಪರಿಗಾಚಾರ್ಯ ॥೩॥

ರಾಜಕುಲೋದ್ಭವ ರಾಜಿತ
ರಾಜಗುಣಾನ್ವಿತನೆ ರಾಜಕಾರ್ಯದಿ ಚತುರ
ರಾಜರೊಳಗಗ್ರಗಣ್ಯನೆ
ರಾಜನೆ ಮಧುಲಿಂಗರಾಜ ರಾಜೇಂದ್ರ ಜಯ ॥೪॥

ಮರಾಠಿ ಬಖೈರು ಹಾಗೂ ವಿದೇಶಿ ದಾಖಲೆಗಳು ಒಂದನೆಯ ನರಸಪ್ಪ ನಾಯಕನಿಗಿಂತಲೂ ಹಿಂದಿನ ಸ್ವಾದಿಯ ಅರಸುಮನೆತನದ ಅಸ್ತಿತ್ವ ಹಾಗೂ ಆಳಿದ ಅರಸರ ಬಗೆಗೆ ಸುಳಿವು ನೀಡುತ್ತಿದ್ದರೂ ವಿದ್ವಾಂಸರು ಇವುಗಳ ಬಗೆಗೆ ಸಂದೇಹ ವ್ಯಕ್ತಪಡಿಸುತ್ತಿರುವುದು ಕಂಡುಬರುತ್ತದೆ. ಆದರೆ ಸದಾಶಿವರಾಯನ ಸ್ವರವಚನಗಳಿಂದ ಒಂದನೆಯ ಅರಸಪ್ಪನಾಯಕನಿಗಿಂತ ಪೂರ್ವದಲ್ಲಿಯೂ ಸ್ವಾದಿಯ ಅರಸುಮನೆತನ ಅಸ್ತಿತ್ವದಲ್ಲಿದ್ದು, ತೊಂಡಮಾನ ಚಕ್ರವರ್ತಿಯ ವಂಶಜರಾದ ಈ ಪೂರ್ವಜರೂ ಚಂದ್ರಕುಲದವರಾಗಿದ್ದುದು ಸ್ಪಷ್ಟವಾಗುತ್ತದೆ. ಈ ತೊಂಡಮಾನ ಚಕ್ರವರ್ತಿಯ ಬಗೆಗೆ ಇನ್ನೂ ಹೆಚ್ಚಿನ ವಿಷಯ ಸಂಗ್ರಹಿಸಿ, ವಿವೇಚಿಸುವ ಅಗತ್ಯವಿದೆ. ಈ ಪೂರ್ವಜರಲ್ಲಿ ವೆಂಕಟಪತಿ, ರಾಮರಾಜ (ರಾಮಚಂದ್ರ), ವಜ್ರಒಡೆಯ, ದೇವರಾಜರು ಪ್ರಮುಖರಾಗಿದ್ದಾರೆ. ಇವರು ಒಂದನೆಯ ಅರಸಪ್ಪನಾಯಕನಿಗಿಂತಲೂ ಪೂರ್ವದಲ್ಲಿ ಸ್ವಾದಿಯ ಸಿಂಹಾಸನವನ್ನಾಳಿದುದು ಈ ಸ್ವರವಚನಗಳಿಂದ ವ್ಯಕ್ತವಾಗುತ್ತದೆ. ಇದರಿಂದ ಸ್ವಾದಿಯ ಅರಸುಮನೆತನದ ಪೂರ್ವದ ಇತಿಹಾಸ ಗಟ್ಟಿಗೊಳ್ಳುತ್ತದೆ. ಸೋದೆಯ ಸಮೀಪದ 'ಸಹಸ್ರಲಿಂಗ'ದಲ್ಲಿರುವ ಶಿವಲಿಂಗಗಳ ಮೇಲೆ ರಾಮಚಂದ್ರ, ವಜ್ರಒಡೆಯ ಮೊದಲಾದ ಅರಸರ ಹೆಸರುಗಳಿರುವುದನ್ನೂ ಇಲ್ಲಿ ಗಮನಿಸಬೇಕು.

ಆ ಮೇಲೆ ಸ್ವಾದಿಯ ಧರ್ಮಸಿಂಹಾಸನವನ್ನಾಳಿದ ಅರಸರ ಉಲ್ಲೇಖಗಳೂ ಈ ಸ್ವರವಚನಗಳಲ್ಲಿರುತ್ತವೆ. ಇವರಲ್ಲಿ ಪ್ರಮುಖನಾದವ ಇಮ್ಮಡಿ ಅರಸಪ್ಪ ನಾಯಕ. ಮಧುಲಿಂಗರಾಜ ಮತ್ತು ಈತನ ಮಕ್ಕಳಾದ ಸವಾಯಿ (ಇಮ್ಮಡಿ) ರಾಮಚಂದ್ರ, ಮುಮ್ಮಡಿಯರಸು, ಇಮ್ಮಡಿ ವಜ್ರರಾಜ, ಇಮ್ಮಡಿ ಮಧುಲಿಂಗರಾಯ, ಒಂದನೆಯ ಸದಾಶಿವ, ಶಾಂತಲಿಂಗರು ಸೋದೆಯ ಅರಸರಾಗಿದ್ದರು. ಇದಲ್ಲದೆ ಒಂದನೆಯ ಸದಾಶಿವರಾಯ ಹಾಗೂ ಈತನ ಮಕ್ಕಳಾದ ಬಸವಲಿಂಗರಾಜೇಂದ್ರ, ಇಮ್ಮಡಿ ರಘುರಾಜ, ಶಾಂತವೀರರಾಜ, ಚೆನ್ನಬಸವರಾಜ, ಇಮ್ಮಡಿ ಸದಾಶಿವೇಂದ್ರರೂ ಸೋದೆಯ ಧರ್ಮಸಿಂಹಾಸನಾಧೀಶ್ವರರಾಗಿದ್ದುದನ್ನೂ ಇಲ್ಲಿಯ ಸ್ವರವಚನ ಸ್ಪಷ್ಟವಾಗಿ ಹೇಳುತ್ತವೆ. ಹೀಗೆ ವೆಂಕಟಪತಿಯಿಂದ ಇಮ್ಮಡಿ ಸದಾಶಿವೇಂದ್ರನ ವರೆಗೆ ಸ್ವಾದಿಯನ್ನಾಳಿದ ಅರಸರನ್ನು ಹೆಸರಿಸುವ ಅತ್ಯಂತ ಅಪೂರ್ವ ಚಾರಿತ್ರಿಕ ದಾಖಲೆಯಾದ ಸ್ವರವಚನ ಹೀಗಿದೆ :


ತೊಂಡಮಾನ ಚಕ್ರವರ್ತಿಯ ವಂಶಜರ ಪ್ರ
ಚಂಡ ನಾಮಂಗಳ ಸುಪೇಳ್ವೆ ಚಂದ್ರಕುಲದಿ ಹುಟ್ಟಿದಂಥ ॥ಪಲ್ಲ॥

ದೊರೆ ವೆಂಕಟಪತಿರಾಜ ತರುವಾಯದಿ ರಾಮರಾಜ
ವರ ಭ್ರಾತೃ ವಜ್ರಮಡೆಯರ ನೆರೆ ಕುಮಾರ ದೇವರಾಜ
ಇರುವೆಗಳಿಗೆ ಸಕ್ಕರೆ ಹಾಕಿದ ಧರ್ಮಶೀಲ
ಅರಸ ಭೂಪರು ಭೈರಸ ಶೂರರು ॥೧॥

ಮೊದಲಿನವರಿಗಿಂದಲಧಿಕ ಚದುರ ಮಧುಲಿಂಗರಾಜರ
ಉದರದಲ್ಲಿ ಪುಟ್ಟಿದ ಸುತರು ಮುಂದದಿ ಸವಾಯಿ ರಾಮಚಂದ್ರರು
ಮದನರೂಪ ಮುಮ್ಮಡಿಯರಸರು ವಜ್ರರಾಜ
ಹದರುಗಾರ ಮಧುಲಿಂಗರಾಯರು ಸಕಲಪ್ರೌಢ
ಕದನಶೂರ ಸದಾಶಿವೇಂದ್ರರು ಶಾಂತಲಿಂಗರು
ಒದಗಿ ರಾಜ್ಯವಾಳುತಿಹರು ಕೀರ್ತಿಯುಂತರು ॥೨॥

ಗೆಲುವ ಬಸವಲಿಂಗ ರಾಜೇಂದ್ರ ನಲಿವ ಇಮ್ಮಡಿ ರಘುರಾಜ
ಒಲಿವ ಶಾಂತವೀರರಾಜ ಚೆಲುವ ಚೆನ್ನಬಸವರಾಜ
ಲಲಿತ ಇಮ್ಮಡಿ ಸದಾಶಿವೇಂದ್ರರು ಕೌಶಿಕಗೋತ್ರ
ಸಲುವ ಆಪಸ್ತಂಭಸೂತ್ರರು ಯಜುರ್ವೇದ
[ಸಲೆ] ವರ ಬಿರುದ ನಡೆಸುತಿಹರು ನಂದೀಶ ಭಕ್ತರು
ಒಲಿದು ಸೋದೆ ಸಿಂಹಾಸನವನಾಳ್ವರು ಮಧುಲಿಂಗ ಭಜಕರು ॥೩॥

ಇಲ್ಲಿ ಉಲ್ಲೇಖಗೊಂಡ ಸ್ವಾದಿಯ ಅರಸರಲ್ಲಿ ಒಂದನೆಯ ರಾಮಚಂದ್ರ, ಮುಮ್ಮಡಿಯರಸು, ಇಮ್ಮಡಿ ವಜ್ರರಾಯ, ಇಮ್ಮಡಿ ಮಧುಲಿಂಗರಾಜ, ಶಾಂತ-ಲಿಂಗ, ಇಮ್ಮಡಿ ರಘುರಾಜ, ಶಾಂತವೀರರಾಜ, ಚೆನ್ನಬಸವರಾಜ — ಇವು ಹೊಸ ಹೆಸರುಗಳಾಗಿದ್ದು, ಈ ಮೂಲಕ ಪ್ರಥಮಬಾರಿಗೆ ದಾಖಲಾಗುತ್ತಿವೆ. ಮೇಲಿನ ವಿವೇಚನೆಯ ಬೆಳಕಿನಲ್ಲಿ ಸೋದೆಯ ಸದಾಶಿವರಾಯನ ಸ್ವರವಚನಗಳಲ್ಲಿ ಉಕ್ತವಾದ ಸ್ವಾದಿಯ ಅರಸರ ವಂಶಾವಳಿಯನ್ನು ಹೀಗೆ ರೂಪಿಸಬಹುದಾಗಿದೆ :



ಬನವಾಸಿಯ ಮಧುಕೇಶ್ವರನ ಪರಮಭಕ್ತನಾಗಿದ್ದ ಒಂದನೆಯ ಮಧುಲಿಂಗ ರಾಜನು ಮಗನಾದ ಇಮ್ಮಡಿ ಮಧುಲಿಂಗನಿಗೆ ತನ್ನ ಕುಲದೈವದ ಹೆಸರನ್ನೇ ಇಟ್ಟಿದ್ದಾನೆ. ಚಿತ್ರದುರ್ಗ ಮುರಘಾಮಠದ ಮೂಲಪುರುಷರಾದ ಶಾಂತವೀರ ಸ್ವಾಮಿಗಳು ಹಾಗೂ ಇಮ್ಮಡಿ ಮುರಿಗಾ ಗುರುಸಿದ್ಧರು ಸ್ವಾದಿಯ ಅರಸು ಮನೆತನದೊಂದಿಗೆ ಗಾಢವಾದ ಸಂಬಂಧ ಹೊಂದಿದವರಾಗಿದ್ದರು. ಆದುದರಿಂದ ಗುರುಮನೆ, ಅರಮನೆಗಳ ಈ ಸಂಬಂಧದ ದ್ಯೋತಕವಾಗಿ, ಗುರುಸ್ಮರಣೆಯ ಸಂಕೇತವಾಗಿ ಒಂದನೆಯ ಸದಾ-

ಶಿವನು ಮುರಿಗಾ ಗುರುಸಿದ್ಧರ ಗುರುಗಳಾದ ಶಾಂತವೀರರ ಹೆಸರನ್ನೇ ತನ್ನ ಮೂರನೆಯ ಮಗನಾದ ಶಾಂತವೀರ ಲಿಂಗೇಂದ್ರನಿಗೆ ಇಟ್ಟಂತಿದೆ. ಇದರಂತೆ ಉಳುವೆಯ ಕ್ಷೇತ್ರದ ಚೆನ್ನಬಸವೇಶ್ವರನ ಪರಮ ಭಕ್ತನಾದ ಸದಾಶಿವರಾಯನು ತನ್ನ ನಾಲ್ಕನೆಯ ಮಗನಿಗೆ ಚೆನ್ನಬಸವರಾಜನೆಂದು ಹೆಸರಿಟ್ಟಿದ್ದಾನೆ. ಇವು ಇಲ್ಲಿ ಗಮನಿಸ ತಕ್ಕ ಅಂಶಗಳಾಗಿರುತ್ತವೆ. ಸದಾಶಿವರಾಯನ ಕಾಲದಲ್ಲಿಯೇ ಸ್ವಾದಿ ಸಾಮ್ರಾಜ್ಯಕ್ಕೆ ಹಿಡಿದ ಗ್ರಹಣಸ್ಥಿತಿಯನ್ನೂ ಒದಗಿಬಂದ ದುರ್ಧರ ಪ್ರಸಂಗವನ್ನೂ ಆಂತರಿಕ ಹಾಗೂ ಬಾಹ್ಯ ಆಘಾತ-ಆಕ್ರಮಣಗಳಿಂದ ತತ್ತರಿಸಿ ಹೋದ ಅರಸನ ಅಸಹಾಯಕ ಸ್ಥಿತಿಯನ್ನೂ ಕುಂದಿದ ಧನಬಲ, ಸೈನ್ಯಬಲ, ರಾಜಬಲ, ಪ್ರಜಾಬಲಗಳನ್ನೂ ಯಥಾವತ್ತಾಗಿ ದಾಖಲಿಸುವ ಸ್ವರವಚನಗಳನ್ನು ಇಲ್ಲಿ ಉದಾಹರಿಸಬಹುದು :

ಯಾಕೆ ಬರೆದೆಯೊ ಶಿವನೆ ಎನ್ನ ಪಣೆಯೊಳು ನೀನು
ಲೋಕದೊಳು ಕಿರಿದಾದ ರಾಜತನ ಮಾಳ್ಪದನು ‖ಪಲ್ಲ‖

ಅರಿನೃಪರ ಬಲವನು ಆತ್ಮಸೇನೆಗಳಿಂದ
ತರಿದು ಬಿಸುಟುವೆನೆನಲು ತ್ರಾಣವಿಲ್ಲ
ಮರಳಿ ಸಂಧಾನವನು ಮಾಡುವರೆ ಧನವಿಲ್ಲ
ಸರಸಿಜವು ಜಲಬತ್ತಿ ಶ್ರಮದಿ ಒಣಗುವ ಪರಿಯು ‖೧‖

ಆಳುತಿಹ ದೇಶಗಳು ಸ್ವಲ್ಪವದರೊಳಗೆ
ಬೀಳುದೈವಿಕರ ಬೇಕುಗಳು ಬಹಳ
ಹೇಳತೀರದು ಸಂಸಾರ ಭಾರಗಳನು
ಸೂಳೆ ಮುಪ್ಪಿನಲಿ ಕ್ಲೇಶಬಡುವ ತೆರದಿ ‖೨‖

ಬಡತನಗಳಡಸಿದರೆ ಬಹುಕಷ್ಟದೋರುವದು
ಇಡುವಂಥ ಭೂಷಣಗಳೆಲ್ಲ ಪೋಗಿ
ಪೊಡವಿಯೊಳಗೆನ್ನನೇತಕೆ ಪಡೆದೆ ನಂದೀಶ
ಹಡಗಿನೊಳಗಿರುತಿಹ ಹಯತತಿಯು ಸುಖದಂತೆ ‖೩‖

X X X X

ವ್ಯಾಜ್ಯವಲ್ಲ ಸಂಸಾರವಿಧವನಾಲಿಸು ಗುರುವೆ
ಸೂಜಿ ಕವಲುದಾರ ಗಂಟಿನ ಸಮನಾಯಿತೀಗ ‖ಪಲ್ಲ‖

ಕಾಲಕಾಲಕೆ ಬಹಳ ಕರಕರೆಯುಂ ಘನವಾಯಿಂತಂ
ಮೂಲಧನಗಳು ತೀರಿ ಮಾನವಳಿದಂ
ಸಾಲಕೆ ಒಳಗಾಗಿ ಸಕಲ ಯೋಚನೆಗೂಡಿ
ವಾಲೆ ಹರಕು ಕಂಠ ಮೊಟ್ಟೆಲಿ ವರ ಬರೆವಂತಾಯಿಂತೀಗ ॥೧॥

ಧರೆಯೊಳಗೆ ಪ್ರಜೆನಷ್ಟ ಧಾನ್ಯವಸ್ತುವು ತಂಟ್ಟೆ
ಕರಿ ಮೊದಲಾದ ಬಲವು ಕಡಿಮೆಯಾಯಿತಂ
ಹರುಷಗಳಂ ಕಂದಿದವು ಹಾಸ್ಯಗಳು ಬಂದವು
ತುರಗ ಕುಂಟಸಾನಿ ಸೊಟ್ಟಾದ ತೆರನಾಯಿತೀಗ ॥೨॥

ಕದನ ಕಕ್ಕಸವಾಯಿತು ಕಾರ್ಯ ಕೈಗೂಡದೆ
ಹೃದಯದೊಳು ಕಳವಳವು ಹಲವು ಪರಿ
ಚದುರ ನಂದೀಶ್ವರನೆ ಚೆಂದದಲಿ ಸಲಹೆನ್ನ
ಹೆದೆ ಹರಕು ಅಂಬು ಮುರುಕಿ ನಾ ಹಾಗಾಯಿತೀಗ ॥೩॥

ಹೀಗೆ ಸೋದೆಯ ಸದಾಶಿವರಾಯನ ಸ್ವರವಚನಗಳಲ್ಲಿ ಉಕ್ತವಾದ ಐತಿಹಾಸಿಕ ಸಂಗತಿಗಳು ಅತ್ಯಂತ ಮಹತ್ವದ ದಾಖಲೆಗಳೆನಿಸಿದ್ದು, ಸಂಶೋಧಕರು ಹಾಗೂ ಇತಿಹಾಸಕಾರರು ತೀವ್ರ ಗಮನಹರಿಸುವಂತೆ ಮಾಡಿವೆ.

ಸೋದೆಯ ಸದಾಶಿವರಾಯನ ಸ್ವರವಚನಗಳು, ಕೆಳದಿನೃಪವಿಜಯ, ಬೀಳಗಿ ಅರಸರ ವಂಶಾವಳಿ, ಶಿವಾಜಿ–ಮಲ್ಲಮ್ಮರ ಸಮರೋತ್ಸವ, ಶಾಸನ, ಮರಾಠಿ ಬಖೈರು, ಜಾನಪದ ಸಾಹಿತ್ಯ—ವದಂತಿ ಹಾಗೂ ವಿದೇಶಿ ದಾಖಲೆ ಮೊದಲಾದವುಗಳನ್ನು ಸೂಕ್ಷ್ಮವಾಗಿ, ವ್ಯವಸ್ಥಿತವಾಗಿ ಪರಿಶೀಲಿಸಿ, ಸ್ವಾದಿಯ ಅರಸರ ಆತ್ಯಂತಿಕ, ಅಧಿಕೃತ ಹಾಗೂ ಸರ್ವಸಮಗ್ರ ವಂಶಾವಳಿ ಮತ್ತು ಚರಿತ್ರೆಯನ್ನು ಪುನರ್ ರಚಿಸಲು ಹೆಚ್ಚು ಸಾಧ್ಯವಿದ್ದು, ಸಂಶೋಧಕರು ಹಾಗೂ ಇತಿಹಾಸಕಾರರು ಈ ದಿಶೆಯಲ್ಲಿ ಕಾರ್ಯಪ್ರವೃತ್ತರಾಗುವುದು ತೀರ ಅವಶ್ಯವಿದೆ.

● ● ●

ಅವಧೇಶ್ವರಿ : ಒಂದು ವಿಮರ್ಶಾತ್ಮಕ ಅಧ್ಯಯನ

● ಶಾಲಿನಿ ರಘುನಾಥ

ಶಂಕರ ಮೊಕಾಶಿ ಪುಣೇಕರ ಅವರು ಕನ್ನಡದ ಸ್ವೋಪಜ್ಞ ಸೃಜನಶೀಲ ಬರಹಗಾರರಲ್ಲಿ ಒಬ್ಬರು. ಭಾಷೆ, ಲಿಪಿ, ಸಾಹಿತ್ಯ, ಸಂಗೀತ, ಶಿಕ್ಷಣ ಮುಂತಾಗಿ ಅನೇಕ ಕ್ಷೇತ್ರಗಳಲ್ಲಿ ಸಾಧನೆಗೈದ ಬಹುಮುಖ ಪ್ರತಿಭೆ ಅವರದ್ದು. ಮೊಹೆಂಜೋದಾರೊ ಮುದ್ರೆಗಳ ಬಗೆಗಿನ ಅವರ ಸಂಶೋಧನೆ ಕುತೂಹಲಕಾರಿಯಾದುದು. ಋಗ್ವೇದದ ಸೂತ್ರಗಳನ್ನು ಅವರು ಅರ್ಥೈಸಿರುವ ರೀತಿ ಗಮನಾರ್ಹವಾಗಿದೆ. ಮೊಕಾಶಿಯವರು ಇಂಗ್ಲೀಷ್ ಮತ್ತು ಸಂಸ್ಕೃತ ಎರಡೂ ಭಾಷೆಗಳಲ್ಲೂ ಉತ್ತಮ ಕೃತಿಗಳನ್ನು ರಚಿಸಿದ್ದಾರೆ. ಕನ್ನಡ ಕಾವ್ಯ, ವಿಮರ್ಶಾಕ್ಷೇತ್ರಗಳಲ್ಲಲ್ಲದೆ ಕಾದಂಬರಿ ಕ್ಷೇತ್ರದಲ್ಲಿಯೂ ಮೊಕಾಶಿಯವರು ಪ್ರಸಿದ್ಧರಾಗಿದ್ದಾರೆ. ೧೯೫೬ರಲ್ಲೇ ರಚಿತವಾಗಿರುವ 'ಗಂಗವ್ವ ಗಂಗಾಮಾಯಿ' ಕನ್ನಡ ಕಾದಂಬರಿ ಜಗತ್ತಿನಲ್ಲಷ್ಟೇ ಅಲ್ಲ, ಭಾರತೀಯ ಭಾಷಾ ಸಾಹಿತ್ಯದಲ್ಲಿಯೇ ಒಂದು ಉತ್ತಮಕೃತಿ ಎನ್ನಿಸಿಕೊಂಡಿದೆ. 'ನಟನಾರಾಯಣಿ' 'ಸುಧಾ ಬಹುಮಾನ'ವನ್ನು ಪಡೆದುಕೊಂಡಿದೆ. ಮೂರನೆಯ ಕಾದಂಬರಿಯಾದ 'ಅವಧೇಶ್ವರಿ' ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಗಳಿಸಿಕೊಂಡಿದೆ. ಅನೇಕ ಸಂಶೋಧಕರ ಮತ್ತು ವಿಮರ್ಶಕರ ಕುತೂಹಲ ಕೆರಳಿಸಿರುವ ಕೃತಿ ಇದು. ಋಗ್ವೇದದ ಸೂಕ್ತಗಳ ಅಧ್ಯಯನದಲ್ಲಿ ಕಂಡುಕೊಂಡ ಕೆಲವು ಅಂಶಗಳು, ಬೇಂದ್ರಯವರೊಂದಿಗಿನ ಹರಟೆಯ ಮಧ್ಯೆ ದೊರೆತ ಕೆಲವು ಸುಳಿವುಗಳು, ಹರಪ್ಪನ್ ಮುದ್ರೆಗಳಲ್ಲಿ ಕಾಣಿಸಿಕೊಂಡ ಸಾಂಕೇತಿಕ ಅರ್ಥಗಳು, ಜನಾಂಗಮೂಲ ಅಭ್ಯಾಸದ ಫಲಗಳು–ಈ ಕಾದಂಬರಿಯ ರಚನೆಯ ಹಿನ್ನಲೆಯಲ್ಲಿ ನಿಂತಿವೆ. ಆದರೂ ಈ ಕೃತಿಯನ್ನು ಕುರಿತು 'ಕನ್ನಡ ಕೇಂದ್ರ ಪರಂಪರೆಗೆ ದನಿಕೂಡಿಸುವ ಈ ಯತ್ನವನ್ನು ಕಾದಂಬರಿಯಾಗೇ ಓದಬೇಕು, ಸಂಶೋಧನೆಯೆಂದಲ್ಲ' ಎಂದು ಲೇಖಕರೇ ವಿಜ್ಞಾಪಿಸಿಕೊಂಡಿದ್ದಾರೆ.[೧]

'ಗಂಗವ್ವ ಗಂಗಾಮಾಯಿ'ಯಲ್ಲಿ ಗಂಗವ್ವನಂತಹ ಸಶಕ್ತ ಸ್ತ್ರೀಪಾತ್ರವನ್ನು ನಿರ್ಮಿಸಿರುವ ಮೊಕಾಶಿಯವರು 'ಅವಧೇಶ್ವರಿ'ಯಲ್ಲಿಯೂ ಪುರುಕುತ್ಸಾನಿಯಂತಹ ಬಲಿಷ್ಠ ಸ್ತ್ರೀಪಾತ್ರವನ್ನು ಸೃಷ್ಟಿಸಿದ್ದಾರೆ. ಹೆಣ್ಣಿನ ಸೃಜನಶೀಲಶಕ್ತಿ, ಇತರ ಕ್ಷೇತ್ರಗಳಂತೆ ರಾಜಕೀಯದಲ್ಲಿಯೂ ಹೊಸಹೊಸ ಅಂಶಗಳನ್ನು ಹುಟ್ಟುಹಾಕಬಲ್ಲು

ದೆಂಬುದನ್ನು ಹಾಗೂ ತನ್ಮೂಲಕವಾಗಿ ಇತರರಿಗೆ ಹೇಗೆ ಸವಾಲೆಸೆಯಬಹುದೆಂಬುದನ್ನು ನಾವು ಈ ಕಾದಂಬರಿಯಲ್ಲಿ ನೋಡಬಹುದಾಗಿದೆ. 'ಅವಧೇಶ್ವರಿ'ಯಲ್ಲಿ 'ಪುರುಕುತ್ಸ', 'ಭದ್ರಾಯು', 'ತ್ರಸದಸ್ಯು' ಎಂಬ ಪುರುಷಪಾತ್ರಾಂಕಿತ ಮೂರು ವಿಭಾಗಗಳನ್ನು ಮಾಡಿಕೊಂಡಿದ್ದರೂ ಸ್ವಾರಸ್ಯಕರ ವಿಷಯವೆಂದರೆ ಈ ಮೂರೂ ಭಾಗಗಳಲ್ಲಿ ಮೆರೆಯುವವಳು ಸ್ತ್ರೀಪಾತ್ರವಾದ ಪುರುಕುತ್ಸಾನಿಯೇ. ಕಾರಣ, ಪುರುಕುತ್ಸ, ತನ್ನ ವಿಷಯಲೋಲುಪತೆಯಿಂದ, ಸಾಮರ್ಥ್ಯವಿಹೀನತೆಯಿಂದ ಅವಧೇಶ್ವರಿಯನ್ನು ಆಳಲು ಸಾಧ್ಯವಾಗುವುದೇ ಇಲ್ಲ. ಭದ್ರಾಯು, ದರ್ಶಾರ್ಣವವನ್ನು ಆಳುತ್ತಿದ್ದವನು, ಅವಧೇಶ್ವರಿಯನ್ನು ತನ್ನವಳನ್ನಾಗಿ ಮಾಡಿಕೊಳ್ಳುವ ಬಯಕೆ ವ್ಯಕ್ತಪಡಿಸಿದ—ಆದರೆ ಅವನ ಮಹತ್ವಾಕಾಂಕ್ಷೆ ಕೊನೆಗೂ ಈಡೇರಲೇ ಇಲ್ಲ. ತ್ರಸದಸ್ಯುವಿಗೆ—ಮಾತೃಸ್ವರೂಪಿಯಾದ ಅವಧೇಶ್ವರಿಯನ್ನು ಆಳುವ ನೈತಿಕ ಅಧಿಕಾರದ ಬಗ್ಗೆಯೇ ಅಳುಕು ಪ್ರಾರಂಭವಾಗಿತ್ತು. ಜೊತೆಗೆ ತಾಯಿಗಿದ್ದಷ್ಟು ಆಡಳಿತ ಸಾಮರ್ಥ್ಯವೂ ಅವನಲ್ಲಿರಲಿಲ್ಲ. ಹೀಗಾಗಿ ಪುರುಕುತ್ಸಾನಿ, ರಾಜ್ಯಾಡಳಿತದ ಹೊಣೆಗಾರಿಕೆಯನ್ನು ತಾನೇ ಹೊರಬೇಕಾದ ಪ್ರಸಂಗ ಬರುತ್ತದೆ. 'ಅವಧ'ವನ್ನು ಎಲ್ಲ ರೀತಿಯಿಂದಲೂ ರಕ್ಷಿಸುವುದು ತನ್ನ ಕರ್ತವ್ಯವೆಂದು ಅವಳು ಭಾವಿಸುತ್ತಾಳೆ. ಕ್ಷತ್ರಿಯ ಹೆಣ್ಣು ಆಗಿದ್ದರಿಂದ ತನ್ನ ಮುಂದೆ ಇದ್ದ ಸವಾಲುಗಳನ್ನೆಲ್ಲ ಧೈರ್ಯವಾಗಿ ಎದುರಿಸುತ್ತಾಳೆ. ತನ್ನ ಕುಶಾಗ್ರಬುದ್ಧಿಯಿಂದ ರಾಜ್ಯಕ್ಕೊದಗಿ ಬರುತ್ತಿದ್ದ ಪರಚಕ್ರಭಯಗಳನ್ನು ತಪ್ಪಿಸಿ ರಾಜ್ಯದಲ್ಲಿ ಶಾಂತಿನೆಲೆಸುವಂತೆ ಮಾಡಲು ಪ್ರಯತ್ನಿಸುತ್ತಾಳೆ. ಮಾನವಕುಲ ಬದಲಾವಣೆ, ಬೆಳವಣಿಗೆ ಹೊಂದುವಾಗಿನ ಸಂಕ್ರಮಣಾವಸ್ಥೆಯ ಸಂಕೀರ್ಣಗಳನ್ನೂ ಸಮಸ್ಯೆಗಳನ್ನೂ ಒಳಗೊಂಡಿರುವ ಈ ಕಾದಂಬರಿಯ ಕೇಂದ್ರಪಾತ್ರ ಪುರುಕುತ್ಸಾನಿಯದೇ. 'ಪುರುಕುತ್ಸಾನಿ' ಎಂದರೆ 'ಅವಧೇಶ್ವರಿ'; 'ಅವಧೇಶ್ವರಿ' ಎಂದರೆ 'ಪುರುಕುತ್ಸಾನಿ' ಎನ್ನುವಷ್ಟರಮಟ್ಟಿನ ಸಮೀಕರಣ ಆ ಪಾತ್ರದ್ದು. 'ಅವಧೇಶ್ವರಿ'ಯ ಪಾತ್ರವಿಶ್ಲೇಷಣೆ, ಸ್ತ್ರೀವಾದಿ ದೃಷ್ಟಿಕೋನದಿಂದಲೂ ಅಧ್ಯಯನಯೋಗ್ಯವಾಗಿದ್ದು, ಪ್ರಮುಖವಾಗಿ ಹೆಣ್ಣಿನ ರಾಜಕೀಯ ಸಾಮರ್ಥ್ಯವನ್ನು ಎತ್ತಿತೋರಿಸುವುದಾಗಿದೆ.

ಅಣ್ಣ, ತಂಗಿಯನ್ನು ಮದುವೆಯಾದ ಘಟನೆಯ ಪ್ರಸ್ತಾಪದೊಂದಿಗೆ ಕಾದಂಬರಿ ಪ್ರಾರಂಭವಾಗುತ್ತದೆ. ಮುಂದಿನ ಎಲ್ಲ ಘಟನೆಗಳಿಗೂ ಕಾರಣಬಿಂದುವಾಗಿ ಈ ಅಂಶ ಕ್ರಿಯಾತ್ಮಕಗೊಳ್ಳುತ್ತದೆ. ಈಜಿಪ್ತ ರಾಜಮನೆತನದಲ್ಲಿ ಈ ಸಂಪ್ರದಾಯವಿತ್ತೆಂದೂ ಮಾಂಧಾತಮಹಾರಾಜ, ತನ್ನ ದೂರಸಂಬಂಧಿ ಪೆರೋದೊರೆಯ ಸಲಹೆಯ ಮೇರೆಗೆ ರಾಜವಂಶದ ರಕ್ತ ಶುದ್ಧವಾಗಿ ಉಳಿಯಬೇಕೆಂದು ತನ್ನ ಮಗ ಪುರುಕುತ್ಸನ ಮದುವೆಯನ್ನು ಮಗಳು ಪುರುಕುತ್ಸಾನಿಯೊಂದಿಗೆ ಮಾಡಿದನೆಂದು ಹೇಳಲಾಗಿದೆ. ಸ್ವತಃ ಮಾಂಧಾತ ಮಹಾರಾಜನೇ ನಾಗಕುಲದ ಹೆಣ್ಣನ್ನು ಮದುವೆ

ಯಾಗಿದ್ದ. ಆದುದರಿಂದ ಅವನ ಕಾಲಕ್ಕೇ ಪ್ರಾರಂಭವಾದ ವರ್ಣಸಂಕರ, ಮುಂದೆ ಪ್ರಯತ್ನಪಟ್ಟರೂ ಶುದ್ಧವಾಗಿ ಉಳಿಯಲು ಸಾಧ್ಯವಾಗುವುದಿಲ್ಲ. ಪುರುಕುತ್ಸನಿಗೆ ಕೊನೆಯತನಕವೂ ಪುರುಕುಂತ್ಸಾನಿ ತನ್ನ ತಂಗಿ ಎಂಬುದನ್ನು ಮರೆಯಲು ಸಾಧ್ಯವಾಗುವುದೇ ಇಲ್ಲ. ಪುರುಕುತ್ಸನಿಂದ ಮಕ್ಕಳನ್ನು ಪಡೆಯಲು ಸಾಧ್ಯವಾಗದ ಪುರುಕುತ್ಸಾನಿ, ನಿಯೋಗದ ಮೂಲಕ ಮಗನನ್ನು ಪಡೆದು ವಂಶಪಾರಂಪರ್ಯ ಪಟ್ಟವನ್ನು ಸ್ಥಿರಗೊಳಿಸಿಕೊಳ್ಳುವುದು ಈ ಕಾದಂಬರಿಯ ಮುಖ್ಯ ಎಳೆ. ಇದಕ್ಕೆ ಸಂಬಂಧಪಟ್ಟಂತೆ ಅನೇಕ ಸಮಸ್ಯೆಗಳು, ವಿವರಗಳು, ತಾತ್ತ್ವಿಕ ಜಿಜ್ಞಾಸೆಗಳು ಕೃತಿಯಲ್ಲಿ ಹಾಸುಹೊಕ್ಕಾಗಿದ್ದು, ಕಾದಂಬರಿಯನ್ನು ಸಾಕಷ್ಟು ಸಂಕೀರ್ಣಗೊಳಿಸಿವೆ.

ಪುರುಕುತ್ಸಾನಿ, ತಾನಾಗಿಯೇ ಇಷ್ಟಪಟ್ಟು ಆಡಳಿತಸೂತ್ರವನ್ನು ಕೈಗೆತ್ತಿಕೊಂಡು ಆಳತೊಡಗಿದವಳಲ್ಲ, ಆದರೆ ಪುರಕುತ್ಸನ ವಿಷಯಲೋಲುಪತೆಯಿಂದಾಗಿ ಸಡಿಲುಗೊಂಡ ಆಡಳಿತವನ್ನು ಒಂದು ಹದ್ದುಬಸ್ತಿಗೆ ತರುವುದು ಅನಿವಾರ್ಯವಾದಾಗ, ಆಕೆ ತನ್ನ ಅಧಿಕಾರವನ್ನು ಚಲಾಯಿಸತೊಡಗುತ್ತಾಳೆ. ಎದುರಾದ ಒಂದೊಂದು ಸಮಸ್ಯೆಯೂ ಅವಳ ಸತ್ತ್ವಪರೀಕ್ಷೆಗೈಯುವಂತಾದಾಗ, ಎಲ್ಲವನ್ನೂ ಮುತ್ಸದ್ದಿತನದಿಂದ ಗೆಲ್ಲುತ್ತಾಳೆ. ಮಹಾರಾಣಿಯ ಕಾರ್ಯಾಚರಣೆಗಳನ್ನು ಗಮನಿಸಿದವರಿಗೆ ಹುಟ್ಟಾ ಅವಳು ರಾಜಕಾರಣಿಯಾಗಿದ್ದಳೋ ಎನ್ನುವ ಭ್ರಮೆ ಉಂಟಾಗುವಂತಿದೆ. ಪುರುಕುತ್ಸನೊಂದಿಗೆ ಗುದುಮುರಿಗೆ ಹಾಕುತ್ತಿದ್ದ ಹುಡುಗಿ, ಮುಂದೆ ರಾಜಕೀಯದಲ್ಲಿಯೂ ಅಂತಹದೇ ಗುದುಮುರಿಗೆ ಶತ್ರುಗಳಿಗೆ ತೋರಿಸುತ್ತಾಳೆ. ಅಂದರೆ ಅಷ್ಟು ಕಡಿಮೆ ಸಮಯದಲ್ಲಿ ರಾಜಕಾರಣದಲ್ಲಿ ಮುತ್ಸದ್ದಿಯೆನ್ನಿಸಿಕೊಂಡವರನ್ನೂ ಮಣ್ಣುಮುಕ್ಕಿಸುವಷ್ಟು ತನ್ನ ಬುದ್ಧಿಮತ್ತೆಯನ್ನು ಅವಳು ದುಡಿಸಿಕೊಳ್ಳುತ್ತಾಳೆ. ಅವಳದು ಗುಪ್ತರಾಜಕೀಯ. ಅಂತಹ ಸಾಧನೆಯೊಂದರ ಫಲವಾಗಿಯೇ ಶ್ರಾವಸ್ತಿರಾಜನಿಂದ ತಮ್ಮ ನಾಲ್ಕು ಹಳ್ಳಿಗಳನ್ನು ಮರಳಿಪಡೆದು, ತನ್ನ ಜನರೇ ಆಶ್ಚರ್ಯಗೊಳ್ಳುವಂತೆ ಮಾಡುತ್ತಾಳೆ.೨ ಪುರುಕುತ್ಸಾನಿಯ ವ್ಯಕ್ತಿತ್ವದಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ, ರಾಜಕೀಯಜೀವನದಲ್ಲಿ ಅವಳಿಗೆ ಸೋಲೆಂಬುದೇ ಇಲ್ಲ. ಭೀಮಭಟ್ಟನ ಪ್ರಕಾರ ಆಕೆ ಒಟ್ಟಪ್ಪರಾಣಿ. ಈ ರಾಣಿ ಒಮ್ಮೆ ಗುರಿ ಇಟ್ಟಳೆಂದರೆ ಕಲ್ಲಿನ ಗುಂಪೆಯನ್ನು ಭೇದಿಸಿದಳೆಂದೇ ತಿಳಿಯಬೇಕು. ಹೀಗೆ ರಾಣಿ ರಾಜಕೀಯದಲ್ಲಿ ಪ್ರತಿಬಾರಿಯೂ ಕಲ್ಲಿನ ಗುಂಪೆಯನ್ನು ಸಮರ್ಥವಾಗಿಯೇ ಭೇದಿಸುತ್ತಾಳೆ.೩ ಭೀಮಭಟ್ಟನಂತಹ ಅವಿವೇಕಿಗಳಿಗೆ ಸವಾಲಾಗಿ ನಿಲ್ಲುತ್ತಾಳೆ.

ಹೊರಗಿನ ಆಕ್ರಮಣಗಳನ್ನು ಆದಷ್ಟು ದೂರದಿಂದಲೇ ತಡೆಯುವ ಅವಳ ಬುದ್ಧಿಮತ್ತೆ ನಮ್ಮ ಮೆಚ್ಚುಗೆ ಗಳಿಸುತ್ತದೆ. ಅವಳ ತಂತ್ರದ ಮುಂದೆ ಯಾವ ಪ್ರತಿ ತಂತ್ರಗಳೂ ಯಶಸ್ವಿಯಾಗುವುದಿಲ್ಲ. ಎಂದೂ ಯಾರನ್ನೂ ಅವಳು ನಂಬ

ಲಿಲ್ಲ. ಜೊತೆಗೆ, ಏಕಮುಖ ಪ್ರಯತ್ನಗಳನ್ನು ನಂಬಿ ಕುಳಿತುಕೊಳ್ಳುವ ಹೆಣ್ಣು ಅವಳಲ್ಲ. ಆಕೆಯ ಮನಸ್ಸಿನಲ್ಲಿ, ಏಕಕಾಲಕ್ಕೆ ನಾಲ್ಕಾರು ಯೋಜನೆಗಳು, ಒಂದೇ ಕಾರ್ಯಸಾಧನೆಗೆ ತಯಾರಾಗಿರುತ್ತಿದ್ದವು. ಭಿಲ್ಲರ ಮುಖಂಡನನ್ನು ಹಿಡಿದು ತರಿಸಲು ಅವಳು ಹೂಡಿದ ಯೋಜನೆಯನ್ನು ನಾವಿಲ್ಲಿ ಉದಾಹರಿಸಬಹುದು.೪ ಅಂತೆಯೇ ಕಾಶಿಯ ರಾಜ, ಶ್ರಾವಸ್ತಿಯ ರಾಜನೊಂದಿಗೆ ಸೇರಿ, ಅಯೋಧ್ಯೆಯ ಮೇಲೆ ಏರಿ ಬರುತ್ತಾನೆಂದು ತಿಳಿಯುತ್ತಲೇ ಪುರುಕುತ್ಸಾನಿ, ಭಲ್ಲರು, ತಾರ್ಕ್ಷ್ಯ, ಕಾಲಿಯಾ ಇವರನ್ನೆಲ್ಲಾ ಬಳಸಿಕೊಂಡು ಅವನ ಸಂಚುಗಳನ್ನೆಲ್ಲ ಒಡೆದುಹಾಕಿ ಕಾಶಿಯನ್ನು ವಶ ಪಡಿಸಿಕೊಳ್ಳುತ್ತಾಳೆ.೫ ದಶಾರ್ಣದ ರಾಜ ಭದ್ರಾಯು, ಪುರುಕುತ್ಸನನ್ನು ಸೆರೆಹಿಡಿದರೂ ಅಯೋಧ್ಯೆಯನ್ನು ವಶಪಡಿಸಿಕೊಳ್ಳದೇ ಸೋಲುತ್ತಾನೆ. ಮಹಾರಾಣಿ ಪುರುಕುತ್ಸಾನಿಯನ್ನು ಮದುವೆಯಾಗಿ ಆ ಮೂಲಕ ಸಾಮ್ರಾಜ್ಯವನ್ನು ವಿಸ್ತರಿಸುವ ಯೋಚನೆ ಅವನದು. ತಮ್ಮ ಮದುವೆಗೆ ಪುರುಕುತ್ಸನ ಅನುಮತಿ ಇದೆಯೆಂದು ಬೇರೆ ಹೇಳಿಕಳುಹಿಸುತ್ತಾನೆ. ಆದರೆ ಪುರುಕುತ್ಸಾನಿ ಅಭಿಮಾನಶಾಲಿ. ಸೋತವನ ಆಹ್ವಾನವನ್ನು ಒಪ್ಪಿಕೊಳ್ಳುವಷ್ಟು ಹೀನಳಲ್ಲ. 'ಮೊದಲು ಮಹಾರಾಜನನ್ನು ತಂದೊಪ್ಪಿಸು, ಆಮೇಲೆ ಮಾತಾಡೋಣ' ಎಂದು ಹೇಳಿಕಳಿಸುತ್ತಾಳೆ.೬ ಈ ಸಂದರ್ಭದಲ್ಲಿ ಲೇಖಕರು ಬರೆಯುತ್ತಾರೆ, 'ಚದುರಂಗದಾಟದಲ್ಲಿ ಒಂದು ಪೇದೆಯನ್ನು ಕೊಟ್ಟು, ಇನ್ನೊಂದು ಕುದುರೆಯಿಂದ ರಾಜನ ಮೇಲೆ ಒತ್ತಡತರುವ ಸಂಭಾವ್ಯತೆಯನ್ನು ಆಕೆ ಬಿಟ್ಟುಕೊಡಲಿಕ್ಕೆ ಸಿದ್ಧಳಾಗಿದ್ದಿಲ್ಲ'೭ ಎಂದು. ಆದರೆ, ಪುರುಕುತ್ಸಾನಿಯ ಆಕಾಂಕ್ಷೆಗಳು ದುರುದ್ದೇಶದಿಂದ ಕೂಡಿರುತ್ತಿರಲಿಲ್ಲ. ಅವಳು ದೈವಭಕ್ತೆಯೂ ಹೌದು. ರಕ್ತಪಾತವಿಲ್ಲದ ಯುದ್ಧಗಳಲ್ಲಿ ಆಕೆಗೆ ವಿಶೇಷ ಆಸಕ್ತಿ. ಅವಳ ಮಗ ತ್ರಸದಸ್ಯು, ಕಾಶಿರಾಜನೊಂದಿಗೆ ಬಹಿರಂಗ ಯುದ್ಧಮಾಡಿ ಕೇತುಮಂತ ಮಹಾರಾಜನನ್ನು ಸೆರೆಬಿಡಿಸಬೇಕೆನ್ನುವ ಮೂರ್ಖತನದ ಆಲೋಚನೆ ಮಾಡಿದಾಗ ತಾರ್ಕ್ಷ್ಯ ಹೇಳುತ್ತಾನೆ, 'ಮಹಾರಾಣಿ ಬಹಿರಂಗಯುದ್ಧ, ವೈಮನಸ್ಸುಗಳನ್ನು ಇದು ವರೆಗೆ ನಡೆಯದಂತೆ ನೋಡಿಕೊಂಡಿದ್ದಾರೆ. ಮೊಳಕೆಯಲ್ಲಿಯೇ ವೈಮನಸ್ಸು ಮುರಿಯುವಂತೆ ಮಾಡುತ್ತಾ ಬಂದಿದ್ದಾರೆ. ಅದಕ್ಕಾಗಿ ಅಯೋಧ್ಯೆಗೆ ಇಷ್ಟು ಮಾನ ದೊರಕಿದೆ '೮ ಆದುದರಿಂದ ಅವಳು ಮಾಡಿದ ಕೆಲಸಗಳನ್ನು ಹಾಳುಮಾಡಬಾರದೆಂದು ವಿನಂತಿಸಿಕೊಳ್ಳುತ್ತಾನೆ. ಪುರುಕುತ್ಸಾನಿ, ಗಯೆಯನ್ನು ವಶಪಡಿಸಿಕೊಂಡ ರೀತಿ ಅದ್ಭುತವಾಗಿದೆ.೯ ಮತ್ತೊಂದು ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ ತನ್ನ ಬಳಿ ಇರುವ ಸೇವಕರ ಸಾಮರ್ಥ್ಯದ ಅರಿವು ಸ್ಪಷ್ಟವಾಗಿ ಆಕೆಗೆ ಇದ್ದುದು; ಮತ್ತು ಯಾರಿಂದ ಯಾವ ಕೆಲಸ ಮಾಡಿಸಿಕೊಳ್ಳಬೇಕೆಂಬುದನ್ನು ತಿಳಿದುಕೊಂಡಿದ್ದು. ಹೀಗಾಗಿ ಒಂದು ಗುರಿಯನ್ನು ತೋರಿಸಿದರೆ ಸಾಕು, ಅದನ್ನು ಯಶಸ್ವಿಯಾಗಿ ನಿರ್ವಹಿಸಬಲ್ಲ ಸಮರ್ಥಸೇವಕರು ಆಕೆಯ ಬಳಿ ತಯಾರಾಗಿ ಇದ್ದರು.

ಹೊರಗಿನಂತೆ ರಾಜ್ಯದ ಒಳಗೂ ಅಂತಃಕಲಹಗಳು ಏಳದಂತೆ ಪುರುಕುತ್ಸಾನಿ ಸಾಕಷ್ಟು ಜಾಗ್ರತೆ ವಹಿಸುತ್ತಾಳೆ. ಬ್ರಾಹ್ಮಣರ ಒಳಜಗಳಗಳನ್ನಾಗಲಿ ಅಥವಾ ಮಂತ್ರಾವುದೇ ಸಮಸ್ಯೆ ಇರಲಿ, ಅವನ್ನು ತಾರ್ಕ್ಷ್ಯ ಮಹಾರಾಣಿಯು ಬಳಿಹೋಗುವುದಕ್ಕಿಂತ ಮೊದಲೇ ತಡೆದು, ನಿವಾರಿಸಲು ಪ್ರಯತ್ನಿಸುತ್ತಾನೆ. ಅಧಿಕಾರಿಗಳನ್ನು ಮತ್ತು ಸಾಮಂತರನ್ನು ಅವರವರ ದರ್ಜೆಗೆ ಮತ್ತು ಯೋಗ್ಯತೆಗೆ ತಕ್ಕಂತೆ ನಡೆಸಿಕೊಳ್ಳುವುದರಲ್ಲಿ ಪುರುಕುತ್ಸಾನಿ ಎಂದೂ ಅಲಕ್ಷ್ಯಮಾಡುವುದಿಲ್ಲ. ದೇವರಾಜ ದಂಡನಾಯಕನಾಗಿ ಮುಂದುವರೆಯಲು ಅನರ್ಹನೆಂದು ಕಂಡುಬಂದಾಗ, ಆ ಹುದ್ದೆಯನ್ನು ಸಮರ್ಥನಾದ ಅವನ ಮಗನಿಗೆ ಕೊಡಿಸುವಲ್ಲಿ ಅವಳು ತೋರಿಸಿದ ನೈಪುಣ್ಯ ಮೆಚ್ಚುವಂತಿದೆ.೧೦ ಏಕೆಂದರೆ ಈ ಸಂದರ್ಭದಲ್ಲಿ ದೇವರಾಜನಿಗೂ ಮನಸ್ಸಿಗೆ ನೋವಾಗದಂತೆ ನೋಡಿಕೊಳ್ಳುವುದು ಅವಶ್ಯವಿತ್ತು. ದೇವರಾಜನಿಗಷ್ಟೇ ಏಕೆ. ತನ್ನ ಜೀವಮಾನದಲ್ಲಿ ಯಾರಿಗೂ ವೃಥಾ ನೋವಾಗುವಂತೆ ಅವಳು ನಡೆದುಕೊಂಡದ್ದೇ ಇಲ್ಲ. ಯಾರಿಗೂ ಒಂದು ಕೆಟ್ಟನುಡಿಯನ್ನು ನುಡಿದವಳಲ್ಲ. ಹೀಗೆ ಎಲ್ಲರೊಂದಿಗೂ ಉದಾತ್ತವಾಗಿ ನಡೆದುಕೊಳ್ಳುವ ವ್ಯಕ್ತಿ ಅವಳು. ಮಹಾರಾಜನನ್ನು ಕೊಲ್ಲುವ ಸಂಚುಮಾಡಿದ ಕಾಲಿಯಾನನ್ನು ಬೇರೆ ಯಾರಾದರೂ ಆಗಿದ್ದರೆ, ದೇಶದ್ರೋಹಿಯೆಂದು ಘೋರಶಿಕ್ಷೆ ವಿಧಿಸುತ್ತಿದ್ದರು. ಆದರೆ, ಅವನ ಸಾಮರ್ಥ್ಯವನ್ನು ಹಾಗೂ ಮನಸ್ಸನ್ನು ಅರ್ಥಮಾಡಿಕೊಂಡಿದ್ದ ಈ ಕ್ಷತ್ರಿಯರಾಣಿ, ಅವನಿಗೆ ದಂಡನಾಯಕ ಪದವಿ ನೀಡುತ್ತಾಳೆ. ಅನೇಕ ಗುರುತರವಾದ ಹೊಣೆಗಳನ್ನು ಹೊರಿಸುತ್ತಾಳೆ. ಅವಳ ಇಂಥ ನಿರ್ಣಯಗಳು ಎಷ್ಟು ಉತ್ತಮವಾದವು, ಸಾಮಯಿಕವಾದವು ಎಂಬುದು ಮುಂದೆ ಕಾಲಿಯಾ ಅನೇಕ ಸಂಚುಯುದ್ಧಗಳಲ್ಲಿ ತನ್ನ ಸೈನ್ಯದೊಂದಿಗೆ ಭಾಗವಹಿಸಿ, ರಾಣಿಗೆ ಜಯತಂದುಕೊಟ್ಟಿರುವುದರಲ್ಲಿ ಅರಿಯಬಹುದು.

ಇಷ್ಟೆಲ್ಲ ಪ್ರಚಂಡಸಾಮರ್ಥ್ಯವನ್ನು ವ್ಯಕ್ತಪಡಿಸಿದರೂ ಪುರುಕುತ್ಸಾನಿಯಲ್ಲಿ ಅಧಿಕಾರಲಾಲಸೆಯ ಅಂಶಗಳನ್ನು ನಾವು ವಿಶೇಷವಾಗಿ ಕಾಣುವುದಿಲ್ಲ. ಯುದ್ಧಗಳಲ್ಲಿ ಗೆಲುವನ್ನು ಪಡೆದಾಗಲೂ ಗೆದ್ದ ಪ್ರದೇಶಗಳನ್ನು ತಾನೇ ಆಳಬೇಕೆಂದು ಬಯಸುವುದಿಲ್ಲ, ಸಾಮ್ರಾಜ್ಯವಿಸ್ತಾರದ ದಾಹವೂ ಆಕೆಗಿಲ್ಲ. ಬದಲಾಗಿ ರಾಜ್ಯದ ಭದ್ರತೆ ತನ್ನ ಮುಖ್ಯ ಕರ್ತವ್ಯವೆಂದು ಭಾವಿಸುತ್ತಾಳೆ. ಪ್ರಜೆಗಳ ಇಚ್ಛೆಯೇ ತನ್ನ ಇಚ್ಛೆಯೆಂದು ತಿಳಿದು ವರ್ತಿಸುತ್ತಿದ್ದಳೆಂಬುದಕ್ಕೆ ಶ್ರಾವಸ್ತಿಯನ್ನು ವಶಪಡಿಸಿಕೊಂಡಾಗ ಭಿಲ್ಲರಾಜ ಉಪೇಂದ್ರಸಿಂಹನಿಗೆ ಅದನ್ನು ವಹಿಸಬಹುದಾಗಿದ್ದರೂ, ಶ್ರಾವಸ್ತಿಯ ನಾಗರಿಕರ ಬಗ್ಗೆ ಭಿಲ್ಲರಾಜನಿಗೆ ಇನ್ನೂ ದ್ವೇಷವಿರುವುದನ್ನು ಗಮನಿಸಿ, ಈಗಲೇ ಬೇಡವೆಂದು ಸುಮ್ಮನಿರುತ್ತಾಳೆ.೧೧ [ಇದಕ್ಕೆ ತದ್ವಿರುದ್ಧ, ಅವಳ ಮಗ ತ್ರಸದಸ್ಯು, ತಾಯಿಯ ತಾಳ್ಮೆ, ವಿವೇಕ ಅವನಿಗಿಲ್ಲ, ಶಂಬರಾಸುರನನ್ನು ಜನ ತಿರಸ್ಕರಿಸುತ್ತಿರುವಾಗ, ಅದರ ಅರಿವಿಲ್ಲದೇ ಅವನನ್ನು ಅಯೋಧ್ಯೆಯಲ್ಲಿ ಮೆರೆಸುವ ಆಲೋಚನೆ

ಮಾಡುತ್ತಾನೆ. ತಾರ್ಕ್ಷ್ಯನ ಸಮಯೋಚಿತ ಸಲಹೆ ಇಲ್ಲದಿದ್ದರೆ, ಮತ್ತೊಂದು ಹೊಸ ಸಮಸ್ಯೆಯನ್ನು ಅವನು ಉಂಟುಮಾಡಿಕೊಳ್ಳುತ್ತಿದ್ದ].

ತನ್ನ ಚತುರತೆ, ಬುದ್ಧಿವಂತಿಕೆಗಳ ಮೂಲಕ ಪುರುಕುತ್ಸಾನಿ ರಾಜ್ಯದ ತೇರನ್ನು ಯಶಸ್ವಿಯಾಗಿ ಮುಂದೆ ಕೊಂಡೊಯ್ದರೂ, ರಾಜಮನೆತನವನ್ನು ಮುನ್ನಡೆಸಲು ಅಗತ್ಯವಾಗಿದ್ದ ವಂಶಾಭಿವೃದ್ಧಿಯ ವಿಷಯದಲ್ಲಿ ಏನನ್ನೂ ಯೋಚಿಸಲು ಅಸಮರ್ಥಳಾಗುತ್ತಾಳೆ. ಎಷ್ಟೇ ಪ್ರಯತ್ನಪಟ್ಟರೂ ಪುರುಕುತ್ಸನಿಂದ ಅವಳ ಕೌಮಾರ್ಯ ಅಳಿಯಲಿಲ್ಲ. ತನ್ನ ಕೈಮೀರಿದ ಸಮಸ್ಯೆಗಳೆನ್ನಿಸಿದಾಗ ಅವಳು ಗುರುವಿಗೆ ಶರಣಾಗುತ್ತಾಳೆ (ಎಲ್ಲರ ಕೈಮೀರಿದ್ದೆನ್ನಿಸಿದಾಗ ದೈವಕ್ಕೆ ಶರಣಾಗುತ್ತಾಳೆ).೧೨ ಅಮರುವಿನ ದೇವ ದೇವ ಮಹರ್ಷಿಗಳು ಪುರುಕುತ್ಸನಿಗೆ ಈ ವಿಷಯದಲ್ಲಿ ನಿಯೋಗ ಪದ್ಧತಿಯನ್ನು ಸಲಹೆಮಾಡುತ್ತಾರೆ. ಅದಕ್ಕಾಗಿ ಚತುರ್ವೇದ ಪಾರಂಗತನಾದ ಸಿಂಹ ಭಟ್ಟನನ್ನು ಆಯ್ಕೆಮಾಡುತ್ತಾರೆ. ಆದರೆ ಈ ಪದ್ಧತಿ, ಸಾಮಾಜಿಕವಾಗಿ ಒಪ್ಪಿಗೆಯನ್ನು ಪಡೆದ ಧಾರ್ಮಿಕ ಪದ್ಧತಿಯಾಗಿರಲಿಲ್ಲವೆಂದು ತೋರುತ್ತದೆ. ಸಮಾಜಕ್ಕೆ ಅಂಜಿದ ಮಹಾರಾಣಿ, ಪುರುಕುತ್ಸ ವಿಶೇಷ ಒಪ್ಪಿಗೆಯ ಮೇರೆಗೆ ಒಂದು ತಿಂಗಳು ಅಮರುವಿಗೆ ಬಂದಿದ್ದನೆಂದು ಸುದ್ದಿ ಹಬ್ಬಿಸುತ್ತಾಳೆ— ಅವಳ ಆಪ್ತಸೇವಕ ತಾರ್ಕ್ಷ್ಯನಿಗೂ ಸಂದೇಹಬಾರದ ರೀತಿಯಲ್ಲಿ.

ನಿಯೋಗದ ನಂತರ ಸಿಂಹಭಟ್ಟನಿಗೆ ಮಹಾರಾಣಿಯನ್ನು ಮರೆಯುವುದು ಸಾಧ್ಯವಾಗದೇ ಅವನಿಗೆ ಹುಚ್ಚು ಹಿಡಿಯುತ್ತದೆ. ಇದರಿಂದ ದುಃಖಿತಗೊಂಡ ಮಹಾರಾಣಿ, ತಾನೇ ಅದಕ್ಕೆ ಕಾರಣವೆಂದು ತಿಳಿದು, ಅವನ ಹುಚ್ಚು ಬಿಡಿಸುವ ಪ್ರಯತ್ನಮಾಡುತ್ತಾಳೆ. ಅವನು ಕೊಟ್ಟ ಎಲ್ಲ ಹಿಂಸೆಗಳನ್ನೂ ಸಹಿಸಿಕೊಳ್ಳುತ್ತಾಳೆ. ತಾನು ಯಾರೆಂದು ಕೇಳಬಂದ ಮಗನಿಗೆ ಕೊಡುವ ಉತ್ತರದಲ್ಲಿ 'ನಾನು ಇಲ್ಲಿಯವರೆಗೆ ಪುರುಕುತ್ಸರ ಪತ್ನಿ. ಇಂದಿನಿಂದ ಈ ಬ್ರಾಹ್ಮಣನ ಸೂಳೆ' ಎನ್ನುತ್ತಾಳೆ.೧೩ ಪುರುಕುತ್ಸಾನಿ, ಕಾದಂಬರಿಯ ಕೊನೆಯ ಭಾಗದಲ್ಲಿ ಓದುಗರಿಂದ ಸಹಾನುಭೂತಿಯನ್ನು ಪಡೆಯುವ ಪಾತ್ರವಾಗಿ ಚಿತ್ರಿತಳಾಗಿದ್ದಾಳೆ. ರಾಜ-ಮಹಾರಾಜರ ವಿಕ್ಷಿಪ್ತ ಜೀವನದ ಅರಿವಿರುವವರಿಗೆ ರಾಣಿಯ ಕೆಲವು ವಿಕ್ಷಿಪ್ತನಡತೆಗಳು ದೊಡ್ಡ ವಿಷಯಗಳೆಂದೆನ್ನಿಸದೇ ಇರಬಹುದು. ಉದಾಹರಣೆಗೆ— ಆಕೆಯ ಬಸಿರಬಯಕೆಗಳು. ಬ್ರಾಹ್ಮಣಹುಡುಗ ವೃಷನೊಂದಿಗೆ ಅವಳು ಆಟವಾಡತೊಡಗುತ್ತಾಳೆ. ಪ್ರಧಾನ, ತಾರ್ಕ್ಷ್ಯ, ರಾಯಭಾರಿಗಳು ಹೊರಗೆ ಬಂದುನಿಂತಾಗ, 'ರಾಣಿ ಒಟ್ಟಪ್ಪ ಆಡುತ್ತಿದ್ದಾರೆ', 'ರಾಣಿ ಗೋಲಿ ಆಡುತ್ತಿದ್ದಾರೆ', 'ರಾಣಿ ಚಿಣಿಕೋಲು ಆಡುತ್ತಿದ್ದಾರೆ', 'ರಾಣಿ ಬೊಗರೆ ಆಡುತ್ತಿದ್ದಾರೆ' ಎಂಬ ಉತ್ತರಗಳನ್ನು ಪಡೆಯತೊಡಗುತ್ತಾರೆ. ಇದರಿಂದ ಬೇಸತ್ತ ಪ್ರಧಾನರು, ವಾರಕ್ಕೊಂದುದಿನ ಬಯಕೆಯ ದಿನವೆಂದು ಗೊತ್ತುಮಾಡಿ, ಅಂದು ಯಾವ ಮಹತ್ತರವಾದ ಕಾರ್ಯವನ್ನೂ ಇಟ್ಟುಕೊಳ್ಳಬಾರದೆಂದು

ಅಧಿಕಾರಿಗಳಿಗೆ ಆಜ್ಞಾಪಿಸುತ್ತಾರೆ.೧೪ ತಾರ್ಕ್ಷ್ಯನೊಂದಿಗೆ ಕೊನೆಯಲ್ಲಿ ಅವಳು ಲೈಂಗಿಕ ಸಂಬಂಧವನ್ನು ಹೊಂದುವುದೂ ಅವಳ ವಿಕ್ಷಿಪ್ತಜೀವನದ ಮತ್ತೊಂದು ಉದಾಹರಣೆ ಎನ್ನಬಹುದು. ಇಂತಹ ಪುರುಕಂತ್ಸಾನಿ ಕೊನೆಗೊಮ್ಮೆ ಸರ್ಪ ದಂಷ್ಟ್ರದಿಂದ, ಆಮ್ರವನದಲ್ಲಿ ಮರಣವನ್ನಪ್ಪುತ್ತಾಳೆ. ಹೀಗೆ ಆಕೆಯ ಕೊನೆಯೂ ಒಂದು ರೀತಿಯಲ್ಲಿ ದುರಂತವಾಗಿದೆ, ಮತ್ತು ಸಾಂಕೇತಿಕವಾಗಿದೆ ಎನ್ನಬಹುದು. ಇದು ಯುದ್ಧದಿಂದಾದ ವೀರಮರಣವೂ ಅಲ್ಲ, ಎಲ್ಲರಂತಾದ ಸಹಜಮರಣವೂ ಅಲ್ಲ. ಹೀಗೆ ಮರಣದಲ್ಲಿಯೂ ಒಂದು ರೀತಿಯ ರಹಸ್ಯವನ್ನೇ ಕಾಪಾಡಿಕೊಂಡಂತಾ ಗಿದೆ.

ತ್ರಸದಸ್ಯುವಿನ ಹುಟ್ಟೇ–ವರ್ಣಸಂಕರದಿಂದ ಆದದ್ದು. ಇವನ ಹುಟ್ಟಿನೊಂದಿಗೆ ಸಂಕ್ರಮಣಕಾಲದ ಅನೇಕ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಅವನತಿಯಕಾಲದ ಅನೇಕ ಅಂಶಗಳು ಅವನ ರಾಜ್ಯದಲ್ಲಿ ಕಾಣಸಿಕೊಳ್ಳುತ್ತವೆ. ಕಾದಂಬರಿಯಲ್ಲಿ ಒಂದೆಡೆ ಲೇಖಕರು 'ಅಂತೂ ತ್ರಸದಸ್ಯುವಿನ ರಾಜ್ಯ ಅನೇಕ ಪಾತಳಿಗಳಲ್ಲಿ ವಿಘಟಿತ ವಾಗತೊಡಗಿತ್ತು. ಕುಲ–ಕುಲಗಳಲ್ಲಿ, ಜಾತಿ–ಜಾತಿಗಳಲ್ಲಿ, ವೃತ್ತಿ–ವೃತ್ತಿಗಳಲ್ಲಿ, ಗಂಡು–ಹೆಣ್ಣುಗಳಲ್ಲಿ, ಇಷ್ಟೇ ಅಲ್ಲ; ಅಧಿಕಾರಿ–ಅಧಿಕಾರಿಗಳ ನಡುವೆ, ವ್ಯಕ್ತಿ–ವ್ಯಕ್ತಿ ಗಳ ನಡುವೆ ಬಿರುಕಿನ ಭಾಗ ಒಮ್ಮೆಲೆ ಕಾಣತೊಡಗಿತ್ತು' ಎಂದು ಬರೆಯುತ್ತಾರೆ.೧೫ ವೃಷಭಟ್ಟನ ನ್ಯಾಯಕ್ಕಾಗಿ ಕಾಶಿಮಹಾರಾಜರನ್ನು ಆಮಂತ್ರಿಸಬೇಕಾಗಿ ಬಂದುದು ಅಯೋಧ್ಯೆ ಅವನತಿಯತ್ತ ಸಾಗುತ್ತಿದ್ದುದರ ಒಂದು ನಿದರ್ಶನ. ಮುಂದೆ ತ್ರಸ ದಸ್ಯುವಿನ ಮಗ ತೃಕ್ಷನ ಜನನ ಮತ್ತೆ ಹೊಸ ಆಸೆ–ಭರವಸೆಗಳನ್ನು ನೀಡುತ್ತದೆ. ಆ ಸಮಯಕ್ಕೆ ಸರಿಯಾಗಿ, ಅವುರುವಿಗೆ ಹೋದ ಮಹಾರಾಣಿ ಮತ್ತೆ ಹಿಂತಿರುಗಿ ಬರುತ್ತಾಳೆ. ಕಾಶಿಯ ಸಮಸ್ಯೆಯನ್ನು ಚರ್ಚಿಸಲು ತಾನೇ ಸಿಂಹಾಸನವನ್ನೇರಿ ತ್ರಸದಸ್ಯುವಿಗೆ ಒಂದು ಮಾದರಿಯನ್ನು ಒದಗಿಸಿಕೊಡುತ್ತಾಳೆ. ತಾರ್ಕ್ಷ್ಯನೂ ತ್ರಸ ದಸ್ಯುವಿಗೆ ಎಲ್ಲ ರೀತಿಯಿಂದಲೂ ಹಿರಿಯಸ್ಥಾನದಲ್ಲಿ ನಿಂತು ಅವನನ್ನೂ ರಾಜ್ಯ ವನ್ನೂ ಮುನ್ನಡೆಸುವ ನಿರ್ಧಾರ ಕೈಕೊಳ್ಳುತ್ತಾನೆ. ಇವೆಲ್ಲ, 'ಅವಧ' ಮುನ್ನಿ ನಂತೆ ಸರ್ವತೋಭದ್ರವಾಗುತ್ತಿರುವುದರ ಸೂಚನೆಯಾಗಿದೆ.

ಈ ಕಾದಂಬರಿಯಲ್ಲಿ ಐಗುಪ್ತಮೂಲದವರು, ಅರ್ಮಾನ್‌ಮೂಲದವರು, ನಾಗಕುಲದವರು, ಬ್ರಾಹ್ಮಣರು—ಹೀಗೆ ಮುಖ್ಯವಾಗಿ ನಾಲ್ಕು ಕುಲಕ್ಕೆ ಸೇರಿದ ಜನ ರನ್ನು ಕಾಣುತ್ತೇವೆ. ಪ್ರಾರಂಭದಲ್ಲಿ ಕುಲದ ಪಾವಿತ್ರ್ಯ, ರಕ್ತಶುದ್ಧಿಗಳಿಗಾಗಿ ಎಲ್ಲರೂ ವಿಶೇಷ ಜಾಗರೂಕರಾಗಿದ್ದವರೇ. ಬರಬರುತ್ತ ಅಂಥ ಶುದ್ಧತೆಯನ್ನು ಉಳಿಸಿ ಕೊಳ್ಳುವುದು ಯಾವ ಜನಾಂಗಕ್ಕೂ ಸಾಧ್ಯವಾಗುವುದಿಲ್ಲ. ಈ ಐತಿಹಾಸಿಕ ಅನಿ ವಾರ್ಯವೆಂದು ಸತ್ಯವನ್ನು ಅಧೇವಶ್ವರಿಯ, ತ್ರಸದಸ್ಯುವಿನ ಹುಟ್ಟಿನ ಹಿನ್ನೆಲೆಯಲ್ಲಿ ಮತ್ತು ಶಂಬರಾಸುರನ ಮೊಮ್ಮಗಳಾದ ಕ್ಲಿಯೋರಾಣಿಯ ಸಂದರ್ಭದಲ್ಲಿ ನೋಡು

ತ್ತೇವೆ. ಒಂವೆಡೆ ಶಂಬರಾಸುರ ಹೇಳುತ್ತಾನೆ: 'ನಮ್ಮ ರಕ್ತ ಶುದ್ಧಿಯಲ್ಲಿಯೇ ನಮ್ಮ ಕುಲದ ಸ್ವಾತಂತ್ರ್ಯ ಕಾದಿದೆ. ನನ್ನ ಮೊಮ್ಮಗಳಿಂದಲೇ ಅಶುದ್ಧ ಸಂತತಿ ಪ್ರಾರಂಭವಾದದ್ದು ನನಗೆ ಅಗೌರವ'.೧೬

ಸದಾ ರಾಜಕೀಯ ಅಸ್ಥಿರತೆ, ಆಶ್ರಮಗಳ ಪಾವಿತ್ರ್ಯ ಅಳಿಯುತ್ತ ಬಂದುದು ಒಂದೆಡೆ ಗೋಚರಿಸಿದರೆ,೧೭ ಧರ್ಮವನ್ನು ಕುರಿತ ತಾತ್ವಿಕ ಚಿಂತನೆ, ಚರ್ಚೆ ಮತ್ತೊಂದೆಡೆ ಕಾಣುತ್ತದೆ.೧೮ ಹೀಗೆ ಎಲ್ಲ ವಿಷಯಗಳಲ್ಲೂ ಸಂಕೀರ್ಣಗೊಂಡ ಸಂಕ್ರಮಣಾವಸ್ಥೆಯ ಸಮಾಜದಲ್ಲಿಯೂ ಪ್ರಬಲಶಕ್ತಿಯಾಗಿ ಮೆರೆದವಳು ಪುರುಕುತ್ಸಾನಿ. ಈ ಕಾದಂಬರಿಯಲ್ಲಿ ಕಾಣಿಸಿಕೊಂಡ ಉಳಿದ ಎಲ್ಲ ಪಾತ್ರಗಳೂ— ಪುರುಕುತ್ಸ, ತ್ರಸದಸ್ಯು, ತಾರ್ಕ್ಷ್ಯ, ಕಾಲಿಯಾ, ಶಂಬರಾಸುರ, ದೇವದೇವಋಷಿ, ಭದ್ರಾಯು, ಋಷಭಮುನಿ, ಯಾದವಿದೇವಿ ಮುಂತಾದವರು — ಔಚಿತ್ಯಪೂರ್ಣವಾಗಿದ್ದು, ಕೇಂದ್ರಪಾತ್ರಕ್ಕೆ ಪೋಷಕವಾಗುವಂತೆಯೇ ಮೂಡಿಬಂದಿವೆ.

ಪ್ರಸ್ತುತ ಕಾದಂಬರಿಯಲ್ಲಿ, ರಾಜಕಾರಣದಲ್ಲಿ ಪುರುಕುತ್ಸಾನಿಯನ್ನು ಮೀರಿಸುವ ಗಂಡುಗಳೇ ಸುತ್ತಮುತ್ತಲ ರಾಜ್ಯಗಳಲ್ಲಿ ಯಾರೂ ಇರಲಿಲ್ಲ ಎಂಬುದನ್ನು ಸ್ಥಾಪಿಸುವುದರ ಜೊತೆಗೆ ಹೆಣ್ಣಾಗಿ ಪುರಕುತ್ಸಾನಿ ಅನುಭವಿಸಿರಬಹುದಾದ ಕೆಲವು ನೋವುಗಳನ್ನು ಲೇಖಕರು ಪರಿಣಾಮಕಾರಿಯಾದ ರೀತಿಯಲ್ಲಿ ಸೆರೆಹಿಡಿದಿರುವುದು ಗಮನಿಸಬೇಕಾದ ಸಂಗತಿ. ಪುರುಕುತ್ಸನಿಂದ ತನ್ನ ಕೌಮಾರ್ಯ ಅಳಿಸಿಕೊಳ್ಳಲು ಪ್ರಯತ್ನಿಸಿದ ಪುರುಕುತ್ಸಾನಿಗೆ ಕೊನೆಗೂ ದೊರೆತದ್ದು ನಿರಾಶೆಯೇ. ಅಷ್ಟೇ ಅಲ್ಲ; ಮಹಾರಾಜನ ಸುಖಕ್ಕಾಗಿ ವಾರಾಂಗನೆಯರನ್ನು ತಾನೇ ಒದಗಿಸಬೇಕಾಗಿ ಬಂದುದು ದುರ್ದೈವದ ಸಂಗತಿ. ಈ ಮೊದಲು ರಾಜ್ಯದಿಂದ ಹೊರಗಟ್ಟಿದ್ದ ಪಕ್ಷ್ಮಾದೇವಿಯನ್ನೇ ಮತ್ತೆ ತಾನೇ ಕುಂಟಲಗಿತ್ತಿಯಾಗಿ ಕರೆಯಿಸಬೇಕಾಗಿ ಬಂದಾಗ ಅನುಭವಿಸಿದ ದುಃಖ ಅವಳೊಬ್ಬಳಿಗೇ ಗೊತ್ತು. ರಾಜ್ಯದ ಹಿತದೃಷ್ಟಿಯಿಂದಂತೂ ಒಬ್ಬ ಮಗನನ್ನು ಪಡೆಯುವುದು ಅವಳಿಗೆ ಅನಿವಾರ್ಯವಾಗಿತ್ತು. ಭದ್ರಾಯುವಿನ ಆಹ್ವಾನವನ್ನು ಸ್ವೀಕರಿಸಲು ಮೊದಲು ಮಹಾರಾಣಿಯ ಅಭಿಮಾನ ಅವಳನ್ನು ಅಡ್ಡಿಪಡಿಸಿತ್ತು. ಆದರೆ ಮುಂದೆ ಅತನ ಸಾವಿನ ವರ್ತಮಾನ, ಅಲ್ಪ-ಸ್ವಲ್ಪ ಉಳಿದಿದ್ದ ಅವಳ ಆಶೆಯನ್ನೂ ಸಂಪೂರ್ಣವಾಗಿ ನಾಶಪಡಿಸಿತ್ತು. ತನ್ನ ವಂಶ ಮುಂದುವರೆಯಬೇಕಾದ ಹಿನ್ನೆಲೆಯಲ್ಲಿ 'ನಿಯೋಗ' ಪದ್ಧತಿಗೂ ಆಕೆ ಒಪ್ಪಿಕೊಳ್ಳುತ್ತಾಳೆ. ಆದರೆ ಸಾಮಾಜಿಕ ಒಪ್ಪಿಗೆ ಇಲ್ಲದೆ, ಅಳುಕಿನಿಂದ ಆ ಘಟನೆಯನ್ನು ರಹಸ್ಯವಾಗಿಡಲು ಅಪೇಕ್ಷಿಸುತ್ತಾಳೆ. ಆದರೆ ಮಗನಿಗೆ ಸಂಶಯವುಂಟಾಗಿದೆ ಎಂಬುದು ಗೊತ್ತಾದಾಗ, ತನ್ನ ಮೊದಲಿನ ಅಳುಕು, ಮಾನಸಿಕ ಹೊಯ್ದಾಟಗಳನ್ನೆಲ್ಲ ತೊರೆದು, ದಿಟ್ಟತನದಿಂದ ನಿಶ್ಚಲ ಮನಸ್ಸಿನಿಂದ ಸಿಂಹಭಟ್ಟನ ಸೂಳೆಯಾಗುವ ವಿಚಾರ ತಿಳಿಸುತ್ತಾಳೆ. ಸಿಂಹಭಟ್ಟ ಹುಚ್ಚನಾಗಲಿಕ್ಕೆ ತಾನೇ ಕಾರಣವೆಂದು ಬಗೆದು, ಅವನ ಮತಿಭ್ರಂಶವನ್ನು

ಕಳೆಯುವ ಒಂದೇ ಒಂದು ಕಾರಣಕ್ಕಾಗಿ ಅವನೊಂದಿಗೆ ಮತ್ತೆ ಸಂಭೋಗಕ್ಕೂ ತಯಾರಾಗುತ್ತಾಳೆ. ಸುಮಾರು ಆರು ತಿಂಗಳುಗಳ ಕಾಲ ಅವನು ಕೊಟ್ಟ 'ಪಶು ಹಿಂಸೆ'ಗಳನ್ನೆಲ್ಲ ಸಹಿಸಿಕೊಳ್ಳುತ್ತಾಳೆ. ಹೆಣ್ಣಿನ ತಾಳ್ಮೆಗೆ ನಿದರ್ಶನವಾಗಿ ನಿಲ್ಲುತ್ತಾಳೆ. ತಾನು ಬಯಸಿದುದನ್ನು ಛಲದಿಂದಲೇ ಪಡೆಯುವ ಈ ಹೆಣ್ಣಿನ ಜೀವನ ಮುಂದೆ ವಿಕ್ಷಿಪ್ತರೀತಿಯದಾಗುತ್ತದೆ. ಆಮ್ರವನದಲ್ಲಿ ತಾರ್ಕ್ಷ್ಯನೊಂದಿಗಿನ ಅವಳ ದೈಹಿಕ ಸಂಬಂಧ, ಇಂಥ ವಿಕ್ಷಿಪ್ತತೆಗೆ ಒಂದು ನಿದರ್ಶನ. ಪುರುಕುತ್ಸನೊಂದಿಗಿನ ವಿವಾಹದಿಂದ ತನಗಾದ ಅನ್ಯಾಯದ ಸೇಡನ್ನು ಅವಳ ಸುಪ್ತಮನಸ್ಸು ಈ ರೀತಿಯಲ್ಲಿ ತೀರಿಸಿಕೊಳ್ಳತೊಡಗಿತೋ ಏನೋ. ಏನೇ ಇರಲಿ ಸಿಂಹಭಟ್ಟನೊಂದಿಗಿನ ನಿಯೋಗದ ನಂತರದ ಜೀವನವನ್ನು ಗಮನಿಸಿದರೆ ಹುಚ್ಚು ಹಿಡಿಸಿಕೊಂಡ ಅವನ ಸಲುವಾಗಿ ಆಕೆ ತೋರಿಸಿದ ಕನಿಕರ-ಮಾನವೀಯತೆ, ಸಹಿಸಿದ ಹಿಂಸೆಗಳು ಮತ್ತು ಆಮ್ರವನದಲ್ಲಿ ಕಳೆದ ಏಕಾಂತದ ದಿನಗಳು, ಸರ್ಪದಂಷ್ಟ್ರದಿಂದುಂಟಾದ ಮರಣ – ಇವೆಲ್ಲ ಆ ಪಾತ್ರವನ್ನು ಕುರಿತಂತೆ ಓದುಗರಿಂದ ಸಹಾನುಭೂತಿಯನ್ನು ಗಳಿಸಿಕೊಳ್ಳುತ್ತವೆ. ಹೀಗೆ ಹೆಣ್ಣಿನ ನಿಜವಾದ ಶಕ್ತಿಯನ್ನು ಗುರುತಿಸಿ, ತಮ್ಮ ಕಾದಂಬರಿಗಳ ಸ್ತ್ರೀಪಾತ್ರಗಳಲ್ಲಿ ಆ ಅಂಶವನ್ನು ಉಜ್ವಲವಾಗಿ ಚಿತ್ರಿಸುವ ಕನ್ನಡದ ಕೆಲವೇ ಪುರುಷ ಲೇಖಕರಲ್ಲಿ ಶಂಕರ ಮೊಕಾಶಿ ಪುಣೇಕರರು ಒಬ್ಬರಾಗಿದ್ದಾರೆ.

ಅಡಿಟಿಪ್ಪಣಿಗಳು

೧. ನೋಡಿ : ಪುಣೇಕರ ಶಂಕರ ಮೊಕಾಶಿ, ಅವಧೇಶ್ವರಿ, ಮೈಸೂರು, ೧೯೮೭, ಪುಟ ೭.

೨. ಅದೇ, ಪು. ೪೪

೩. ಅದೇ, ಪು. ೧೫೭, ೧೯೯

೪. ಅದೇ, ಪು. ೬೩ ರಿಂದ ೭೨

೫. ಅದೇ, ಪು. ೧೪೯ ರಿಂದ ೧೯೯

೬. ಅದೇ, ಪು. ೧೧೪

೭. ಅದೇ, ಪು. ೧೧೬

೮. ಅದೇ, ಪು. ೩೩೨

೯. ಅದೇ, ಪು. ೧೮೦-೧೯೯

೧೦. ಅದೇ, ಪು. ೬೬

೧೧. ಅದೇ, ಪು. ೧೫೮

೧೨. ಅದೇ, ಪು. ೧೧೭

೧೩. ಅದೇ, ಪು. ೨೬೦

೧೪. ಅದೇ, ಪು. ೧೪೬

೧೫. ಅದೇ, ಪು. ೨೫೦

೧೬. ಅದೇ, ಪು. ೨೧೧

೧೭. ದೇವದೇಮರ ಆಶ್ರಮ ಬರಬರುತ್ತಾ ರಾಣಿವಾಸವಾಯಿತೆಂದು ಜನ ಗುಸುಗುಡ ತೊಡಗುತ್ತಾರೆ. ನೋಡಿ : ಪು. ೨೯೩.

೧೮. ಋಷಭ ಮುನಿಯ ಆಶ್ರಮದಲ್ಲಿ ಮತ್ತು ಅಯೋಧ್ಯೆಯಲ್ಲಿ ಧಾರ್ಮಿಕ-ತಾತ್ವಿಕ ಚಿಂತನೆಗಳ ಚರ್ಚೆ ನಡೆಯುತ್ತದೆ. ಕಾದಂಬರಿಯ ಮಹತ್ವವನ್ನು ಹೆಚ್ಚಿಸುವಲ್ಲಿ ಈ ತಾತ್ವಿಕ ಅಂಶ ಸಹಾಯಕವಾಗಿದೆ.

● ● ●

ಹಂಪೆಯ ವೀರಭದ್ರನ ವಿಗ್ರಹಗಳು*

(ಇಂಗ್ಲೀಷ) ಮೂಲ : **ಬಾಲಸುಬ್ರಹ್ಮಣ್ಯ**
ಅನುವಾದ : **ಬಿ. ಆರ್. ಹೂಗಾರ**

ಹಂಪೆಯು ವಿಜಯನಗರ ಅರಸರ ರಾಜಾಂಕಿತವಾದ 'ಶ್ರೀ ವಿರೂಪಾಕ್ಷ'ನ ದೇವಾಲಯಕ್ಕಾಗಿ ಪ್ರಸಿದ್ಧವಾಗಿದೆ. ವಿಜಯನಗರ ಅರಸರ ಎಲ್ಲ ತಾಮ್ರಪಟಗಳು "ಶ್ರೀ ವಿರೂಪಾಕ್ಷ" ಎಂಬ ರಾಜಾಂಕಿತವನ್ನು ಹೊಂದಿರುತ್ತವೆ. ಸ್ಥಾವರಲಿಂಗ ರೂಪದಲ್ಲಲ್ಲದೆ ಹಲವು ಬೇರೆಬೇರೆ ರೂಪಗಳಲ್ಲಿಯೂ ಶಿವನನ್ನು ಪೂಜಿಸಲಾಗುತ್ತದೆ. ಹಂಪೆಯಲ್ಲಿ ವೀರಭದ್ರನು ಶಿವನ 'ಸಂಹಾರಮೂರ್ತಿ' ಸ್ವರೂಪನೆಂದು ಹೆಚ್ಚಾಗಿ ಪೂಜಿಸಲ್ಪಡುತ್ತಿದ್ದಾನೆ. ಇಲ್ಲಿಯ ಉದ್ದಾನವೀರಭದ್ರ ದೇವಸ್ಥಾನವು ಹಿಂದಿನಿಂದಲೂ ಒಂದು ಸಾಮಾಜಿಕ ಮತ್ತು ಧಾರ್ಮಿಕ ಕೇಂದ್ರವೆನಿಸಿದೆ. ಮತಂಗ ಪರ್ವತದ ಮೇಲಿರುವ ವೀರಭದ್ರನು ಈಗಲೂ ಪೂಜಿಸಲ್ಪಡುತ್ತಿದ್ದಾನೆ.

ಮತಂಗಪರ್ವತದ ಮೇಲಿರುವ ವೀರಭದ್ರನು ತುಂಬಾ ಜಾಗೃತ ದೇವತೆ ಎಂಬ ಭಾವನೆ ವಿಜಯನಗರ ಅರಸರ ಕಾಲದಿಂದಲೂ ಇದೆ. ಇಲ್ಲಿಯ ಕೆಲವು ಶಾಸನಗಳಲ್ಲಿ ಈತನನ್ನು 'ಮತಂಗೇಶ್ವರ' ಎಂದೇ ಸಂಬೋಧಿಸಲಾಗಿದೆ.[1] ಇವುಗಳಲ್ಲಿ ಒಂದು ಶಾಸನದ ಕಾಲ ಕ್ರಿ. ಶ. ೧೪ನೆಯ ಶತಮಾನ. ಅನೇಕ ಭಕ್ತರು ಈ ಪರ್ವತಕ್ಕೆ ಬಂದು ಮತಂಗೇಶ್ವರನ ದರ್ಶನ ಪಡೆದು, ಪರ್ವತದ ಮೇಲೆ ನಿಂತು ಶ್ರೀ ವಿರೂಪಾಕ್ಷ ದೇವಾಲಯದ ಗೋಪುರವನ್ನು ಕಂಡು ಧನ್ಯರಾದರೆಂಬ ಮತ್ತು ಮತಂಗೇಶ್ವರನಿಗೆ ದತ್ತಿ ನೀಡಿರುವ ವಿಷಯವನ್ನು ತಿಳಿಸುವ ಕೆಲವು ಶಾಸನಗಳು ಇಲ್ಲಿ ದೊರೆಯುತ್ತವೆ. ಮತಂಗಪರ್ವತದ ಮೇಲಿರುವ ವೀರಭದ್ರನ ದರ್ಶನವು ವಿಜಯನಗರ ಅರಸರ ಸಂರಕ್ಷಣದೇವತೆಯಾದ ಶ್ರೀ ವಿರೂಪಾಕ್ಷನ ದರ್ಶನ ಪಡೆದಷ್ಟೇ ಪುಣ್ಯಪ್ರದವಾದುದೆಂದು ಭಕ್ತರು ಭಾವಿಸಿದ್ದರು.

ಕೃಷ್ಣ ದೇವಾಲಯದ ದಕ್ಷಿಣಕ್ಕಿರುವ, ಉದ್ದಾನ ವೀರಭದ್ರನೆಂದೇ ಪ್ರಸಿದ್ಧನಾಗಿರುವ, ಮುಂದ್ದುವೀರಣ್ಣನ ಮೂರ್ತಿಯು ತುಂಬಾ ಭವ್ಯವಾಗಿದೆ. ವಿಜಯನಗರದ ಅರಸ ವೀರಪ್ರತಾಪ ಶ್ರೀ ಸದಾಶಿವರಾಯನ ಕಾಲದಲ್ಲಿ ಅವನ ದಳವಾಯಿ

* Vijayanagar - Progress of Research, 1983-84.

ಜಂಗಮಯ್ಯನು ಕ್ರಿ. ಶ. ೧೫೪೫ರಲ್ಲಿ ಈ ದೇವಾಲಯವನ್ನು ಕಟ್ಟಿಸಿದ ಮತ್ತು ಇದಕ್ಕೆ ಕೆಲವು ದತ್ತಿ ನೀಡಿರುವ ವಿಷಯ ಈ ದೇವಾಲಯದಲ್ಲಿ ದೊರೆಯುವ ಶಾಸನ ಗಳಿಂದ ತಿಳಿದುಬರುತ್ತದೆ.[2]

ಸ್ಥಲಪುರಾಣವಾದ ಪಂಪಾಮಹಾತ್ಮೆಯಲ್ಲಿ, ಪಂಪಾಕ್ಷೇತ್ರದ ನಿವಾಸಿಗಳು ಅಸುರರ ಉಪಟಳದಿಂದ ತಮ್ಮನ್ನು ರಕ್ಷಿಸಬೇಕೆಂದು ಶಿವನನ್ನು ಪ್ರಾರ್ಥಿಸಿದಾಗ ಶಿವನು ವೀರಭದ್ರ ಮತ್ತು ಭದ್ರಕಾಳಿಯರಿಗೆ ಅಸುರರನ್ನು ಶಿಕ್ಷಿಸಿ, ನಂತರ ಪಂಪಾ ಕ್ಷೇತ್ರದ ದಕ್ಷಿಣ ದಿಕ್ಕಿನಲ್ಲಿ ನೆಲೆಸಲು ಆಜ್ಞಾಪಿಸಿದನೆಂಬ ವೃತ್ತಾಂತವಿದೆ.

ಕೂರ್ಮಪುರಾಣದಲ್ಲಿಯ ವಿವರ ಹೀಗಿದೆ : ದಕ್ಷನು ಮಡದಿಯೊಂದಿಗೆ ಅಳಿಯ ನಾದ ಶಿವನಲ್ಲಿಗೆ ಹೋದಾಗ, ಶಿವನಿಂದ ತನಗೆ ಗೌರವ ಸಿಗಲಿಲ್ಲವೆಂಬ ಕಾರಣಕ್ಕಾಗಿ ಅಸಮಾಧಾನಗೊಳ್ಳುತ್ತಾನೆ. ದಕ್ಷನು ಇದಕ್ಕೆ ಪ್ರತೀಕಾರವಾಗಿ ಸತಿ (ಶಿವನ ಹೆಂಡತಿ, ದಕ್ಷನ ಮಗಳು) ತನ್ನ ಮನೆಗೆ ಬಂದಾಗ ಅವಳನ್ನು ಅವಮಾನಗೊಳಿಸುತ್ತಾನೆ. ಹೆತ್ತವ ರಿಂದಲೇ ತನಗೆ ಈ ರೀತಿ ಅವಮಾನವಾಗಲು ಸತಿ ಅಗ್ನಿಗೆ ಆಹುತಿಯಾಗಿ ಮರು ಜನ್ಮದಲ್ಲಿ ಹಿಮವಾನನ ಮಗಳಾಗಿ ಜನಿಸುತ್ತಾಳೆ. ಶಿವನ ಶಾಪದಿಂದಾಗಿ ದಕ್ಷನು ಕ್ಷತ್ರಿಯಕುಲದಲ್ಲಿ ಪ್ರಜೇತನೆಂದು ಜನಿಸುತ್ತಾನೆ. ಮುಂದೆ ಪ್ರಜೇತನು ಯಜ್ಞ ವನ್ನು ಮಾಡುವಾಗ ಶಿವನಿಗೆ ಸಲ್ಲತಕ್ಕ ಯಜ್ಞಾಹುತಿಯನ್ನು ನೀಡಲು ನಿರಾಕರಿಸು ತ್ತಾನೆ. ಇದರಿಂದ ಶಿವನ ಕೋಪಕ್ಕೆ ಗುರಿಯಾಗಬೇಕಾಗುತ್ತದೆಂಬ ದಧೀಚಿಋಷಿಯ ಎಚ್ಚರಿಕೆಗೆ ಪ್ರಜೇತನು ಕಿವಿಗೊಡುವುದಿಲ್ಲ. ಆಗ ಪಾರ್ವತಿ ಯಜ್ಞವನ್ನು ನಾಶ ಮಾಡೆಂದು ಶಿವನನ್ನು ಪ್ರಾರ್ಥಿಸಲು, ಅತುಲಪರಾಕ್ರಮಿಯಾದ ವೀರಭದ್ರನು ಜನಿ ಸುತ್ತಾನೆ. ಪಾರ್ವತಿಯೂ ತನ್ನ ಶಕ್ತಿಸ್ವರೂಪಿಣಿಯಾದ ಕಾಳಿಯನ್ನು ವೀರಭದ್ರ ನಿಗೆ ಯಜ್ಞಸಂಹಾರದ ಕಾರ್ಯದಲ್ಲಿ ಸಹಾಯಮಾಡಲು ಕಳಿಸುತ್ತಾಳೆ. ವೀರಭದ್ರನು ಯಜ್ಞವನ್ನು ಧ್ವಂಸಮಾಡಲು ದಕ್ಷನಿಗೆ ತನ್ನ ಅವಿವೇಕದ ಅರಿವಾಗಿ, ಶಿವನನ್ನು ಶರಣಾಗತ ಭಾವದಿಂದ ಪ್ರಾರ್ಥಿಸುತ್ತಾನೆ. ಶಿವನು ದಕ್ಷನನ್ನು ಕ್ಷಮಿಸಿ ಅವನಿಗೆ ಗಣನಾಯಕನ ಪದವಿಯನ್ನು ದಯಪಾಲಿಸುತ್ತಾನೆ.

ವರಾಹಪುರಾಣದ ಮೇರೆಗೆ—ಬ್ರಹ್ಮನ ಕೋಪದಿಂದ ರುದ್ರನ ಜನನವಾಗು ತ್ತದೆ. ಬ್ರಹ್ಮನು ದಕ್ಷ ಮತ್ತು ಇತರ ಆರು ಪ್ರಜಾಪತಿಯರನ್ನು ಸೃಷ್ಟಿಸುತ್ತಾನೆ. ಇಂದ್ರ ಮತ್ತು ದೇವತೆಗಳು ಸೇರಿ ದಕ್ಷನನ್ನು ಸಂಪ್ರೀತಗೊಳಿಸಲು ಒಂದು ಯಜ್ಞ ವನ್ನು ನೆರವೇರಿಸುತ್ತಾರೆಂಬ ವಿಷಯ ಈ ಪುರಾಣದಲ್ಲಿ ಬರುತ್ತದೆ. ಶಿವನಿಗೆ ಸಲ್ಲ ಬೇಕಾದ ಯಜ್ಞಾಹುತಿಯನ್ನು ನೀಡಲು ಇಂದ್ರಾದಿದೇವತೆಗಳಿಗೆ ಒತ್ತಾಯಿಸಿ ರುದ್ರನು ಈ ಯಜ್ಞವನ್ನು ನಾಶಮಾಡಿರುತ್ತಾನೆ. ಆಗ ದಕ್ಷನು ರುದ್ರನನ್ನು

ಪ್ರಾರ್ಥಿಸಿ ಆತನಿಗೆ ತನ್ನ ಮಗಳನ್ನು ಧಾರೆಯೆರೆಯುತ್ತಾನೆ. ಬ್ರಹ್ಮನು ಶಿವನಿಗೆ ಕೈಲಾಸದಲ್ಲಿ ಉನ್ನತ ಪದವಿಯನ್ನು ಕೊಡುತ್ತಾನೆ.

ಭಾಗವತಪುರಾಣದಲ್ಲಿ ಮೇಲಿನ ವಿವರಣೆಗಳಿಗಿಂತ ಭಿನ್ನವಾದ ವಿವರಣೆ ಬರುತ್ತದೆ. ದಕ್ಷನು ಋಷಿಗಳು ಮತ್ತು ದೇವತೆಗಳು ಸೇರಿ ಯಜ್ಞಮಾಡುವಲ್ಲಿಗೆ ಬಂದು ಶಿವನನ್ನು ನಿಂದಿಸುತ್ತಾನೆ. ನಂತರ ತಾನು ಬೃಹಸ್ಪತಿಸವ ಎಂಬ ಯಜ್ಞವನ್ನು ಮಾಡಲು ಸಿದ್ಧತೆ ಮಾಡುತ್ತಾನೆ. ದಕ್ಷನ ಈ ಯಜ್ಞಕ್ಕೆ ಸತಿ ಹೋಗಲು ಶಿವನು ಸಮ್ಮತಿಸುವುದಿಲ್ಲವಾದರೂ ಆಕೆ ಹಟಹಿಡಿದು ಅಲ್ಲಿಗೆ ಹೋಗುತ್ತಾಳೆ. ಹೀಗೆ ಬಂದ ಸತಿಯನ್ನು ದಕ್ಷನು ಅವಮಾನಗೊಳಿಸುತ್ತಾನೆ. ಅವಮಾನ ಸಹಿಸಿಕೊಳ್ಳದೆ ಆಕೆ ಆತ್ಮಹತ್ಯಮಾಡಿಕೊಳ್ಳುತ್ತಾಳೆ. ಇದನ್ನು ತಿಳಿದು ಶಿವ ಕೋಪತಪ್ತನಾಗಿ ಉಗ್ರರೂಪ ಧರಿಸಿ ಯಜ್ಞವನ್ನು ಧ್ವಂಸಮಾಡುತ್ತಾನೆ. ದಕ್ಷನು ಶಿವನಿಗೆ ಶರಣಾಗತನಾದಾಗ ಶಿವನು ದಕ್ಷನಿಗೆ ಗಣನಾಯಕನ ಪದವಿಯನ್ನು ದಯಪಾಲಿಸುತ್ತಾನೆ.

ಹಂಪೆಯಲ್ಲಿ ವೀರಭದ್ರ (ನವಮೂರ್ತಿಗಳ) ಪೂಜೆ ಹೆಚ್ಚು ಜನಪ್ರಿಯವಾಗಿದೆ. ಈ ಮೂರ್ತಿಗಳನ್ನು ಅಧ್ಯಯನದ ಅನುಕೂಲಕ್ಕಾಗಿ ಕೆಳಗಿನಂತೆ ವರ್ಗೀಕರಿಸಬಹುದಾಗಿದೆ:

ಅ. ಸಾಮಾನ್ಯ ಮಾದರಿಯ ಶಿಲ್ಪಗಳು
ಬ. ಭುಜದ ಮಟ್ಟದಲ್ಲಿ ಗುರಾಣಿ ಹಿಡಿದಿರುವ ಶಿಲ್ಪಗಳು
ಕ. ಚಲನೆಯಲ್ಲಿರುವ ಶಿಲ್ಪಗಳು
ಡ. ಮಂಡಿಯೂರಿ ಕುಳಿತಿರುವ ಶಿಲ್ಪಗಳು
ಇ. ಎರಡು ಕೈಗಳನ್ನು ಹೊಂದಿರುವ ಶಿಲ್ಪಗಳು
ಎಫ್. ಹಲವು ಕೈಗಳಿರುವ ಶಿಲ್ಪಗಳು
ಜಿ. ಗಾರೆಯಲ್ಲಿ ರೂಪಿಸಿರುವ ಶಿಲ್ಪಗಳು

ಅ. ಸಾಮಾನ್ಯ ಮಾದರಿಯ ಶಿಲ್ಪ : ಹಂಪೆಯ ಪ್ರದೇಶದಲ್ಲಿ ಇಂಥ ಮಾದರಿಯ ವೀರಭದ್ರನ ಮೂರ್ತಿಗಳ ಪೂಜೆ ಹೆಚ್ಚು ಜನಪ್ರಿಯ ಮತ್ತು ಪ್ರಚಲಿತವಾಗಿದ್ದು, ಅಧಿಕ ಸಂಖ್ಯೆಯಲ್ಲಿ ಲಭ್ಯವಾಗುತ್ತವೆ. ತ್ರಿಭಂಗಿ ನಿಲುವು, ನಾಲ್ಕು ಕೈಗಳಿರುವ ಈ ಮೂರ್ತಿಯ ಬಲಭಾಗದ ಮೇಲಿನ ಕೈಯಲ್ಲಿ ಬಾಣ, ಎಡಭಾಗದ ಮೇಲಿನ ಕೈಯಲ್ಲಿ ಬಿಲ್ಲು, ಬಲಭಾಗದ ಕೆಳಗಿನ ಕೈಯಲಿ ಖಡ್ಗ, ಎಡಭಾಗದ ಕೆಳಗಿನ ಕೈಯಲ್ಲಿ ಗುರಾಣಿ ಇದೆ. ತಲೆಯಲ್ಲಿ ಕಿರೀಟ ಹಾಗೂ ಹಣೆಯಲ್ಲಿ ಮೂರನೆಯ ಕಣ್ಣನ್ನು ಕೆತ್ತಲಾಗಿದೆ. ಈ ಮಾದರಿಯ ಮೂರ್ತಿಗಳಿಗೆ ಕಿವಿಯಲ್ಲಿ ಚಕ್ರ ಮತ್ತು

ರತ್ನ ಮಾದರಿಯ ಕರ್ಣಕುಂಡಲ, ಕಂಠಹಾರ, ಭುಜಕಿರೀಟ, ಕೈಕಡಗ ಮತ್ತು ಕಾಲಲ್ಲಿ ಪೆಂಡೆಗಳನ್ನು ಕೆತ್ತಲಾಗಿದೆ; ಕೊರಳಲ್ಲಿ ರುಂಡಮಾಲೆ, ಸೊಂಟಪಟ್ಟಿ ಇದೆ. ಯಜ್ಞೋಪವೀತವನ್ನು ಧರಿಸಿರುವ ಕೆಲವು ಮಾದರಿಗಳೂ ದೊರೆಯುತ್ತವೆ. ಅಂದವಾದ ನಿರಿಗೆಗಳಿರುವ ಟೊಂಕವಸ್ತ್ರವನ್ನು ತೊಡಿಸಲಾಗಿದ್ದು, ಇದು ಮೊಳಕಾಲಿನಿಂದ ಸ್ವಲ್ಪ ಮೇಲೆ ಇದೆ. ಟಗರಿನತಲೆ ಹೊಂದಿರುವ ದಕ್ಷನು ಸಮಭಂಗಿಯಲ್ಲಿ ಅಂಜಲಿ ಬದ್ಧನಾಗಿ ವೀರಭದ್ರನ ಬಲಭಾಗದಲ್ಲಿ ನಿಂತಿದ್ದಾನೆ. ಕೆಲವು ಮೂರ್ತಿಗಳಿಗೆ ಕೀರ್ತಿ ಮುಖವಿರುವ ಪ್ರಭಾವಳಿ ಉಂಟು. ವೀರಭದ್ರನ ಈ ಮೂರ್ತಿಗಳಲ್ಲಿ ಕೆಲವು ಪೂರ್ಣ ಮೂರ್ತಿಶಿಲ್ಪಗಳಾಗಿದ್ದರೆ, (Sculptural in round) ಇನ್ನು ಕೆಲವು ಉಬ್ಬುಕೆತ್ತನೆಯ (Sculptural in relief) ಮಾದರಿಗಳಿವೆ.

i. **ಬಂಡೆಗಲ್ಲುಗಳ ಮೇಲೆ ಕೆತ್ತಿರುವ ವಿಗ್ರಹಗಳು** : ಹಂಪೆಯ ಕೃಷ್ಣದೇವಾಲಯಕ್ಕೆ ಹೋಗುವ ಮೂಲಬೀದಿಯ ಎಡಬದಿಗೆ ಬಂಡೆಗಲ್ಲೊಂದರ ಮೇಲೆ ಈ ಮಾದರಿಯ ವಿಗ್ರಹವನ್ನು ಕೆತ್ತಲಾಗಿದೆ. ಇಲ್ಲಿ ವೀರಭದ್ರನೊಂದಿಗೆ ಒಬ್ಬ ಭಕ್ತ, ನಂದಿ, ಈಶ್ವರಲಿಂಗ ಮತ್ತು ದೇವಿಯ ವಿಗ್ರಹಗಳನ್ನು ಕೆತ್ತಲಾಗಿದೆ. ಈ ಶಿಲ್ಪದ ಅಡಿಯಲ್ಲಿ 'ತಿರುಪತಿ ಬೇಹಾರಿಗಂಧಂ ಬಸವಯ್ಯ'ನೆಂಬ ರಕ್ಷನೊಬ್ಬನ ಹೆಸರನ್ನು ಉಲ್ಲೇಖಿಸಿದ ಶಾಸನವಿದೆ (Pl. Lxb-c). ವಿಠ್ಠಲದೇವಾಲಯದ ಬೀದಿಯಲ್ಲಿ, ನದಿಯ ದಂಡೆಯಲ್ಲಿ ಎರಡಂತಸ್ತಿನ ಮಂಟಪವೊಂದರ ಸಮೀಪ, ಬಂಡೆಗಲ್ಲಿನ ಮೇಲೆ ವೀರಭದ್ರನ ಶಿಲ್ಪವಿದೆ (Pl. Lxxiva). ಭೀಮದ್ವಾರದ ಉತ್ತರಕ್ಕೆ ಬೆಟ್ಟದ ಮೇಲೆ ವೀರಭದ್ರನಿಗೆಂದೇ ಮೀಸಲಾದ ದೇವಾಲಯ ಒಂದಿದ್ದು, ಇಲ್ಲಿ ಒಬ್ಬ ಭಕ್ತ ಸಹಧರ್ಮಿಣಿಯೊಂದಿಗೆ ವೀರಭದ್ರನ ಎಡಭಾಗದಲ್ಲಿ ನಿಂತಿರುವುದನ್ನು ಕೆತ್ತಲಾಗಿದೆ. ರಾಜ್ಯಾಧಿಕಾರಿಗಳ ಅರಮನೆಯ ಪ್ರದೇಶದಲ್ಲಿ ವೀರಭದ್ರನ ದೇವಾಲಯವಿದ್ದು ಈತನಿಗೆ ಕೈಯಲ್ಲಿ ಬಾಗಿದ ಖಡ್ಗವಿದೆ.[3] ಇದೇ ದೇವಾಲಯದ ಉತ್ತರಕ್ಕೆ ಬಂಡೆಗಲ್ಲಿನ ಮೇಲೆ ಅಪೂರ್ಣವಾಗಿ ಕೆತ್ತಲಾಗಿರುವ ವೀರಭದ್ರನ ಇನ್ನೊಂದು ವಿಗ್ರಹವುಂಟು (Pl. LXXIV b). ಕೋಟಿಲಿಂಗದ ಸಮೀಪ ದೊಡ್ಡಬಂಡೆಗಲ್ಲಿನ ಆಶ್ರಯದಲ್ಲಿಯೂ ಬಂಡೆಗಲ್ಲಿನ ಮೇಲೆ ಹೇಳಿರುವಂಥ ಮಾದರಿಯ ವೀರಭದ್ರನ ಶಿಲ್ಪವನ್ನು ಕೆತ್ತಲಾಗಿದೆ.

ii. **ಉಬ್ಬು ಚಿತ್ರ ಮಾದರಿಯ ಶಿಲ್ಪ** (Sculptures in relief) : ಹೇಮಕೂಟದ ಪೂರ್ವದ್ವಾರದ ಕಟ್ಟಡದ ಒಂದು ಕಲ್ಲಿನಲ್ಲಿ ವೀರಭದ್ರನ ಇಂಥ ಕೆತ್ತನೆಯು ಇದೆ. ವಸ್ತುಸಂಗ್ರಹಾಲಯದ ಮೇಲ್ಛಾವಣಿಯಲ್ಲಿ ಇಂಥ ಇನ್ನೊಂದು ವಿಗ್ರಹವುಂಟು (LXXV a). 'ಹಂಪೆಯ ದಿಡ್ಡಿ' ಎಂದು ಕರೆಯಲಾಗುತ್ತಿರುವ ಹೆಬ್ಬಾಗಿಲಿನ ಪೂರ್ವದಲ್ಲಿರುವ ದೇವಾಲಯದಲ್ಲಿ ಇಂಥ ಒಂದು ಮೂರ್ತಿಯಿದೆ. ಈ

ಮಾದರಿಯ ವೀರಭದ್ರನು ಕೈಯಲ್ಲಿ ಗುರಾಣಿಯನ್ನು ಅದರ ಸುತ್ತಂಚಿನ ಒಂದು ಪಾರ್ಶ್ವ ಕಾಣುವಂತೆ ಹಿಡಿದಿದ್ದಾನೆ. ಇಂಥದೇ ಮೂರ್ತಿ 'ಪೆನುಗೊಂಡ ಬಾಗಿಲಿನ' ಪೂರ್ವಕ್ಕಿರುವ ದೇವಾಲಯದಲ್ಲಿದೆ. ಇದೇ ಮಾದರಿಯ ಇನ್ನೆರಡು ಮೂರ್ತಿಗಳು ಮಾತಂಗಪರ್ವತದ ಮೇಲಿದ್ದು, ಇವುಗಳಲ್ಲಿ ಒಂದಕ್ಕೆ ಕೀರ್ತಿಮುಖವನ್ನುಳ್ಳ ಪ್ರಭಾವಳಿ ಇದೆ. ಅಚ್ಯುತರಾಯ ದೇವಸ್ಥಾನದ ಹಿಂಬದಿಯ ಮಂಟಪದ ಮುಂಭಾಗದ ಕಂಬದ ಮೇಲೆ ಸಮಭಂಗಿ ನಿಲುವಿನಲ್ಲಿರುವ ವೀರಭದ್ರನ ಶಿಲ್ಪವನ್ನು ಕೆತ್ತಲಾಗಿದೆ.

iii. **ಮೂರ್ತಿ ಶಿಲ್ಪಗಳು** (Sculptures in round) : ಈ ಮಾದರಿಯ ಆರು ಮೂರ್ತಿಗಳಿದ್ದು, ಎರಡು ವಸ್ತುಸಂಗ್ರಹಾಲಯದಲ್ಲಿವೆ. ಈ ಎರಡೂ ಮೂರ್ತಿಗಳು ಸಾಮಾನ್ಯ ಮಾದರಿ ವರ್ಗಕ್ಕೆ ಸೇರಿದವುಗಳು (Pl. LXXV b). ವೀರಭದ್ರನ ಒಂದು ಮೂರ್ತಿಗೆ ಕಾಲಲ್ಲಿ ಆವುಗೆಗಳಿವೆ. ಕೈಯಲ್ಲಿ ಅಲಂಕಾರಿಕ ಕೆತ್ತನೆಯುಳ್ಳ ಗುರಾಣಿ ಇದ್ದು ಇದರ ಸುತ್ತಂಚಿನ ಒಂದು ಪಾರ್ಶ್ವ ಕಾಣುವಂತೆ ಕೆತ್ತಲಾಗಿದೆ. ಪ್ರಮಾಣಬದ್ಧವಾಗಿ ಕೆತ್ತಲಾದ ಈ ಮೂರ್ತಿಯು ವಿವರವಾದ ಅಲಂಕಾರಿಕ ಕೆತ್ತನೆಗಳಿಂದ ಕೂಡಿದೆ. ಆದರೆ ಇದರ ಮೂರು ಕೈಗಳು ಮತ್ತು ರುಂಡ ಮುರಿದಿದೆ. (Pl. LXXVI a) ವೀರಭದ್ರನ ಬೇರೊಂದು ವಿಗ್ರಹದಲ್ಲಿ ಮುಖದಲ್ಲಿ ಮೀಸೆ ಹಾಗೂ ಮಣಿಗಳಿಂದ ಮಾಡಿದ ಯಜ್ಞೋಪವೀತವಿದೆ. ಈತನು ಕೈಯಲ್ಲಿ ಖಡ್ಗ ಮತ್ತು ಕೈಯಲ್ಲಿ ಅದರ ಸುತ್ತಂಚಿನ ಒಂದು ಪಾರ್ಶ್ವ ಕಾಣುವ ಹಾಗೆ ಗುರಾಣಿಯನ್ನು ಹಿಡಿದಿದ್ದಾನೆ (LXXVI b).

ಇನ್ನೊಂದು ಕೆತ್ತನೆಯಲ್ಲಿ (Pl. LXXVII a) ದಕ್ಷನು ವೀರಭದ್ರನನ್ನು ಮೇಲ್ಮುಖವಾಗಿ ದಿಟ್ಟಿಸುತ್ತಿದ್ದಾನೆ. ವೀರಭದ್ರನಿಗೆ ಮೀಸೆ ಮತ್ತು ಕೋರೆಯ ಹಲ್ಲುಗಳಿವೆ. ವಿರೂಪಾಕ್ಷ ಗೋಪುರದ ಪ್ರವೇಶಸ್ಥಾನದಲ್ಲಿ ಇದೇ ಮಾದರಿಯ ಇನ್ನೊಂದು ಮೂರ್ತಿಯಿದೆ. ಇದನ್ನು ಅಚ್ಚ ವಿಜಯನಗರ ಶೈಲಿಯಲ್ಲಿ ಕೆತ್ತಲಾಗಿದೆ. ಕಪ್ಪುಮಿಶ್ರಿತ ನೀಲಛಾಯೆಯ ಬಳಪದ ಕಲ್ಲಿನಲ್ಲಿ ಕೆತ್ತಲಾದ ಈ ವೀರಭದ್ರನಿಗೆ ಕೋರೆಹಲ್ಲು ಹಾಗೂ ಕೈಯಲ್ಲಿ ಬಾಗಿದ ಖಡ್ಗವಿದೆ. ಇಲ್ಲಿ ದಕ್ಷನಿಗೆ ಆಡಿನ ತಲೆ ಇದೆ. ಪ್ರಭಾವಳಿಯ ಚೌಕಟ್ಟಿನೊಳಗೆ ಇದನ್ನು ಕೆತ್ತಲಾಗಿದೆ. ಮೇಲಿನ ಎಡಗೈ ಮುರಿದಿದೆ. ಉಬ್ಬಿ ಹೊರಚಾಚಿಕೊಂಡಂತಿರುವ ನಿರಿಗೆಯಿಂದ ಕೂಡಿದ ವಸ್ತ್ರಾಲಂಕಾರವನ್ನು ಸ್ಪಷ್ಟವಾಗಿ ಕೆತ್ತಲಾಗಿದೆ (Pl. LXXVII b). ಸಾಮಾನ್ಯ ಮಾದರಿಯ ವೀರಭದ್ರನ ಮೂರ್ತಿಯೊಂದು ಕಮಲಾಪೂರದಲ್ಲಿ, ಪಾವರ ಕೆನಾಲ್ ಸಮೀಪದ ಎಚ್. ಪಿ. ಸಿ. ರಸ್ತೆಯ ಬದಿಗೆ, ಮರದಡಿಯಲ್ಲಿದೆ; ಇದನ್ನು ಕಪ್ಪುಮಿಶ್ರಿತ ನೀಲಛಾಯೆಯ ಬಳಪದ ಕಲ್ಲಿನಲ್ಲಿ ಕೆತ್ತಲಾಗಿದೆ.

'ಸೋಮವಾರ ಬಾಗಿಲು' ಬಳಿಯಿರುವ ದೇವಾಲಯದಲ್ಲಿ ಅವಯವಗಳನ್ನು ಕೆತ್ತರಿಸಲಾದ ವೀರಭದ್ರನ ವಿಗ್ರಹವೊಂದು ದೊರೆತಿದೆ (Pl. LXXVII a). ಇದು ಬಹಳ ಸುಂದರವಾದ ಮೂರ್ತಿಯಾಗಿದ್ದು ಸೊಂಟಕ್ಕೆ ರುಂಡಮಾಲೆ ಮತ್ತು ಕೀರ್ತಿಮುಖವನ್ನು ತೊಡಿಸಲಾಗಿದೆ. ಈ ವೀರಭದ್ರನಿಗೆ ಕಾಲಲ್ಲಿ ಆವುಗೆ ಮತ್ತು ಕೈಯಲ್ಲಿ ಸುತ್ತಂಚಿನ ಒಂದು ಪಾರ್ಶ್ವ ಕಾಣುವ ಹಾಗೆ ಹಿಡಿದಿರುವ ಗುರಾಣಿಯಿದೆ. ಈ ವಿಗ್ರಹದ ತಲೆ ಮತ್ತು ಎಡಗೈಗಳು ಮುರಿದಿವೆ. ನಾಗೇಶ್ವರ ದೇವಾಲಯದ ಪೂರ್ವಕ್ಕೆ ಮಂಟಪಾಕಾರದ ಸ್ಥಳದಲ್ಲಿ ವೀರಭದ್ರನ ಒಂದು ಮೂರ್ತಿ ಇದೆ. ಇಲ್ಲಿ ಮೀಸೆ ಮತ್ತು ಇತರ ವಿವರಗಳನ್ನು ಚೆನ್ನಾಗಿ ಕೆತ್ತಲಾಗಿದೆ. ಜಡೆಗಳು ಭುಜಗಳ ಮೇಲೆ ಹರಡಿವೆ.

ಬ. **ಭುಜದ ಮಟ್ಟದಲ್ಲಿ ಗುರಾಣಿಯನ್ನು ಹಿಡಿದಿರುವ ವೀರಭದ್ರ ಶಿಲ್ಪ** : ವೀರಭದ್ರನ ಇಂಥ ಮಾದರಿಯ ಒಂದೇ ಒಂದು ಮೂರ್ತಿಯು ಲಭ್ಯವಿದ್ದು ಇದನ್ನು ಜನಾನಾದ ಉತ್ತರ-ಪೂರ್ವ (ಈಶಾನ್ಯ) ದಿಕ್ಕಿನಲ್ಲಿರುವ ಬೆಟ್ಟದ ಮೇಲಿರುವ ಸ್ವಾಭಾವಿಕ ಜಲಾಶಯಕ್ಕೆ ದಕ್ಷಿಣಾಭಿಮುಖವಾಗಿರುವ ಬಂಡೆಗಲ್ಲಿನ ಮೇಲೆ ಕೆತ್ತಲಾಗಿದೆ. ಈ ಮಾದರಿಯ ವೀರಭದ್ರನ ವಿಗ್ರಹ (Pl. LXXVIII b) ಸಮಭಂಗಿ ನಿಲುವಿನಲ್ಲಿದ್ದು, ವೀರಭದ್ರನಿಗೆ ಸಹಜವಾದ ಎಲ್ಲ ವಿಶೇಷತೆಗಳೊಂದಿಗೆ ಅಲಂಕೃತವಾಗಿರುವುದು ಕಾಣುತ್ತದೆ. ಕೈಯಲ್ಲಿ ಭುಜದ ಮಟ್ಟದಲ್ಲಿ ಹಿಡಿಯುವ ಗುರಾಣಿ ಇದೆ. ಇನ್ನೊಂದು ಮಾದರಿಯಲ್ಲಿ ಗುರಾಣಿಯನ್ನು ನೆಲದ ಮೇಲೆ ಇಡಲಾಗಿದೆ. ಇಲ್ಲಿ ವೀರಭದ್ರ ಕಾಲಲ್ಲಿ ಆವುಗೆ ಧರಿಸಿದ್ದಾನೆ.

ಇ. **ಚಲನೆಯಲ್ಲಿರುವ ವೀರಭದ್ರ** : ಈ ಮಾದರಿಯಲ್ಲಿ ಕೈಗಳನ್ನು ಮುಂದಕ್ಕೆ ಚಾಚಿರುವಂತೆ ಕೆತ್ತುವುದರ ಮೂಲಕ ವೀರಭದ್ರ ತನ್ನ ಎಡಕ್ಕೆ ಚಲಿಸುತ್ತಿರವುದನ್ನು ಸೂಚಿಸಲಾಗಿದೆ. ಈತನಿಗೆ ಉಳಿದೆಲ್ಲ ಸಹಜವಾದ ಅಲಂಕಾರವುಂಟು. ಜನಾನಾದ ಉತ್ತರ-ಪೂರ್ವ (ಈಶಾನ್ಯ) ದಿಕ್ಕಿಗಿರುವ ಬೆಟ್ಟದ ಮೇಲಿನ ಮಂಟಪಾಕಾರದ ಸ್ಥಳದಲ್ಲಿರುವ ಒಂದು ಶಿಲ್ಪದಲ್ಲಿ[4] ದಕ್ಷನಿಗೆ ಆಡಿನ ತಲೆಯನ್ನು ಜೋಡಿಸಲಾಗಿದೆ. ಇಲ್ಲಿ ವೀರಭದ್ರನ ಸ್ವರೂಪ ವಿನ್ಯಾಸವನ್ನು ತುಂಬಾ ಅಚ್ಚುಕಟ್ಟಾಗಿ ಕೆತ್ತಲಾಗಿದೆ. ಮಾತಂಗ ಪರ್ವತದ ದಕ್ಷಿಣಕ್ಕಿರುವ ಬೆಟ್ಟದ ಮೇಲೆ ಒಂದು ಮಂಟಪಾಕಾರದಲ್ಲಿ ಬತ್ತಳಿಕೆಯಿಂದ ಬಾಣವನ್ನು ಹೊರಗೆ ಎಳೆದು ತೆಗೆಯುತ್ತಿರುವ ಭಂಗಿಯ ವೀರಭದ್ರನ ವಿಗ್ರಹವಿದೆ (Pl. LXXIXC). ಇಂಥದೇ ಇನ್ನೊಂದು ಮೂರ್ತಿ ಮಾಲ್ಯವಂತ ರಘುನಾಥ ದೇವಾಲಯದ ದಕ್ಷಿಣಕ್ಕಿರುವ ಬೆಟ್ಟದ ಮೇಲಿನ ಒಂದು ಮಂಟಪಾಕಾರದಲ್ಲಿದೆ (Pl. LXXIX b). ಇದು ಅತ್ಯುತ್ತಮವಾಗಿ ಕೆತ್ತಲಾದ ವೀರಭದ್ರ ವಿಗ್ರಹದ ಒಂದು ಮಾದರಿಯೆನ್ನಬಹುದು.

ಉ. ಮಂಡಿಯೂರಿ ಕುಳಿತಿರುವ ವೀರಭದ್ರ ಶಿಲ್ಪ : ಮಾತಂಗಪರ್ವತದ ಪೂರ್ವಕ್ಕೆ, ಪೂರ್ವಾಭಿಮುಖವಾದ ಒಂದು ಮಂಟಪಾಕಾರದ ಸ್ಥಳದಲ್ಲಿ ವೀರಭದ್ರನ ಇಂಥ ಮೂರ್ತಿಯಿದೆ (Pl. LXXIX a). ಈ ವೀರಭದ್ರನನ್ನು ಸಹಜವಲ್ಲದ ಮತ್ತು ಉಳಿದವುಗಳಿಂದ ಬೇರೆ ರೀತಿಯ ಭಂಗಿಯಲ್ಲಿ ಕೆತ್ತಲಾಗಿದೆ. ಈತನು ತನಗೆ ಸಹಜ ವಾದ ಎಲ್ಲ ವಿಶೇಷತೆಗಳನ್ನು ಹೊಂದಿದ್ದರೂ ಕೂಡ ಎಡಬದಿಗೆ ಹೊರಳಿದಂತೆ ಎಡ ಗಾಲಿನ ಮೊಣಕಾಲೂರಿ, ಬಲಪಾದವನ್ನು ನೆಲದ ಮೇಲಿಟ್ಟು 'ವೀರಾಸನ'ದ ಭಂಗಿಯಲ್ಲಿದ್ದಾನೆ. ಗುರಾಣಿಯನ್ನು ಸೊಂಟದ ಮಟ್ಟದಲ್ಲಿ ಹಿಡಿದಿದ್ದಾನೆ. ಇಲ್ಲಿ ಸೊಂಟಪಟ್ಟಿ, ಕಂಠಹಾರ ಹಾಗೂ ಉಳಿದೆಲ್ಲ ಆಭರಣಗಳನ್ನು ಸ್ಫುಟವಾಗಿ ಕಾಣುವ ಹಾಗೆ ಕೆತ್ತಲಾಗಿದೆ.

ಊ. ಎರಡು ಕೈಗಳಿರುವ ವೀರಭದ್ರ : ಈ ಮಾದರಿಯಲ್ಲಿ ವೀರಭದ್ರನಿಗೆ ಎರಡು ಕೈಗಳಿದ್ದು, ಬಲಗೈಯಲ್ಲಿ ಖಡ್ಗ ಮತ್ತು ಎಡಗೈಯಲ್ಲಿ ಗುರಾಣಿ ಇರುವುದನ್ನು ಕೆತ್ತಲಾಗಿದೆ. ಈತನಿಗೆ ಕಿರೀಟವಿಲ್ಲ. ಇದೇ ಮಾದರಿಯ ಇನ್ನೊಂದು ಮೂರ್ತಿಯು ಕಮಲಾಪೂರದ ವಸ್ತುಸಂಗ್ರಹಾಲಯದಲ್ಲಿದ್ದು, ಇದನ್ನು ಕಪ್ಪು ಮಿಶ್ರಿತ ನೀಲಛಾಯೆಯ ಬಳಪದ ಕಲ್ಲಿನಲ್ಲಿ ಕೆತ್ತಲಾಗಿದೆ (Pl. LXXX a).

ವಸ್ತುಸಂಗ್ರಹಾಲಯದಲ್ಲಿ ವೀರಭದ್ರನ ಇನ್ನೊಂದು ಮೂರ್ತಿ ಇದೆ. ವ್ಯತ್ಯಾಸವೆಂದರೆ ಈತನು ಗುರಾಣಿಯನ್ನು ಸೊಂಟದ ಮಟ್ಟದಲ್ಲಿ ಹಿಡಿದಿದ್ದಾನೆ. ತಲೆಯ ಮೇಲಿರುವ ಚಂಡಿಕೆ ಭುಜದ ಮೇಲೆ ಬಿದ್ದಿದೆ. ಕಾಲಲ್ಲಿ ದಪ್ಪನೆಯ ಆವುಗೆ ಗಳನ್ನು ಧರಿಸಿದ್ದಾನೆ (Pl LXXX b).

ವಸ್ತುಸಂಗ್ರಹಾಲಯದಲ್ಲಿರುವ ವೀರಭದ್ರನ ಇನ್ನೊಂದು ಮೂರ್ತಿ ಮೇಲೆ ವಿವರಿಸಿದಂತೆ ಎಲ್ಲ ಲಕ್ಷಣಗಳನ್ನು ಹೊಂದಿದೆ. ಆದರೆ ಇಲ್ಲಿ ಹಿತಮಿತವಾದ ಆಭ ರಣಗಳ ಅಲಂಕಾರವಿದೆ. ಮೂರ್ತಿಯ ಸುತ್ತ ಮೇಲೆ ಜೋಡಿಸಿದ ಕೀರ್ತಿಮುಖ ವುಳ್ಳ ಪ್ರಭಾವಳಿ ಇದೆ. ಇದೇ ಲಕ್ಷಣಗಳಿರುವ ಇನ್ನೊಂದು ಮೂರ್ತಿಯು ವಸ್ತು ಸಂಗ್ರಹಾಲಯದಲ್ಲಿದೆ. ಆದರೆ ಗುರಾಣಿಯನ್ನು ಭುಜದ ಮಟ್ಟದಲ್ಲಿ ಹಿಡಿಯ ಲಾಗಿದೆ.

ಮಾತಂಗಪರ್ವತದ ದಕ್ಷಿಣಕ್ಕೆ ದಕ್ಷಿಣಾಭಿಮುಖವಾಗಿರುವ ಬಂಡೆಗಲ್ಲಿನ ಒಂದು ಭಾಗದಲ್ಲಿ ವೀರಭದ್ರನ ಮೂರ್ತಿಯನ್ನು ಕೆತ್ತಲಾಗಿದೆ. ಈತನ ಎಡಗಾಲು ಮತ್ತು ಎಡಗೈಯನ್ನು ಮುಂದಕ್ಕೆ ಚಾಚಿದಂತೆ ಕೆತ್ತಿ ಈತನು ಚಲಿಸುತ್ತಿದ್ದಾನೆಂಬುದನ್ನು ಸೂಚಿಸಲಾಗಿದೆ.

ಕ. ಹಲವು ಕೈಗಳಿರುವ ವೀರಭದ್ರ : ಇದು ವೀರಭದ್ರನ ಅಪೂರ್ವವಾದ ಮೂರ್ತಿಗಳಲ್ಲೊಂದು (Pl. LXXX c). ಈತನು ಕೈಯಲ್ಲಿ ಬಾಣ, ಅಂಕುಶ, ತ್ರಿಶೂಲ, ಡಮರು, ಖಡ್ಗ, ಕಿರುಗತ್ತಿ, ಪಾಶ, ಖೇಟಕ ಮತ್ತು ಬಿಲ್ಲನ್ನು ಹಿಡಿದಿದ್ದಾನೆ. ತಲೆಯಲ್ಲಿ ಕಿರೀಟವಿದ್ದು ಅದರ (ಹಣೆಯ ಭಾಗದ ಕಿರೀಟದ ಮಧ್ಯದಲ್ಲಿ) ಲಿಂಗವಿದೆ. ವೀರಭದ್ರನ ಎಡಭಾಗದಲ್ಲಿ ದಕ್ಷನು ಅಂಜಲಿಬದ್ಧನಾಗಿ ಸಮಭಂಗಿ ನಿಲುವಿನಲ್ಲಿ ನಿಂತಿದ್ದಾನೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ದಕ್ಷನನ್ನು ಸಾಮಾನ್ಯವಾಗಿ ವೀರಭದ್ರನ ಬಲಬದಿಗೆ ಕೆತ್ತಿರಲಾಗುತ್ತದೆ.

ಗ. ಗಾರೆಯಲ್ಲಿ ನಿರ್ಮಿಸಿದ ವೀರಭದ್ರ ಶಿಲ್ಪ : ವೀರಭದ್ರನ ಇಂಥ ಎರಡು ಶಿಲ್ಪಗಳಿವೆ. ಒಂದು ವಿರೂಪಾಕ್ಷ ಗೋಪುರ(ಮುಖ್ಯ ಗೋಪುರ)ದಲ್ಲಿ ದಕ್ಷಿಣಾಭಿಮುಖವಾಗಿರುವ ಮೂರನೆಯ ಮಾಹಡಿಯಲ್ಲಿದೆ. ಇಲ್ಲಿ ವೀರಭದ್ರನಿಗೆ ಸಹಜವಾದ ಎಲ್ಲ ವಿಶೇಷತೆಗಳು ಕೆತ್ತಲ್ಪಟ್ಟಿವೆ. ಇನ್ನೊಂದು ಮೂರ್ತಿಯು ಮಾತಂಗಪರ್ವತದ ದಕ್ಷಿಣ ಭಾಗಕ್ಕಿರುವ ಮಂಟಪದ ಗೋಪುರದ ಮೇಲಿದೆ. ಈ ಮೂರ್ತಿಯು ಗೂಡಿನೊಳಗಿದ್ದು ಎರಡೂ ಬದಿಗಳಲ್ಲಿ ಭಕ್ತರು ಅಂಜಲಿಬದ್ಧರಾಗಿ ನಿಂತಿದ್ದಾರೆ.

ವಿಜಯನಗರದ ಕಾಲಾವಧಿಯಲ್ಲಿ ವಿವಿಧ ವಸ್ತುಗಳಿಂದ ನಿರ್ಮಿಸಲಾಗಿರುವ ವಿವಿಧ ಮಾದರಿಯ ವೀರಭದ್ರನ ಶಿಲ್ಪಗಳು ಲಭ್ಯವಾಗುತ್ತವೆ. ಕೆಲವನ್ನು ಬಂಡೆಗಲ್ಲುಗಳ ಮೇಲೆ ಕೆತ್ತಲಾಗಿದ್ದರೆ, ಇನ್ನು ಕೆಲವು ಶಿಲ್ಪಗಳನ್ನು ಸಾಮಾನ್ಯವಾದ ಮಂಟಪ ಅಥವಾ ಕಮಾನುಗಳಲ್ಲಿ ಸ್ಥಾಪಿಸಲಾಗಿದೆ. ಇನ್ನು ಕೆಲವು ವಿಗ್ರಹಗಳು ಪ್ರಮುಖ ದೇವತೆಯಾಗಿ ಪೂಜೆಗೊಳ್ಳುತ್ತವೆ. ಹಾಗೆಯೇ ಕಟ್ಟಡಗಳ ಮುಖ ಮಂಟಪದ ಮೇಲೆ ಅಥವಾ ಕಂಭಗಳ ಮೇಲೂ ಕೆತ್ತಲಾಗಿದೆ. ಹಂಪೆಯ ಬೇರೆ ಬೇರೆ ಭಾಗಗಳಲ್ಲೂ ವೀರಭದ್ರನ ಮೂರ್ತಿಗಳು ದೊರೆಯುತ್ತಿವೆ. ಇದಿಷ್ಟು ವಿವರಣೆ ವಿಜಯನಗರದ ಅರಸರ ಕಾಲಕ್ಕೆ ವೀರಭದ್ರನು ಒಬ್ಬ ಪ್ರಸಿದ್ಧ ದೇವತೆಯಾಗಿದ್ದನೆಂಬುದನ್ನು ತಿಳಿಯಪಡಿಸುತ್ತದೆ.

* * * * * *

ಅನುವಾದಕರ ಟಿಪ್ಪಣಿ :

ಪುರಾಣಗಳಲ್ಲಿ ಬರುವ ವೀರಭದ್ರನ ಅವತಾರದ ಕಥೆ ತುಂಬಾ ಕುತೂಹಲಕಾರಿಯಾಗಿದೆ. ಭರತಖಂಡದ ಎರಡು ಪ್ರಬಲ ಸಂಸ್ಕೃತಿಗಳಾದ— ಆರ್ಯ, ದ್ರಾವಿಡ ಸಂಸ್ಕೃತಿಗಳ ಸಮ್ಮಿಳನಪೂರ್ವದ ಸಂಘರ್ಷದ ಸಂದರ್ಭದಲ್ಲಿ ವೀರಭದ್ರನ ಕಲ್ಪನೆ ಜನ್ಮತಾಳಿದೆ. ದಕ್ಷನು ಅಳಿಯನಾದ ಶಿವನನ್ನು ನಿಂದಿಸುವುದು, ದಾಕ್ಷಾಯಿಣಿ ಯಜ್ಞಕುಂಡದಲ್ಲಿ ಹಾರಿ ಸಾವನ್ನಪ್ಪುವುದು, ಶಿವನ ಉಗ್ರಕೋಪದಿಂದ ವೀರಭದ್ರನು ಜನಿಸಿ ದಕ್ಷಯಜ್ಞವನ್ನು ನಾಶಮಾಡಿ, ದಕ್ಷನ ಶಿರಚ್ಛೇದನಮಾಡಿ ಕುರಿತಲೆ

ಯನ್ನು ಹಚ್ಚುವುದು—ಇತ್ಯಾದಿ ವಿವರಗಳು ಕೂರ್ಮ, ವರಾಹ, ಭಾಗವತ-ಪುರಾಣ ಗಳಲ್ಲಿ ಕೆಲವು ವ್ಯತ್ಯಾಸಗಳೊಂದಿಗೆ ಬರುತ್ತವೆ. ಈ ಪೌರಾಣಿಕ ವಿವರಗಳಿಂದ ವೀರಭದ್ರ ಒಬ್ಬ ಯಜ್ಞವಿರೋಧಿ ಮತ್ತು ವೈದಿಕವಿಚಾರ ವಿರೋಧಿಯಾದ ಉಗ್ರ ದೇವತೆಯೆಂಬ ನಂಬಿಕೆ ಪ್ರಚಲಿತವಾಗಲು ಕಾರಣವಾಯಿತು. ಇಲ್ಲಿ ವಿಶೇಷವಾಗಿ ಗಮನಿಸಬೇಕಾದ ಸಂಗತಿಯೆಂದರೆ ದ್ರಾವಿಡ ಸಂಸ್ಕೃತಿಯ ಪ್ರಮುಖ ದೇವತೆ ಶಿವ ಮತ್ತು ಆರ್ಯಸಂಸ್ಕೃತಿಯ ಪ್ರತೀಕವಾದ ಯಜ್ಞಗಳ ಸಂಬಂಧ.

ಯಜ್ಞ ಪ್ರಾಬಲ್ಯದ ವೇದಕಾಲದಲ್ಲಿ ಇಂದ್ರ, ವರುಣ, ಅಗ್ನಿ-ಮೊದಲಾದವರೇ ಪ್ರಮುಖ ಯಜ್ಞದೇವತೆಗಳೆನಿಸಿದ್ದರು; ವಿಷ್ಣು ಕೂಡಾ ಆಗ ಒಬ್ಬ ಉಪ ಇಂದ್ರ ಮಾತ್ರ. ವೇದಗಳಲ್ಲಿ ಶಿವನ ಉಲ್ಲೇಖ ಬರುವುದಿಲ್ಲ; ರುದ್ರನ ಉಲ್ಲೇಖ ಬರುತ್ತದೆ. ಈ ರುದ್ರನೇ ನಂತರ 'ಶಿವ'ನೆಂದು ಪರಿಗಣಿತನಾಗಿದ್ದಾನೆ. ಹೀಗೆ ವೈದಿಕ (ಯಜ್ಞ) ದೇವತೆಗಳ ಶ್ರೇಣಿಯಲ್ಲಿ ತಡವಾಗಿ ಸ್ಥಾನಪಡೆದುಕೊಂಡ ಶಿವನಿಗೆ ಯಜ್ಞಪ್ರಾಬಲ್ಯದ ಆ ಕಾಲದಲ್ಲಿ ಇಂದ್ರಾದಿ ದೇವತೆಗಳಂತೆ ಸರ್ವಮಾನ್ಯ ಯಜ್ಞದೇವತೆಯ ಸ್ಥಾನ ದೊರೆಯಲಿಲ್ಲ. ಈ ಕಾರಣದಿಂದಾಗಿ ಕೆಲವರು ಯಜ್ಞಮಾಡುವಾಗ ಶಿವನ ಹೆಸರಿ ನಿಂದ ಯಜ್ಞಕ್ಕೆ ಹವಿರ್ಭಾಗವನ್ನು ಅರ್ಪಿಸುತ್ತಿರಲಿಲ್ಲ. ಇದು ಘರ್ಷಣೆಗೆ ಎಡೆ ಮಾಡಿಕೊಟ್ಟ ಮುಖ್ಯ ಕಾರಣವಾಗಿದೆ. ಇದೇ ಸಂದರ್ಭದಲ್ಲಿ ಶಿವನಿಗೂ ಯಜ್ಞಾ ಹುತಿಯನ್ನು ಕೊಡಬೇಕು ಎಂದು ಶಿವಭಕ್ತರಾದ ಕೆಲವರು ವಾದಿಸಿದ್ದಾರೆ; ಕೂರ್ಮ ಪುರಾಣದಲ್ಲಿ ಶಿವನಿಗೆ ಯಜ್ಞಾಹುತಿ ಕೊಡದಿರುವುದು ತಪ್ಪು ಎಂದು ದಧೀಚಿಮಹರ್ಷಿ ಪ್ರಚೇತನಿಗೆ ಉಪದೇಶಿಸುವುದು ಮತ್ತು ವರಾಹಪುರಾಣದಲ್ಲಿ ರುದ್ರನು ಯಜ್ಞಕ್ಕೆ ಶಿವನಿಗೆ ಸಲ್ಲತಕ್ಕ ಹವಿರ್ಭಾಗವನ್ನು ನೀಡಲು ಒತ್ತಾಯಿಸುವುದು ಇದಕ್ಕೆ ನಿದರ್ಶನ-ವಾಗಿದೆ.

ಈ ಸಂಗತಿಗಳ ಹಿನ್ನೆಲೆಯಲ್ಲಿ ವೀರಭದ್ರನು ಯಜ್ಞವಿರೋಧಿಯಾಗಿರಲಿಲ್ಲ; ಶಿವನಿಗೆ ಹವಿರ್ಭಾಗ ಸಲ್ಲಿಸದಿರುವುದು ತಪ್ಪು ಎಂದು ಅಂಥ ಯಜ್ಞಗಳನ್ನು ಶಿವನ ಆಣತಿಯ ಮೇರೆಗೆ ನಾಶಮಾಡಿದ ಉಗ್ರದೇವತೆಯಾಗಿದ್ದಾನೆ. ಎಂದು ಹೇಳಬೇಕಾ ಗುತ್ತದೆ; ದಾಕ್ಷಾಯಿಣಿಯ ಸಾವು, ಶಿವನ ಕೋಪ ಇವು ವೀರಭದ್ರನು ಯಜ್ಞ ನಾಶಗೊಳಿಸುವುದಕ್ಕೆ ಕಾರಣ ಎಂದು ಹೇಳುವುದರ ಮೂಲಕ ಘರ್ಷಣೆಯ ಮುಖ್ಯ ಕಾರಣವನ್ನೇ ಮರೆಸಲಾಗಿದೆ. ಹಂಪೆಯಲ್ಲಿ ಮತ್ತು ಇತರ ಬೇರೆ ಬೇರೆ ಭಾಗಗಳಲ್ಲಿ ದೊರೆಯುವ ವೀರಭದ್ರನ ವಿಗ್ರಹಗಳಲ್ಲಿ ಇವನಿಗೆ ಯಜ್ಞೋಪವೀತವನ್ನು (ಲಿಂಗದ ಜೊತೆಗೆ) ಹಾಕಿರುವುದನ್ನು ಗಮನಿಸಿದರೆ, ಈ ದೇವತೆ ವೈದಿಕ ವಿರೋಧಿ ದೇವ ತೆಯೂ ಅಲ್ಲ ಎಂಬುದು ವಿದಿತವಾಗುತ್ತದೆ.

ಪ್ರಸ್ತುತ ಲೇಖನದಲ್ಲಿ ಬರುವ ಸಂಗತಿಗಳು ವೀರಭದ್ರ-ಶಿವ ಹಾಗೂ ಯಜ್ಞಗಳಿಗೆ ಇರುವ ಘರ್ಷಣಾತ್ಮಕ ಸಂಬಂಧವನ್ನು ಕುರಿತು ವಿಚಾರಿಸಲು ಆಧಾರ ಸಾಮಗ್ರಿಯನ್ನು ಒದಗಿಸುತ್ತವೆ.

REFERENCES :

1. Supra, Pp 43-45.
2. SII, IV, No. 266 Pp 59-60.
3. Nagaraja rao, M. S. Vijayanagar : Progress of Research 1979-83, P.37, Pl. XLIV a.
4. Ibid., P.37, Pl. XLIV b.

● ● ●

ಕದಂಬ ಕೀರ್ತಿದೇವರಸನ ಮುಗದೂರ ವೀರಗಲ್ಲು ಶಾಸನ

● ಶ್ರೀನಿವಾಸ ಪಾಡಿಗಾರ

ಉತ್ತರಕನ್ನಡ ಜಿಲ್ಲೆಯ ಸಿದ್ದಾಪುರದ ಬಳಿಯ ಮುಂಗದೂರಿನಲ್ಲಿ (ಸಿದ್ದಾಪುರ ತಾಲೂಕು) ಸಂಪಿಕೇರಿಯ ಶಿವದೇವಸ್ಥಾನದ ಸಮೀಪ ನಿಂತಿರುವ ವೀರಗಲ್ಲಿನ ಮೇಲೆ ಪ್ರಸ್ತುತ ಶಾಸನವಿದ್ದು೧, ಕ್ರಿ. ಶ. ೧೨ನೇ ಶತಮಾನದ ಉತ್ತರಾರ್ಧದ ಕನ್ನಡ ಅಕ್ಷರಗಳಲ್ಲಿ ಮೂರಂ ಪಟ್ಟಿಗಳಲ್ಲಿ ಕೊರೆಯಲ್ಪಟ್ಟಿದೆ. ಇದರಲ್ಲಿ ಒಟ್ಟು ೧೫ ಸಾಲುಗಳಿವೆ. ಮೊದಲ ೭ ಸಾಲುಗಳು ಮೇಲಿನ ಪಟ್ಟಿಯಲ್ಲೂ ೮ ರಿಂದ ೧೨ ಸಾಲುಗಳು ನಡುವಿನ ಪಟ್ಟಿಯಲ್ಲೂ ೧೩ ರಿಂದ ೧೫ ಸಾಲುಗಳು ಕೊನೆಯ ಪಟ್ಟಿಯಲ್ಲೂ ಬರೆಯಲ್ಪಟ್ಟವೆ. ಅಂತ್ಯದಲ್ಲಿರುವ ಸಂಸ್ಕೃತ ಶ್ಲೋಕವನ್ನು ಬಿಟ್ಟು ಉಳಿದೆಲ್ಲ ಭಾಗ ಕನ್ನಡ ಗದ್ಯದಲ್ಲಿದೆ.

ಶಾಸನ ತಿಳಿಸುವ ವಿಷಯವನ್ನು ಹೀಗೆ ಸಂಗ್ರಹಿಸಬಹುದು : ಮಹಾಮಂಡಳೇಶ್ವರ, ಬನವಾಸಿ ಪುರವರಾಧೀಶ್ವರ, ಜಯಂತೀ ಮಧುಕೇಶ್ವರದೇವ ಲಬ್ಧ ವರಪ್ರಸಾದ, ಭುಜಬಲಭೀಮಂ ಕೀರ್ತಿದೇವರಸನು ಬನವಾಸಿ ಪನ್ನಿಚ್ಛಾಸಿರ ಹಾಗೂ ಹಾನುಂಗಲ್ಲಯಿನೂರು ಪ್ರದೇಶವನ್ನು ಆಳುತ್ತಿದ್ದಾಗ, ಇವನ "ಸಮಸ್ತ ರಾಜ್ಯಭಾರ ನಿರೂಪಿತ"ನಾದ ಮಂಡಳಿಕ ಬಮ್ಮರಸನು ಹನ್ನೆರಡು ಮನ್ನೆಯರೊಂದಿಗೆ ಬೀರದೇವರಸನ ಮೇಲೆ ದಾಳಿಯಿಟ್ಟು ಎಲೆಗಣಲಿಯನ್ನು ಸುಟ್ಟು ಸೂರೆಗೊಂಡರು. ರಾಯಮುರಾರಿ ಸೋವಿದೇವನ ೧೬ನೇ ಆಡಳಿತ ವರ್ಷ ಸುಭಾನು ಸಂವತ್ಸರದಲ್ಲಿ ಬೀರದೇವರಸನ ಕಿಱಿಯ ಮಾಹಳಿಗೆ ಹಾಗೂ ಮುಂಗದೂರಿಗೆ ದಾಳಿಯಿಟ್ಟು ತುಱುವನ್ನು ಕೊಂಡೊಯ್ಯುವಾಗ ಅಲ್ಲಿಯ ಬೀಳಗಾಮುಂಡ ಮತ್ತು ಚಾಗಿಯಬ್ಬೆ ಗಾವುಂಡಿ ಇವರ ಮಗ ಕನ್ನಗಾಮುಂಡನು ಕುದುರೆಯಾಳನ್ನು ತಡೆದು ವೀರಮರಣವನ್ನಪ್ಪಿದನು. ಅವನ ಮಗ ಬಿರುದಗಾಮುಂಡನು "ಪರೋಕ್ಷವಿನಯಮಂ ಮಾಡಿ" ವೀರಕಲ್ಲನ್ನಿರಿಸಿದನು. ಅದರ ಪೂಜೆ-ನೈವೇದ್ಯಗಳಿಗೆಂದು ಅಲ್ಲಿಯ "ಸ್ಥಾನಪರಿಭಾಷೆಯ ಜೀಯಗೆ" ಬಿರುದಗಾಮುಂಡನು ಹಿರಿಯಮೊಗೆಯಲ್ಲಿ ೪ ಕಮ್ಮ ಗದ್ದೆ ಬಿಟ್ಟನು. ಇದಾದ ನಂತರ ವೀರಗಲ್ಲು ಶಾಸನಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ವೀರಮರಣದ ಸ್ಮೃತಿಯಿರುವ ಸಂಸ್ಕೃತ ಶ್ಲೋಕವಿದೆ.

ರಾಯಮುರಾರಿ ಸೋವಿದೇವನ ೧೬ನೇ ಆಡಳಿತ ವರ್ಷ ಶಾಸನದಲ್ಲಿ ಉಲ್ಲಿಖಿತವಾಗಿದೆ. ಇವನು ಕಲಚುರಿ ಮನೆತನದ ದೊರೆ. ಸುಮಾರು ಕ್ರಿ. ಶ. ೧೧೬೭ರಲ್ಲಿ ಪಟ್ಟಕ್ಕೆ ಬಂದನೆಂದು ವಿದ್ವಾಂಸರ ಅಭಿಪ್ರಾಯ.[೨] ಅಂದರೆ ಈ ಶಾಸನದ ಕಾಲ ಕ್ರಿ. ಶ. ೧೧೮೩-೮೪ ಎಂದಾಯಿತು. ಸಂವತ್ಸರ ಸುಭಾನು ಎಂದು ಶಾಸನ ತಿಳಿಸುತ್ತದೆ. ನಿಜವಾಗಿ ಇದು "ಶೋಭನ" ಸಂವತ್ಸರ ಎಂದಿರ ಬೇಕಿತ್ತು. ಸುಭಾನು ಸಂವತ್ಸರ ಕ್ರಿ. ಶ. ೧೧೬೪ಕ್ಕೆ ಸರಿಯಾಗುತ್ತಿದ್ದು ಬಿಜ್ಜಳನ ಆಡಳಿತಾವಧಿಯಲ್ಲಿ ಬರುತ್ತದೆ.

ಈವರೆಗೆ ರಾಯಮುರಾರಿ ಸೋವಿದೇವನ ಕ್ರಿ. ಶ. ೧೧೭೬ರ ವರೆಗಿನ ಶಾಸನ ಗಳು ಮಾತ್ರ ವರದಿಯಾಗಿವೆ.[೩] ಅಲ್ಲದೆ ಕ್ರಿ. ಶ. ೧೧೭೬ರಿಂದ ೧೧೮೪ರ ವರೆಗೆ ಸೋವಿದೇವನ ಸಹೋದರ ಸಂಕಮನು ಆಳ್ವಿಕೆ ನಡೆಸಿದನೆಂದು ಇತರೆಡೆ ದೊರೆತ ಶಾಸನಗಳಿಂದ ತಿಳಿಯುತ್ತದೆ.[೪] ಪ್ರಸ್ತುತ ಶಾಸನ ಸೋವಿದೇವನ ಆಡಳಿ ತಾವಧಿಯನ್ನು ಕ್ರಿ. ಶ. ೧೧೮೩-೮೪ರ ವರೆಗೆ ತಳ್ಳುತ್ತದೆ. ಸಂಕಮನು ಸೋವಿ ದೇವನ ವಿರುದ್ಧ ದಂಗೆಯೆದ್ದು ಅರಸನಾದವನು. ಅಂದಿನ ರಾಜಕೀಯ ವಿದ್ಯ ಮಾನಗಳನ್ನು ಗಮನಿಸಿದರೆ ಕೆಲವೆಡೆ ಸೋವಿದೇವನ ಅರಸುತನವನ್ನು ಕ್ರಿ. ಶ. ೧೧೮೩-೮೪ರ ವರೆಗೆ ಒಪ್ಪಿಕೊಂಡಿದ್ದ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಉತ್ತರ ಕನ್ನಡ ಜಿಲ್ಲೆಯಿಂದ ವರದಿಯಾಗುತ್ತಿರುವ ಕಲಚುರಿ ಅರಸರ ಎರಡನೇ ಶಾಸನ ಇದು.[೫]

ಬನವಾಸಿ-೧೨೦೦೦ ಹಾಗೂ ಹಾನುಗಲ್ಲು-೫೦೦ ಪ್ರದೇಶದ ಅರಸನಾಗಿದ್ದ ಮಹಾಮಂಡಳೇಶ್ವರ ಕೀರ್ತಿದೇವರಸನು ಯಾವ ವಂಶದವನೆಂದು ಶಾಸನ ತಿಳಿಸುವ ದಿಲ್ಲ. ಇವನ ಬಿರುದಾವಳಿಗಳು ಮತ್ತು ಆಳುತ್ತಿದ್ದ ಕಾಲ-ಪ್ರದೇಶಗಳನ್ನು ನೋಡಿ ದರೆ ಈತ ಹಾನುಗಲ್ಲು ಕದಂಬವಂಶದ ಇಮ್ಮಡಿ ಕೀರ್ತಿದೇವನಿರಬೇಕು. ಸಹಸ್ರ ಹಳ್ಳಿಯ (ಶಿರ್ಸಿ ತಾಲೂಕು) ಕ್ರಿ. ಶ. ೧೧೭೪ರ ಶಾಸನ ಕೂಡ ಇವನ ಆಡಳಿತವನ್ನು ಹೇಳುತ್ತದೆ. ಇದೇ ಅರಸನ ಕ್ರಿ. ಶ. ೧೧೬೧ ಮತ್ತು ೧೧೬೩ರ ಹಲವು ಶಾಸನ ಗಳು ಬೇರೆಡೆ ಲಭ್ಯವಾಗಿವೆ.[೬] ಪ್ರಸ್ತುತ ಶಾಸನದಿಂದ ಇಮ್ಮಡಿ ಕೀರ್ತಿದೇವನು ಕನಿಷ್ಠ ಕ್ರಿ. ಶ. ೧೧೮೩ರ ವರೆಗೆ ಆಳಿದನೆಂಬುದು ತಿಳಿಯುತ್ತದೆ.

ಮೊದಲು ದಾಳಿಗೊಳಗಾದ ಮತ್ತು ನಂತರ ಮರುದಾಳಿ ನಡೆಸಿದ ಬೀರದೇವರ ಸನ ವಂಶವಾವುದೆಂದು ಶಾಸನದಿಂದ ತಿಳಿಯುವುದಿಲ್ಲ. ಚಂದಾವರದ (ಹೊನ್ನಾ ವರ ತಾಲೂಕು) ಎರಡು ಶಾಸನಗಳು ತ್ರಿಭುವನಮಲ್ಲ ಬೀರದೇವರಸನೆಂಬ ಕದಂಬ ಅರಸನನ್ನು ಉಲ್ಲೇಖಿಸುತ್ತವೆ.[೭] ಚಂದಾವುರ (=ಚಂದಾವರ) ಈತನ ರಾಜಧಾನಿ ಯಾಗಿತ್ತು. ಹೊನ್ನಾವರ, ಕುಮಟಾ, ಅಂಕೋಲ ತಾಲೂಕಾ ಪ್ರದೇಶಗಳ ಮೇಲೆ

ಚಂದಾವರ ಕದಂಬರ ಅಧಿಕಾರವಿತ್ತು. ಬೀರದೇವನ ಚಂದಾವರದ ಶಾಸನಗಳು ಕ್ರಮವಾಗಿ ಕ್ರಿ. ಶ. ೧೨೧೯ ಮತ್ತು ೧೨೨೩ರವು. ಈ ಶಾಸನಗಳ ಬೀರದೇವರಸನೂ ಪ್ರಸ್ತುತ ಶಾಸನದ ಬೀರದೇವರಸನೂ ಒಬ್ಬನೇ ಆಗಿರುವ ಸಾಧ್ಯತೆ ಹೆಚ್ಚು. ಇದು ನಿಜವಿದ್ದರೆ, ಹಾನುಗಲ್ಲು ಕದಂಬರಿಗೂ ಚಂದಾವರ ಕದಂಬರಿಗೂ ವೈರವಿತ್ತೆಂದೂ ಚಂದಾವರ ಕದಂಬ ಬೀರದೇವರಸನು ಕ್ರಿ. ಶ. ೧೧೮೩–೮೪ರಷ್ಟು ಹಿಂದೆಯೇ ಪಟ್ಟಕ್ಕೆ ಬಂದಿದ್ದನೆಂದೂ ವೇದ್ಯವಾಗುತ್ತದೆ.

ವೀರಗಲ್ಲಿನ ಪೂಜೆ-ನೈವೇದ್ಯಗಳಿಗೆ ಗದ್ದೆಯನ್ನು ದತ್ತಿಬಿಟ್ಟ ಸಂಗತಿ ಅಪರೂಪದ ಉಲ್ಲೇಖವಾಗಿದೆ. ವೀರರ ಉಪಾಸನೆ ಪರಂಪರೆಯ ನೇರ ಉಲ್ಲೇಖವೆಂದು ಗಣಿಸಬಹುದು. ಈ ರೀತಿಯ ವಿಷಯಗಳು ಉತ್ತರಕನ್ನಡ ಜಿಲ್ಲೆಯ ಹೊರಗಡೆಯ ಶಾಸನಗಳಲ್ಲಿ ಗಮನಕ್ಕೆ ಬಂದಿವೆ.[೮]

ಶಾಸನದಲ್ಲಿ ಹೆಸರಿಸಲ್ಪಟ್ಟಿರುವ ಸ್ಥಳಗಳಲ್ಲಿ ಮಂಗದೂರು ಈಗಿನ ಮುಗದೂರು (ಸಿದ್ದಾಪುರ ತಾಲೂಕು) ಎಂಬುದು ಸ್ಪಷ್ಟವಿದೆ. ಕಿಱಿಯ ಮಾಹಳಿಗೆಯನ್ನು ಗುರುತಿಸುವದು ಕಷ್ಟ. ಮಳಗಿ ಎಂಬ ಹೆಸರಿನ ಊರು ಮುಂಡಗೋಡ ತಾಲೂಕಿನಲ್ಲೂ ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲೂಕಿನಲ್ಲೂ ಇವೆ. ಇವೆರಡರಲ್ಲಿ ಒಂದು ಮಾಹಳಿಗೆಯಾಗಿರುವ ಸಾಧ್ಯತೆಯಿದೆ. ಎಲೆಗಣಲಿ ಹಾಗೂ ಹಿರಿಯಮೊಗೆಯನ್ನು ಸದ್ಯ ಗುರುತಿಸುವದಾಗಿಲ್ಲ. ಹಿರಿಯಮೊಗೆಯು ಮುಗದೂರೊಳಗಿನ ಸ್ಥಳವಿದ್ದರೂ ಇರಬಹುದು.

ಶಾಸನದ ಪಾಠ

ಮೊದಲನೇ ಪಟ್ಟಿ :

೧. ★ ಸ್ವಸ್ತಿ ಸಮಸ್ತಪ್ರಸಸ್ತಿಸಹಿತಂ ಶ್ರೀಮನ್ಮಹಾಮಂಡಳೇಶ್ವರಂ ಬನವಾಸಿ ಪುರವರಾಧೀಶ್ವರಂ

೨. ಜಯಂತೀ ಮಧುಕೇಶ್ವರದೇವ ಲಬ್ಧವರಪ್ರಸಾದಂ ಭುಜಬಳಭೀಮ ಕೀರ್ತ್ತಿದೇ-

೩. ವರಸರು ಬನವಾಸೆ ಪನ್ನಿರ್ಚ್ಛಾಸಿರಮುಮಂ ಹಾನುಂಗಲ್ಲಯಿನೂಱುಮಂ ರಾಜ್ಯಗೆಯುತ್ತ-

೪. ವಿರೆ ॥ ಶ್ರೀ ಕೀರ್ತ್ತಿದೇವರಸರ ಸಮಸ್ತರಾಜ್ಯಭರ ನಿರೂಪಿತನುಮಪ್ಪ ಮಂಡಳಿಕ ಬಂಮ್ಮ-

೫. ರಸನು ಹನಿರ್ವ್ವರು ಮಂನೆಯರುಂ ಸಹಿತವಾಗಿ ಬೀರದೇವನ ಮೇಲೆ ಧಾಳಿ ಯಿಟ್ಟು ಎಲೆಗ-

೬. ಣಲಿಯು ಸುಟ್ಟು ಸೂಱೆಗೊಂಡ ಸಮಯಂದೊಳ್ ॥ ಸ್ವಸ್ತಿ ಶ್ರೀವಂತು ರಾಯಮುರಾರಿ ಸೋ-

೭. ವಿದೇವ ವರುಸದ ೧೬ನೆಯ ಶುಭಾನು ಸಂವತ್ಸರದಂದು ಬೀರದೇವರಸ-

ಎರಡನೇ ಪಟ್ಟಿ :

೮. ರ ಧಾಳಿ ಬಂದು ಕಿಱಿಯವಾಹಳಿಗೆಯ ಮೂಗದೂರ ನಿಱಿದಂ ತುಱುವಂ ಕೊಂಡಂಹೋಹಲ್ಲಿ ಅ-

೯. ಲ್ಲಿ ಹುಟ್ಟಿದ ಬೀಳಗಾವುಂಡಂಗಂ ಚಾಗಿಯಬ್ಬೆಗಾವುಂಡಿಗಂ ಹುಟ್ಟಿದ ಸುಪುತ್ರಂ ಗೋತ್ರಪವಿತ್ರಂ

೧೦. ಶಿವಪಾದಸೇಖರಂ ಸತ್ಯದಯಾಪರನುಮಪ್ಪ ಶ್ರೀ ಕನ್ನಗಾವುಂಡಂ ಕುದುರೆ ಯಾ-

೧೧. ಳ ತ[ಟ್ಟಿ]ವೊತ್ತರ ಕಲ್ಲು ತಾಗಿ ತಳ್ತಿಱಿದು ಸುರಲೋಕಪ್ರಾಪ್ತನಾದ ॥ ಆತನ ಸಂಪು-

೧೨. ತ್ರಂ ಬಿರುದ ಗಾವುಂಡಂ ತಮ್ಮಯ ಕನ್ನಗಾವುಂಡಗೆ ಪರೋಕ್ಷವಿನಯಮಂ ಮಾಡಿ ಕಲ್ಲನಿಱಿಸಿದ [॥]

ಮೂರನೇ ಪಟ್ಟಿ :

೧೩. ಆ ಕಲ್ಲ ಪೂಜೆಗಂ ನೈವೇದ್ಯಕವೆಂದು ಯಲ್ಲಿಯ ಸ್ಥಾನಪರಿಭಾಷೆಯ ಜೀಯಗೆ ಬಿರುದಗಾವುಂಡಂ ಹಿರಿ-

೧೪. ಯಮೊಗೆಯೊಳಗೆ ಬಿಟ್ಟ ಗದ್ದೆ ಕಮ್ಮಂ ೪ ಇಂತೀ ಧರ್ಮ್ಮವುಂ ಪ್ರತಿಪಾಳಿಸಂ ವರು ॥ ಜಿತೇ-

೧೫. ನ ಲಭ್ಯತೇ ಲಕ್ಷ್ಮೀ ಮ್ರಿತೇನಾಪಿ ಸುರಾಂಗನಾ ಕ್ಷಣವಿಧ್ವಂಸಿನೀ ಕಾಯ ಕಾ ಚಿಂತಾ ಮರಣೇ ರಣೇ ॥

ಅಡಿಟಿಪ್ಪಣಿಗಳು

೧. ನನ್ನ ವಿದ್ಯಾರ್ಥಿ ಶ್ರೀ ಗಣಪತಿಗೌಡ ಅವರು ತಮ್ಮ ಕ್ಷೇತ್ರಕಾರ್ಯದಲ್ಲಿ ಗಮನಕ್ಕೆ ಬಂದ ಈ ಶಾಸನದ ಪಡಿಯಚ್ಚನ್ನು ಒದಗಿಸಿ ಅಧ್ಯಯನ ಮಾಡಿ ಸಂಪಾದಿಸಲು ಅನುಮತಿ ನೀಡಿದ್ದಕ್ಕಾಗಿ ಅವರಿಗೆ ಧನ್ಯವಾದಗಳು. ಮುಗದೂರಿನ ಪ್ರಾಚೀನ ಶಿಲ್ಪಗಳ ಕುರಿತು ಅವರು ಬರೆದಿರುವ ಲೇಖನ ಪ್ರಕಟವಾಗಲಿದ್ದು, ಅದು ಈ ಊರ ಪ್ರಾಚೀನತೆಯನ್ನು ಎತ್ತಿ ತೋರಿಸುತ್ತದೆ.

೨. Gopal B. R., **The Chalukyas of Kalyana and the Kalachuris** (Karnatak University, Dharwad, 1981), p. 374.

೩, ಅದೇ, ಪು. ೩೭೭.

೪. ಅದೇ.

೫. ಈ ಮೊದಲು ಸಿರ್ಸಿ ತಾಲೂಕಿನ ಸಹಸ್ರಹಳ್ಳಿಯಲ್ಲಿ ರಾಯಮುರಾರಿ ಸೋವಿದೇವನ ಉಲ್ಲೇಖವಿರುವ ಕ್ರಿ.ಶ. ೧೧೭೪ರ ಶಾಸನ ಗಮನಿಸಲ್ಪಟ್ಟಿದೆ. ನೋಡಿ, ಗುರವ ಆರ್. ಎನ್. **ಕಾರವಾರ ಜಿಲ್ಲೆಯ ಶಾಸನಗಳು** (ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೫), ಪು. ೪೧ ಮತ್ತು ೫೦.

೬. Gopal B. R., **Minor Dynasties of South India : Karnataka**, Vol. 1 (New Era Publications, Madras, 1982), p. 79, foot note 96.

೭. Sampat M. D., "Chandavara Inscription of Kadamba Biradevarasa", **Jouranal of the Epigraphical Society of India**, Vol. XI (Dharwad, 1984), pp. 88-94.

೮. ಶೇಷಶಾಸ್ತ್ರಿ ಆರ್., **ಕರ್ನಾಟಕದ ವೀರಗಲ್ಲುಗಳು** (ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೨), ಪು. ೧೦೦.

೯. ಷಾಯಿಯಿಂದ ಮಾಡಿದ ಪಡಿಯಚ್ಚಿನ ಸಹಾಯದಿಂದ ಓದಿದ್ದು.

● ● ●

ಮರಾಠಿ ದಲಿತೇತರ ಲೇಖಕರ ದಲಿತ ಸಂವೇದನೆ

ಮೂಲ (ಮರಾಠಿ) : **ಡಾ. ಬಾಬುರಾವ ಗಾಯಕವಾಡ**
ಅನುವಾದ : **ಡಾ. ಎಸ್. ಪಿ. ಪಾಟೀಲ**

ಇದೀಗ ಮರಾಠಿ ಭಾಷೆಯಲ್ಲಿ ವಿಭಿನ್ನ ಸಾಹಿತ್ಯ ಪ್ರವಾಹಗಳು ರಭಸದಿಂದ ಹರಿಯುತ್ತಿರುವುದನ್ನು ಕಾಣುತ್ತೇವೆ. 'ದಲಿತಸಾಹಿತ್ಯ'ವು ಅವರಲ್ಲಿ ಒಂದಾಗಿದೆ. ದಲಿತಸಾಹಿತ್ಯವು ಪ್ರಚಲಿತ ಮರಾಠಿ ಸಾಹಿತ್ಯಕ್ಕೆ ಬೆಲೆಯುಳ್ಳ ಕಾಣಿಕೆ ಸಲ್ಲಿಸಿದೆ. ಅದರಂತೆ ಇತರ ಸಾಹಿತ್ಯ ಪ್ರವಾಹಗಳಿಂದ ಭಿನ್ನವೆಂಬುದನ್ನೂ ಸಿದ್ಧಪಡಿಸಿದೆ. 'ಏನಾದರೊಂದು ತೋರಿಸಲು ಹಾಡಬೇಕು' ಎಂಬ ಪ್ರಾಚೀನ ಸಾಹಿತ್ಯದ ಉದ್ದೇಶವು ಆಧುನಿಕ ಸಾಹಿತ್ಯದಲ್ಲಿ ಇಲ್ಲದಂತಾಗಿ ಸಾಹಿತ್ಯವು ಪರಮಾರ್ಥದ ಬದಲು ಲೌಕಿಕ ವಿಷಯದತ್ತ ಒಲಿಯಿತು. ಜೀವನದ ಬಗೆಗಿನ ಸಂವೇದನೆ ಆಧುನಿಕ ಸಾಹಿತ್ಯದಲ್ಲಿ ದೃಢವಾಗಲಾರಂಭಿಸಿತು. ಮಾನವನ ಜೀವನ, ಅವನ ಬದುಕುವ ರೀತಿಗಳಿಗೆ ಸಾಹಿತ್ಯದಲ್ಲಿ ಮಹತ್ವ ಬರಲಾರಂಭಿಸಿತು. 'ದೇವ ದಾನವರನು ಮಾನವ ನಿರ್ಮಿಸಿದ। ಮಾನವನೇ ಕೀಳು ಮಾಡಿದನದೆಷ್ಟೋ ॥' ಎಂಬ ಕವಿ ಕೇಶವಸುತರ ಸಂವೇದನೆಯು ಬಗ್ಗೆ ಸಹೃದಯ ಚಿಂತನೆ ಮಾಡಲಾರಂಭಿಸಿದ. ಕೇಶವಸುತರ ಈ ಪ್ರಕಾರದ ಹೊಸ ಸಂವೇದನೆಯಿಂದ ಒಟ್ಟು ಮರಾಠಿ ಸಾಹಿತ್ಯ ನಿರ್ಮಾಣವಾಗಲಾರಂಭಿಸಿತೆಂದು ಹೇಳಬಹುದು. ಜಾಗತಿಕ ಸಾಹಿತ್ಯದ ಮೇಲೆ ಮಹಾಯುದ್ಧಗಳ ಪರಿಣಾಮವಾಗಿರುವಂತೆಯೇ, ಭಾರತೀಯ ಸ್ವಾತಂತ್ರ್ಯ ಚಳುವಳಿಯ ಪರಿಣಾಮ ಇಲ್ಲಿಯ ಸಮಾಜಜೀವನದ ಮೇಲೆ ಹಾಗೂ ಪರ್ಯಾಯವಾಗಿ ಸಾಹಿತ್ಯದ ಮೇಲೆ ಆಗಿದೆ. ಆದರಿಂದಾಗಿ ಸ್ವಾತಂತ್ರ್ಯಾನಂತರ ಮರಾಠಿಸಾಹಿತ್ಯದಲ್ಲಿ ಭಿನ್ನ ಚಿತ್ರಣ ಆರಂಭವಾಯಿತು. ಅದರಲ್ಲೂ ಸ್ವಾತಂತ್ರ್ಯ ಪ್ರಾಪ್ತಿಯ ತರುವಾಯದ ಮೊದಲು ತಲೆಮಾರಿನವರು ಬರವಣಿಗೆಯನ್ನು ಆರಂಭಿಸಿದಾಗ ಮರಾಠಿ ಸಾಹಿತ್ಯದ ಅನುಭವ ಕ್ಷೇತ್ರ ಬದಲಾಯಿತು. ಈ ಬದಲಾವಣೆಯು ಒಂದು ಮಹತ್ವದ ಆವಿಷ್ಕಾರ ದಲಿತ ಸಾಹಿತ್ಯದ ನಿರ್ಮಿತಿಯಾಗಿದೆ.

ಶಿಕ್ಷಣದ ಪ್ರಯೋಜನ ಪಡೆದ ದಲಿತ ವರ್ಗದ ಲೇಖಕರು ದಲಿತರ ಮೇಲೆ ಹೇರಲ್ಪಟ್ಟ ಅನ್ಯಾಯ ಹಾಗೂ ದುಃಖದ ಬಗ್ಗೆ ವಿಮರ್ಶೆ ಮಾಡಲಾರಂಭಿಸಿದರು. ಹಾಗೂ ಸ್ವಾಭಾವಿಕವಾಗಿ ಅವರು ವಿದ್ರೋಹದ ಮತ್ತು ಪ್ರಕ್ಷೋಭೆಯ ಸಂವೇದನೆಯಿಂದ ದಲಿತ ಜೀವನವನ್ನು ಚಿತ್ರಿಸಿ ಸಾಹಿತ್ಯ ನಿರ್ಮಾಣ ಕಾರ್ಯವನ್ನು ಆರಂಭಿಸಿದರು. ಆದರೆ ದಲಿತ ಜೀವನದ ಚಿತ್ರಣವನ್ನು ಕೇವಲ ದಲಿತರೇ ಮಾಡಿರುವರೆಂದೇನೂ ಅಲ್ಲ. ಇಪ್ಪತ್ತನೆಯ ಶತಮಾನದ ಆರಂಭದಿಂದಲೂ ಕೆಲವು ಜನ

ದಲಿತೇತರ ಲೇಖಕರು ತಮ್ಮ ಕಥೆ-ಕಾದಂಬರಿ-ನಾಟಕಗಳ ಮೂಲಕ ಕೆಲಪ್ರಮಾಣ ದಲ್ಲಿ ದಲಿತರ ಚಿತ್ರಣವನ್ನು ನೀಡಿದ್ದಾರೆ.

ದಲಿತೇತರರ ದಲಿತ ಜೀವನದ ಬಗೆಗಿನ ಸಾಹಿತ್ಯವನ್ನು ತಿಳಿಯುವಲ್ಲಿ ದಲಿತ ಸಂವೇದನೆ ಎಂದರೇನು ಎಂಬುದನ್ನು ಗಮನಿಸಬೇಕಾಗುತ್ತದೆ. ಅದಕ್ಕಾಗಿ ದಲಿತ ಸಾಹಿತ್ಯದ ಸ್ವರೂಪ ಹಾಗೂ ಅದರ ಹಿನ್ನೆಲೆಯಲ್ಲಿನ ಪ್ರೇರಣೆಯ ಬಗ್ಗೆ ಸ್ವಲ್ಪದರಲ್ಲಿ ಯೋಚಿಸಬೇಕಾಗುತ್ತದೆ. ದಲಿತ ಸಾಹಿತ್ಯ ಉದಯವಾಗಿ ಇದೀಗ ಕಾಲುಶತಮಾನ ಪೂರ್ಣಗೊಳ್ಳುತ್ತಲಿದೆ. ಅನುಭವ ಮತ್ತು ಅಭಿವ್ಯಕ್ತಿಗಳಿಂದ ದಲಿತ ಸಾಹಿತ್ಯವು ಶಕ್ತಿ ಯುತವಾಗುತ್ತ ಸಾಗಿದೆ. ಈ ಸಂದರ್ಭದಲ್ಲಿ ಡಾ. ಬಾಬಾಸಾಹೇಬ ಅಂಬೇಡ್ಕರ ಹಾಗೂ ಅವರ ವಿಚಾರಗಳ ಬಗ್ಗೆ ದಲಿತ ಸಾಹಿತಿಗಳು ಗಮನಹರಿಸುವುದು ಅಗತ್ಯ ವಾಗಿದೆ. ದಲಿತರಲ್ಲಿ ಸುಧಾರಣೆಯಾಗಬೇಕಾದರೆ, ಶಿಕ್ಷಣ ಪ್ರಸಾರವಾಗಬೇಕು. ಸವರ್ಣೀಯರು ದಲಿತರನ್ನು ಮನುಷ್ಯರಂತೆ ನಡೆಸಿಕೊಳ್ಳಬೇಕು. ದಲಿತರ ದುಃಖ ದೈನ್ಯತೆಗಳು ಇಲ್ಲದಂತಾಗಬೇಕು. ಧರ್ಮ ಮತ್ತು ಜಾತಿಯ ಹೆಸರಿನಡಿ ನಡೆಯುವ ಶೋಷಣೆ ಮತ್ತು ಅನ್ಯಾಯ ಅತ್ಯಾಚಾರಗಳು ಇಲ್ಲದಂತಾಗಬೇಕು. ಇವುಗ ಳಿಂದಾಗಿ, ಅವರ ಪೂರ್ವದಲ್ಲಿ ಹಾಗೂ ಸಮಕಾಲೀನರಲ್ಲಿ ಕಾರ್ಯನಿರ್ವಹಿಸಿದ ಮಹಾತ್ಮಾ ಜ್ಯೋತಿಬಾ ಫುಲೆ, ಮಹರ್ಷಿ ವಿಠ್ಠಲರಾಮಜಿ ಶಿಂಧೆ, ರಾಜರ್ಷಿ ಶಾಹು ಮಹಾರಾಜ, ಕರ್ಮವೀರ ಭಾವುರಾವ ಪಾಟೀಲ ಇವರ ಕಾರ್ಯಗಳು ದಲಿತರ ಸಾಹಿತ್ಯ ನಿರ್ಮಿತಿಯ ಸಂದರ್ಭದಲ್ಲಿ ಪ್ರಯೋಜನಕಾರಿಯೆನಿಸಿವೆ. ಆದರೆ ಡಾ. ಬಾಬಾಸಾಹೇಬ ಅಂಬೇಡ್ಕರರು ಸ್ವತಃ ಅಸ್ಪೃಶ್ಯ ಸಮಾಜದಲ್ಲಿ ಜನಿಸಿದವರಾದುದ ರಿಂದ ಮತ್ತು ಈ ಸಮಾಜವು ಸಹಿಸಿಕೊಳ್ಳಬೇಕಾದ ಹತ್ತಾರು ಅನುಭವಗಳ ಝಳ ವನ್ನು ಅವರು ಸಹಿಸಿಕೊಂಡಿದ್ದರು. ಆದುದರಿಂದ ಇವರೆಲ್ಲರಲ್ಲಿ ಡಾ. ಅಂಬೇಡ್ಕರ ಅವರು ದಲಿತರಲ್ಲಿ ಸ್ವಾಭಿಮಾನದ ಜ್ಯೋತಿಯನ್ನು ಬೆಳಗುವ ಕಾರ್ಯವನ್ನು ಅಧಿಕ ಪ್ರಮಾಣದಲ್ಲಿ ಮಾಡಿದರು. ಆದರಿಂದಾಗಿ ಡಾ. ಅಂಬೇಡ್ಕರ ಹೊರತಾಗಿ ಬೇರಾರು ನಮ್ಮ ಉದ್ಧಾರಕರಲ್ಲ ಎಂಬ ಅರಿವು ದಲಿತರ ಮನದಲ್ಲಿ ನಿರ್ಮಾಣ ವಾಯಿತು.

ಡಾ. ಅಂಬೇಡ್ಕರರು ಸ್ಥಾಪಿಸಿದ ಶಿಕ್ಷಣಸಂಸ್ಥೆ, ಮಹಾಡದ ಚವದಾರ ಕೆರೆಯ ಸತ್ಯಾಗ್ರಹ, ನಾಶಿಕದ ಕಾಳಾರಾಮ ಮಂದಿರ ಪ್ರವೇಶ ಸತ್ಯಾಗ್ರಹ, ಅವರು ಹೊರಡಿಸಿದ ನಿಯತಕಾಲಿಕೆಗಳು ಹಾಗೂ ಬೌದ್ಧ ಧರ್ಮದ ದೀಕ್ಷೆಯನ್ನು ಸ್ವೀಕರಿಸಿ ದುದು— ಇತ್ಯಾದಿ ಘಟನೆಗಳು ದಲಿತರ ಮನಸ್ಸಿನ ಮೇಲೆ ವಿಶೇಷ ಪರಿಣಾಮ ಬೀರಿ ದಲಿತರ ಜೀವನವನ್ನು ಬದಲಿಸಲು ಪ್ರೇರಕವಾಗಿ ಪರಿಣಮಿಸಿದವು. ಅವ ರಿಂದಾಗಿ ೧೯೬೦ರ ತರುವಾಯ ಬರೆಯಲ್ಪಟ್ಟ ದಲಿತ ಸಾಹಿತ್ಯಕ್ಕೆ ಅವರೇ ಪ್ರಮುಖ ಪ್ರೇರಣೆಯಾಗಿ ಕಾಣುತ್ತಾರೆ. ಇತ್ತೀಚೆ ಮಹಾಕಾರಣಿಕ ಗೌತಮಬುದ್ಧ ಹಾಗೂ

ಮಾರ್ಕ್ಸ್ ಇವರ ವಿಚಾರಾನುಸಾರವಾಗಿಯೂ ದಲಿತ ಸಾಹಿತ್ಯದ ಚಿತ್ರಣವಾಗುತ್ತಿರುವುದು ಕಂಡುಬರುತ್ತದೆ. ದಲಿತ ಸಾಹಿತ್ಯದ ವಿಷಯವು ಪ್ರಮುಖವಾಗಿ ದಲಿತ ಜೀವನವಾದುದರಿಂದ ಮೊದಲು 'ದಲಿತ' ಎಂದರೇನೆಂಬುದನ್ನು ನೋಡಬೇಕಾಗುತ್ತದೆ. 'ದಲಿತ' ಎಂದರೆ ಅನುಸೂಚಿತ ಜಾತಿ-ಉಪಜಾತಿ, ಬೌದ್ಧ, ದುಡಿಯುವ ಜನ, ಕಾರ್ಮಿಕ, ಭೂಮಿಹೀನ, ಕೂಲಿಕಾರ, ಬಡರೈತ, ಸಂಚಾರಿ ಜನಾಂಗ, ಆದಿವಾಸಿ ಇತ್ಯಾದಿ ಎಂದು ನಾಮದೇವ ಢಸಾಳರ ಅಭಿಪ್ರಾಯವಾಗಿದೆ. ಆದರೆ 'ಕೇವಲ ಬೌದ್ಧ ಅಥವಾ ಹಿಂದುಳಿದ ವರ್ಗದವರಷ್ಟೇ ಅಲ್ಲ, ತುಳಿತಕ್ಕೆ ಒಳಗಾದ ಶ್ರಮಜೀವಿಗಳಿದ್ದಾರೆ. ಅವರೆಲ್ಲರೂ ದಲಿತರೇ' ಎಂದು ಡಾ. ಮ. ನಾ. ವಾನಖಡೆ ಹೇಳುತ್ತಾರೆ. 'ಸಾವಿರಾರು ವರ್ಷಗಳಿಂದ ಯಾರ ಮೇಲೆ ಅನ್ಯಾಯವಾಗುತ್ತ ಬಂದಿದೆಯೋ ಅಂಥ ಅಸ್ಪೃಶ್ಯ ಮತ್ತು ಹರಿಜನರಿಗೆ ದಲಿತ ಶಬ್ದವನ್ನು ಬಳಸಬೇಕು, ಹಾಗೂ ಈ ವರ್ಗದ ಸಾಹಿತಿಗಳು ಬರೆದ ಸಾಹಿತ್ಯಕ್ಕೆ ದಲಿತಸಾಹಿತ್ಯ ಎನ್ನಬೇಕು' ಎಂದು ಪ್ರಾಧ್ಯಾಪಕ ಕೇಶವ ಮೇಶ್ರಾಮರ ಅಭಿಪ್ರಾಯವಾಗಿದೆ. ಈ ವ್ಯಾಖ್ಯೆಗಳಿಗೆ ಪೂರಕವಾಗಿ ದಲಿತ ಸಂವೇದನೆ ಬಗೆಗೆ ಅಭಿಪ್ರಾಯ ವ್ಯಕ್ತಪಡಿಸುತ್ತ ಡಾ. ಗೋ. ಮಾ. ಪವಾರ ಹೀಗೆ ಹೇಳುತ್ತಾರೆ : 'ಅಸ್ಪೃಶ್ಯರೆಂದು ತಿಳಿಯಲ್ಪಡುವ ಜಾತಿಯಲ್ಲಿ ಜನಿಸಿದ ಲೇಖಕರು ಪ್ರಕಟಪಡಿಸಿದ ತದಂಶಂಗಿಕ ಸಂವೇದನೆಯನ್ನು ದಲಿತ ಸಂವೇದನೆ ಎಂದು ಕರೆಯಬೇಕೆಂದು ನನ್ನ ಅಭಿಪ್ರಾಯ.' ದಲಿತ ಮತ್ತು ದಲಿತ ಸಂವೇದನೆ ಎಂದರೆ ಏನು ? ಎಂಬುದನ್ನು ಆಲೋಚಿಸಿದ ಮೇಲೆ ದಲಿತ ಸಾಹಿತ್ಯದ ಬಗೆಗೆ ಗಮನಿಸಬಹುದಾಗಿದೆ.

'ದಲಿತರು, ದಲಿತರ ವಿಷಯದಲ್ಲಿ ನಿರ್ಮಾಣಮಾಡಿದ ಪ್ರಕ್ಷೋಭ ಹಾಗೂ ವಿದ್ರೋಹಿ ಸಾಹಿತ್ಯ ಎಂದರೆನೆ ದಲಿತ ಸಾಹಿತ್ಯ' ಎಂದು ಡಾ. ಮ. ನ. ವಾನಖಡೆ ಹೇಳುತ್ತಾರೆ 'ದಲಿತರು ದಲಿತರಿಗಾಗಿ ಬರೆದ ಸಾಹಿತ್ಯ ಮಾತ್ರವಲ್ಲ ದಲಿತ ಸಂವೇದನೆಶೀಲತೆಯಿಂದ ಜನಿಸಿದುದು ದಲಿತ ಸಾಹಿತ್ಯ ಎಂದು ಗೋ. ಪು. ದೇಶಪಾಂಡೆ ಹೇಳುತ್ತಾರೆ. 'ದಲಿತರು ದಲಿತ ಸಂವೇದನೆಯನ್ನು ಲಕ್ಷದಲ್ಲಿರಿಸಿಕೊಂಡು ಸಮ್ಯಕ್ ಪರಿವರ್ತನೆಗಾಗಿ ಬರೆದ ಸಾಹಿತ್ಯವು ದಲಿತ ಸಾಹಿತ್ಯ' ಎಂದು ಬಾಬೂರಾವ್ ಬಾಗುಲ್ ಮತ್ತು ಪ್ರಾಧ್ಯಾಪಕ ಶರಶ್ಚಂದ್ರ ಮುಕ್ತಿಬೋಧರವರಿಗೆ ಅನಿಸುತ್ತದೆ. 'ದಲಿತ ಸಾಹಿತ್ಯದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸಂಕಟಗಳಿಂದ ಸಂತಪ್ತವಾದ ಮನಸ್ಸಿನ ಆವಿಷ್ಕಾರ ವ್ಯಕ್ತವಾಗುತ್ತದೆ' ಎಂದು ಪು. ಲ. ದೇಶಪಾಂಡೆ ಮತ್ತು ಡಾ. ಗ್ರಾಮೋಪಾಧ್ಯೆ ಅವರ ಅಭಿಪ್ರಾಯವಾಗಿದೆ.

ಈ ವರೆಗೆ ದಲಿತ, ದಲಿತ ಸಂವೇದನೆ ಮತ್ತು ದಲಿತ ಸಾಹಿತ್ಯ ಇವುಗಳ ಬಗೆಗೆ ವಿಚಾರವಂತರ ಅಭಿಪ್ರಾಯಗಳನ್ನು ನೋಡಿದುದಾಯಿತು. ಕೇವಲ ಅಸ್ಪೃಶ್ಯ ಜಾತಿಯಲ್ಲಿ ಜನಿಸಿದ ಮೂಲಕವೇ ದಲಿತ ವರ್ಗವು ಈ ಎಲ್ಲ ದುಃಖವೇದನೆಗಳ

ಪಾಲುದಾರನಾಗುವನೆಂಬುದು ಈ ವಿಚಾರವಂತರ ಅಭಿಪ್ರಾಯದಿಂದ ಸ್ಪಷ್ಟವಾಗುತ್ತದೆ. ಭಾರತೀಯ ಸಮಾಜದಲ್ಲಿ ಒಂದು ಸಮಾಜದ ಘಟಕದ ಮೇಲೆ ಹೇರಿದ ಅಸ್ಪೃಶ್ಯತೆಯು ಕೃತ್ರಿಮ ಸಮಾಜ ನಿರ್ಮಾಣ ಹಾಗೂ ಒಂದು ವರ್ಗದ ಸ್ವಾರ್ಥಕ್ಕೋಸ್ಕರ ನಿರ್ಮಿಸಲ್ಪಟ್ಟದ್ದುದಾಗಿದೆ. ಆದುದರಿಂದ ಈ ಸಮಾಜವ್ಯವಸ್ಥೆಯು ಕಾಪಾಡಿ ಬೆಳಸಿಕೊಂಡು ಬಂದ ರೂಢಿ, ಪರಂಪರೆ, ರೀತಿ, ಆಚರಣೆ ಮತ್ತು ದೇವ ಧರ್ಮ ಈ ಕಲ್ಪನೆಗಳ ವಿರುದ್ಧ ಮಾನವತಾವಾದಿ ದೃಷ್ಟಿಯಿಂದ ನಿಷೇಧವನ್ನು ದಾಖಲಿಸುವುದು, ಈ ವ್ಯಾಪಕ ಸಾಮಾಜಿಕ ಸ್ವರೂಪದ ಪ್ರೇರಣೆಯು ದಲಿತ ಸಾಹಿತ್ಯ ನಿರ್ಮಿತಿಯ ಬೆಂಬಲಕ್ಕೆ ಇರುವುದು. ದಲಿತ ಸಾಹಿತ್ಯದ ಅಭ್ಯಾಸಿಗಳಿಗೆ ಇದು ಮಾನ್ಯವಾಗಿದೆ. ದಲಿತರ ದುರವಸ್ಥೆಗೆ ಸಾಮಾಜಿಕ ಸಾಂಸ್ಕೃತಿಕ ಹಾಗೂ ಆರ್ಥಿಕ ಅಂಶಗಳು ಕಾರಣೀಭೂತವಾಗಿವೆ ಎಂದು ಡಾ. ಸದಾ ಕರ್‍ಹಾಡೆ, ಡಾ. ಯಶವಂತ ಮನೋಹರ, ವಿ. ವಾ. ಶಿರವಾಡಕರ ಮತ್ತು ವಸಂತ ಪಳಸಿಕರ ರವರಿಗೆ ಅನಿಸುತ್ತದೆ. ಇವರು ಡಾ. ಅಂಬೇಡ್ಕರ ಮತ್ತು ಮಾರ್ಕ್ಸ್‌ರ ವಿಚಾರ ಧಾರೆಗಳಿಗೆ ಅನುಸಾರವಾಗಿ ದಲಿತ ಸಾಹಿತ್ಯದಕಡೆಗೆ ನೋಡುತ್ತಾರೆ. ಆದರೆ ದಲಿತರ ಪಾಲಿಗೆ ಬಂದ ದುಃಖ ಮತ್ತು ದಾರಿದ್ರ್ಯಗಳು ಅವರಿಗೆ ಅಂಟಿಕೊಂಡ ಅಸ್ಪೃಶ್ಯತೆಯಿಂದಾಗಿಯೇ ಬಂದುದಾಗಿದೆ—ಎಂದು ತರ್ಕತೀರ್ಥ ಲಕ್ಷ್ಮಣಶಾಸ್ತ್ರಿ ಜೋಶಿ, ಡಾ. ಪ್ರಭಾಕರ ಮಾಂಡೆ ಮತ್ತು ಪ್ರಾಧ್ಯಾಪಕ ರಾ. ಭಿ. ಜೋಶಿ ಅವರ ಅಭಿಪ್ರಾಯವಾಗಿದೆ. ಈ ವರೆಗಿನ ವಿವೇಚನೆಯನ್ನು ಗಮನಿಸಿದಾಗ ಪ್ರಕ್ಷೋಭ, ವಿದ್ರೋಹ ಮತ್ತು ದುಃಖತ್ರಯಗಳ ಮಾಧ್ಯಮದಿಂದ ದಲಿತ ಸಾಹಿತ್ಯದಲ್ಲಿ ದಲಿತರ ಜೀವನದ ಚಿತ್ರಣವಾಗುತ್ತದೆ ಎಂದು ತಿಳಿಯಲಡ್ಡಿಯಿಲ್ಲ.

ಜನ್ಮಜಾತ ಅಸ್ಪೃಶ್ಯತೆಯನ್ನು ಹೇರಿ ಈ ಸಮಾಜವ್ಯವಸ್ಥೆಯು ದಲಿತರನ್ನು ಪೇಚಿಗೆ ಒಳಪಡಿಸಿತು. ಅವರ ಇಂಥ ಅವಮಾನಿತ ಬದುಕಿನ ಚಿತ್ರಣ ನೀಡುವುದು ಮತ್ತು ಈ ಸಮಾಜವ್ಯವಸ್ಥೆಯ ವಿರುದ್ಧ ವಿದ್ರೋಹದ ಸಂವೇದನೆಯನ್ನು ಪ್ರಕಟ ಪಡಿಸುವುದು ಈ ದಲಿತ ಸಾಹಿತ್ಯದ ಒಂದು ಪ್ರಮುಖ ಅಂಶವಾಗಿದೆ. ಇಲ್ಲಿಯ ವ್ಯವಸ್ಥೆಯು ದಲಿತರನ್ನು ತುಚ್ಛವಾಗಿ ಕಂಡಿತು, ದಾರಿದ್ರ್ಯದಲ್ಲಿ ಕೊಳೆಯುವಂತೆ ಮಾಡಿತು. ಆದುದರಿಂದ ಈ ಸಮಾಜ ರಚನೆಯ ಬಗೆಗೆ ದಲಿತರಿಗೆ ಆಕ್ರೋಶ ವುಂಟಾಗುವುದು ಅತ್ಯಂತ ಸ್ವಾಭಾವಿಕವಾಗಿದೆ. ಆದುದರಿಂದ ಯಾವ ಸಾಮಾಜಿಕ ಧಾರ್ಮಿಕ ವಿಷಯಗಳ ಮೂಲಕವಾಗಿ ದಲಿತರ ಮೇಲೆ ಅನ್ಯಾಯ ಅತ್ಯಾಚಾರಗಳು ಆಗುತ್ತವೆಯೋ ಅವುಗಳ ವಿರುದ್ಧ ವಿದ್ರೋಹ ಮಾಡಲೇಬೇಕು ಎಂಬ ಹಿನ್ನಲೆ ಬಿಂಧು ಮಾಧವ, ಬಾಬುರಾವ ಬಾಗೂಲ ಮೊದಲಾದ ಲೇಖಕರ ಸಾಹಿತ್ಯದಲ್ಲಿ ಕಂಡುಬರುತ್ತದೆ. ದಲಿತ ಸಾಹಿತ್ಯವೆಂಬ ನಾಮನಿರ್ದೇಶ ಪ್ರಾಪ್ತವಾಗುವ ಪೂರ್ವ

ದಲ್ಲಿಯೇ ಈ ಹಿನ್ನೆಲೆಯಲ್ಲಿ ಈ ಸಾಹಿತಿಗಳ ಸಾಹಿತ್ಯದಲ್ಲಿ ಇದು ಚಿತ್ರಿತವಾದುದು ಗಮನಾರ್ಹವಾದ ಅಂಶವಾಗಿದೆ.

ದಲಿತ ಸಾಹಿತ್ಯದಲ್ಲಿ ಜನ್ಮಜಾತ ಅಸ್ಪೃಶ್ಯತೆಯ ಜೊತೆಗೆ ದಲಿತರ ಪಾಲಿಗೆ ಬಂದ ದಾರಿದ್ರ್ಯದ ಚಿತ್ರಣವು ಪರಿಣಾಮಕಾರಿಯಾಗಿ ಬಂದಿದೆ. ಈ ದೃಷ್ಟಿಯಿಂದ ಅಣ್ಣಾ ಭಾವು. ಸಾಠೆ ಅವರ 'ಸ್ಮಶಾಣಾತಿಲ ಸೋನಾ' (ಸ್ಮಶಾನದಲ್ಲಿನ ಬಂಗಾರ), ಭಾವುರಾವ ಬಾಗೂಲರವರ ಭೂಕ (ಹಸಿವು) ಈ ಕಥೆಗಳು ಉಲ್ಲೇಖನೀಯವಾಗಿವೆ.

ಅಣ್ಣಾಭಾವು ಸಾಠೆಯವರ 'ಸ್ಮಶಾಣಾತಿಲ ಸೋನಾ' ಕಥೆಯಲ್ಲಿ 'ಕೋಣದಂತೆ ಬಲಿಷ್ಠನಾದ ಭೀಮಾನಿಗೆ ಮುಂಬೈಯಲ್ಲಿ ಎಲ್ಲೆಡೆ ಸುತ್ತಾಡಿದರೂ ಕೆಲಸ ಸಿಗುವುದಿಲ್ಲ. ಆಗ ಸ್ಮಶಾನದಲ್ಲಿ ಹೆಣ ಸುಟ್ಟಬೂದಿಯಲ್ಲಿ ಬಂಗಾರ ಇರುತ್ತದೆ ಎಂಬ ಬದುಕುವ ಅದ್ಭುತ ಮಾರ್ಗ ಅವನಿಗೆ ಹೊಳೆಯುತ್ತದೆ. ಅದಕ್ಕಾಗಿ ಆತ ಇಡೀ ಸ್ಮಶಾನ ವನ್ನೆಲ್ಲ ತಿರುವಿ ಹಾಕಿದನು. ಒಂದು ದಿನ ರಾತ್ರಿ ಸ್ಮಶಾನದಲ್ಲಿ ಒಂದು ಕಡೆ ನರಿಯು ಹೆಣತಿನ್ನಲು ಬಾಯಿ ಹಾಕಲು ಭೀಮನ ಬೆರಳನ್ನು ಹಿಡಿಯಿತು. ಬೆರಳನ್ನು ಪ್ರೇತವೇ ಹಿಡಿದಿದೆಯೆಂದು ಬೆರಳನ್ನು ಹೊರತಗೆಯಲು ಪ್ರೇತದ ಮೇಲೆ ಪ್ರಹಾರ ಮಾಡುತ್ತ 'ನನ್ನನ್ನು ಬಿಡು' ಎಂದು ಅಬ್ಬರಿಸುವನು. ಕೊನೆಗೆ ಭೀಮಾ ತನ್ನ ಬೆರಳುಗಳನ್ನೇ ಕಳೆದುಕೊಳ್ಳಬೇಕಾಗುತ್ತದೆ.

ಬಾಬುರಾವ್ ಬಾಗೂಲರ 'ಭೂಕ' ಕಥೆಯ ಬಡ ಬೆಸ್ತರ ಭಾಗು ನಿರಂತರ ಸುರಿಯುವ ಮಳೆಯಿಂದಾಗಿ ದಾರಿಕಾಣದವಳಾಗಿದ್ದಾಳೆ. ಸ್ವಲ್ಪ ಮಳೆ ನಿಂತಾಗ ನದಿಯ ದಂಡೆಗೆ ಮೀನು ಹಿಡಿಯಲು ಹೋಗುವನು. ಮಕ್ಕಳು ಮಳೆನೀರಿನಲ್ಲಿ ತೇಲುತ್ತ ಬಂದ ಹಾವಿನೊಂದಿಗೆ ಆಡುತ್ತಿದ್ದಾರೆ. ಸ್ವಲ್ಪ ಸಮಯದಲ್ಲಿ ಮಕ್ಕಳಿಗೆ ಪ್ರಿಯವಾದ ಮೀನು ಸಿಗಲು ಮನೆಗೆ ಮರಳುವಳು. ಊಟ ಮಾಡಿ ಮಲಗಿದಾಗ ನದಿಯಲ್ಲಿ ಹರಿದು ಹೋದ ಹಾವು ಕಚ್ಚಿದ ಬಗ್ಗೆ ಭಿಕಾನಿಗೆ ಕನಸುಬೀಳುವುದು. ಎಚ್ಚರವಾದ ಮೇಲೆ ತಾಯಿಗೆ ಅದನ್ನು ಹೇಳುವನು. ಆಗ ಹಾವು ಕಚ್ಚಿ ತನ್ನ ತಾಯಿ ಸತ್ತುದು ಅವಳಿಗೆ ನೆನಪಾಗಿ ತಾನು ಮತ್ತು ಮಕ್ಕಳು ತಿಂದುದು ಮೀನವಲ್ಲ ಹಾವನ್ನೇ ಎಂಬ ಭೀತಿಯಿಂದ ಅವಳು ಸಾಯುತ್ತಾಳೆ. ದಾರಿದ್ರ್ಯದಿಂದ ದಲಿತರ ಸಂವೇದನೆಗಳು ಹೇಗೆ ನಷ್ಟವಾಗುತ್ತಿವೆ ಎಂಬುದರ ಪರಿಣಾಮಕಾರಿ ಚಿತ್ರಣ ಈ ಕಥೆ ಯಲ್ಲಿದೆ. 'ತನ್ನ ಹಸಿವನ್ನು ಹಿಂಗಿಸಿಕೊಳ್ಳಲು ನಾಯಿಯ ಬಾಯಲ್ಲಿಯ ಮಾಂಸದ ತುಂಡನ್ನು ತಗೆಯಲು ಬಾಲಕ ಪ್ರಲ್ಹಾದನು ಪ್ರಯತ್ನಿಸುವನು. ಆಗ ಆ ನಾಯಿ ಅವನನ್ನು ಕಚ್ಚುತ್ತದೆ.' ಎಂಬ ಹೃದಯವಿದ್ರಾವಕ ಚಿತ್ರಣ ಪ್ರಾ. ಈ. ಸೋನ ಕಾಂಬಳೆಯವರ 'ಆಠವಣೆಚೆ ಪಕ್ಷಿ' ಈ ಆತ್ಮಕಥನದಲ್ಲಿ ಬರುತ್ತದೆ.

ಅಸ್ಪೃಶ್ಯ ಜಾತಿಯಲ್ಲಿ ಹುಟ್ಟಿದುದರಿಂದಾಗಿ ದಲಿತರು ಎಂಥ ಅವಮಾನಿತ ಜೀವನವನ್ನು ಜೀವಿಸಬೇಕಾಗುತ್ತದೆ ಎಂಬುದರ ಚಿತ್ರಣ ಅನೇಕ ದಲಿತ ಲೇಖಕರ ಸಾಹಿತ್ಯದಲ್ಲಿ ಪ್ರಭಾವಿಯಾಗಿ ಚಿತ್ರಿತವಾದುದು ಕಂಡುಬರುತ್ತದೆ. ಗಣಾ ಖೋತನ ಹುಡುಗನಿಗೆ ನೀರು ಸೇದಿ ಹಾಕಿರಿ ಎಂದು ಬೇಡುತ್ತಿರುವ ಅಶೋಕನು ತಿಳಿಯದೆ ಅವನ ಮಣ್ಣಿನಪಾತ್ರೆಯನ್ನು ಮುಟ್ಟುವನು. ಆಗ ಅವನನ್ನು ಖೋತನ ಮಗ ಸಾಯುವಂತೆ ಹೊಡೆಯುವನು. ಹೀಗೆ ಯೋಗರಾಜ ವಾಘಮಾರೆಯ 'ಪ್ರಾಯಶ್ಚಿತ್' ಕಥೆಯಲ್ಲಿ ಚಿತ್ರಿತವಾಗಿದೆ. 'ದಾದುಮಹಾರನ ಮಗ ಕಲಿತು ತನ್ನ ಊರ ಕಡೆಗೆ ಹೊರಟ ಚಕ್ಕಡಿಯಲ್ಲಿ ಕುಳಿತುಕೊಳ್ಳುವನು. ಚಕ್ಕಡಿಯವನೊಂದಿಗೆ ಮಾತನಾಡುವಾಗ ದಾದು ಮಹಾರನ ಮಗನ ಜಾತಿ ತಿಳಿಯಲು ಅವನ ಸಾಮಾನುಗಳನ್ನೂ ಗಾಡಿಯಿಂದ ಬೀಸಾಕಿ ಬೈಯುವನು.' ಇದು ಅವಿನಾಶ ಡೋಳಸರ 'ಶಿಕ್ಷಣ ಬೋಂಬ ಮಾರತ' (ಶಿಕ್ಷಣ ಬೊಬ್ಬೆ ಹಾಕಿತು) ಕಥೆಯಲ್ಲಿ ಚಿತ್ರಿತವಾಗಿದೆ.

ದಲಿತ ಸಾಹಿತ್ಯದ ಸ್ವರೂಪ ಮತ್ತು ದಲಿತ ಸಂವೇದನೆಯನ್ನು ಗಮನಿಸಿದ ಮೇಲೆ ದಲಿತೇತರ ಲೇಖಕರ ದಲಿತ ಜೀವನ ಚಿತ್ರಣವುಳ್ಳ ಸಾಹಿತ್ಯ ಕುರಿತು ಕೆಲ ಮಟ್ಟಿಗೆ ಯೋಚಿಸಬಹುದಾಗಿದೆ. ೧೯೨೫ರಿಂದ ಇಂದಿನ ವರೆಗೆ ಅನೇಕ ದಲಿತೇತರ ಲೇಖಕರು ತಮ್ಮ ಸಾಹಿತ್ಯದಲ್ಲಿ ದಲಿತ ಜೀವನವನ್ನು ಚಿತ್ರಿಸಿದುದು ಕಂಡುಬರುತ್ತದೆ. ಆರಂಭದ ಕಾಲದಲ್ಲಿ ದಲಿತರ ಜೀವನವನ್ನು ಚಿತ್ರಿಸಿದ ಶ್ರೀ. ಕೃ. ಕೋಲ್ಹಟಕರ, ವಾ. ಮ. ಜೋಶಿ, ಸಾನೆಗುರೂಜಿ, ವಿ. ಸ. ಖಾಂಡೇಕರ, ವಿ. ವಾ. ಹಡಪ, ಗ. ತ್ರ್ಯಂ. ಮಾಡಖೋಲ್ಕರ್, ಶ್ರೀ. ವೆಂ. ಕೇತ್ಕರ್, ನಾ. ಸಿ. ಫಡಕೆ; ರ. ವಾ, ಧಿಗೆ ಮೊದಲಾದ ದಲಿತೇತರ ಲೇಖಕರ ಮೇಲೆ ಮಹಾತ್ಮಾ ಗಾಂಧೀಜಿಯವರ ಅಸ್ಪೃಶ್ಯ ನಿವಾರಣಾ ಚಳುವಳಿಯ ವೈಚಾರಿಕ ಪ್ರಭಾವ ಕಂಡುಬರುತ್ತದೆ. ಅಸ್ಪೃಶ್ಯತೆಯನ್ನು ನಷ್ಟಗೊಳಿಸುವ ಪ್ರಬೋಧನೆಯ ಉದ್ದೇಶದಿಂದ ದಲಿತರ ಜೀವನವನ್ನು ಅವರು ಚಿತ್ರಿಸಿದುದು ಕಂಡುಬರುತ್ತದೆ. ಅದರಿಂದಾಗಿ ಈ ಲೇಖಕರ ಸಾಹಿತ್ಯದಲ್ಲಿ ದಲಿತ ಲೇಖಕರಂತೆ ದಲಿತ ಜೀವನದ ಪ್ರಮುಖ ವೈಶಿಷ್ಟ್ಯಗಳು ಚಿತ್ರಿತವಾಗದೇ ಹೋಗುತ್ತವೆ. ಕಾರಣ ಈ ಲೇಖಕರಿಗೆ ದಲಿತ ಜೀವನದ ಪ್ರತ್ಯಕ್ಷ ಅನುಭವವಿಲ್ಲದೆ ದಲಿತ ಜೀವನವನ್ನು ಕಲ್ಪನೆಯ ಮೂಲಕ ಚಿತ್ರಿಸಲು ಪ್ರಯತ್ನಿಸಲಾಗಿದೆ. ದಲಿತ ಜೀವನಕ್ಕೆ ಸಂಬಂಧಪಟ್ಟಂತೆ ಈ ಲೇಖಕರ ಮನಸ್ಸಿನಲ್ಲಿ ಸದ್ಭಾವನೆ ಇದ್ದಿತು. ಅಸ್ಪೃಶ್ಯತೆ ನಷ್ಟವಾಗಿ ದಲಿತರ ಸ್ಥಿತಿ ಸುಧಾರಿಸಬೇಕು ಎಂಬ ಕಳಕಳಿ ಈ ಲೇಖಕರದ್ದಾಗಿದೆ. ಅದರಿಂದಾಗಿ ಅವರು ತಮ್ಮ ಸಾಹಿತ್ಯದಲ್ಲಿ ದಲಿತ ಜೀವನದ ಚಿತ್ರಣವನ್ನೀಯಲು ಪ್ರವೃತ್ತರಾಗಿದ್ದಾರೆ.

ದಲಿತ ಜೀವನವನ್ನು ಚಿತ್ರಿಸುವ ಶ್ರೀ. ಕೃ. ಕೋಲ್ಹಟ್ಕರರ 'ಶಾಮಸುಂದರ'ವು ಮೊದಲನೆಯ ಕಾದಂಬರಿಯಾಗಿದೆ. ಜಾತಿಭೇದವು ನಾಶವಾಗಬೇಕೆಂಬ ಇಚ್ಛೆ

ಕೋಲ್ಹಟ್ಕರರ ಮನಸ್ಸಿನಲ್ಲಿದ್ದ ಮೂಲಕ ಬ್ರಾಹ್ಮಣವರ್ಗದ ಶಾಮನನ್ನು ನಾನಾ ಮರಾಠೆಯನ್ನಾಗಿ ಮಾಡಿ ದಲಿತರ ವಸತಿಯನ್ನು ಸುಧಾರಿಸಲು ಅಲ್ಲಿಗೆ ಕಳಿಸಿದರು. ದಲಿತ ವಸತಿಯ ಜನರೊಂದಿಗೆ ಕೂಡಿ ಬೆರೆತು ಜಾತಿಭೇದವನ್ನು ಮುರಿದುಹಾಕುವ ಪ್ರಯತ್ನಮಾಡುವ ಮೊದಲನೆಯ ನಾಯಕನನ್ನು ಕೋಲ್ಹಟ್ಕರರು ಇಲ್ಲಿ ಚಿತ್ರಿಸಿದ್ದಾರೆ. ವಿ. ಸ. ಖಾಂಡೇಕರರ 'ದೋನ ಮನೆ' ಕಾದಂಬರಿಯಲ್ಲಿ ಜನ್ಮತಃ ಬ್ರಾಹ್ಮಣನಾದರೂ ಓರ್ವ ಅಸ್ಪೃಶ್ಯನು ಪಾಲನೆ ಮಾಡಿದುದರಿಂದ ಹೊಲೆಯನಾದ 'ಶ್ರೀ' ನಾಯಕನು ಚಿತ್ರಿತನಾಗಿದ್ದಾನೆ. ಆದರೆ ಅವನು ದಲಿತರಂತೆ ತೋರುವುದೇ ಇಲ್ಲ. ದಲಿತರ ಯಾವುದೇ ವೇದನೆಯನ್ನು ಅವನು ಈ ಕಾದಂಬರಿಯಲ್ಲಿ ಅನುಭವಿಸಬೇಕಾಗುವುದಿಲ್ಲ. ಅವನು ಕಾಲೇಜಿನಲ್ಲಿ ಕಲಿಯುವನು, ಕ್ರಿಕೇಟದಂತಹ ಆಟದಲ್ಲಿ ಅವನು ಪ್ರವೀಣನಾಗಿದ್ದಾನೆ—ಇಷ್ಟೇ ಅಲ್ಲ ಉಚ್ಚವರ್ಗದ ಸಿನೇಮಾ ತಾರೆಯ ಪ್ರೇಮದಲ್ಲಿಯೂ ಬೀಳುವನು. ಆದರೆ ಕಾದಂಬರಿಯ ಕೊನೆಯಲ್ಲಿ ಬಾಬಾಸಾಹೇಬ ಅಂಬೇಡ್ಕರರ 'ಚವದಾರ ಕೆರೆ'ಯ ಸತ್ಯಾಗ್ರಹದಿಂದ ಪ್ರಭಾವಿತರಾದುದರಿಂದಲೋ ಏನೋ ಖಾಂಡೇಕರರು ಅವನನ್ನು ಗ್ರಾಮದೇವಿಯ ಎದುರಿನ ಕೆರೆಯ ಸತ್ಯಾಗ್ರಹಕ್ಕೆ ಕಳುಹಿಸಿ ತಮ್ಮ ಉದ್ದೇಶವನ್ನು ಈಡೇರಿಸಿಕೊಳ್ಳುವರು. ಇದರಿಂದಾಗಿ ಈ ಕಾದಂಬರಿಯಲ್ಲಿ ದಲಿತರ ವಾಸ್ತವ ಜೀವನದ ಚಿತ್ರಣ ದೊರೆಯುವುದಿಲ್ಲ. ಈ ಕಾಲದ, ಮೇಲೆ ಉಲ್ಲೇಖಿಸಲ್ಪಟ್ಟ ಇತರ ದಲಿತೇತರರು ಸಹ ದಲಿತರ ಮನೆ-ಮಠ, ಅವರ ಉದ್ಯೋಗ ವ್ಯವಸಾಯ ಹಾಗೆಯೇ ಅವರು ಜೀವಿಸುವ ರೀತಿ ಮತ್ತು ಭಾಷೆಯ ಚಿತ್ರಣವನ್ನು ವಿಶೇಷವಾಗಿ ಮಾಡುವುದಿಲ್ಲ. ಒಂದು ವೇಳೆ ಇವುಗಳ ಚಿತ್ರಣವನ್ನು ಮಾಡಿದರೂ ಅವು ಪರಿಪೂರ್ಣವಾಗಿರುವುದಿಲ್ಲ. ಇದಕ್ಕೆ ಕಾರಣವೆಂದರೆ ದಲಿತರ ಜೀವನವನ್ನು ಚಿತ್ರಿಸುವ ಹಿನ್ನೆಲೆಯಲ್ಲಿ ಅವರಲ್ಲಿ ಉಪದೇಶಾತ್ಮಕ ಉದ್ದೇಶವಿದೆ. ದಲಿತೇತರ ಲೇಖಕರ ದಲಿತ ಜೀವನದ ಚಿತ್ರಣದಲ್ಲಿ ಕೆಲವು ಕೊರತೆಗಳು ಉಳಿಯುವುದಕ್ಕೆ ಕಾರಣಗಳೆಂದರೆ ದಲಿತ ಮತ್ತು ದಲಿತೇತರ ಈ ಎರಡು ವರ್ಗದಲ್ಲಿ ಸಾಮಾಜಿಕ ದೃಷ್ಟಿಯಿಂದ ಈ ಕಾಲಖಂಡದಲ್ಲಿ ತುಂಬಾ ಅಂತರವಿದ್ದಿತು. ಆದರಿಂದಾಗಿ ದಲಿತೇತರಿಗೆ ದಲಿತ ಜೀವನ ಹಾಗೂ ಅವರ ಅಂತರಂಗ ಸಮೀಪದಿಂದ ಪರಿಚಯವಾಗುವುದು ಕಠಿಣವಾಗಿದ್ದಿತು. ದೂರದಿಂದಲೇ ದಲಿತರ ಮನೆಗಳು ಹೇಗೆ ಕಾಣುತ್ತವೆಂಬುದು ನೋಡಿ ಮಾತ್ರ ಅವರಿಗೆ ಗೊತ್ತಿತ್ತು.

ನಾ. ಸಿ. ಫಡಕೆಯವರ 'ಪ್ರತಿಜ್ಞಾ', ಗೋ. ಲ. ಕೋಕಿಳರವರ 'ಗಾವಗುಂಡ', ಡಾ. ರ. ಬಾ. ಧಿಗೆ ಅವರ 'ಸರಾಯೀ' ಈ ಕಾದಂಬರಿಗಳಲ್ಲಿ ದಲಿತರ ಜೀವನ ಚಿತ್ರಣವು ರಂಜನೀಯವಾಗಿ ಮತ್ತು ವಿಷಯದಲ್ಲಿ ವೈಚಿತ್ರ್ಯ ವೈವಿಧ್ಯವನ್ನು ತರುವ ಉದ್ದೇಶದಿಂದ ಮಾತ್ರ ಮಾಡಿದಂತೆ ತೋರುತ್ತದೆ.

ಸ್ವಾತಂತ್ರ್ಯಾನಂತರ ಕಾಲದ ಸಾಹಿತ್ಯದಲ್ಲಿ ದಲಿತರ ಜೀವನದ ಯಥಾಯೋಗ್ಯ ಚಿತ್ರಣ ನೀಡುವಲ್ಲಿ ವಿಭಾವರಿ ಶಿರೂರಕರ ಮತ್ತು ವೆಂಕಟೇಶ ಮಾಡಗೂಳಕರ ಈ ಇಬ್ಬರೇ ದಲಿತೇತರ ಲೇಖಕರು ಕಂಡುಬರುತ್ತಾರೆ. ಈ ಕಾಲದಲ್ಲಿ ಸಮಾಜ ಪ್ರಬೋಧನೆಯಿಂದಾಗಿ ದಲಿತ ಮತ್ತು ದಲಿತೇತರ ಈ ಎರಡು ವರ್ಗದಲ್ಲಿ ಸಾಮಾಜಿಕ ದೃಷ್ಟಿಯಿಂದ ಅಂತರವು ಕಡಿಮೆಯಾಗುತ್ತ ಹೊರಟಿತ್ತು. ಆದರಿಂದಾಗಿ ಪರಸ್ಪರ ಜೀವನ ಕೆಲಪ್ರಮಾಣದ ಪರಿಚಯುವಾಗುತ್ತ ಸಾಗಿತ್ತು. ಅದರಂತೆ ದಲಿತೇತರ ಲೇಖಕರು ದಲಿತ ಲೇಖಕರೊಂದಿಗೆ ಒಂದಾಗಿ ಕಾರ್ಯಮಾಡುತ್ತಿದ್ದರು. ಈ ದೃಷ್ಟಿಯಿಂದ ವಿಭಾವರಿ ಶಿರೂರಕರ ಅವರ 'ಬಳಿ' ಈ ಕಾದಂಬರಿಯಲ್ಲಿ 'ಅಬಾ' ಹೆಸರಿನ ಮಾಂಗ ಗಾರುಡಿ ಜಾತಿಯ ಬಾಲಕನು ಅಸ್ಪೃಶ್ಯ ಜಾತಿ ಹಾಗೂ ದಾರಿದ್ರ್ಯದಿಂದಾಗಿ ಅನುಭವಿಸಬೇಕಾದ ಕಷ್ಟಗಳ ಪ್ರಭಾವಿ ಚಿತ್ರಣ ಕಂಡುಬರುತ್ತದೆ. ಅದರಂತೆ ವೆಂಕಟೇಶ ಮಾಡಗೂಳಕರರ ಅನೇಕ ಕಥೆಗಳಲ್ಲಿ ದಲಿತ ಜೀವನದ ವಿವಿಧಾಂಶಗಳ ಚಿತ್ರಣ ಕಂಡುಬರುತ್ತದೆ. ದಲಿತಸಾಹಿತ್ಯವೆಂಬ ಹಣೆಪಟ್ಟಿ ರೂಢಿಯಲ್ಲಿ ಬರುವ ಪೂರ್ವದಲ್ಲಿಯೇ ಅವರು ಬರೆದ 'ದೇವಾ ಸಟವಾ ಮಹಾರ್' ಈ ಕಥೆಯಲ್ಲಿ ಮೊದಲ ಬಾರಿಗೆ ವಿದ್ರೋಹ ಪ್ರಕಟವಾಗುತ್ತದೆ. ಕಾರಣವಿಲ್ಲದೆ ಬಯ್ಯುವ ದೇವಿಕಾ ಡಾಕ್ಟರನಿಗೆ ದೇವಾ ಹೇಳುತ್ತಾನೆ 'ಬಾ ಬಾಂಬ್ಲಿಯ ಚಾವಡಿಯ ಕೆಳಭಾಗಕ್ಕೆ ಬಾ. ಆಗ ನನ್ನ ಕಾಲ್ಮರಿಯಿಂದ ನಿನ್ನ ಬಾಯಿ ಜಜ್ಜುತ್ತೇನೆ.' ದಲಿತರ ದಾರಿದ್ರ್ಯ ಭಾವನಾತ್ಮಕವಾಗಿ ಅವರಿಗಾಗುವ ಕಳವಳ, ದಲಿತರ ಸ್ವಭಾವವನ್ನು ಮಾಡಗೂಳಕರರು ಅನೇಕ ಕಥೆಗಳಲ್ಲಿ ಚಿತ್ರಿಸಿದ್ದಾರೆ. ಆದರೆ ಇದೇ ಕಾಲದ ರಣಜಿತ ದೇಸಾಯಿಯವರ 'ಬಾರಿ', ಬಾ. ಭಿ. ಭೋರಕರರವರ 'ಭಾವಿನ', ದುರ್ಗಾ ಭಾಗವತರವರ' ಮಹಾನದಿಚಾ ತೀರಾವರ' ಈ ಕಾದಂಬರಿಗಳಿಂದ ಹಾಗೂ ಪು. ಭಾ. ಭಾವೆ; ಅರವಿಂದ ಗೋಖಲೆ ಇವರ ಕಥೆಗಳಲ್ಲಿ ದಲಿತರ ಜೀವನದ ರೋಮ್ಯಾಂಟಿಕ್ ಮತ್ತು ಅವಾಸ್ತವ ಸ್ವರೂಪದ ಚಿತ್ರಣ ಬಂದಿದೆ.

ಮಹಾರಾಷ್ಟ್ರ ರಾಜ್ಯದ ನಿರ್ಮಾಣದ ತರುವಾಯ ದಲಿತ ಲೇಖಕರಿಗೆ ಸಮಾನವಾಗಿ ದಲಿತೇತರ ಲೇಖಕರು ಸಹ ಸಾಕಷ್ಟು ಪ್ರಮಾಣದಲ್ಲಿ ದಲಿತರ ಜೀವನವನ್ನು ಚಿತ್ರಿಸಿರುವುದು ಕಂಡುಬರುತ್ತದೆ. ದಲಿತ ಸಮಾಜದಲ್ಲಿ ಉಂಟಾದ ಜಾಗೃತಿಯಿಂದ ಮತ್ತು ಅವರ ಅನೇಕ ಚಳುವಳಿಗಳಿಂದ ದಲಿತೇತರ ಲೇಖಕರು ಪ್ರಭಾವಿತರಾದರು. ಆದರಿಂದಾಗಿ ಈ ಕಾಲದಲ್ಲಿ ಜಯವಂತ ದಳವಿ, ಮಧು ಮಂಗೇಶ ಕರ್ಣಿಕ ಮತ್ತು ಅರುಣ ಸಾಧು ಅವರಂತಹ ದಲಿತೇತರ ಲೇಖಕರು ದಲಿತರ ಜೀವನವನ್ನು ಚಿತ್ರಿಸಲು ಮುಂದೆ ಬಂದರು, ಈ ಲೇಖಕರು ಸುಮಾರಾಗಿ ಪತ್ರಿಕಾ ವ್ಯವಸಾಯದಲ್ಲಿದ್ದವರು. ಆದರಿಂದಾಗಿ ಅವರು ತಮ್ಮ ಸಾಹಿತ್ಯದಲ್ಲಿ ನಗರಗಳಲ್ಲಿನ ಕೊಳಗೆರೆಯಲ್ಲಿ ವಾಸಿಸುವ ದಲಿತರ ಜೀವನದ ಚಿತ್ರಣವನ್ನು ಮಾಡಿದದು ಕಂಡುಬರುತ್ತದೆ. ಆದರೆ ಈ

ಚಿತ್ರಣವು ಪತ್ರಿಕೆಯ ವಾಚಕರ ಕುತೂಹಲವನ್ನು ಪೂರೈಸುವ ದೃಷ್ಟಿಯಿಂದ ಮಾತ್ರ ಮಾಡಿದುದಾಗಿ ತೋರುತ್ತದೆ. ಈ ಮೂಲಕ ದಲಿತರ ಅಂತರ್ಗತ ಜೀವನದ ಹಾಗೂ ಅವರ ಭಾಷೆಯ ಚಿತ್ರಣವನ್ನು ನೀಡುವುದು ಬಹುಮಟ್ಟಿಗೆ ಅವರಿಗೆ ಸಾಧ್ಯ ವಾಗಿಲ್ಲ.

ಮಧು ಮಂಗೇಶ ಕರಣಿಕರ 'ಬಾಬರ ಆಣಿ ಫೂಲ' ಹಾಗೂ ಅರುಣ ಸಾಧು ಅವರ 'ತ್ರಿಶಂಕು ವ ಬಹಿಷ್ಕಾರ' ಈ ಕಾದಂಬರಿಗಳು ಅಪವಾದಗಳಾಗಿವೆ. ಈ ಕಾದಂಬರಿಗಳಲ್ಲಿ ಅಲ್ಪಪ್ರಮಾಣದಲ್ಲಿಯಾದರೂ ಆಗಲಿ ದಲಿತರ ಚಳುವಳಿಯು ಹಾಗೂ ಅವರ ಬದಲಾವಣೆ ಹೊಂದುತ್ತಿರುವ ಮಾನಸಿಕತೆಯ ಪ್ರಭಾವಿ ಚಿತ್ರಣ ಬಂದಿದೆ. ಈ ಕಾದಂಬರಿಗಳಲ್ಲಿ ವಾಸ್ತವದಲ್ಲಿರುವಂತೆಯೇ ದಲಿತರಂತಹ ನಾಯಕರನ್ನು ಕಲ್ಪಿಸಿಕೊಳ್ಳಲಾಗಿದೆ. ಅವರ ಮಾತು ನಡುವಳಿಕೆ ದಲಿತ ವ್ಯಕ್ತಿಯನ್ನು ಅನುಸರಿಸು ವಂತೆಯೇ ಚಿತ್ರಿಸುವಲ್ಲಿ ಈ ಲೇಖಕರು ಕೆಲಮಟ್ಟಿಗೆ ಯಶಸ್ವಿಯಾಗಿದ್ದಾರೆ. ಆದರೆ ಈ ಲೇಖಕರ ಬಗ್ಗೆ ಬರೆಯುವ ಮಹಾದೇವ ಮೋರೆ, ರ. ಬಾ. ಧಿಗೆ, ಆನಂದ ಯಾದವ, ಗೋ. ನಿ. ದಾಂಡೇಕರ, ಶಂಕರ ಪಾಟೀಲ, ಚಂದ್ರಕುಮಾರ ನಲಗೆ ಮೊದಲಾದ ದಲಿತೇತರ ಲೇಖಕರು ದಲಿತರಲ್ಲಿಯ ವಿಭಿನ್ನ ಜಾತಿಯ ಮನುಷ್ಯರ ಚಿತ್ರಣವನ್ನು ಕೊಡುತ್ತಿದ್ದರೂ ಸಹ ಯಥಾರ್ಥ ಚಿತ್ರಣ ಅವರಿಂದ ಸಾಧ್ಯವಾಗಿಲ್ಲ. ಈ ಲೇಖಕರು ತಮ್ಮ ಲೇಖನ ವೃತ್ತಿಗೆ ಅನುಸಾರ ಮತ್ತು ಸಂವೇದನಶೀಲತೆಯನ್ನು ಅನುಸರಿಸಿ ದಲಿತ ಜೀವನದ ಚಿತ್ರಣಮಾಡುತ್ತಿರುವುದು ಕಂಡುಬರುತ್ತದೆ. ಕೆಲವು ಲೇಖಕರ ಬರವಣಿಗೆಯ ರೀತಿ ಅತಿರಂಜಿತ, ಭಯಾನಕ ಲೈಂಗಿಕ ಚಿತ್ರಣವನ್ನು ನೀಡುವ ಪ್ರಾಧಾನ್ಯತೆವುಳ್ಳದಾಗಿರುತ್ತದೆ. ಈ ಲೇಖಕರು ದಲಿತ ಜೀವನದ ಚಿತ್ರಣ ನೀಡಬಯಸಿದಾಗ ದಲಿತ ಜೀವನದ ಭಯಾನಕ ಭಾಗವನ್ನು ಚಿತ್ರಿಸುವ ಬದಲು ಆ ಜೀವನದ ಲೈಂಗಿಕ ಅವಾಸ್ತವಗಳನ್ನು ಚಿತ್ರಿಸಲು ಆಯ್ದುಕೊಂಡುದುದು ಕಂಡು ಬರುತ್ತದೆ. ಇದರಿಂದಾಗಿ ಜಯವಂತ ದಳವಿ (ಚಕ್ರ) ಮತ್ತು ಮಧು ಮಂಗೇಶ ಕರಣಿಕರ (ಮಾಹೀಮಂಚಿ ಖಾಡಿ) ಈ ಕಾದಂಬರಿಗಳಲ್ಲಿ ಸ್ತ್ರೀ-ಪುರುಷ ಸಂಬಂಧಗಳಿಗೆ ವಿಶೇಷ ಮಹತ್ವ ಕೊಟ್ಟುದು ಕಂಡುಬರುತ್ತದೆ. ಈ ದೃಷ್ಟಿಯಿಂದ ಜಯವಂತ ದಳವಿಯವರ 'ಚಕ್ರ' ಕಾದಂಬರಿಯಲ್ಲಿ 'ತುದಿಗಾಲ ಮೇಲೆ ಕುಳಿತ ಅಮ್ಮಾ ಶರೀರದ ಎಲ್ಲ ಭಾರವನ್ನು ಗುಂಡುಕಲ್ಲು ಮೇಲೆ ಹಾಕಿ ಲಗುಬಗೆಯಿಂದ ಕೊಬ್ಬರಿ ಮೆಣಸಿನಕಾಯಿಗಳನ್ನು ಅರಿಯುತ್ತಿದ್ದಳು. ಅದರಿಂದಾಗಿ ಅವಳ ನಿತಂಬ ಅಗಲಾಗಿ ಕಾಣುತ್ತಿತ್ತು. ಪಾಟೀಕಲ್ಲು ಮೇಲಿನ ಅರೆದುದನ್ನು ಸರಿಸಲು ಕೈಯನ್ನು ಮುಂದೆ ಸರಿಸಿದಾಗ ಅವಳ ಬಟ್ಟೆ ಧರಿಸದ ಕೊಬ್ಬಿದ ಸ್ತನಗಳು ಟಕ್‌ಟಕ್ ಹೊಯ್ದಾಡುತ್ತಿದ್ದವು' (ಪುಟ ೪೨) ಮಧುಮಂಗೇಶ ಕರಣಿಕರರ 'ಮಾಹಿಮಾಚಿ ಖಾಡಿ'ಯಲ್ಲಿನ ಚಿತ್ರಣವೂ ಇದೇ ರೀತಿ ಇದೆ. 'ಕಾಮಾಟಿಪುರಿಯಲ್ಲಿ ಧಿಕಾ ತನ್ನ ಅಕ್ಕ ಜಯಾ

ಳೊಂದಿಗೆ ಹೋದಾಗ ತಂಟಿಗೆ ಬಣ್ಣ ಸವರಿಕೊಂಡ ಓರ್ವ ತರುಣಿ ಅವನ ಬೆನ್ಹತ್ತಿ ಹೇಳುತ್ತಾಳೆ 'ಚಲೋನಾ, ದೇಖೊ ಕೈಸಿ ಟೈಟ್ ಹಂ...... ತನ್ನ ಸೆರಗನ್ನು ಮೇಲೆ ಸರಿಸಿ ಭಿಕಾನ ಕೈಯನ್ನು ಹಿಡಿದು ತನ್ನ ಎದೆಯ ಮೇಲೆ ಇರಿಸಿದಳು' (ಪುಟ ೪೯).

ಆನಂದ ಯಾದವ 'ನವರಂಗ' ಕಾದಂಬರಿಯಲ್ಲಿ ಗುಣಾ ಹೆಸರಿನ ನರ್ತಕಿಯ ಮೇಲೆ ಜಯಸಿಂಗರಾವನ ಕಡೆಯ ಜನರಿಂದ ಬಲಾತ್ಕಾರವಾಗುತ್ತದೆ ಎಂಬ ಭಯಾನಕ ವಿಷಯವನ್ನು ಆಯ್ದುಕೊಂಡಿದ್ದಾರೆ. ದೇವದಾಸಿಯರು ಅನೇಕರ ಭೋಗಕ್ಕೆ ಬಲಿಯಾಗುತ್ತಾರೆ ಎಂಬ ವಾಚಕರ ಆಸಕ್ತಿಯ ವಿಷಯವನ್ನು ಮಹಾದೇವ ಮೋರೆ, ರಣಜಿತ ದೇಸಾಯಿ. ರಾಜನ್ ಗವಸ ಆಯ್ದುಕೊಳ್ಳುತ್ತಾರೆ. ರಣಜಿತ ದೇಸಾಯಿಯವರ 'ಸಮಿಧಾ' ಕಾದಂಬರಿಯಲ್ಲಿ ಮೂಕ ಸ್ತ್ರೀಯಮೇಲೆ ಬಲಾತ್ಕಾರ ವಾಗುವ ಚಿತ್ರಣವಿದೆ. ರ. ವಾ. ಧಿಗೆಯವರ 'ಕಾರ್ತಿಕಿ' ಕಾದಂಬರಿಯಲ್ಲಿ ಕಾರ್ತಿಕಿಯ ಬೆತ್ತಲೆ ಮೆರವಣಿಗೆಯನ್ನು ಊರಲ್ಲಿ ತಗೆಯುವುದು ಹಾಗೂ ಅವಳು ಯಾರಿಂದ ಬಸಿರಾದಳೆಂಬುದನ್ನು ದೇವರಿಗೆ ಕೇಳುವುದು; ಹಾಗೆಯೇ ಗಣೇಶ ಅವಟೆ ಯವರ 'ಗಣಜೋತ' ಕಾದಂಬರಿಯಲ್ಲಿ ಮಾದಿಗ ಜಾತಿಯ ಸ್ತ್ರೀಯನ್ನು ಇಟ್ಟು ಕೊಂಡವಳನ್ನಾಗಿ ಚಿತ್ರಿಸಲಾಗಿದೆ. ಈ ಪ್ರಕಾರದ ರಂಜನೀಯ ಮಸಾಲೆಯನ್ನು ಬಳಸಿ ಈ ದಲಿತೇತರ ಲೇಖಕರು ದಲಿತ ಜೀವನದ ಚಿತ್ರಣವನ್ನು ಮಾಡಿದುದು ಕಂಡುಬರುತ್ತದೆ. ಆದರೆ ಇದರೊಂದಿಗೆ ಬರವಣಿಗೆ ಮಾಡುತ್ತಿರುವ ಚಾರುತಾ ಸಾಗರ, ಭಾಸ್ಕರ ಚಂದನಾ ಇವರು ಮಾತ್ರ ದಲಿತ ಜೀವನದ ವಿವಿಧಾಂಗಗಳನ್ನು ಪ್ರತ್ಯೇಯಕಾರಿ ಚಿತ್ರಣವನ್ನು ನೀಡುತ್ತಾರೆ. ಇವರಂತಹ ದಲಿತೇತರ ಲೇಖಕರು ಅಪವಾದವೆಂದೇ ಹೇಳಬೇಕು.

ದಲಿತೇತರ ಲೇಖಕರು ದಲಿತೇತರ ದೃಷ್ಟಿಕೋನದಿಂದ ಕಂಡ ದಲಿತವರ್ಗ ಎಂಬ ಸ್ವರೂಪ ಇದಕ್ಕೆ ಪ್ರಾಪ್ತವಾಗುತ್ತದೆಂದು ಹೇಳಬೇಕಾಗುತ್ತದೆ. ದಲಿತ ಲೇಖಕರು ಸ್ವಂತದ ಶೋಧವನ್ನು ಮಾಡಿಕೊಳ್ಳುತ್ತಿರುತ್ತಾರೆ. ಅದರಿಂದಾಗಿ ದಲಿತೇತರ ಲೇಖಕರ ಚಿತ್ರಣಕ್ಕಿಂತ ಬೇರೆಯಾದ ಚಿತ್ರಣವನ್ನು ನೀಡಲು ಅವನು ಸಮರ್ಥ ನಾಗುತ್ತಾನೆ. ಚಿತ್ರಣದ ವಿಷಯ ಮತ್ತು ಚಿತ್ರಣ ಮಾಡುವವ ದಲಿತನಾದಾಗ ಆ ಸಾಹಿತ್ಯಕ್ಕೆ ಜೀವಂತಿಕೆ ಮತ್ತು ವಾಸ್ತವತೆ ಪ್ರಾಪ್ತವಾಗುತ್ತದೆ. ಹುಟ್ಟಿನೊಂದಿಗೆ ಅಸ್ಪೃಶ್ಯತೆಯ ಅನುಭವವುಳ್ಳ ದಲಿತ ಲೇಖಕ ಆ ಅನುಭವಗಳ ಸ್ವಾಭಾವಿಕ ಜೀವಂತ ಹಾಗೂ ಪ್ರತ್ಯೇಯಕಾರಿ ಚಿತ್ರಣವನ್ನು ನೀಡಲು ಸಮರ್ಥನಾಗುತ್ತಾನೆ. ಆದರೆ ದಲಿತೇತರ ಲೇಖಕರಿಗೆ ಜನ್ಮಜಾತ ದಲಿತತ್ವದ ದುಃಖಗಳು ಏನೆಂಬುದರ ಅರಿವು ಇರುವುದಿಲ್ಲ. ಇದರಿಂದಾಗಿ ಅವರಿಗೆ ಅಸ್ಪೃಶ್ಯತೆಯ ವ್ಯಥೆ–ವೇದನೆಗಳ ಚಿತ್ರಣ ಮಾಡುವುದು ಕಠಿಣವಾಗುತ್ತದೆ. ದಾರಿದ್ರ್ಯದಿಂದಾಗಿ ಉಪವಾಸ ವನವಾಸವನ್ನು ಅನುಭವಿಸುವ,

ಕಷ್ಟಕಾರ್ಪಣ್ಯ ಹಾಗೂ ಆ ಮೂಲಕ ಉಂಟಾದ ಜೀವನದ ನಿರಾಶೆ ದಲಿತೇತರ ಲೇಖಕರು ಅನುಭವಿಸಿದ್ದರ ಮೂಲಕ ದಲಿತರ ದಾರಿದ್ರ್ಯದ ದಾಹದ ಪ್ರತ್ಯಕ್ಷ ಅನುಭವ ಅವರಿಗೆ ಇರುವುದು ಸಾಧ್ಯವಿಲ್ಲ. ಆದ್ದರಿಂದ ದೂರದಿಂದ ಕಾಣುವ ದಾರಿದ್ರ್ಯವನ್ನು ದಲಿತೇತರ ಲೇಖಕರು ಚಿತ್ರಿಸಲು ಸಮರ್ಥರಾದರೂ ದಲಿತರು ಯಾವ ಮಾನಸಿಕ ಪಾತಳಿಯಿಂದ ವೇದನೆಯನ್ನು ಅನುಭವಿಸುವರೋ ಅವರ ಚಿತ್ರಣವನ್ನು ದಲಿತೇತರ ಲೇಖಕರು ಕೊಡವುದು ಸಾಧ್ಯವಾಗಲಾರದು.

ದಲಿತರ ಜೀವನಕ್ರಮ ಹಾಗೂ ಅವರ ವ್ಯವಸಾಯದ ಬಗ್ಗೆ ದೂರದ ತಿಳುವಳಿಕೆ ದಲಿತೇತರ ಲೇಖಕರಿಗೆ ಇರಲು ಸಾಧ್ಯ. ಆದರೆ ಯಾರಿಗೆ ಯಾವ ಅವಸ್ಥೆಯಲ್ಲಿ ಇರಬೇಕಾಗುವುದೋ ಅವರ ಆಂತರಿಕ ದುಃಖಗಳು ಯಾವವು ಎಂಬುದನ್ನು ದಲಿತ ಲೇಖಕರೇ ವಾಸ್ತವವಾಗಿ ಮುಂದಿಡಲು ಸಮರ್ಥವಾಗಿರುತ್ತಾರೆ. ದಲಿತೇತರ ಲೇಖಕರಿಗೆ ಅಂತರ್ಗತ ಜೀವನದ ತಿಳುವಳಿಕೆ ಇರುವುದಿಲ್ಲ. ಅದರಿಂದಾಗಿ ಈ ವೈಶಿಷ್ಟ್ಯದ ಪರಿಣಾಮಕಾರಿ ಚಿತ್ರಣವನ್ನು ಅವರು ಕೊಡಲು ಸಮರ್ಥರಾಗುವುದಿಲ್ಲ.

ಸಾವಿರಾರು ವರ್ಷಗಳಿಂದ ಇಲ್ಲಿಯ ಸಮಾಜ ವ್ಯವಸ್ಥೆಯು ಅಸ್ಪೃಶ್ಯರೆಂದು ದಲಿತರನ್ನು ಪಶುಗಳಿಗಿಂತ ಕೀಳಾಗಿ ಕಂಡು ಭಯಂಕರ ಅನ್ಯಾಯ ಅತ್ಯಾಚಾರ ಮಾಡಿದೆ ಎಂಬುದನ್ನು ದಲಿತ ಲೇಖಕ ಮರೆಯಲಾರ. ಅದರಿಂದಾಗಿ ಈ ಸಮಾಜ ವ್ಯವಸ್ಥೆಯ ವಿರುದ್ಧದ ಕ್ರೋಧ ಅವನ ಮನದಲ್ಲಿರುತ್ತದೆ. ಅದರಿಂದಾಗಿ ಅವನು ದಲಿತರ ಮೇಲಿನ ಅನ್ಯಾಯ ಅತ್ಯಾಚಾರಗಳನ್ನು ಚಿತ್ರಿಸುವನು.—ಇಂಥ ಚಿತ್ರಣದಲ್ಲಿ ದೇವ ಧರ್ಮ ಮತ್ತು ಸಮಾಜವ್ಯವಸ್ಥೆಯನ್ನು ನಿರಾಕರಿಸುವ ಮತ್ತು ಅದರ ವಿರುದ್ಧ ಬಂಡೇಳುವ ವಿದ್ರೋಹಿಸಂವೇದನೆ ದಲಿತ ಲೇಖಕರ ಸಾಹಿತ್ಯದಲ್ಲಿ ಬರುತ್ತದೆ. ಈ ಸಂವೇದನೆಯನ್ನು ಸ್ವೀಕರಿಸಿ ದಲಿತೇತರ ಲೇಖಕರು ದಲಿತ ಜೀವನದ ಉತ್ಕಟ ಚಿತ್ರಣವನ್ನು ನೀಡುವುದು ಕಠಿಣವಾಗುತ್ತದೆ. ದಲಿತರ ಮನಃಪಿಂಡದ ಯಥಾರ್ಥ ಅರಿವು ದಲಿತ ಲೇಖಕನಿಗೇ ಇರಲು ಸಾಧ್ಯ. ಆದರೆ ದಲಿತರ ವಿಷಯು ವ್ಯಾಪಕ ಸಹಾನುಭೂತಿ ಮತ್ತು ಮಾನವತಾವಾದಿ ದೃಷ್ಟಿ ಇರುವ ವೆಂಕಟೇಶ ಮಾಡಗೂಳಕರ, ಮಧುಮಂಗೇಶ ಕಾರಣಿಕ ಹಾಗೂ ಚಾರುತಾ ಸಾಗರ ಇವರಂತಹ ದಲಿತೇತರ ಲೇಖಕರು ದಲಿತರ ಅಂತರಂಗ ಜೀವನದ ಪರಿಣಾಮಕಾರಿ ಹಾಗೂ ಹೃದಯಸ್ಪರ್ಶಿ ಚಿತ್ರಣವನ್ನು ನೀಡಲು ಸಮರ್ಥರಾಗುತ್ತಾರೆ. ಉಳಿದವರಿಗೆ ಮಾತ್ರ ದಲಿತ ಸಂವೇದನೆಯ ಮೂಲಕ ಅಂತಹ ಚಿತ್ರಣ ನೀಡುವುದು ಸಾಧ್ಯವಾಗದೇ ಹೋಗುತ್ತದೆ.

● ● ●

ಮುಕ್ತಿಮುದ್ರಾಗದ್ಯ
(ಸಂಪಾದನೆ)

● ಡಾ. ವೀರಣ್ಣ ರಾಜೂರ

ಕಥನಾತ್ಮಕ ದೀರ್ಘ ಗದ್ಯಕೃತಿಗಳಿಂದ ಭಿನ್ನವಾದ ಸ್ತೋತ್ರರೂಪದ ಲಘು ಗದ್ಯಕೃತಿಪ್ರಕಾರವೊಂದು ಸಂಸ್ಕೃತಸಾಹಿತ್ಯದಲ್ಲಿ ಮೊದಲಿನಿಂದಲೂ ಬೆಳೆದುಬಂದಿದೆ. ಬಾಣ, ಕಾಳಿದಾಸ, ಓಹಿಲಯ್ಯ, ಉದ್ಭಟ, ಹಲಾಯುಧ ಮೊದಲಾದ ಶಿವಭಕ್ತ ಕವಿಗಳು ಶಿವಸ್ತುತಿಪರವಾದ ಗದ್ಯಕೃತಿಗಳನ್ನು ರಚಿಸಿ ಶಿವಕೃಪೆಗೆ ಪಾತ್ರರಾದರೆಂಬ ಸಂಗತಿ ಪ್ರಸಿದ್ಧವಾಗಿದೆ.[೧]

ತೆಲುಗುಕವಿ ಪಾಲ್ಕುರಿಕೆ ಸೋಮನಾಥ ಅಷ್ಟೋತ್ತರ ಶತನಾಮಗದ್ಯ, ಅಕ್ಷರಮಾಲಿಕಾಗದ್ಯ, ಅಕ್ಷರಾಂಕಗದ್ಯ, ಉದಾಹರಣಗದ್ಯ, ನಮಸ್ಕಾರಗದ್ಯ, ಷಟ್‌ಸ್ಥಲಗದ್ಯ,[೨] ಪಂಚಪ್ರಕಾರಗದ್ಯ[೩] ಎಂಬ ಏಳು ಗದ್ಯಕೃತಿಗಳನ್ನು ಸಂಸ್ಕೃತದಲ್ಲಿ ಬರೆದುದಾಗಿ ತಿಳಿದುಬರುತ್ತದೆ.[೪] ಈತನ ಶಿಷ್ಯನಾದ ಚಕ್ರಪಾಣಿರಂಗನಾಥನು ತೆಲುಗಿನಲ್ಲಿ ಶತಕ, ಸೀಸ, ದಂಡಕ, ತಾರಾವಳಿ, ರಗಳೆ, ವೃತ್ತ ಮೊದಲಾದ ಪ್ರಕಾರದ ಕೃತಿಗಳ ಜೊತೆಗೆ ಮೂವತ್ತಾರು ಗದ್ಯಕೃತಿಗಳನ್ನೂ ಬರೆದಿರುವನೆಂದು ಸಿದ್ಧನಂಜೇಶನ ಗುರುರಾಜಚಾರಿತ್ರ ತಿಳಿಸುತ್ತದೆ.[೫] ರಾಮಾನುಜಾಚಾರ್ಯರು ಸಂಸ್ಕೃತ

---

೧. ವಿವರಗಳಿಗೆ ನೋಡಿ—ಡಾ. ಎಲ್. ಬಸವರಾಜು—ಅಲ್ಲಮನ ವಚನ ಚಂದ್ರಿಕೆ—ಪೀಠಿಕೆ ಪು. ೧೨-೧೩ ಮತ್ತು ಶಿವದಾಸ ಗೀತಾಂಜಲಿ—ಪೀಠಿಕೆ, ಪು. ೬೮-೬೯.

೨. ಇದೇ ಹೆಸರಿನ ಕನ್ನಡ ಕೃತಿಯೊಂದು ಮೊಗ್ಗೆಮಾಯಿದೇವನಿಂದ ರಚಿತವಾಗಿದೆ.

೩. ಇದು ಬೇರೊಂದು ಕೃತಿಯಾಗಿರದೆ ಬಸವಸ್ತುತಿಪರವಾದ ಐದು ಗದ್ಯಗಳಿಂದ ಕೂಡಿದುದಾಗಿರಬೇಕು. ಇದಕ್ಕೆ 'ಬಸವಣ್ಣನ ಪಂಚಗದ್ಯ' ಎಂದು ಕರೆದಿರುವುದು ಈ ಊಹೆಗೆ ಆಧಾರವಾಗಿದೆ. ಕವಿಚರಿತೆಕಾರರು ಇದರ ಪರಿಚಯ ಮಾಡಿಕೊಡುತ್ತ 'ಇವುಗಳ ಕೊನೆಯಲ್ಲಿ ಗ್ರಂಥಕರ್ತನ ಅಂಕಿತವುಳ್ಳ ಒಂದೊಂದು ಕನ್ನಡ ಕಂದಗಳಿವೆ' ಎಂದು ಹೇಳಿದ್ದಾರೆ. ಈ ಹೇಳಿಕೆ ಇದು ಒಂದು ಕೃತಿಯಲ್ಲ, ಐದು ಕೃತಿಗಳಿಂದ ಕೂಡಿದ ಒಂದು ಸಂಯುಕ್ತಕೃತಿ ಎಂಬುದನ್ನು ಸ್ಪಷ್ಟಪಡಿಸುತ್ತದೆ. (ಕಕಚ I ಪು. ೩೪೨),

೪. ಪಾಲ್ಕುರಿಕೆ ಸೋಮನಾಥ—ಕಾಶಿಪುಟ್ಟ ಸೋಮಾರಾಧ್ಯ, ಪ್ರಸಾರಾಂಗ, ಕ.ವಿ.ವಿ.ಧಾ. ೧೯೮೬, ಪು. ೩೪.

೫. ಗುರುರಾಜ ಚಾರಿತ್ರ ; ೧೨-೩೫, ೩೬,

ದಲ್ಲಿ ಶರಣಾಗತಿಗದ್ಯ, ವೈಕುಂಠಗದ್ಯ, ಶ್ರೀರಂಗಗದ್ಯ ಮೊದಲಾದವುಗಳನ್ನು ರಚಿಸಿದುದು ಕಂಡುಬರುತ್ತದೆ.[೬]

ಸಂಸ್ಕೃತ ತೆಲುಗಿನಂತೆ ಕನ್ನಡದಲ್ಲಿಯೂ ಈ ಮಾದರಿಯ ಕೆಲವು ಕೃತಿಗಳು ಹುಟ್ಟಿಕೊಂಡಿವೆ. ಕೆರೆಯಪದ್ಮರಸನ ಮರಿಮಗನಾದ ಗೌರಾರ್ಯನು ಒಂದು ಸ್ತೋತ್ರ ಗದ್ಯಕೃತಿ ಬರೆದಿದ್ದು, ಅದರಲ್ಲಿ ೧೦೧ ಪಾದಗಳಿರುವುದಾಗಿ ಪದ್ಮರಾಜ ಪುರಾಣದಿಂದ ತಿಳಿದುಬರುತ್ತದೆ.[೭] ಮೊಗ್ಗೆಯಮಾಯಿದೇವ 'ಷಟ್‌ಸ್ಥಲಗದ್ಯ' ಎಂಬ ಕೃತಿಯನ್ನು ರಗಳೆ ರೂಪದಲ್ಲಿ ಬರೆದಿದ್ದಾನೆ.[೮] ಚೆನ್ನವೀರದೇಶಿಕ, ಪ್ರಭುದೇವ, ಹರಿಹರರ ಹೆಸರಿನಲ್ಲಿ ಅಕ್ಷರಾಂಕಗದ್ಯ ಎಂಬ ಕೃತಿಗಳು ದೊರಕುತ್ತವೆ.[೯] ವಾದಿರಾಜರು ಭಾಮಿನಿ ಷಟ್ಪದಿಯಲ್ಲಿ 'ಸ್ವಪ್ನಗದ್ಯ' ಎಂಬ ಕೃತಿಯನ್ನು ರಚಿಸಿದ್ದಾರೆ.[೧೦] ಹೀಗೇ ಇನ್ನೂ ಕೆಲವು ಕನ್ನಡ ಗದ್ಯಕೃತಿಗಳು ಲಭ್ಯವಾಗುವ ಸಾಧ್ಯತೆಯಿದೆ.

ಶಾರ್ಙ್ಗದೇವ ತನ್ನ ಸಂಗೀತರತ್ನಾಕರದಲ್ಲಿ ಗದ್ಯರೂಪದ ಒಂದು ಪ್ರಬಂಧ ಪ್ರಕಾರದ ಲಕ್ಷಣವನ್ನು 'ಗದ್ಯಂ ನಿಗದ್ಯತೇ ಛಂದೋಹೀನಂ ಪದ ಕದಂಬಕಂ' ಎಂದು ಹೇಳುತ್ತಾನೆ.[೧೧] ಅಂದರೆ ಸಂಗೀತಕ್ಕೆ ಹೊಂದಿಕೊಳ್ಳುವ ಆದರೂ ಛಂದಸ್ಸಿಲ್ಲದ, ಕೇವಲ ಪದಗುಂಫನದಿಂದಾದುದು ಗದ್ಯ ಎಂಬುದು ಅವನ ಹೇಳಿಕೆ. ಆದರೆ ಈಗ ಪ್ರಸಿದ್ಧವಾದ ಸಂಸ್ಕೃತ ಸ್ತೋತ್ರಗದ್ಯಕೃತಿಗಳ ಲಕ್ಷಣ ಇದರಿಂದ ಭಿನ್ನವಾಗಿದೆ. ಪಾಲ್ಕುರಿಕೆ ಸೋಮನಾಥನ ಗದ್ಯಕೃತಿಗಳಲ್ಲಿ ಆರಂಭದಲ್ಲಿ ಒಂದು ವೃತ್ತ, ಕೊನೆಯಲ್ಲಿ ಒಂದು ಶ್ಲೋಕ, ಒಂದು ಕಂದ, ಇಲ್ಲವೆ ಆರಂಭ ಮತ್ತು ಅಂತ್ಯದಲ್ಲಿ ಒಂದೋ ಎರಡೋ ಹೆಚ್ಚಾಗಿ ಒಂದೊಂದು-ಕಂದಗಳು ಮಧ್ಯದಲ್ಲಿ ನಾಲ್ಕು ಪಾದಗಳುಳ್ಳ ಹಲವು ನುಡಿಗಳು, ಇಲ್ಲವೆ ವೃತ್ತಗಳಿರುವುದು ಕಂಡುಬರುತ್ತದೆ. ಇವು ಮಾತ್ರಾಗಣ ಸಮನ್ವಿತವಾಗಿವೆ. ಆದಿ-ಅಂತ್ಯಪ್ರಾಸವನ್ನು ನಿಯತವಾಗಿ ಹೊಂದಿವೆ. ಹೀಗಾಗಿ ಇವನ್ನು ಛಂದೋಹೀನರಚನೆಗಳೆಂದು ಕರೆಯಲು ಬರುವುದಿಲ್ಲ. ಛಂದೋಬದ್ಧ

---

೬. ಅಲ್ಲಮನ ವಚನ ಚಂದ್ರಿಕೆ, ಪೀಠಿಕೆ, ಪು. ೧೧.

೭. ಪದ್ಮರಾಜ ಪುರಾಣ, ೧-೨೫, ಇದಕ್ಕೆ 'ನೂರೊಂದು ಪಾದದಗದ್ಯ' ಎಂದು ಕಲೆಯಲಾಗುತ್ತದೆ.

೮. ಕಕಚ. II ಪು. ೩೦. (ಗದುಗಿನ ತೋಂಟದಾರ್ಯ ಮಠದ ಹಸ್ತಪ್ರತಿ ಕೆ. ೨೪೭/೧೭ (ಗರಿ, ೮೭-೯೧).

೯. ನೋಡಿ. ವೀರಶೈವ ಅಪ್ರಕಟಿತ ಗ್ರಂಥಸೂಚಿ—ಎಸ್. ಶಿವಣ್ಣ, ಪ್ರ : ತೋಂಟದಾರ್ಯ ಮಠ, ಗದಗ ಪು. ೨.

೧೦. ಕಕಚ. II ಪು. ೨೫೩.

೧೧. ಶಿವದಾಸಗೀತಾಂಜಲಿ, ಪೀಠಿಕೆ, ಪು. ೬೯.

ರಚನೆಗಳಾಗಿದ್ದರೂ ಇವುಗಳಿಗೆ ಗದ್ಯವೆಂದು ಕರೆಯಲು ಕಾರಣವೇನು ? ಪ್ರಾಯಂಶಃ ಹೆಚ್ಚು ಕಾವ್ಯಾಂಶವನ್ನು ಒಳಗೊಳ್ಳದ ಬರಹಗಳನ್ನು ಗದ್ಯವೆಂದು ಕರೆವಂತಿದೆ. ಇವುಗಳ ವಸ್ತು ಹೆಚ್ಚಾಗಿ ಸ್ತುತಿ ಇಲ್ಲವೆ ತತ್ವ ಆಗಿರುವುದರಿಂದ ಇಲ್ಲಿ ಕವಿಪ್ರತಿಭಾ ಪ್ರದರ್ಶನಕ್ಕೆ ಅವಕಾಶ ತೀರಾ ಕಡಿಮೆ. ನಾಮಾವಳಿಗಳು, ದಂಡಕಗಳು ಇದೇ ಸಾಲಿಗೆ ಸೇರುತ್ತವೆ.

ಕನ್ನಡ ಗದ್ಯಕೃತಿಗಳು ಇನ್ನೂ ಮುಂದೆ ಹೋಗಿ ಬೇರೆ ಬೇರೆ ಛಂದಸ್ಸಿನಲ್ಲಿ ರಚನೆಗೊಂಡುದು ಕಂಡುಬರುತ್ತದೆ. ಮೊಗ್ಗೆಮಾಯಿದೇವನ ಷಟ್‌ಸ್ಥಲಗದ್ಯ ರಗಳೆ ರೂಪದಲ್ಲಿದೆ. ಗೌರಾರ್ಯನ ಕೃತಿಯೂ ಬಹುಶಃ ರಗಳೆಯಲ್ಲಿರಬೇಕು. ವಾದಿರಾಜನ ಸ್ವಪ್ನಗದ್ಯ ಭಾಮಿನಿ ಷಟ್ಪದಿಯಲ್ಲಿದೆ.

ಕನ್ನಡದಲ್ಲಿ ಇತರ ಮತದ ಕವಿಗಳಿಗಿಂತ ವೀರಶೈವ ಕವಿಗಳು ರಚಿಸಿದ ಸ್ತೋತ್ರ ಗದ್ಯಕೃತಿಗಳ ಸಂಖ್ಯೆಯೇ ಅಧಿಕ. ಅವೆಲ್ಲ ಹೆಚ್ಚಾಗಿ ಶಿವಸ್ತುತಿ ಇಲ್ಲವೆ ಶರಣಸ್ತುತಿ ಇಲ್ಲವೆ ತತ್ವಪ್ರತಿಪಾದನೆಗೆ ಮೀಸಲಾಗಿವೆ. ಇವುಗಳಲ್ಲಿ ಪ್ರಸ್ತುತ 'ಮುಕ್ತಿಮುದ್ರಾ ಗದ್ಯ' ತತ್ವಪ್ರಧಾನ ಕೃತಿಗಳ ಸಾಲಿಗೆ ಸೇರುತ್ತದೆ.

ಇದು ರಗಳೆರೂಪದಲ್ಲಿದೆ. ಆರಂಭ ಮತ್ತು ಅಂತ್ಯದಲ್ಲಿ ಒಂದೊಂದು ಕಂದಗಳಿವೆ. ಕೃತಿ ಒಟ್ಟು ೪೦೪ ಪಾದಗಳಲ್ಲಿ ವಿಸ್ತೃತಗೊಂಡಿದೆ. ಕಂದಗಳಲ್ಲಿ 'ಗುರು ಗೋಗೇಶ್ವರಲಿಂಗ' ಎಂಬ ಅಂಕಿತವಿದೆ. 'ಗೋಗೇಶ್ವರ'೧೨ ಎಂಬುದು ಅಲ್ಲಮ ಪ್ರಭುವಿನ ಅಂಕಿತವೆಂಬುದು ಈಗಾಗಲೇ ನಿರ್ಧರಿತವಾದ ಸಂಗತಿ. ಈ ಆಧಾರದ ಮೇಲಿಂದ ಪ್ರಸ್ತುತಕೃತಿಯೂ ಪ್ರಭುರಚಿತವೆಂದು ಹೇಳಲುಬರುತ್ತದೆ. ಆದರೆ ವಸ್ತುಸ್ಥಿತಿ ಹಾಗಿಲ್ಲ. ಈ ಕೃತಿಯಲ್ಲಿಯೇ ಬರುವ—

'ಅಲ್ಲಮಪ್ರಭು ಸಂಪ್ರದಾಯ ಸನ್ಮಾರ್ಗವಿದು
ಬಲ್ಲವರು ಬಗೆಗೊಂಬ ಬಯಲಭಂಡಾರವಿದು'
'ಅಲ್ಲಮಪ್ರಭುವೆನಿಪ ಗುರುಗೋಗೇಶ್ವರನೊಲಿದು
ಎಲ್ಲರುಂ ಸಲಹುತಿಪ್ಪನುದಿನಂ ನಲಿನಲಿದು'

ಎಂಬ ಹೇಳಿಕೆಗಳು ಇದು ಬೇರೊಬ್ಬ ವ್ಯಕ್ತಿಯಿಂದ ರಚಿತವಾದುದೆಂದು ನುಡಿಯುತ್ತವೆ. ಅಲ್ಲಮಪ್ರಭುಸಂಪ್ರದಾಯಕ್ಕೆ ಸೇರಿದ ಅನುಭಾವಿಯೊಬ್ಬ ಅಪನ ಅಂಕಿತದ

೧೨. ನೋಡಿ ಡಾ. ಎಂ. ಚಿದಾನಂದಮೂರ್ತಿ 'ಗೋಗೇಶ್ವರ (ಗೊಗ್ಗೇಶ್ವರ)—ಅಲ್ಲಮನ ಅಂಕಿತ' (ಸಂ. ತರಂಗ-೨, ಪು. ೧೫೦-೧೫೭) ಮತ್ತು ಡಾ. ವೀರಣ್ಣ ರಾಜೂರ 'ಪ್ರಭುದೇವರ ಷಟ್‌ಸ್ಥಲ ಜಂಗಮಸ್ಥಲದ ನಿರ್ದೇಶ'—ಪ್ರಸ್ತಾವನೆ,

ಪೂರ್ವೋತ್ತರಗಳಲ್ಲಿ ಗುರು ಮತ್ತು ಲಿಂಗವೆಂಬ ಪದಗಳನ್ನು ಸೇರಿಸಿ ತನ್ನ ಅಂಕಿತವನ್ನು ರೂಪಿಸಿಕೊಂಡಿದ್ದಾನೆ. ಅವನ ಹೆಸರು, ಕಾಲ ಅಜ್ಞಾತ.

ಕೃತಿಯ ಹೆಸರು ಮತ್ತು ವಸ್ತುವನ್ನು ಕುರಿತು ಕವಿಯೇ ಹೀಗೆ ಹೇಳಿದ್ದಾನೆ :

"ಮುಕ್ತಿಮುದ್ರಾಗದ್ಯವೆಂದಿದಕೆ ಪೆಸರಾಯ್ತು
ಭಕ್ತಿಸಾಧಕರ ಸಾಧನೆಗೆ ಸಾಧನವಾಯ್ತು"

ಇದರ ಹೆಸರು 'ಮುಕ್ತಿಮುದ್ರಾಗದ್ಯ'; ಇದು ಭಕ್ತಿಸಾಧಕರ ಸಾಧನೆಗೆ ಸಾಧನವಾದುದು. ಆರಂಭದ ಕಂದದಲ್ಲಿ ಇದು 'ಶ್ರೀ ಗುರು ಶಿಷ್ಯರ ಸಂಬಂಧಾಗಮ' ಎಂದು ಕರೆದರೆ, ಅಂತ್ಯ ಕಂದದಲ್ಲಿ ಇದನ್ನು ತಿಳಿದವನಿಗೆ 'ಲಿಂಗಭಕ್ತಿಜ್ಞಾನಂ ವೇದ್ಯ' ಎಂದು ಹೇಳಲಾಗಿದೆ. ಇದು 'ಪರಮ ಗೋಗೇಶ್ವರಲಿಂಗ ಮಾರ್ಗ' 'ಶಿವಭಕ್ತಗಲ್ಲದಂಗೈಸದಾಚರಣೆ, ಭವಭಾರಿಗಳವಡದ ದುರ್ಲಭದ ಕರುಣೆ'. ಇದನ್ನು ಸದ್ಗುರು, ಭವಬಾಧೆಗೆ ನೊಂದು ಬೆಂದು ಬಿಡುಗಡೆಹೊಂದಲು ಅಪೇಕ್ಷಿಸಿ ತನ್ನನ್ನು ಅರಸಿ ಶುದ್ಧಮನಸ್ಕನಾಗಿ ಬಂದ ಶಿಷ್ಯನಿಗೆ ಬೋಧಿಸಿದ್ದಾನೆ. ಸಂಸಾರ ಸಾಗರವನ್ನು ಈಸಿ ದಾಟಿ ಬಂದು ಮುಕ್ತಿಮಂದಿರವನ್ನು ಸೇರುವ ಮಾರ್ಗವನ್ನು ತೆರೆದು ತೋರಿಸುತ್ತಾನೆ. ಹಂತಹಂತವಾಗಿ ಅವನು ಏರಿ ನಡೆಯುತ್ತಾನೆ. ಇದರಿಂದ 'ಮುಕ್ತಿಮುದ್ರಾಗದ್ಯ' ಎಂಬ ಹೆಸರು ಈ ಕೃತಿಗೆ ಅನ್ವರ್ಥಕವಾಗಿದೆ. ರಗಳೆಯ ಓಟ ಸರಾಗವಾಗಿದೆ. ಶೈಲಿ ಸರಳ; ನಿರೂಪಣೆ ನೇರ. ಆದಿ ಅಂತ್ಯಪ್ರಾಸ ನಿತ್ಯ. ಇದುವರೆಗೆ ಪ್ರಕಟವಾಗದೇ ಇದ್ದ ಇದನ್ನು ಕನ್ನಡ ಅಧ್ಯಯನಪೀಠದ ೨೭೬೭/೪ ಕ್ರಮಾಂಕದ ಏಕೈಕ ಹಸ್ತಪ್ರತಿಯಿಂದ ಪರಿಷ್ಕರಿಸಲಾಗಿದೆ. ಮಧ್ಯ ಕೆಲವು ಸಾಲು ಬಿಟ್ಟುಹೋಗಿವೆ. ಬರವಣಿಗೆ ಭಾಷೆ ಶುದ್ಧವಾಗಿದೆ. ಹಸ್ತಪ್ರತಿಯನ್ನು ಬಳಸಿಕೊಳ್ಳಲು ಅನುಮತಿಯಿತ್ತ ಅಧ್ಯಯನ ಪೀಠದ ಮುಖ್ಯಸ್ಥರಿಗೆ ಕೃತಜ್ಞತೆಗಳು.

ಮುಕ್ತಿಮುದ್ರಾಗದ್ಯ

ಕಂ : ಶ್ರೀ ಗುರು ಶಿಷ್ಯರ ಸಂಬಂ
ಧಾಗಮಮಿಂತಾಗವೇಳ್ಕೆನುತಂ ಭಕ್ತ್ಯು
ದ್ಯೋಗಮಂನಱುಪಿದನೊಲವಿಂ
ಬಾಗಿರೆ ನೋಡೆಮ್ಮ ಗುರುಗೊಗೇಶ್ವರಲಿಂಗಂ ।

ರಗಳೆ :
ಶ್ರೀಮದನಮದಮಥನ ಗುರುಗೊಗೇಶ್ವರಲಿಂಗ
ವ್ಯೋಮಕ್ಕತೀತನಗಣಿತ ಗೊಗೇಶ್ವರಲಿಂಗ ।

ಆ ಪರಮಗುರು ಗೊಗೇಶ್ವರಲಿಂಗ ಮಾರ್ಗವಿದು
ತಾಪ ತನುಗುಣಗಳುದ್ರೇಕ ಪ್ರಹಾರವಿದು ।
ಶಿವಭಕ್ತಗಲ್ಲದಂಗೈಸದಾಚರಣೆಯಿದು
ಭವಭಾರಿಗಳವಡದ ದುರ್ಲಭದ ಕರುಣೆಯಿದು ।
ಇದಱ ಪರಿಯೆಂತುಟೆಂದಾದರಿಸಿ ಕೇಳ್ವಡದು
ಸದಮಲಜ್ಞಾನ ಸಂಭೂತಪ್ರಬೋಧೆಯಿದು ।
ಆವನಾನೊಬ್ಬನೀ ಭವಬಾಧೆಯಿಂ ನೊಂದು
ಬೇವಸಕ್ಕೊಳಗಾಗಿ ಸಂಸಾರದಿಂ ಬೆಂದು ।
ಇನ್ನಾವಪರಿಯಲೀ ಸಂಸಾರಮಂ ಕಳಿವೆ
ಇನ್ನಾವ ಪರಿಯಲಿದಕನುಮಾನವಂ ತಿಳಿವೆ ।
ಎಂದು ಸದ್ಗುರುವನಱಸುತೆ ಬಪ್ಪ ಶಿಷ್ಯಂಗೆ
ಮುಂದೆ ಗುರು ಪ್ರತ್ಯಕ್ಷನಾಗಿಪ್ಪನಾತಂಗೆ ।
ಅಂತಪ್ಪ ಸದ್ಗುರುವ ಕಂಡು ಕಡುನಲಿವಾಗಿ
ಸಂತಸದೊಳಿದ್ದು ಸಾಷ್ಟಾಂಗಪ್ರಣತನಾಗಿ ।
ಬಿನ್ನೈಸುತಿರ್ದನಾ ಶಿಷ್ಯನಾ ಗುರುವಿಂಗೆ
ತನ್ನ ಭವಬಂಧ ವಿಚ್ಛೇದವಪ್ಪನುವಿಂಗೆ ॥

ಭವಭವಂಗಳಲಿ ನಾನಾ ಯೋನಿಯಲಿ ಬಂದೆ
ಹವಣಿಸಿದ ಮಾಯಾಪ್ರಪಂಚಿನೊಳು ಕಡುನೊಂದೆ ।
ಇನ್ನಾಱೆನಯ್ಯಾ ಹುಟ್ಟುವ ಸಾವ ದಂದುಗಕೆ
ಇನ್ನಂಜುವೆಂ ಗುರುವೆ ಈ ಮಾಯೆಯುಪಟಳಕೆ ।
ಬೇಸತ್ತೆನಾಸತ್ತೆ ಬೆಂಬಿರ್ದೆನೈ ಗುರುವೆ
ಈಸಱಿಂದಂ ಮೇಲುಪೇಕ್ಷಿಸುವರೇ ಗುರುವೆ ।
ಎನಲು ಪಾಕಾವಸ್ಥೆಯಾದ ಚಿತ್ತವನಱಿದು
ಮನದೊಳಗಿವಂಗಿನ್ನು ಕರುಣಿಸಬೇಕೆಂದು ।
ಕರುಣರಸ ಗುರುವಿನಂಗೋಪಾಂಗದಲಿ ಸೂಸಿ
ಹರುಷದಿಂ ಗುರುಶಿಷ್ಯನಂ ನೋಡಿ ಹಾರೈಸಿ ।
ಬಲ್ಲಿತಂ ಬೆಸಗೊಂಡೆಯೋ ಮಗನೆ ನಿನ್ನಂತೆ
ಬಲ್ಲರಾರುಂಟು ಶಿವಸತ್ಪಥವನೋರಂತೆ ।

ಎನುತಲಾದರಿಸಿ ಕೇಳಾದಡಾ ಗಂರಂಘನವ
ನಿನಗೆ ನಾಂ ತಿಳಿಯಪೇಳುವೆ ಲಿಂಗಪಥದನುವ ।
ಎನುತ ಬೋಳೈಸಿ ಶಿಷ್ಯನ ಸಮೀಪಕೆ ಕರೆದು
ಮನವೊಲಿದು ಪೇಳಲುದ್ಯೋಗಿಸಿದ ನಲಿನಲಿದು ॥

ಲಿಂಗನಿರ್ಮಿತ ಮಾಯೆಯಿಂದಾಯ್ತು ಜಗವೆಲ್ಲ
ಅಂಗವಿಸಿ ತಿಳಿವೆನೆಂದೆಂಬವರಿಗಳವಲ್ಲ ।
ಮಾಯೆಯೆಂದೆಂಬುದೇ ಭ್ರಮೆ ಸಕಲದೇವರಿಗೆ
ಆಯಸಂಬಡುತಿರ್ಪರಾ ಭ್ರಮೆಯ ಬಲೆಯೊಳಗೆ ।
ದೇವದಾನವ ಮಾನವರ್ಗಱಿಯೆ ದುರ್ಲಭಂ
ಭಾವಿಸಲು ಶಿವಲಿಂಗಭಕ್ತಿಗದು ಸನ್ನಿಭಂ ।
ಸ್ಥೂಲತನು ಸೂಕ್ಷ್ಮತನು ಕಾರಣತನುತ್ರಯಂ
ಲೀಲೆಯಿಂ ಶಿವಲಿಂಗನಿರ್ಮಿಸಿದನೆರ್ಮಯಂ ।
ರಕ್ತ ರೇತಸ್ಸಿನಿಂದಾದ ತನುವೆಂದಱಿದು
ಯುಕ್ತಿಯಿಂದಾ ತನುವಿಕಾವೆಲ್ಲವ ಜಱಿದಂ ।
ಸುಖಿಯಪ್ಪೆನೆಂದೆಂಬ ಆವನೊಬ್ಬಂಗೆ
ಅಖಿಳವೇದೋಕ್ತಿ ಶಿವಭಕ್ತಿ ನೆಱೆಬಲ್ಲಂಗೆ ।
ಜೀವಕಾಯಂಗಳೆರಡಱ ಸಂದಂಸಂಬಂಧ
ಭಾವಿಸಲು ತೋಱಿದುದು ನಾದಬಿಂದುಗಳಿಂದ ।
ಅದುಕಾರಣಂ ನಾದಬಿಂದುಗಳ ಸಂಚವನು
ಸದಮಲ ಜ್ಞಾನದಿಂದಱಿಯೆ ಸುಖಿಯೆನಿಸಂವನಂ ।
ಆ ನಾದ ಬಿಂದು ಕಳೆಗಳೊಳು ಸಮರಸನಾಗಿ
ತಾನು ತಾನಾಗಿರ್ದ ನಿರ್ಜೀವರೂಪಾಗಿ ।
ಸ್ಥೂಲತನುವಿಗೆ ಪೃಥ್ವಿಯಪ್ಪು ತತ್ವಾಧಿಕಂ
ಮೇಲೆ ಜಾಗ್ರಾವಸ್ಥೆಯಿಂದಲತಿ ಪೂರಕಂ ।
ಅಲ್ಲಿ ಸ್ವಪ್ನಾವಸ್ಥೆಯಿಂ ಸೂಕ್ಷ್ಮತನುವೆನಿಸಿ
ಇಲ್ಲಿ ತೇಜೋ ವಾಯುತತ್ವದಿಂ ಮಿಗಿಲೆನಿಸಿ !
ಇರುತಿಪ್ಪುದಾ ಸೂಕ್ಷ್ಮತನು ತನ್ನ ಲೀಲೆಯಿಂ
ಪರಿಹರಿಸಬಾರದೆಂದೆಂಬತುಳ ಮಾಯೆಯಿಂ ।

ಕಾರಣತನುಸ್ಥಿತಿ ಸಂಸುಪ್ತಿಯಿಂದಂ ಹಂದುಗಿ
ಹಾರೈಸಲಾಕಾಶವಾತ್ಮತತ್ವದೊಳೊದಗಿ ।
ತೋಱಿತ್ತುಕಾರಣತನುಸ್ಥಿತಿ ವಿಕಾರದಿಂ
ಮೀಱಿತ್ತು ಮಾಯಾಪ್ರಪಂಚು ಸವ್ಯಾಮೋಹದಿಂ ।
ಇಂತಂ ತನಂಮೂಱೊಂದುಗೂಡಿದ ಶರೀರವಿದು
ಕಂತುವಿಗೆ ಕಾಲಂಗೆ ನೆಱೆ ಹಕ್ಕೆಯದು ।
ಆ ಕಾಲಕಾಮರುಂಪಟಳ ತನುವಿಗುಂಳ್ಳನ್ನ
ಲೋಕದೊಳು ಜನನ ಮರಣಗಳಾದವೈ ಮುನ್ನ ।
ಅದುಕಾರಣಂ ಕಾಮಂವಂ ಕೊಂದು ಕಾಲನಂ
ಸದೆಬಡಿದು ಸುಖಿಸಬಲ್ಲಾತಗಿದು ಸಾಧನಂ ।
ತಾನೆಂಬುದೊಂದಹಂಕಾರ ತೋಱಿದುದಱಿಂ
ನಾನಾ ವಿಧಪ್ರಪಂಚಾದುದಾ ದೂಸಱಿಂ ।
ಈ ಪರಿಯು ಮನಬುದ್ಧಿಚಿತ್ತಾದಿಕರಣದಿಂ
ವ್ಯಾಪಿಸಿತು ಮಾಯಾಪ್ರಪಂಚು ಸವ್ಯಾಮೋಹದಿಂ ।
ಆ ಮಹಾಮಾಯಾ ಪ್ರಪಂಚನಱಿದಿಪ್ಪಡದು
ಕಾಮಾರಿ ಪಥವನಱಿದಂಗಲ್ಲದಳವಡದು ॥

ಇಂತೀ ಪರಿಯು ನಿರೂಪಿಸಿದ ಸದ್ಗುರುವಿಂಗೆ
ಸಂತತಂ ಮಿಗೆ ಸದಾನಂದ ಸಂಪನ್ನಂಗೆ ।
ಕರಕಮಲವಂ ಮುಗಿದುಶಿಷ್ಯನಾನತನಾಗಿ
ಗುರುವಿಂಗೆ ಬಿನ್ನೈಸುತಿರ್ದನತಿ ನಲಿವಾಗಿ ।
ಅವಧಾರು ಜೀಯಂ ಎನಗಂತಪ್ಪ ಘನಮಹಿಮ
ಶಿವ ಎನಗೆ ಗೋಚರನೆ ಪೇಳ್ಗುರುವೆ ನಿಸ್ಸೀಮ ।
ಆವಪರಿಯಿಂ ನೆನೆವೆನಾವ ಪರಿಯಿಂ ತಿಳಿವೆ
ಆವ ಪರಿಯಿಂದಱಿವೆನಾವಪರಿಯಿಂ ಭಜಿಪೆ ।
ಭಕ್ತಿಯನುಂವಂ ನಿರೂಪವ ಕೊಟ್ಟು ಸಲಹಯ್ಯ
ಮುಕ್ತಿಪದವಂ ತೋಱಿ ನೀನೆನ್ನನುಂಳಹಯ್ಯ ।
ಎಂದಡೆಲೆಮಗನೆ ಕೇಳಾದಡಾ ಶಿವಲಿಂಗ
ಮಂದಮಂತಿತನದಿಂದಲಱಿವಡದು ನಿಸ್ಸಂಗ ।

ಏಕಾಗ್ರಚಿತ್ತನಾದಲ್ಲದದಂ ಕಾಣಿಸದು
ಬೇಕು ಬೇಡೆಂದೆಂಬ ಸಂದೇಹಿಗುಪಮಿಸದು ।
ಅದುಕಾರಣಂ ಮನ ಸ್ಥಿರವನಳವಡಿಸುವಡೆ
ಮುದದಿಂದೆ ಗುರುಕರುಣವೇ ಮುಖ್ಯ ನೋಡುವಡೆ ।
ಪ್ರಾಣಂಗೆ ಪ್ರತಿಯಿಟ್ಟು ಗುರುಕರುಣದಿಂದಿತ್ತ
ಕಾಣಿಸುವ ಕರಕಮಲದಿಷ್ಟಲಿಂಗವೆ ಸತ್ಯ ।
ಎಂದು ನಿಸ್ಸಂದೇಹ ಚಿತ್ತದಿಂ ನೆಱೆನಂಬಿ
ಸಂದಿಲ್ಲದಿಷ್ಟಲಿಂಗದಲಿ ಭಾವವ ತುಂಬಿ ।
ಅಂಗದಲಿ ಲಿಂಗ ಮುನ್ನನವರತ ಭಕ್ತಿಯಿಂ
ಹಿಂಗದಿರಬೇಕಖಿಳ ಶೈವಶಾಸ್ತ್ರೋಕ್ತಿಯಿಂ ।
ಲಿಂಗಕ್ಕೆ ಪ್ರಾಣಕ್ಕೆ ಭೇದವಿಲ್ಲೆಂದೆನಿಸಿ
ಸಂಗಮಂ ಮಾಡಕಲಿಯಲುಬೇಕು ಮನವೆರಸಿ ।
ಗುರುಲಿಂಗಜಂಗಮವನೊಂದೆಂದು ಭಾವದಲಿ
ಪರಮ ನಿಜಭಕ್ತಿಯಿರಬೇಕು ನಿಜದೇಹದಲಿ ।
ಲಿಂಗಕ್ಕೆ ಪ್ರಾಣವಾ ಗುರುಸೇವೆಯಲ್ಲಿ ತನು
ಜಂಗಮಾರ್ಚನೆಗೆ ಧನಸವೆಯೆ ಸುಖಿಯಾಗುತನು ।
ಹುಸಿ ಹುರುಡು ಹಸಿವು ತೃಷೆ ಹಿಸುಣತನವುಂ ಬಿಟ್ಟು
ವ್ಯಸನ ವಿಷಯಾದಿಗಳ ಹೆಸರಿಲ್ಲದಿರೆ ಸುಟ್ಟು ।
ಭವಿಪಾಕ ಭವಿಸೇವೆ ಭವಿಸಂಗಮಂ ಜಱೆದು
ಭವಿಗೋಷ್ಠಿ ಭವಿದೃಷ್ಟಿಯೆಂಬಿವಂ ನೆಱೆ ತೊಱೆದು !
ಅನ್ಯದೈವ ಸ್ಮರಣೆಮಾತ್ರಮುಂ ಪರಿಹರಿಸಿ
ತನ್ನ ಮನಮೆಚ್ಚೆ ತಾನಿಪ್ಪುದಾಯುತವೆರಸಿ ।
ಶುಚಿಯಾಗಿ ಸುಖಿಯಾಗಿ ನಿಂದ್ಯವಂದನೆಗಳಿಗೆ
ಅಚಲಿತಂ ತಾನಾಗಿರಬೇಕು ತನ್ನೊಳಗೆ ।
ತಿಳಿಯಬೇಕಿಷ್ಟಲಿಂಗ ಪ್ರಾಣಲಿಂಗಮುಂ
ನಲಿನಲಿದು ಮನವೊಲಿದು ಮಿಗೆ ತೃಪ್ತಿಲಿಂಗಮುಂ ।
ಮೆಱೆಯಬೇಕಾ ತ್ರಿವಿಧಲಿಂಗೋಪಚಾರಮುಂ
ಅಱಿಯಬೇಕಾ ತ್ರಿವಿಧಲಿಂಗದ ವಿಚಾರಮುಂ ।
ನೆಱೆ ಮುಂದೆ ಮುಂದೆ ಲಿಂಗದ ನೆನಹು ಮುಂತಾಗಿ
ತಱಿಸಂದು ತನ್ನ ಕರಣಗಳಱಿವು ಹಿಂಚಾಗಿ ।

ಅಱಿದು ಮೃದಂಕರಿಣ ಶೀತೋಷ್ಣ ಸುಪದಾರ್ಥವಂ
ಉಱುವ ತನ್ನಿಷ್ಟಲಿಂಗ ಸ್ಪರ್ಶನಾರ್ಥಮಂ ।
ಮಾಡಿ ಸುಪವಿತ್ರವೆನಿಸುವ ಪದಾರ್ಥಂಗಳಂ
ನೀಡುವುದು ಪ್ರಾಣಲಿಂಗಕ್ಕೆ ಬೋನಂಗಳಂ ।
ರಂಚಿ ರೂಪು ರಸ ಗಂಧ ಶಬ್ದ ಸಾರಂಗಳಂ
ರಚಿಸುತಂ ಪ್ರಾಣಲಿಂಗಕ್ಕರ್ಪಿತಂಗಳಂ ।
ತೃಪ್ತಿಲಿಂಗಕ್ಕೆ ಆಹ್ವಾನ ಮುಖದಿಂದೀಗ
ವ್ಯಾಪ್ತಿಪರಿಣಾಮಮುಂ ಭಕ್ತಿಯನುಮತವಾಗಿ ।
ಲಿಂಗತ್ರಯೋಪಚಾರಂಗಳಂ ನಿರ್ವಹಿಸಿ
ಹಿಂಗದಿಕ್ಕಂಗಲಿಂಗದಲಿ ಸಂಗಂ ಸ್ಮರಿಸಿ ।
ಇಂತಿವು ಸಮಸ್ತೋಪಚಾರವೆಂದೆನಿಸುವವು
ಭ್ರಾಂತಳಿದ ಕಾರಣಂ ಕ್ರಿಯೆಗಳಂಕುರಿಸುವವು ।
ಈ ಪರಿಯಲೀ ತ್ರಿವಿಧ ಲಿಂಗೋಪಚಾರವಂ
ವ್ಯಾಪಿಸಲು ಕಳೆವೆನೀ ಸಂಸಾರಭಾರವಂ ॥

ಎನಲು ಗುರುವಿಗೆ ಶಿಷ್ಯ ಮಂಗುಳೆ ಬಿನ್ನೈಸಿದಂ
ಮನವೊಲಿದು ಭಕ್ತಿಕಿಂಕರತೆಯಿಂ ರಚಿಸಿದಂ ।
ಮಾಟವುಳ್ಳನ್ನ ಸದ್ಯೋನ್ಮುಕ್ತಿಯೆಲ್ಲಿಯದು
ಕೋಟಲೆಯ ಮಾಣಿಸಾ ಗುರುವೆ ನೀ ಕಣ್ದೆಱೆದು ।
ಉಪಚಾರದಿಂದಱಿವೆನೇ ಲಿಂಗನಿಜನಿಲವ
ಕಪಟ ಕರ್ಮದಲಿ ಪಡೆವೆನೆ ಗುರುವೆ ನಿರ್ಮಲವ ।
ಭಾವ ನಿರ್ಭಾವವಾದಲ್ಲದೆ ಭವಂಗಳಂ
ದೇವದಾನವ ಮಾನವರ್ಗಱಿಯಲಸದಳಂ ।
ವಾಸನೆಯನಳಿಯದೀ ಜನನಮರಣದ ಬೀಜ
ನಾಶವೆಯ್ದಲುಂ ಬಲ್ಲುದೇ ಹೇಳು ಗುರುರಾಜ ।
ಎನಲಂ ಗುರು ಮನದೊಳಗೆ ಪರಿಣಮಿಸಿ ಮೆಚ್ಚಿದಂ
ತನುಪುಳಕ ತಲೆದೋಱೆ ತವಕದಿಂ ಹೆಚ್ಚಿದಂ ।
ಲೇಸ ಬೆಸಗೊಂಡೆಯೋ ಮಂಗನೆ ಶಿವಸಂಗತಿಯ
ಮೀಸಲಳಿಯದ ಭಕ್ತಿಭಂಡಾರದುನ್ನತಿಯ ।

ನೆಱೆ ಬಾಹಿರಂಗಮಾರ್ಗೋಪಚಾರವೆ ಮಿಥ್ಯ
ಅಱಿದರಂತರ್ಮಾರ್ಗದಾಚಾರವೇ ಸತ್ಯ ।
ತತ್ಪುರುಷ ಶಾಶ್ವತಾಚಾರಮಂ ಬಯಸುವಡೆ
ತಾತ್ಪರ್ಯಂ ಬೇಱುಂಟಿಂ ಮಗನೆ ನೀ ಕೇಳುವಡೆ ।
ಎನುತ ಗುರು ಶಿಷ್ಯಂಗೆ ಶಿವರಹಸ್ಯದ ಸುಖವ
ಮನಮೆಚ್ಚಿ ಪೇಳಲುದ್ಯೋಗಿಸಿದ ಗುರುಮುಖವ ॥

ಕನ್ನಡಿಯ ನೋಳ್ಪೆನೆಂದೆಂಬ ನುಡಿಯುಪಚಾರ
ತನ್ನ ತಾ ನೋಳ್ಪೆನೆಂಬುದು ಶುದ್ಧ ಸುವಿಚಾರ ।
ಇಷ್ಟಲಿಂಗಾಚಾರವೆಂಬುದಂ ವಿಚಾರಕ್ಕೆ
ಶ್ರೇಷ್ಠವಾಗಿಪ್ಪುದದು ತನ್ನ ತಾನಱಿಯಲ್ಕೆ ।
ಈ ತೆಱನನಱಿದಿಷ್ಟಲಿಂಗದರ್ಪಣವಿಡಿದಂ
ಓತು ಭಯಭಕ್ತಿಯಿಂದಂ ನಿಜವನಱಿಸುವುದಂ ।
ಗರುಡಿಯಲಿ ಶಸ್ತ್ರವಿದ್ಯವ ಕಲಿವರೇತಕ್ಕೆ
ಭರದಿಂದೆ ರಣರಂಗದಲಿ ಹಗೆಯಂ ಮುಱಿಯಲ್ಕೆ ।
ಅಂತು ಕಾರಣಂ ಇಷ್ಟಲಿಂಗಸೇವಾಭ್ಯಾಸ
ಮುಂತೆ ಮಾಯಾಮಥನ ಪ್ರಾಣಲಿಂಗಾವಾಸ ।
ಎನಿಸುವದಱಿಂದೆ ಜಾಗ್ರಾವಸ್ಥೆಯಿಂ ಸ್ಥೂಲ
ತನುವಿನಲಿ ಸತ್ಕ್ರಿಯೆಗಳಿಪ್ಪುದದಂ ಶಿವಶೀಲ ।
ಲಿಂಗವೇ ಮನೆದೈವ ಲಿಂಗವೇ ಘನದೈವ
ಲಿಂಗವೇ ಕುಲದೈವ ಲಿಂಗವೇ ಛಲದೈವ ।
ಲಿಂಗೈಕ್ಯರೇ ತನಗೆ ತಾಯಿತಂದೆಗಳಾಗಿ
ಲಿಂಗೈಕ್ಯರೇ ದೇಹ ಬಂಧು ಬಳಗಗಳಾಗಿ ।
ಸಕಲದಲಿ ಸಂತತಂ ಲಿಂಗವೇ ಮುಚ್ಚಾಗಿ
ಪ್ರಕಟಿಸಿರಬೇಕು ಶಿವಲಿಂಗದೊಂದಚ್ಚಾಗಿ ।
ಹಿಡಿದಿಷ್ಟಲಿಂಗದಲಿ ಹಿಂಗದಿದ್ದುಪಚಾರ
ಬಿಡದೆ ನಡೆನಡೆಯಲ್ಕೆ ಬಹಿರಂಗದುಪಚಾರ ।
ಇನ್ನಂತರಂಗದಾಚರಣೆಯಂ ತಿಳಿತಿಳಿದಂ
ಚೆನ್ನಾಗಿ ಸುಖಿಸುಗೆ ಮಲತ್ರಯಂಗಳ ತೊಳೆದು ।

ಅದಱಿಂದಲನ್ಯವಿಷಯವ್ಯಾಪ್ತಿಗಳ ಕಳೆದು
ಮಂದವಳಿದಂ ಮನವ ಲಿಂಗದಲಿ ಭಾವ ಬಲಿದು ।

ಇರುತಿರಲು ತನಗೆ ತಾನೇ ಬಹಿರ್ಮುಖದಿಂದೆ
ತಿರುಗುವುದು ಕರಣವರ್ತನನಿಷ್ಪೆಗೊಲವಿಂದೆ ।

ಎರವಾಗಿ ತೋಱುವುದು ಬಳಿಕಬಾಹ್ಯದ ಕರ್ಮ
ಪರವಂ ಪದವಿಗೆ ಬಾಯಬಿಡುವುದು ಮನೋಧರ್ಮ ।

ಈ ಪರಿಯ ಪರಿಪಾಕವಾದ ಸದುಹೃದಯಂಗೆ
ಲೇಪಲೇಪಿಗಳಿಲ್ಲವಾ ಮಹಾಭ್ಯುದಯಂಗೆ ।

ಅದುನಿಮಿತ್ತಂ ನಿನಗಿದೇ ಪ್ರಾಪ್ತಿಶಿವಯೋಗ
ಪದವಿದೊಂದೇ ನಿನಗೆ ಅನುಭಾವದುದ್ಯೋಗ ।

ಜೀವ ಪರಮರನಱಿದು ಕೂಡುವನುಭಾವವಿದು
ಭಾವಿಸುವದಾರಿಗಳವಡದಭಿಪ್ರಾಯವಿದು ।

ಆಹಾರವೇ ಬೀಜ ಸಕಲ ಕರಣಂಗಳಿಗೆ
ಆಹಾರವೇ ತ್ರಾಣ ನಿಖಿಳ ವಿಷಯಂಗಳಿಗೆ ।

ಆವನಾನೊಬ್ಬಂಗೆ ಹಸಿವು ತೃಷೆಯುಂಳ್ಳನ್ನ
ಜೀವ ವ್ಯಥೆಗಳ ಕರ್ಮಕಾಡುವುದಂ ಸಂಪೂರ್ಣ ।

ಆವುದೋ ದ್ರೋಹದಿಂ ಭವಭವಂಗಳ ತೊಳಲಿ
ಧಾವತಿಯನುಂಬ ರೌರವನರಕದೊಳ್ಬಳಲಿ ।

ಆಹಾರದಿಂ ನಿದ್ರೆ ನಿದ್ರೆಯಿಂದಿಂದ್ರಿಯದ
ಕಾಹುರಂ ಮಿಗಿಲಾದ ವಿಷಯ ಘನದತಿಶಯದ ।

ಆ ವಿಷಯದಿಂದೆ ದುಃಕರ್ಮವಂ ಮಿಗೆಮಾಡಿ
ಜೀವಂಗೆ ಭವಭವದ ಬಂಧನವನೊಡಗೂಡಿ ।

ಆಯಸಂಬಡುತಿರ್ಪರಜ್ಞಾನಿ ಕರ್ಮಿಗಳು
ಈಯವಸ್ಥೆಯಂ ಹೊಗರು ಸುಜ್ಞಾನಿ ಧರ್ಮಿಗಳು ।

ಅದಱಿಂದಲಾಹಾರಮಂ ಕ್ರಮಕ್ರಮದಿಂದೆ
ಉದರಕ್ಕೆ ಹವಣಿಸುತ ಬಹುದಂ ಗುರುಕೃಪೆಯಿಂದ ।

ಮೊದಲು ಕರಚರಣ ನಯನಂಗಳಂ ಸಂತಯಿಸಿ
ಪದುಳದಿಂ ಕುಂಸ್ತರಿಸಿ ಕುಳ್ಳಿರಿಸಿ ಬೋಳೈಸಿ ।

ಮೊಟ್ಟಮೊದಲಲಿ ಬಿಂದು ದಂಡದುಂದ್ರೇಕವಮಂ
ಕಟ್ಟಿ ಕಡುಗಲಿಯಾಗಿ ಕಾಣ್ಬುದು ವಿವೇಕವಮಂ ।
ಬೈಸಿಗೆಯು ನಾನಾವಿಧಂಗಳಂ ನೆಱೆ ಕಲಿತಂ
ಆಸನ ಸ್ಥಿರವಾಗಬೇಕಂ ದೈನ್ಯಂ ಬಲಿತು ।
ತರುವಾಯುಲದಱ ಸಂಘಟದಾಟ ಕೋಟಲೆಯು
ಹರುವಮಾಡಿ ಹಕ್ಕೆಯಲಿ ಹತ್ತಿಸುಗೆ ನಿಜನೆಲೆಯು ।
ದಂತಪಙ್ತಿಗಳ ಸಮ್ಮರ್ದನದ ಸಂಭ್ರಮಂದ
ಸಂತವಿಡುವುದುಂ ಸಮಾಧಾನದಲಿ ಸಡಗರವ ।
ನಲಿನಲಿದು ನರ್ತಿಸುವ ನಾ[ಲಗೆ]ಯಂ ನಟನೆಯಂ
ನಿಲಹಿಡಿದು ನೆಲೆಗೊಳಿಸಬೇಕು ಸಂಘಟನೆಯುಂ ।
ಲೋಕಾಂತವಾಸವುಂ ಬಿಟ್ಟುಬಿಸುಟುಗನಾಗಿ
ಏಕಾಂತವಾಸಿಯಾಗಿರಬೇಕು ಸಂಖಿಯಾಗಿ ।
ಬೇಸಱದೆ ಬೆಂಬಿಡದೆ ಬೆಂಬೀಳದಿಟ್ಟಣಿಸಿ
ನಾಸಿಕಾಗ್ರದ ಸೋಂಕು ಸೋಂಕುತಲಿ ಕಡೆಗಣಿಸಿ ।
ಎಡವಱಿಯದೆವೆಯಿಕ್ಕದಗಲದಚಲಿತನಾಗಿ
ಹಿಡಿದಿಷ್ಟಲಿಂಗವಂ ನೋಡಿ ನಿಬ್ಬೆಱಗಾಗಿ ।
ನೆಟ್ಟಾಲಿ ಬಿಟ್ಟ ಕಣ್ಣು ಬಿಗಿದ ಬಂಧಾಸನಂ
ನೆಟ್ಟನೆಱಕದ ಕರುವಿನಂತೆ ಸಿದ್ಧಾಸನಂ ।
ಮರವಟ್ಟ ಕರುವಿಟ್ಟ ರೂಹಿನಂತಿರಬೇಕು
ಪರಮ ಕಾಷ್ಠೆಯಲಿ ಪರವಶನಾಗಿಯಿರಬೇಕಂ ।
ಆಧಾರಲಿಂಗ ನಾಭಿಗಳೆಂಬ ಚಕ್ರವುಂ
ಭೇದಕಂ ಮೊದಲಲ್ಲಿ ಭೇದಿಸುವುದೀಕ್ರಮಂ ।
ಮೇಲೆ ಹೃದಯಂ ತಾಳು ಮೂಲನಿಟಿಲಂಗಳೊಳು
ಕೀಲಿಸಿದ ಚಕ್ರವುಂ ಭೇದಿಸುಗೆ ಬಂದ್ಧಿಯೊಳಂ ।
ಷಡುಚಕ್ರವೆಂಬವಿವು ಸಕಲ ಜೀವರುಗಳಲಿ
ಒಡಲಾಗಿ ತೋಱುವುದು ನಿಖಿಳದೇಹಂಗಳಲಿ ।
ಇಂತೀ ಷಡಾಧಾರಚಕ್ರವುಂ ಕಾಣ್ಬಂದ
ಎಂತುಟು ನಿರೂಪಿಸಾ ಗುರುವೆ ಪರಮಾನಂದ ॥

ಎನಲಂ ಶಿಷ್ಯಂಗೆ ಶ್ರೀಗುರು ನಿರೂಪಿಸುತಿರ್ದ
ಮನವೊಂದಿ ಶಿಷ್ಯನಾ ಹ[ದ]ನ ಕೇಳುತ್ತಿರ್ದ ।

ಮನವು ಮತ್ತೊಂದೆಡೆಗೆ ಹೋಗದೇಕಾಗ್ರದಿಂ
ಅನುವಿಡಿದು ನೆಟ್ಟಗಿರೆ ನಿಲಬೇಕಂ ಶೀಘ್ರದಿಂ ।

ಮಿಕ್ಕು ಮಿಗೆವರಿದಂ ಸೂಸುವ ಉಸುರಿನೆಡೆಯಾಟ
ಸಿಕ್ಕಿದಂಗಲ್ಲದೀ ಮನಕಿಲ್ಲ ಶಿವಕೂಟ ।

ಆ ಮನಃಪವನವೊಂದಾಗಿಯಿರೆ ಶಿವಯೋಗ
ಸಾಮಾನ್ಯವಲ್ಲ ಕೇಳನುಭಾವದುದ್ಯೋಗ ।

ಅದುಕಾರಣಾಧಾರ ಮೂಲಮಂ ಬಿಗಿದೊತ್ತಿ
ಮೊದಲಧೋಮುಖ ಕಮಲವನೂರ್ಧ್ವಮುಖಕೆತ್ತಿ ।

ಆಧಾರದೊಡ್ಯಾಣ ಜಾಳಂದ್ರ ಬಂಧಮಂ
ಭೇದಿಸಲು ಕಂಡಱಿವುದಾ ಮುದ್ರೆಯಂದಮಂ ।

ನೆಟ್ಟನೆ ನವದ್ವಾರದನಿಲನಂ ನಿಲಹಿಡಿದು
ಕಟ್ಟಿ ಪ್ರಾಣೋಪಾನದಿಕ್ಕೆ ಹಕ್ಕೆಯುಂ ಹಿಡಿದಂ ।

ರೇಚಕದ ಪೂರಕವ ಕುಂಭಕವನನುವಿಡಿದು
ಯೋಚಿಸುಗೆ ಗುರುಶಬ್ದ ಸಂಕೇತದನುವಿಡಿದಂ ।

ಯುಕ್ತಿಯಿಂದಳವಡಿಸಿದಾಧಾರ ಬಂಧಮಂ
ಭಕ್ತಿಸ್ಥಲ ಪ್ರಾಪ್ತಿಯಾದುದಾ ಚಂದಮಂ ।

ಅದಱಿಂದಲಾತನಱಿವಂ ಪೃಥ್ವಿತತ್ವಮಂ
ಮುದದಿಂದಲಳವಡಿಸುವಂ ಮಹಾತತ್ವಮಂ ।

ಮೇಲೆ ಮಾಹೇಶ್ವರಸ್ಥಲದ ಸಂಪ್ರಾಪ್ತಿಯಂ
ಕೇಳು ಮಹಾಘನದ ಚಕ್ರ ಸಖ್ಯೋಕ್ತಿಯಂ ।

ಮುಗಿದ ಮೂಲಾಧಾರ ಮುದ್ರೆಯಿಂದಗಿದೆದ್ದು
ನೆಗೆದು ಮಾರುತನಿಂದ ಲಿಂಗಚಕ್ರವ ಬಿಗಿದು ।

ಆ ಲಿಂಗಚಕ್ರದೊಳಗಣ ಬಿಂದುಸಂಚಮಂ
ಮೇಲುಮುಖಮಂ ಮಾಡಿ ಗೆಲುಂಗಾಪ್ರಪಂಚಮಂ ।

ಆ ಮಹಿಮೆ ಊರ್ಧ್ವರೇತೋಮಾರ್ಗವೆನಿಸುವುದಂ
ಕಾಮದಹನನ ಪ್ರಾಪ್ತಿಪದ ತನಗೆ ಸೇರುವುದಂ ।

ಅಂತಾ ಮನಃಪವನ ಬಿಂದು ಮೂಱೊಡಗೂಡಿ
ಸಂತತಂ ಸಮನಿಸಿರುತಿರಬೇಕು ಕೈಗೂಡಿ ।
ಸಾಹಸಿಗತನದಿಂದ ಸಾಧಕತ್ವದೆ ನಡೆದು
ಮಾಹೇಶ್ವರಸ್ಥಲದ ಪ್ರಾಪ್ತಿಪದವಿಯು ಪಡೆದು ।
ಅಪ್ಪು ತತ್ವಸ್ಥಿತಿಯುನಱಿದನುಭವಂಗಳಂ
ತಪ್ಪದಿರುತಿರೆ ಗೆಲುವನೈ ಭವಭವಂಗಳಂ ।
ಮಂತ್ರ ಮಾಣದೆ ಮನಃಪವನ ಬಿಂದುವನೊಯ್ದು
ಕಿತ್ತೆತ್ತಿ ಕೆದಱಿ ನಾಭಿಚಕ್ರವಂ ಪೊಯ್ದು ।
ಅಲ್ಲಿ ನಾನಾಪರಿಯ ನಾಭಿಮುಖವಂ ತಿಳಿದು
ಮೆಲ್ಲ ಮೆಲ್ಲನೆ ಕುಂಡಲಿಯ ಸ್ಥಾನವಂ ಕಂಡು ।
ಆ ಕುಂಡಲಿಯ ಚಕ್ರಮಂ ಹೊಕ್ಕು ಹೊಡಕರಿಸಿ
ಲೋಕದೊಳು ತಾನಲ್ಲದಿಲ್ಲೆನಲು ಚೇತರಿಸಿ ।
ಎದ್ದು ತೇಜಸ್ತತ್ವಮೂರ್ತಿಯಂ ಪಟುಮಾಡಿ
ಶುದ್ಧಪ್ರಕಾಶ ಸರ್ವಾಂಗದೊಳು ನೆಱೆ ತೀಡಿ ।
ಪಶ್ಚಿಮದ್ವಾರಪಥವಂ ತೆಱಹಂ ಮಾಡುತಂ
ಅಚ್ಚರಿಯೆಸೆವ ಸುಷುಮ್ನೆಯ ಮುಖವ ನೋಡುತಂ ।
ಆ ಮನಃಪವನ ಬಿಂದಂಗಳೊಳಗೆ ನಿಶ್ಚೈಸಿ
ಸಾಮರಸ್ಯವನೆಯ್ದಿ ತೇಜಸ್ಸು ಪ್ರಜ್ವಲಿಸಿ ।
ಆ ಮಹಾತೇಜಃಪ್ರಕಾಶದುದ್ವೇಗದಿಂ
ವ್ಯೋಮಾಮೃತ ಪ್ರಸಾದಂ ಬಕ್ಕು ಶೀಘ್ರದಿಂ ।
ಪರಿವಿಡಿಯಲಾ ಪ್ರಸಾದವನಾವನುಣಬಲ್ಲ
ಪರಮ ಪ್ರಸಾದಿಗೀ ಲೋಕದೊಳಗೆಣೆಯಿಲ್ಲ ।
ತನ್ಮಯ ಮಹಾಪ್ರಸಾದಾಂಗಿಗಾಗಳೆ ಬಕ್ಕು
ಉನ್ಮನಿಯವಸ್ಥೆ ಸರ್ವಾಂಗದೊಳು ಸಲೆ ಮಿಕ್ಕು ।
ಆ ಉನ್ಮನೀಯವಸ್ಥೆಯಂ ಸುಖವ ಸಂಚಿಸುತಂ
ಭಾವದಲಿ ಬಲಿದಿರ್ದ ಮಾಯೆಯಂ ಜಱಿವುತಂ ।
ಇರುತಿಪ್ಪುದದು ಭೂತ ಶುದ್ಧಿಯೆಂದೆನಿಸುವುದು
ಪರಮಾರ್ಥ ಪದದ ಪರಿಣಾಮಿಂಗಿದು ಫಲಿಸುವುದಂ ।
ಕಿಚ್ಚಿನಿಂ ಬಂದಮೃತಸೋನೆಯಿಂ ಮಱುಹುಟ್ಟಿ
ಅಚ್ಚ ಶಿವಲಿಂಗ ಸೌಮ್ಯಜ್ಞಾನಮಂ ಮುಟ್ಟಿ ।
ಬಳಿಕಾತನುಪಜೀವಿಯೆಂದೆನಿಸಿ ತೋಱುವಂ
ತೊಳತೊಳಪ ತೇಜಃಪ್ರಕಾಶಮಂ ಬೀಱುವಂ ।

ಭಕ್ತ ಮಾಹೇಶ ಪ್ರಸಾದಿ ಪದತತ್ವಮಂ
ಯುಕ್ತಿಸಲು ತಾ ಪೃಥ್ವಿ ಜಲವಹ್ನಿ ತತ್ವಮಂ ।
ಎನಿಸಂವೀ ತತ್ವಸ್ಥಲವನೆಯ್ದಿದಾತಂಗೆ
ಘನವಾವುದಾ ಶಿವಜ್ಞಾನ ಸಂಜಾತಂಗೆ ।
ಈ ತ್ರಿವಿಧ ತತ್ವಮಂ ಗೆಲೆ ಜಿತೇಂದ್ರಿಯಂನಕ್ಕು
ನೇತ್ರಕ್ಕೆ ಪ್ರತ್ಯಕ್ಷ ಘನವಂಹಿಮನಾಗಿಕ್ಕು ।
ಆ ಪಶ್ಚಿಮದ್ವಾರದೊಳಗಡರಿ ನಡೆವುತಂ
ಸೋಪಾನಗತಿಯ ನೆಲೆನೆಲೆಗಳಂ ಕಾಣುತಂ ।
ಅಲ್ಲಿಂದಲೋಂಕಾರವೊಂದಾದ ನಾದವಂ
ಪಲ್ಲವಿಪ ಸಬುದ ಸಂತಾನಂದ ಭೇದಮಂ ।
ಕೇಳುತ್ತೆ ಕಾಣುತ್ತೆ ಆಲಿಸುತೆ ಪಾಲಿಸುತೆ
ಮೇಳವಂ ಮಾಡುತ್ತೆ ಕೂಡುತ್ತೆ ಭೋಗಿಸುತೆ ।
ಲೋಕಾದಿಲೋಕಂಗಳೆಲ್ಲವಂ ಕಾಣುತಂ
ಬೇಕಾದ ಠಾವಿಂಗೆ ನೆನೆದಾಗ ಹೋಗುತಂ ।
ಸಕಳ ದೇವಾದಿ ಭೋಗಂಗಳಂ ಕಂಡುಂಡು
ಪ್ರಕಟ ಪ್ರತಾಪ ಪ್ರಭಾವಮಂ ಕೈಕೊಂಡು ।
ಹೃತ್ಕಮಲದಲ್ಲಿ ಹಂಸನ ನೆಲೆಯನಱಿವುತಂ
ಉತ್ಕೃಷ್ಟ ಸದ್ಗತಿಯ ಸಂಪದವ ಮೆಱೆವುತಂ ।
ಸರ್ವ ಕರಣಗಳ ಚೇಷ್ಟಾನಾಡಿರಾಜಿಯಂ
ಪರ್ವಿರ್ದ ಜಗದ ಜಂತ್ರದ ಸೂತ್ರದೋಜೆಯಂ !
ಅಱಿದು ಮೆಱೆವಂ ಬ್ರಹ್ಮಪದದ ಪರುಟವಣೆಯಂ
ನೆಱೆ ಜಗವ ನಿರ್ಮಿಸುವ ಭವದ ಭಾರವಣೆಯಂ ।
ಈ ಪರಿಯಹಂಕಾರ ಕೋಟಿಗಳನೊದೆದೆದ್ದು
ಆ ಪರಮಸುಖಿ ಸಂಳಿವ ತನ್ನೊಳಗೆ ತಾನೆದ್ದು ।
ಆ ಸ್ಥಾನದೊಳು ವಾಯುತತ್ವಸ್ವರೂಪದಿಂ
ಭೂತಳಕೆ ಮೆಱೆವ ಪರಮೇಶ್ವರಾಳಾಪದಿಂ ।
ಅಱಿವುದೀ ಪ್ರಾಣಲಿಂಗಸ್ಥಳದ ಮಹಿಮೆಯಂ
ಮಂಱಿವುದೈ ಮೃತ್ಯುಗಳ ಮೊತ್ತಗಳ ಬಲುಮೆಯಂ ।
ನಿಲ್ಲದೆ ನಿಜೇಷ್ಟೆಯಿಂ ನಿಮಿರ್ದೆದ್ದು ಹಾರೈಸಿ
ಅಲ್ಲಿಂದಲಾಕಾಶತತ್ವದೊಳು ಪೂರೈಸಿ ।
ಕ್ಷಣಮಾತ್ರದೊಳು ತಾಳುಮೂಲಮಂ ಸ್ವೀಕರಿಸಿ
ಅಣಿಮಾದಿ ಸಿದ್ಧಿಗಳನೆಲ್ಲವಂ ಪರಿಕರಿಸಿ ।

ಆಳ್ವನಿಚ್ಛಾಶಕ್ತಿಯಂ ಕ್ರಿಯಾಶಕ್ತಿಯಂ
ತಾಳ್ವನೈ ಜೀವಪರಮರಿಗೈಕ್ಯಯುಂಕ್ತಿಯಂ ।
ಭುವನಮಂ ಹುಟ್ಟಿಸುವ ರಕ್ಷಿಸುವ ರೀತಿಯಂ
ಅವಧರಿಸಿ ಆಳ್ವನಾ ಸ್ಥಿತಿಗುಣ ಖ್ಯಾತಿಯಂ ।
ಶರಣಸ್ಥಲ ಪ್ರಾಪ್ತಿಯಾದುದಾ ಶುದ್ಧಂಗೆ
ಕರುಣಾಕರತ್ವ ಕಣ್ದೆಱೆಯಿಂತಾ ಸಿದ್ಧಂಗೆ ।
ಬಳಿಕ ಮಹದಾಕಾಶ ತತ್ವದಿಂ ಪುಟನೆಗೆದು
ತೊಳತೊಳಗಿ ಬೆಳಗಿ ಪರಮಾತ್ಮತತ್ವದೊಳೊಗೆದು ।
ಆ ಸುಷುಮ್ನಾ ನಾಳದೊಳಗಿಂತು ಹರಿದಾಡಿ
ವಾಸವಾಬ್ಜದ ಹರಿಗಳೆಲ್ಲರಂ ಱೋಡಾಡಿ ।
ಲೆಕ್ಕಿಸಲಣೋರಣೀಯಾನೆಂಬ ಸೂಕ್ಷ್ಮದಿಂ
ಮಿಕ್ಕು ಮಹತೋ ಮಹೀಯಾನೆಂಬ ಲಕ್ಷದಿಂ ।
ಪತಿಕರಿಸುವಂ ಪರಂಜ್ಯೋತಿಃಸ್ವರೂಪದಿಂ
ಅತಿನುತ ಜ್ಞಾನಶಕ್ತಿ ಪ್ರಿಯಾಳಾಪದಿಂ ।
ಶಕ್ತಿತ್ರಯಾ ಮುಖ್ಯವಾದ ಶಕ್ತಿಯರೊಲಿದು
ಭಕ್ತಿಯಿಂ ಬೆಸಗೈವರಾತಂಗೆ ನಲಿನಲಿದು ।
ಲಯಗುಣವನಱಿದು ಮಿಕ್ಕಿನ ಗುಣವನೀಡಾಡಿ
ಸಯವಾದ ಸುಖದ ಸುಮ್ಮಾನದೊಳಗೋಲಾಡಿ ।
ಭ್ರೂಮಧ್ಯದೊಳು ಜೀವಪರಮರಿಪ್ಪೆಡೆಗಂಡು
ಆ ಮಹಾ ಆಕಾರ ಕಳೆಗಳಂ ಕೈಕೊಂಡು ।
ಶರ್ವ ಸರ್ವೇಶ ಸರ್ವಗನು ಸರ್ವಾತ್ಮಕಂ
ನಿರ್ವಿಕಾರಂ ನಿರ್ವಿಕಲ್ಪ ನಿತ್ಯಾತ್ಮಕಂ ।
ಸ್ವಾತಂತ್ರ್ಯ ಶಕ್ತಿಸಂಪನ್ನನೆನಿಸುವನಂದು
ಆತಂಗಸಾಧ್ಯವಿಲ್ಲಾವುದೊಂದರಿದೊಂದು ।
ಜೀವತ್ರಯಂಗಳಂ ಆತ್ಮತ್ರಯಂಗಳಂ
ದೇಹತ್ರಯಂಗಳಂ ಪ್ರಕೃತಿತ್ರಯಂಗಳಂ ।
ನಾನಾ ವಿಧಂಗಳೆಲ್ಲವನೊಂದು ಮಾಡುತಂ
ಆನು ನೀನೆಂಬಹಂಕಾರವಂ ಕೂಡುತಂ ।
ಭವಬಂಧನದ ಬೇರುಗಳನೆ ಹರಿಸುತಂ
... ...।
ಏಕಮೇವಾನದ್ವಿತೀಯನೆಂದೆನಿಸುತಂ
ಸ್ವೀಕರಿಸಿದೈಕ್ಯಪದದಲ್ಲಿ ಪರಿಣಮಿಸುತಂ ।

ತಾನೆಲ್ಲವಾಗಿ ಎಲ್ಲವು ತನ್ನಮಯವಾಗಿ
ಆನಂದ ಸುಖದಿಂದೆ ಸುಳಿದನಾ ಶಿವಯೋಗಿ ।
ಸತ್ಯವಾಯ್ತು ಶಿವಜ್ಞಾನಸ್ವರೂಪಂಗೆ
ವ್ಯಕ್ತಸ್ಥಲ ಪ್ರಾಪ್ತಿಪದವು ನಿರ್ಲೇಪಂಗೆ ।
ನಲಿವುತಂ ಬ್ರಹ್ಮರಂಧ್ರ ದ್ವಾರವೆಂದೆಂಬ
ತಲೆವಾಗಿಲಂ ತೆಗೆವನವಂಲ ತೇಜೋಬಿಂಬ ।
ನಿರುಪಮಂ ನಿರಾಧಾರ ನಿರ್ಗುಣಂ ತಾನಾಗಿ
ನಿರವಯಂ ನಿರ್ಮಾಯನೆನಿಸುವಂ ಶಿವಯೋಗಿ ।
ಅತ್ಯತಿಷ್ಠದ್ದಶಾಂಗುಲನೆಂಬ ನಿಜದಲ್ಲಿ
ನಿತ್ಯ ನಿಶ್ಚಿಂತ ನಿರ್ಮಲನೆಂಬ ಪದದಲ್ಲಿ ।
ಭೋಂಕನೆ ನಿರೀಕ್ಷಿಸಲು ಭ್ರಮೆಯಳಿದು [ಸಯುವಾಯ್ತು]
ಆಕಾರವಳಿಯಿತು ನಿರಾಕಾರಮಯವಾಯ್ತು ।
ನಿಸ್ಸೀಮ ಗುರುಗೋಗೇಶ್ವರಲಿಂಗ ತಾನಾಗಿ
ನಿಶ್ಶಬ್ದಮಯವಪ್ಪನಾ ಪರಮಶಿವಯೋಗಿ ॥

ಎಂದು ಕರುಣಿಸಿ ನಿರೂಪಿಸಿದ ಸದ್ಗುರುಲಿಂಗ
ಅಂದಂ ಶಿಷ್ಯಂಗೆ ಶಿವಪದಮಂ ದಯೋತ್ತುಂಗ ।
ಉಪದೇಶಮಂ ತೋಱಿ ಉಪದೇಶಮಂ ಕೊಟ್ಟು
ತ್ರಿಪುರಸಂಹರದ ಸಂಕೇತಮಂ ಕೈಗೊಟ್ಟು ।
ಜೀವಪರಮರಿಗೈಕ್ಯಪದವ ಪರುಠವಿಸುತಂ
... . ।
ನಿತ್ಯಪ್ರಸನ್ನನಾದಂ ಗುರುವಿನೊಲ್ಮೆಯಿಂ
ಸತ್ಯ ಶಿಷ್ಯಂ ಸ್ತುತಿಸುತಿರ್ದನತಿ ನಲ್ಮೆಯಿಂ ।
ಬದುಕಿದೆಂ ಬಾಳ್ದೆಂ ಕೃತಾರ್ಥನಾದೆಂ ಗುರುವೆ
ಸದಮಲ ಶಿವಜ್ಞಾನಕರುಹನಾದೆಂ ಗುರುವೆ ।
ತಾಪತ್ರಯಾದಿಗಳ ನೀಗಿದೆಂ ನಿಜಗುರುವೆ
ಕೋಪ ಮೋಹಾದಿಗಳ ನಿಟ್ಟೊರಸಿದೆಂ ಗುರುವೆ ।
ಅಷ್ಟಮದಗಳ ಹಿಟ್ಟುಗುಟ್ಟಿದೆಂ ಸದ್ಗುರುವೆ
ಕಷ್ಟಕಾಮನನಿಕ್ಕಿ ಮೆಟ್ಟಿದೆಂ ಮದ್ಗುರುವೆ ।
ಮೃತ್ಯುಗಳ ಮೊತ್ತಮಂ ಕಿತ್ತೆತ್ತಿದೆಂ ಗುರುವೆ
ನಿತ್ಯ ನಿಶ್ಚಿಂತ ನಿರ್ಮಾಯನಾದೆಂ ಗುರುವೆ ।
ಎನುತ ಹರುಷದಲಿ ಹಾರೈಸಿ ಲವಲವಿಕೆಯಿಂ
ಅನುಕರಿಸಿ ಗುರುಶಬ್ದ ಸಂಕೇತದೆಣಿಕೆಯಿಂ ।

ಶೂರತನದಿಂದ ಶಿವಭಕ್ತಿಯಂ ಸಂಘಟಿಸಿ
ಕಾರಣವನಱಿದಂ ಧಾರಣಯೋಗಮಂ ನಟಿಸಿ ।
ಆತನುಪಮಾತೀತನಾದನಾ ಗುರುವಿಂದೆ
ಜ್ಯೋತಿ ಕರ್ಪೂರವ ನೆರೆದಂತಾಯ್ತು ತನ್ನಿಂದೆ ।
ಗುರುಕೃಪೆಯು ಮಾಡೆ ಬಳಿಕರಿದುಂಟೆ ಹಿರಿದುಂಟೆ ?
ಗುರುಪದವ ನೆಱೆ ನಂಬಿದಂಗೆ ಭವಭಯವುಂಟೆ ?
ಅದಱಿಂದ ಗುರುಗೊಗೇಶ್ವರಲಿಂಗ ಶರಣರಂ
ಹೃದಯದಲಿ ಮತ್ತೆ ನೆಱೆ ನಂಬುವುದು ಶರಣರಂ ।
ಶರಣಸಂಗವೇ ಶಕ್ತಿ ಶರಣಸಂಗವೆ ಯುಕ್ತಿ
ಶರಣಸಂಗವೆ ಭಕ್ತಿ ಶರಣಸಂಗವೆ ಮುಕ್ತಿ ।
ಎಂತಾದಡಂ ಶರಣಸಂಗವನೆ ಮಾಡುವುದಂ
ಸಂತತ ಸದಾನಂದ ಸುಖದೊಳೋಲಾಡುವುದಂ ।
ಮುಕ್ತಿಮುದ್ರಾಗದ್ಯವೆಂದಿದಕೆ ಪೆಸರಾಯ್ತು
ಭಕ್ತಿಸಾಧಕರ ಸಾಧನೆಗೆ ಸಾಧನವಾಯ್ತು ।
ಅಲ್ಲಮಪ್ರಭು ಸಂಪ್ರದಾಯ ಸನ್ಮಾರ್ಗವಿದು
ಬಲ್ಲವರು ಬಗೆಗೊಂಬ ಬಯಲ ಭಂಡಾರವಿದು ।
ಅದಱಿಂದಲಿದನಾವ ಕೇಳ್ದಡಂ ಪೇಳ್ದಡಂ
ಹೃದಯದಲಿ ಪ್ರತ್ಯಕ್ಷನಾಗಿಪ್ಪನಾ ಮೃಡಂ ।
ಅಲ್ಲಮಾಪ್ರಭುವೆನಿಪ ಗುರುಗೊಗೇಶ್ವರನೊಲಿದು
ಎಲ್ಲರಂ ಸಲಹುತಿಪ್ಪನುದಿನಂ ನಲಿನಲಿದು ॥

ಕಂ : ಹೃದ್ಯದಲಿ ಮುಕ್ತಿಮುದ್ರಾ
ಗದ್ಯವನಱಿವಂಗೆ ಲಿಂಗಭಕ್ತಿಜ್ಞಾನಂ
ವೇದ್ಯವೆನುತಱಿದು ನಿರ್ಮಿಸಿ
ದಾದ್ಯರು ನೋಡೆಮ್ಮ ಗುರುಗೊಗೇಶ್ವರಲಿಂಗಂ ।

ಮುಕ್ತಿಮುದ್ರಾಗದ್ಯ ಸಮಾಪ್ತ

ಶ್ರೀ ಶ್ರೀ ಶ್ರೀ

'ಕಿಸಿ' :

೧) 'ಕಿಸಿ' ಶಬ್ದದ ಕೆಲವು ವಾಕ್ಯಪ್ರಯೋಗಗಳನ್ನು ಹೀಗೆ ಅವಲೋಕಿಸಬಹುದು:

i. 'ಹಲ್‌ಪುಡಿ ಕೊಡ್ತೀನಿ ಹಲ್ ಕಿಸಿ ಕಿಸಿ' = (ಬಾಯಿ) ಅಗಲಿಸಿ (ಹಲ್ಲು ತೋರಿಸು) (ಮುಸುವನನ್ನು ಕಂಡ ಮಕ್ಕಳ ಕೂಗಿನ ಕರೆ ಇದು)

ii. ಅವರಪ್ಪನ್ ಮುಂದ ಆಟss ನಡಿಯಾಂಗಿಲ್ಲಾ, ನನ್ ಮುಂದ ಆssಟ ಕಣ್ ಕಿಸಿತಾನಾ = ಅಗಲಿಸು, (ಕಣ್ ಕಿಸಿ = ಸಿಟ್ಟು, ಸೆಡವುತೋರು)

iii. ಹಗಲ ಮುಂಗಲ ಹೇಂತಿ ಮನೀಗೆ ಹೊಕ್ಯಾನಲಾ, ಅಲ್ಲೇನ್ ಕಿಸಿಯ್ಯಾssಕ ಹೊಕ್ಯಾನಾ = (ಮಹತ್ಕಾರ್ಯ) ಸಾಧಿಸು.

iv. ಏನೇನೋ ಮಾಡ್ತೀನಿ ಅಂತ ಪಂಟ್ ಹೊಡಿದಿ, ಏನ್ ಕಿಸದು ಬಂದ್ಯಪಾss ? ! = ಸಾಧಿಸಿ.

v. ತನ್ ಮಾವನ್ ಆಕಾರ್ ನೋಡಿ, ಸೊಸಿ ಕಿಸ್ ಕಿಸ್ ಅಂತ ನಗೂssದಾ! = ವಕ್ರಗತಿಯ ಅಥವಾ ಡೊಂಕಾಗಿ ಅಗಲಿಸಿದ

ಇವಕ್ಕೆ ಅ. ಕ್ರಿ: ತೆರೆ, ಅಗಲಿಸು ಆ. ಕ್ರಿ: (ಮಹತ್ಕಾರ್ಯ) ಸಾಧಿಸು ಇ. ನಾ: ವಕ್ರಗತಿಯಲ್ಲಿ ತೆರೆದ–ಎನ್ನುವ ಅರ್ಥಗಳುಂಟು. ಇಲ್ಲೆಲ್ಲ ಇದು ಬೇಸರ, ಅಸೂಯೆ, ಕುಹಕ ಇತ್ಯಾದಿ ಭಾವನೆಗಳ ವ್ಯಂಗ ಅಣಕದ ಉಕ್ತಿಗಳಲ್ಲಿ ವಿಶೇಷವಾಗಿ ಬಳಕೆಯಾಗುತ್ತದೆ.

೨) 'ಕಿಸಕ್ಕನೆ ನಗು೨, ಕಿಸ್‌ಕಿಸ್ ನಗು'—ನಗುವ ವೈಶಿಷ್ಟ್ಯವೆರಡರ ಬಣ್ಣನೆಯ (ಕ್ರಿಯಾ)ಪದಗಳು ಇವಾಗಿವೆ.

i. ಕಿಸಕ್ಕನೆ ನಗು—ಹತ್ತಿಕ್ಕುವ ಒತ್ತಡದ ನಡುವೆಯೂ ಒಮ್ಮೆಲೆ ಹೊರ ಚಿಮ್ಮುವ ನಗು.

ii. ಕಿಸ್ ಕಿಸ್ ನಗು
ಕಿಸಿ ಕಿಸಿ ನಗು
ಕಿಸಿ ಕಿಸಿ ಹಲ್ ಕಿಸಿ } (ಮನ ನೋಯಿಸುವ) ಅಲೆಗಳ ಸರಣಿಯಲ್ಲಿ ಕಾಣಿಸಿಕೊಳ್ಳುವ ನಗು.

೩) ಸಮಾಸಪದಗಳಲ್ಲೂ ಇದು ಬಳಕೆಯಾದುದನ್ನು ನೋಡುವಾ.

i. ಕಿಸಿದುದು + ಕಣ್ = ಕಿಸ್‌ಗಣ್, ಕಿಸಗಣ್ಣ — ಕರ್ಮಧಾರಯ ಸ,

ii. ಕಿಸಿದುದು + ಕಾಲ್ = ಕಿಸ್‌ಗಾಲ್, ಕಿಸಗಾಲ
,, + ಬಾಯ್ = ಕಿಸ್‌ಬಾಯ್
,, + ಗೆಂಡಿ = ಕಿಸ್‌ಗೆಂಡಿ } ಕರ್ಮಧಾರಯ ಸ.

ಇಲ್ಲೆಲ್ಲ 'ಕಿಸಿ'(ದುದು) ಎಂಬುದು ಕೃದಂತ ವಿಶೇಷಣ ಪೂರ್ವಪದವಾಗಿ ಬಳಕೆಯಾಗಿದೆ. ಇಲ್ಲಿ ಸ್ಪಷ್ಟವಾಗಿ 'ಅಗಲಿಸಿದ'. 'ತೆರೆದ'—ಎಂಬರ್ಥವೇ ಹೊರಡುತ್ತದೆ.

ಕಿಸಗಾಲ : ವಾಕ್ಯ "ಕಿಸಗಾಲ ಇಟssಗೊಂತ ಅಡ್ಡ್ಯಾಡ್ತಾನಲ್ಲಾ! ಅವ್ನ ಬಂದಿದ್ದಾ." ವಕ್ರವಾಗಿ ಅಥವಾ ಅಗಲಿಸಿದ ಸ್ಥಿತಿಯಲ್ಲಿ ಹೆಜ್ಜೆ ಇಡುವ ಕಾಲುಗಳು — ಎಂಬರ್ಥವಿದೆ.

ಕಿಸಗಣ್ಣ:[೩] ಅರಳಿದ ಅಥವಾ ಪೂರ್ಣ ಅಗಲಿಸಿದ ಕಣ್ಣುಗಳು.

ಕಿಸಗೆಂಡಿ: ಕಿಸಗೆಂಡಿ + ಇ (ತದ್ಧಿತ ಪ್ರತ್ಯಯ) > ಕಿಸಗೆಂಡಿಳ

ಕಿಸಬಾಯ್: ಕಿಸಬಾಯ್ + ಇ (,, ,,) > ಕಿಸಬಾಯಿ (ಕಿಸಬಾಯ್)

ಕಿಸಗೆಂಡಿ ಮತ್ತು ಕಿಸಬಾಯಿ—ಇವೆರಡೂ ವ್ಯಕ್ತಿ ಸೂಚಕ ಬೈಗುಳ ಪದಗಳಾಗಿ ಬಳಕೆಯಾಗುತ್ತವೆ.

ವಾಕ್ಯಗಳು : "ಕಿಸಗೆಂಡ್ ಸೂಳೇss ಮಗನss!"
"ಕಿಸಬಾಯಿ ಬಂತ್ ನೋಡು"
"ಕಿಸ್‌ಬಾಯ್ ದಾಸಾ! ಹಳೆ ಕಿಸಬಾಯ್ ದಾಸಾ!!"[೫]

೪) ತದ್ಧಿತ ನಾಮವೊಂದರಲ್ಲಿ ಈ ಪದ ಬಳಕೆ.

ಕಿಸಿ + ಮತಿ — ಕಿಸಾಮತಿ
= (ವ್ಯಂಗ್ಯಾರ್ಥ) ಮಹತ್‌ಕಾರ್ಯ, ದೊಡ್ಡ ಕಾರ್ಯ

ವಾಕ್ಯಗಳು: i. "ಇದ್ದ್ ಊರಾಗಿನ್ ಆಸ್ತಿಮಾರಿ, ಹೇಂತಿ ಊರ್ ಸೇರಿದಾ, ಏನ್ ಕಿಸಾಮತಿ ಮಾಡಿದಾಂಗಾತಂ"

ii. 'ಇಲ್ಲದ್ ಕಿಸಾಮತಿ ತೋರ್ಸಾಕ್ ಹೋಗಿ, ಬಕ್‌ಬಾರ್ಲೆ ಬಿದ್ದಾ'

೫) ಜೋಡುನುಡಿಯೊಂದರಲ್ಲಿ ಈ ಶಬ್ದ ಪ್ರಯೋಗ :

ಕಿಸಿಲಿಲ್ಲಾ–ಮುಸಿಲಿಲ್ಲಾ/ಒಂದ್ ಕಿಸಿಲಿಲ್ಲಾ–ಒಂದ್ ಮಂಸಿಲಿಲ್ಲಾ

ವಾಕ್ಯ : i. 'ಕಿಸಿಲಿಲ್ಲಾ–ಮುಸಿಲಿಲ್ಲಾ ಕುಸುಗಲ್ ಹಾಳಾತಂತ' (ಗಾದೆ)

ii. ಒಂದ್ ಕಿಸಿಲಿಲ್ಲಾ–ಒಂದ್ ಮುಸಿಲಿಲ್ಲಾ, ಸುಮ್ನ ಹೊಲಾಮನಿ ಕಳಕೊಂತು.

ತುಟಿಗಳು ಕಿಸಿದಾಗ (=ತೆರೆದಾಗ) ಮಾತ್ರ ಮಾತುಗಳು ಹೊರಡಲು ಸಾಧ್ಯ. ಮಾತಿನ ಕೌಶಲ, ಜಾಣ್ಮೆಯಿಂದಲೂ ಕಾರ್ಯ ಸಾಧಿತವಾಗಬಲ್ಲುದು. ಹಾಗೆಯೆ ಕತ್ತಿ ಮಸೆದು ಹರಿತಗೊಳಿಸಿದರೆ, (ಪ್ರಾಚೀನ ಕಾಲದಲ್ಲಿ) ಅದರಿಂದ ಬೇಟೆಯಲ್ಲಿ ಅಥವಾ ವೈರಿಯೊಂದಿಗಿನ ಹೋರಾಟದಲ್ಲಿ ಯಶವನ್ನು ಗಳಿಸಬಹುದಾಗಿತ್ತು. ಈಗ ಆ ಬೇಟೆ, ಆ ಸಾಧನಗಳೊಂದಿಗೆ ವ್ಯವಹಾರವಾಗಲಿ ಇಲ್ಲವೆ ಹೋರಾಟವಾಗಲಿ ಇಲ್ಲ. ಆದರೆ 'ಹಲ್‌ಮುಸಿ'. 'ಕತ್ತಿಮಸಿ' ಎಂದರೆ ವೈರತ್ವಸಾಧಿಸುವ ಹಾಗೆ ಕಾರ್ಯೋನ್ಮುಖ ನಾಗಲು ಪೂರ್ವಭಾವಿಯಾಗಿ ಆ ದಿಶೆಯಲ್ಲಿ ವ್ಯವಸ್ಥಿತವಾಗಿ ಆಲೋಚಿಸು–ಎಂಬರ್ಥ ಇದೆ. ಮಾತಿನ ಚಾಲಕಿನಿಂದಾಗಲಿ, ಇಲ್ಲವೆ ಕೃತಿಯಲ್ಲಿ ತೋರುವ ಚುರುಕಿನ ಶಕ್ತಿ ಸಾಮರ್ಥ್ಯದಿಂದಾಗಲಿ ಯಾವುದೆ ಕೆಲಸ ಕಾರ್ಯದ ಸಿದ್ಧಿ ಆಗಬಹುದು. ಮಾತೂ ಇಲ್ಲ; ಕೃತಿಯೂ ಇಲ್ಲದಿದ್ದರೆ ! (ಈ ಬಗೆಯಾರ್ಥದ ಹೊಂದಾಣಿಕೆಯೊಂದಿಗೆ ಈ ದ್ವಿರುಕ್ತಿ ಪದ ರೂಪುತಳೆದ ಹಾಗೆ ತೋರುತ್ತದೆ.) ಯಾವುದರಲ್ಲೂ ತನ್ನ ಪೌರುಷ (=ಸಾಮರ್ಥ್ಯ) ತೋರದಿದ್ದರೆ ನಿರರ್ಥಕ. ಇದೀಗ ಈ ರೀತಿ ನಿಷೇಧ ಸೂಚಕಾರ್ಥ ದಲ್ಲೆ ಈ ಯುಮಳ ಶಬ್ದ ಬಳಕೆಯಾಗುತ್ತದೆ.

ಈ ವರೆಗಿನ ಅವಲೋಕನದಿಂದ ಈ ಪದದ ಕುರಿತು ಈ ಕೆಲವು ನಿರ್ಣಯ ಗಳನ್ನು ತೆಗೆದುಕೊಳ್ಳಬಹುದು.

i. ಕಿಸ್ ಅಥವಾ ಕಿಸಿ — ಇದರ ಮೂಲ ರೂಪ

ii. ಇದು ವಿಶೇಷವಾಗಿ ಹೀನಾರ್ಥವನ್ನು ಪಡೆದ ಪದವಾಗಿದೆ.

iii. ಇದರ ಅರ್ಥ ವ್ಯಾಪ್ತಿ:

ಕಿಸಿ = { ನಾಮ : { ಮಹತ್ಕಾರ್ಯ, ದೊಡ್ಡ ಸಾಧನೆ / ಅಡ್ಡತಿಡ್ಡವಾಗಿ ತೆರೆದ, ವಕ್ರವಾದ } ವ್ಯಂಗ್ಯಾರ್ಥದಲ್ಲಿ ಮಾತ್ರ
ಕ್ರಿಯೆ : { ಅಗಲವಾಗಿಸು, ತೆರೆ, (ಸಾಮಾನ್ಯ + ವ್ಯಂ. ಗಳೆರಡರಲ್ಲೂ) / ಮಹಾಸಾಧನೆ ಗೈ (ವ್ಯಂಗ್ಯಾರ್ಥದಲ್ಲಿ) }

ಅಡಿಟಿಪ್ಪಣಿಗಳು

೧. ಬಾದಾಮಿ ಉಪಭಾಷೆಯ ಶಬ್ದಾರ್ಥ ವೈಶಿಷ್ಟ್ಯದ ಹಿನ್ನೆಲೆಯಲ್ಲಿ ಈ ಲೇಖನ ಸಿದ್ಧಪಡಿಸಲಾಗಿದೆ.

೨. ‘ಕಿಸಕ್ಕನೆ’—ಎಂದರೆ ‘ಒಮ್ಮಿಂದೊಮ್ಮೆಗೆ’, ‘ಹಠಾತ್ತನೆ’—ಎನ್ನುವ ವಿವರಣೆ (ಕಸಾಪ ನಿಘಂಟುವಿನಲ್ಲಿ) ಕೊಡಲಾಗಿದೆ. ಇಲ್ಲಿ ಹಾಗಲ್ಲ ಎಂಬುದನ್ನು ಮೇಲಿನ ಅರ್ಥವಿವರಣೆಯಲ್ಲಿ ನೋಡಿದ್ದೇವೆ. ಜೊತೆಗೆ ಈ ಉ. ಭಾ. ಯಲ್ಲಿ ಈ ಪದದ ರಭಸದ ಉಚ್ಚಾರಣೆಯು, ನಗುವಿನ ಸ್ಫೋಟದಲ್ಲಾಗುವ ಒಂದು ಬಗೆಯ ಸದ್ದನ್ನೂ ಸೂಚಿಸುವಂತೆ ಇದೆ.

ಉದಾ : “ಹೊಳ್ಳಮಳ್ಳ ಏನ್ ಅದು; ಕಿಸಕ್ಕಂತ (ಕಿಸಕ್ + ಅಂತ) ನಗೂದು; ಹಡಸು.”

೩. ಇಲ್ಲಿ ಪೂರ್ವಪದವಾಗಿ ‘ಕಿಸು’ (ಕೆಂಪು-ಪದದ ಮೂಲರೂಪ) ವಿಶೇಷಣ ಪದ ಇದೆಯೆಂದೂ ಹೇಳಬಹುದು. ಆಗ ಕೋಪಾವೇಷವನ್ನು ಒಡಮೂಡಿಸುವ ‘ಕೆಂಪು ಬಣ್ಣದ ಕಣ್ಣುಗಳು’-ಎಂಬರ್ಥ ಲಭಿಸುತ್ತದೆ. ಆದರೆ ‘ಕಿಸಿದುದು’ ಎಂದು ಕೃದಂತ ವಿಶೇಷಣ ಪದವೆಂದು ಭಾವಿಸಿದರೆ ಆ ಭಾವವನ್ನೇ ಪ್ರಕಟಿಸುವ ಸಲುವಾಗಿ ವೃತ್ತಾಕಾರವಾಗಿ ‘ಅರಳಿದ ಕಣ್ಣುಗಳು’ ಎಂಬರ್ಥವೂ ಸೂಕ್ತವಾಗಿ ಹೊಂದುತ್ತದೆ. ಇತರ ಸಮಾಸಗಳ ಉದಾಹರಣೆಗಳೊಂದಿಗೆ ಗಮನಿಸಿದರೆ ಪೂರ್ವಪದ ಕೃದಂತ ವಿಶೇಷಣವೇ ಇದೆಯೆಂದು ಹೇಳಬಹುದು.

೪. ಕಚ್ಚಿಹರಕ—ಎಂಬರ್ಥಕ್ಕೆ ಸ್ವಲ್ಪ ಹೆಚ್ಚು ಕಡಿಮೆ ಸಂವಾದಿ ಶಬ್ದವಾಗಿ ಇದು ರೂಪುಗೊಂಡಿರಬೇಕು.

೫. ದಾಸ ಪರಂಪರೆಯ ಹಾಡುಗಳು ಈ ಭಾಗದಲ್ಲೆಲ್ಲಾ ೧೭-೧೮ನೆಯ ಶತಮಾನದಲ್ಲಿ ವಿಶೇಷವಾಗಿ ಚಲಾವಣೆಯ ಇದ್ದವು. ಆದರೆ ಕ್ರಮೇಣ ಸಾಮಾಜಿಕ ಚಟುವಟಿಕೆಯಲ್ಲಿ ಅಷ್ಟೇನೂ ಕ್ರಿಯಾಶೀಲರಲ್ಲದ, ಪ್ರತಿಭಾಸಂಪನ್ನತೆ ಅಷ್ಟಾಗಿರದ ದಾಸರನೇಕರು ಹಾಡಿದ್ದನ್ನೇ ಹಾಡತೊಡಗಿರಬೇಕು. ಜೊತೆಗೆ ತಾಳ-ಲಯಗಳಿರದ ನೀರಸ ಹಾಡುಗಾರಿಕೆಯು ಬಹುಶಃ ಜನಕ್ಕೆ ‘ಕೀಸರ-ಬ್ಯಾಸರ’ವನ್ನು ತಂದಿರಬಹುದು. ಇದರಿಂದಾಗಿ ‘ಹೇಳಿದ್ದನ್ನೆ ಹೇಳುವ ಅಥವಾ ಪುನರುಕ್ತಿಯನ್ನೆ ವಟಗುಡುವ ವ್ಯಕ್ತಿ’—ಎಂಬ ವ್ಯಂಗ್ಯಾರ್ಥದಲ್ಲಿ ‘ಕಿಸಬಾಯ್ ದಾಸಾ’ ಎಂಬ ಪ್ರಯೋಗದ ಪದ ಸಿದ್ಧಗೊಂಡಿರುವಂತೆ ತೋರುತ್ತದೆ.

೬. ‘ವಂತ’ ತ. ಪ್ರ. ಕ್ಕೆ ‘ಮತುಪ್’ ಮೂಲರೂಪವೆಂದು ಟಿ. ವಿ. ವೆಂಕಟಾಚಲಶಾಸ್ತ್ರಿಯವರು (ಹೊ. ಗ. ವ್ಯಾ—ಪೊ. ಮು. ೧೯೮೦, ಪುಟ : ೮೨) ಹೇಳುತ್ತಾರೆ. ಇದು ‘ಮತಿ’ ಎಂಬ ತ. ಪ್ರ. ರೂಪಧಾರಣಕ್ಕೂ ಕಾರಣವಾಗಿರಬಹುದೆ ?

—ಎಂ. ಜಿ. ವಾರಿ

ವೀರಗಲ್ಲು :

ವೀರಗಲ್ಲುಗಳಲ್ಲಿ ಪೆಣ್ಬುಯ್ಯಲಿನ ಪ್ರಸಂಗದಲ್ಲಿ ಸತ್ತ ವೀರರ ಸ್ಮಾರಕಗಳು ವಿರಳ. ಅದರಲ್ಲಿಯೂ ಪೆಣ್ಬುಯ್ಯಲಿನ ಶಾಸನ ಮತ್ತು ಶಿಲ್ಪ ಎರಡನ್ನೂ ಒಳಗೊಂಡ ವೀರಗಲ್ಲುಗಳು ಇನ್ನೂ ವಿರಳ. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಸಂಡದ ಗ್ರಾಮದಲ್ಲಿ ಇಂಥದೊಂದು ಅಪರೂಪದ ವೀರಗಲ್ಲು ದೊರಕುತ್ತದೆ.೧

ಈ ವೀರಗಲ್ಲಿನ ಪ್ರಮಾಣ ೫'x೨'೯''. ಇದರಲ್ಲಿ ಒಟ್ಟು ಒಂಬತ್ತು ಸಾಲುಗಳಷ್ಟು ಶಾಸನ ಪಾಠವಿದೆ. ಶ್ರೀಕಾರ, ಕಾಲ, ರಾಜ, ವೀರನ ಸಾವು, ಸಂಸ್ಕೃತ ಶ್ಲೋಕ, ಶಿಲ್ಪ ನಿರ್ಮಾಪಕ, ವೀರಗಲ್ಲು ನಿಲ್ಲಿಸಿದವ ಮತ್ತು ಅದನ್ನು ಬರೆದವ—ಇಷ್ಟು ವಿಷಯವನ್ನು ಕ್ರಮವಾಗಿ ಈ ಶಾಸನ ಒಳಗೊಂಡಿದೆ. ಈ ಶಾಸನದ ವಸ್ತು ವಿವರ ಸಂಕ್ಷಿಪ್ತವಾಗಿದ್ದರೂ ಸಂಪೂರ್ಣವಾಗಿರುವುದೊಂದು ಮಹತ್ವದ ಸಂಗತಿಯಾಗಿದೆ.

ಈ ಶಾಸನದ ಕಾಲ ಕ್ರಿ. ಶ. ೧೦೧೬ ಎಂಬುದು ಸ್ಪಷ್ಟವಿದೆ.೨ ಈ ಕಾಲದಲ್ಲಿ ಕಲ್ಯಾಣದ ಚಾಲುಕ್ಯರು ಕರ್ನಾಟಕವನ್ನು ಆಳುತ್ತಿದ್ದರು. "ಶ್ರೀ ಮಜ್ಜಯಸಿಂಘ ವಲ್ಲಭಂ ಪೃಥಿವೀರಾಜ್ಯಂಗೆಯ್ಯೆ" ಎಂದು ಶಾಸನ ಹೇಳುವುದರಿಂದ ಜಯಸಿಂಹ II ಕಲ್ಯಾಣ ಚಾಲುಕ್ಯ ಅರಸು ಕರ್ನಾಟಕವನ್ನು ಆಳುತ್ತಿದ್ದನೆಂದು ಹೇಳಬಹುದು. ಆಗ "ಶ್ರೀಮಷ್ಕನ್ದರಾಜಂ ಬನವಾಸಿನಾಡಂ ಪ್ರತಿಪಾಳಿ"ಸುತ್ತಿದ್ದನು. ಈ ಬನವಾಸಿ ಆಡಳಿತಕ್ಕೆ ಸಂಡದ (ಚಣ್ಡದ) ಎಂಬ ಹಳ್ಳಿ ಒಳಪಟ್ಟಿದ್ದಿತು. "ಶ್ರೀಚಣ್ಡದಬೆಸವಂಗಂ ಕಮ್ಮಟಬರ್ಮ್ಮಂ ಪೆಣ್ದಿರುಡೆಯು...ಸತ್ತಂ" ಎಂಬ ಶಾಸನ ಪಾಠದ ಹಿನ್ನೆಲೆಯಲ್ಲಿ, ಶ್ರೀಚಣ್ಡದ ಸೇವಕ ಮಗನಾದ ಕಮ್ಮಟಬರ್ಮ್ಮನು ಪೆಣ್ದಿರುಡೆಯುಚ್ಚವಲ್ಲಿ ಸತ್ತನು ಎಂಬುದಾಗಿ ತಿಳಿದುಬರುತ್ತದೆ. ಇಲ್ಲಿ ಸೇವಕಮಗನು ಹೆಣ್ಣುಮಕ್ಕಳನ್ನು ಬತ್ತಲೆಗೊಳಿಸುವ ಅಪಮಾನಕರ ಸಂದರ್ಭದಲ್ಲಿ ಹೋರಾಡಿ ಸಾಯುತ್ತಾನೆ. ಈ ಸಂದರ್ಭವನ್ನು ಶಾಸನಕರ್ತೃ ದೀರ್ಘವಾಗಿ ವಿವರಿಸದೇ ಹೋಗಿರುವುದು ಕೊರತೆಯಾಗಿದೆ. ಪೆಣ್ದಿರುಡೆಯುಚ್ಚಲು ತೊಡಗಿದವರು ಮತ್ತು ತೊಡಗಿಸಿಕೊಂಡವರು ಯಾರು ಎಂಬುದು ಇಲ್ಲಿ ಸ್ಪಷ್ಟವಾಗುವುದಿಲ್ಲ. ಶಾಸನ ಕರ್ತೃವಿಗೆ ವೀರನ ಸಾವು, ಆತನಿಗಿರುವ ಹಿನ್ನೆಲೆ, ಆತನಿಗಾಗಿ ನಿರ್ಮಿಸುತ್ತಿರುವ ಸ್ಮಾರಕದ ವಿವರ—ಈ ಸಂಗತಿಯ ಕಡೆಗೇ ಹೆಚ್ಚು ಗಮನವಿದೆ.

ವೀರಗಲ್ಲಿನ ಶಿಲ್ಪವು ಈ ಕೊರತೆಯನ್ನು ಸ್ವಲ್ಪಮಟ್ಟಿಗೆ ನೀಗಿಸುತ್ತದೆ. ಈ ಶಿಲ್ಪ ಮೂರು ಪ್ರಕಾರಗಳನ್ನೊಳಗೊಂಡಿದೆ. ಮೊದಲನೆಯ ಪ್ರಕಾರದ ಎಡಭಾಗದಲ್ಲಿ ವೀರ ಹೋರಾಡುತ್ತಿರುವ ಶಿಲ್ಪವಿದೆ. ಪೆಣ್ಬುಯ್ಯಲಿನಲ್ಲಿ ತೊಡಗಿದ ಇಬ್ಬರನ್ನು ಈಗಾಗಲೇ ಹೊಡೆದುರುಳಿಸಿ, ಮೂವರೊಡನೆ ಇನ್ನೂ ಭೀಕರ ಹೋರಾಟ

ದಲ್ಲಿ ತೊಡಗಿದ ವೀರನ ಶಿಲ್ಪ ತುಂಬ ಹೃದಯಸ್ಪರ್ಶಿಯಾಗಿದೆ. ಆತನ ಬಲಭಾದ ದಲ್ಲಿ ಚಿತ್ರಲೆಗೊಳಿಸಲ್ಪಟ್ಟ ಮೂವರು ಸ್ತ್ರೀಯರು ಗಾಬರಿಗೊಂಡು ಒಬ್ಬರ ಹೆಗಲ ಮೇಲೆ ಒಬ್ಬರು ಕೈಹಾಕಿಕೊಂಡು ವೀರನ ಹೋರಾಟವನ್ನು ನೋಡುತ್ತ ನಿಂತಿದ್ದಾರೆ. ಅದರಲ್ಲಿ ಒಬ್ಬಳನ್ನು ತನ್ನ ಮಗನನ್ನು ಹಿಡಿದುಕೊಂಡು ನಿಂತಂತೆ ಚಿತ್ರಿಸಲಾಗಿದೆ. ಆತ ಅತೀ ಭಯಭೀತನಾಗಿ ಅವಳ ಕಾಲಮೇಲೆ ಕಾಲನ್ನಿಟ್ಟು ಅವಳಿಂದ ಹಿಡಿಯ ಲ್ಪಟ್ಟು ನಿಂತಿದ್ದಾನೆ. ಪೆಣ್ಬುಯ್ಯಲಿನಲ್ಲಿ ತೊಡಗಿದವನೊಬ್ಬ ಬಿಲ್ಲು-ಬಾಣಗಳನ್ನು ಹಿಡಿದುಕೊಂಡು ಓಡುತ್ತಿರುವ ಚಿತ್ರ ಮೂವರು ಸ್ತ್ರೀಯರ ಬಲಕ್ಕೆ ಇದೆ.

ಎರಡನೆಯ ಪ್ರಕಾರದಲ್ಲಿ ವೀರನನ್ನು ಅಪ್ಸರೆಯರು ಒಯ್ಯುತ್ತಿರುವುದನ್ನು ಕಂಡರಿಸಲಾಗಿದೆ. ಮೂರನೆಯ ಪ್ರಕಾರದಲ್ಲಿ ವೀರ ಕುಳಿತಿದ್ದಾನೆ. ಅವನ ಎರಡೂ ಮಗ್ಗುಲಂಗಳಲ್ಲಿ ಅಪ್ಸರೆಯರು ವಾದ್ಯಗಳನ್ನು ಬಾರಿಸುತ್ತಿರುವ ಮನೋಹರ ದೃಶ್ಯ ವನ್ನು ಶಿಲ್ಪಿ ಬಿಡಿಸಿದ್ದಾನೆ. ಒಟ್ಟಿನಲ್ಲಿ ಈ ಶಿಲ್ಪ ಕಮಂಬಬರ್ಮ್ಮನು ಪೆಣ್ಬುಯ್ಯಲಿನ ಸಂದರ್ಭದಲ್ಲಿ ಹೋರಾಡಿ, ವೀರಮರಣಹೊಂದಿ ಸ್ವರ್ಗಸುಖ ಅನುಭವಿಸುವುದನ್ನು ತೋರಿಸಲಾಗಿದೆ.

ಈ ವೀರಗಲ್ಲಿನಲ್ಲಿ "ಮಾರಮಯ್ಯನ ಲಿಖಿತಂ" ಎಂದಿರುವುದರಿಂದ ಶಾಸನ ವನ್ನು ಬರೆದವನು ಮಾರಮಯ್ಯನು ಎಂಬುದು ಸ್ಪಷ್ಟಗೊಳ್ಳುತ್ತದೆ. "ಕಟ್ಟ ಕಜ್ಜನನ ಶಿಲಾಕರ್ಮ್ಮ" ಎಂಬುದರಿಂದ ಈ ವೀರಗಲ್ಲಿನ ಶಿಲ್ಪ ಮತ್ತು ಅದರ ಬರಹ ಕೆತ್ತಿದವನು ಕಟ್ಟಕಜ್ಜನನು ಎನಿಸುತ್ತದೆ. ಪೆಣ್ಬುಯ್ಯಲಿನ ಹೋರಾಟದಲ್ಲಿ ಮಡಿದ ಬರ್ಮ್ಮನನ ಮಗನಾದ "ಚಿಕ್ಕ" ಎಂಬುವನು ಈ ಸ್ಮಾರಕವನ್ನು ನಿಲ್ಲಿಸಿ ದವನು. ಅಂದರೆ ತಂದೆಯ ವೀರಮರಣಕ್ಕಾಗಿ ಮಗನು ನಿಲ್ಲಿಸಿದ ಶಿಲ್ಪ-ಶಾಸನ ವನ್ನೊಳಗೊಂಡ ಪೆಣ್ಬುಯ್ಯಲಿನ ಒಂದು ವೀರಗಲ್ಲು ಇದಾಗಿದೆ.

—ಬಿ. ಎಸ್. ಶೇತೆ

ಅಡಿಟಿಪ್ಪಣಿಗಳು

೧. ಇ. ಸಿ. VII-I, ೩೦೭ ಸಂಡದ, ಶಿಕಾರಿಪುರ (ತಾ), ಶಿವಮೊಗ್ಗ, ಕ್ರಿ. ಶ. ೧೦೧೬

೨. ಶಕನೃಪ ಕಾಲಾತೀತ ಸಂವತ್ಸರ ಶತತಿಂಗಳ್ ೯೩೮ನೆಯ ನಳಸಂವತ್ಸರಂ ಪ್ರವರ್ತ್ತಿಸೆ.

● ● ●

ಗ್ರಂಥಾವಲೋಕನ

ಕುಮಾರವ್ಯಾಸನ ಕರ್ಣ (ಸಾಂಸ್ಕೃತಿಕ ಅಧ್ಯಯನ) : ವೈ. ವೈ. ಬೆಟಗೇರಿ, ಜೆ. ಬಿ. ಪ್ರಕಾಶನ ಗದಗ ೧೯೮೯; ೧೪೩ ಪುಟಗಳು, ಬೆಲೆ : ೧೨ ರೂ.

ಮಹಾಭಾರತದ ಪಾತ್ರಗಳಲ್ಲೇ ಅತಿ ಹೆಚ್ಚು ವಿವೇಚನೆಗೆ ಒಳಗಾದ ಪಾತ್ರ ಕರ್ಣನದು. ಕರ್ಣನ ಬಗ್ಗೆ ಎಷ್ಟು ಬಗೆಯಾಗಿ ಬರೆದರೂ ಲೇಖಕರಿಗೆ ತಣಿವಿಲ್ಲ; ದಣಿವಿಲ್ಲ. ಆ ಪಾತ್ರದಲ್ಲಿ ಅಡಕವಾದ ಸಂಕೀರ್ಣತೆ, ಸಂದಿಗ್ಧತೆಗಳೇ ವಿವೇಚನೆ ಬೆಳೆಯಲು ಕಾರಣ. ಕರ್ಣನನ್ನು ವಿರೋಧಾಭಾಸಗಳ ಸಂಕೀರ್ಣತೆಗೆ ಒಳಗು ಮಾಡಿದ್ದು ಅವನ ಹುಟ್ಟಿನಿಂದ ಉಂಟಾದ ಬಿಕ್ಕಟ್ಟು; ಜೀವನದುದ್ದಕ್ಕೂ ಅದು ಅನುಸರಿಸಿ ಬಂದ ರೀತಿ. ದೈವ–ಮನುಷ್ಯಪ್ರಯತ್ನ; ವ್ಯಕ್ತಿಸ್ವಭಾವ–ಜಾತಿಹಣೆಪಟ್ಟಿ; ಶೌರ್ಯ–ಸೇವಕತನ; ಬಂಧು–ವೈರಿ ಇತ್ಯಾದಿ ವಿರೋಧಾಭಾಸಗಳು ಕರ್ಣನ ಜೀವಿತ ದುದ್ದಕ್ಕೂ ಕಾಡಿದವು. ಕರ್ಣನ ಪ್ರಾಮಾಣಿಕತೆಯಿಂದಾಗಿ, ಅವನ ವ್ಯಕ್ತಿತ್ವಕ್ಕೆ ಒದಗಿಬಂದ ಅರ್ಥಪರಂಪರೆಗಳು ಇಂದಿಗೂ ಅಭ್ಯಾಸಾರ್ಹವಾಗಿವೆ. ಕನ್ನಡ ಕವಿಗಳು ಕರ್ಣನನ್ನು ಚಿತ್ರಿಸಿರುವ ರೀತಿಯಲ್ಲಿ ವೈವಿಧ್ಯವಿರುವಂತೆ, ವಿಮರ್ಶಕರು ಕಂಡ ಕರ್ಣನ ವ್ಯಕ್ತಿತ್ವದಲ್ಲಿಯೂ ಕುತೂಹಲಕಾರಿ ಅಂಶಗಳಿವೆ. ಹೊಸ ವಿಮರ್ಶೆಯ ಪರಿಣಾಮವಾಗಿ ಕರ್ಣ "ದುರಂತನಾಯಕ"ನಾಗಿ ಪರಿಗಣಿಸಲ್ಪಟ್ಟಿರುವುದು ಹಾಗೂ ಟಿ. ಪಿ. ಕೈಲಾಸಂ, ಶಂ. ಬಾ. ಜೋಶಿಯವರು ಕರ್ಣನ ಬಗ್ಗೆ ವಿವೇಚಿಸಿರುವುದು ಕೆಲವು ಉತ್ತಮ ಉದಾಹರಣೆಗಳು.

ಪ್ರಸ್ತುತ ಪುಸ್ತಕದ ಲೇಖಕ ವೈ. ವೈ. ಬೆಟಗೇರಿಯವರು ಕುಮಾರವ್ಯಾಸನನ್ನು ಮೆಚ್ಚಿಕೊಂಡು, ಅವನು ಚಿತ್ರಿಸಿದ ಕರ್ಣನ ಅಭ್ಯಾಸ ಮಾಡುವ ಪ್ರಯತ್ನಕ್ಕೆ ಹೊರಟಂತಿದೆ. ಈ ಪ್ರಯತ್ನಕ್ಕೆ ಅವರು "ಸಾಂಸ್ಕೃತಿಕ ಅಧ್ಯಯನ" ಎಂದು ಕರೆದುಕೊಂಡಿದ್ದಾರೆ. ಪುಸ್ತಕದಲ್ಲಿ ೨೭ ಭಾಗಗಳನ್ನು ಮಾಡಿಕೊಂಡು ಪ್ರತಿಯೊಂದು ಭಾಗಕ್ಕೆ ಒಂದೊಂದು ಸೂಕ್ತಿ (ಇಂಗ್ಲೀಷಿನಲ್ಲಿ) ನೀಡಿ, ಒಂದೊಂದು ತಲೆಬರೆಹ ಕೊಟ್ಟು, ಕಾವ್ಯದ ಕತೆಯನ್ನು ವಿವರಿಸುತ್ತ ಹೋಗುತ್ತಾರೆ. ಘಟನೆಗಳನ್ನು ಗದ್ಯದಲ್ಲಿ ಹೇಳುವ ಮಟ್ಟಿಗೆ ಈ ವಿವರಣೆ ಇದೆ. ನಡುನಡುವೆ, ಕುಮಾರವ್ಯಾಸನ ಪದ್ಯಗಳು ಹಾಗೂ ಬೇರೆಬೇರೆ ಕವಿಗಳ ಸಾಲುಗಳು, ಅಭಿಪ್ರಾಯಗಳು ಧಾರಾಳವಾಗಿ ಉದ್ಧೃತವಾಗಿವೆ. ಇದೆಲ್ಲವನ್ನು ಓದುತ್ತ ಪುಸ್ತಕ ಮುಗಿಸಿದಾಗ ಎದುರು ನಿಲ್ಲುವ ಸಹಜ ಪ್ರಶ್ನೆ– ಈ ಬರಹದಲ್ಲಿಯ "ಸಾಂಸ್ಕೃತಿಕ" ಪ್ರಸ್ತಾಪ ಯಾವುದು, ಅದೆಲ್ಲಿದೆ ?

ಈ ಪ್ರಶ್ನೆ ಎದುರಾಗಲು ಕಾರಣ, ಬೆಟಗೇರಿಯವರ ಬರವಣಿಗೆಯ ವಿಧಾನ ಅಸ್ಪಷ್ಟವಾಗಿರುವುದು. ಶೈಲಿಯು ಸರಳತೆಯಿಂದ್ದೂ ಸಹ, ಈ ಅಸ್ಪಷ್ಟತೆಗೆ ಕಾರಣ ವೆಂದರೆ, ಸಾಂಸ್ಕೃತಿಕ ಅಧ್ಯಯನದ ಭೂಮಿಕೆಯನ್ನು ಲೇಖಕರು ನಿರ್ದಿಷ್ಟಪಡಿಸಿ ಕೊಳ್ಳದಿರುವುದು. ಕರ್ಣನ ಬಗೆಗಿನ ತಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ಸಡಿಲು ಸಡಿಲಾಗಿ ಹೇಳುತ್ತ ಹೋಗಿರುವದರಿಂದ ಲೇಖಕರಿಗೆ ಯಾವ ಗುರಿಯನ್ನೂ ತಲಂಪು ವುದಾಗಿಲ್ಲ.

ಲೇಖಕ ಬೆಟಗೇರಿಯವರಿಗೆ, ಕರ್ಣನ ಬಗ್ಗೆ ಪುಸ್ತಕ ಬರೆಯಲು ಬಹುಶಃ ಪ್ರೇರಣೆ ದೊರೆತುದು— ಆತ, ಬದುಕಿನುದ್ದಕ್ಕೂ "ಸೂತಪುತ್ರ"ನಾಗಿ ಉಳಿದನೆಂಬ ಅಂಶವಾಗಿರಬೇಕು. ಸೂತಪುತ್ರ ಕರ್ಣನ ಸ್ಥಿತಿ, ವೈಯಕ್ತಿಕವಾಗಿ ದಯನೀಯ ವಾಗಿದ್ದರೆ, ಸಾಮಾಜಿಕವಾಗಿ ಅಸ್ಪೃಶ್ಯತೆಯಿಂದ ನೊಂದಿತ್ತು. ಅಂತಃಸತ್ವವಿದ್ದೂ ವಂಚಿತಬಾಳನ್ನು ನಡೆಸಬೇಕಾಯಿತು ಕರ್ಣ. ಇದನ್ನು "ದುರ್ದೈವ" ಎನ್ನಬೇಕೋ, ಸಮಾಜ–ಪರಿಸರದ ವ್ಯವಸ್ಥಿತ ಒಳಸಂಚು ಎನ್ನಬೇಕೋ ಎಂಬುದು ವಿಚಾರಣೀಯ ಅಂಶ. ಇಂತಹ ವಿಚಾರದ ಹಿನ್ನೆಲೆಯಲ್ಲಿ ಈ ಪುಸ್ತಕದ ರಚನೆಯಾಗಿರಬೇಕೆಂದು ಅನಿಸುತ್ತದೆ.

ಪುಸ್ತಕದ ಕೊನೆಗೆ ಲೇಖಕರು, ತಾವು ಓದಿಕೊಂಡ ಪುಸ್ತಕಗಳ ಒಂದು ಪಟ್ಟಿ ಕೊಟ್ಟಿದ್ದಾರೆ. ಇವರ ಓದಿನ ಈ ಆಸಕ್ತಿ ನೋಡಿದಾಗ, ಬರವಣಿಗೆಯ ಬಗ್ಗೆ ಬೆಟಗೇರಿಯವರು ಸ್ಪಷ್ಟ ನಿಲುವು ತಾಳುವುದಾದರೆ ಸುಸಂಬದ್ಧ ಗ್ರಂಥವನ್ನು ಕೊಟ್ಟಾರೆಂದು ನಿರೀಕ್ಷಿಸಬಹುದು.

x x x x

ಕಪ್ಪೊಡಲಿನ ಕೂಗು (ಕವನ ಸಂಕಲನ) ಸಂ : ವೈ. ವೈ. ಬೆಟಗೇರಿ;
ಜೆ. ಬಿ. ಪಬ್ಲಿಕೇಶನ್, ಗದಗ, ೪೦ ಪುಟಗಳು; ರೂ. ೫; ೧೯೯೦.

ಡಾ. ಬಿ. ಆರ್. ಅಂಬೇಡ್ಕರ ಅವರ ಜನ್ಮಶತಾಬ್ದಿಯ ನಿಮಿತ್ತ ಅವರಿಗೆ ಗೌರವ, ಅಭಿಮಾನ ಅರ್ಪಿಸುವ ಉದ್ದೇಶದಿಂದ ಹೊರಬಂದ ಕವನ ಸಂಕಲನವಿದು. ಕವಿತೆಯ ಮೂಲಕ ಒಂದು ವಿಶಿಷ್ಟ ಚೇತನಕ್ಕೆ ಸ್ಪಂದಿಸುವ ಪ್ರಯತ್ನ ಸ್ವಾಗತಾರ್ಹ.

ಡಾ. ಅಂಬೇಡಕರರು 'ಜನ್ಮಶತಾಬ್ದಿ'ಯ ಒಂದೇ ಕಾರಣಕ್ಕೆ ಸ್ಮರಣೀಯರಲ್ಲ. ಅವರ ಬದುಕು, ವಿಚಾರ, ಕ್ರಿಯೆ–ಇವೆಲ್ಲ ಜನಸಾಮಾನ್ಯರ ಮೇಲೆ ಬೀರಿದ ಪ್ರಭಾವದ ಕಾರಣದಿಂದಲೂ ಅವರಿಗೆ ಸ್ಪಂದಿಸುವುದು ಸಹಜವಾಗಿದೆ. ಮಲಗಿದ್ದ ತನ್ನ ಜನಾಂಗವನ್ನವರು ಬಡಿದೆಬ್ಬಿಸಿದರು; ದಲಿತ ಜನಾಂಗದ ಆಳವಾದ ನೋವಿನ

ಬಗ್ಗೆ ಕಾರಣಸಮೇತ ಇತರರಿಗೆ ಅರಿವು ಮಾಡಿಕೊಟ್ಟರು. ಅಂಬೇಡಕರರ ಕ್ರಾಂತಿ ಕಾರಿ ವಿಚಾರಗಳು ಇತಿಹಾಸದ ಎಲ್ಲ ಉತ್ತಮ ನೀತಿ-ನಡುವಳಿಕೆಗಳ ಮೂಸೆಯಲ್ಲಿ ಹಾದು ಬಂದಂಥವು. ಅಂಬೇಡ್ಕರರು ದಲಿತರಿಗೆ 'ಮೀಸಲಾತಿಸೌಲಭ್ಯ' ಕೊಡಿಸಿ ದುದು ಅವರು ಮಾಡಿದ ಉತ್ತಮ ಕೆಲಸಗಳಲ್ಲಿ ಒಂದು ಮಾತ್ರ. ಆದರೆ ಈ ಒಂದು ಸಣ್ಣ ಕಾರಣಕ್ಕಾಗಿಯೇ ಅವರನ್ನು ಇಂದು ನೆನೆಯುವುದು ಅಪಚಾರವಲ್ಲದೆ ಬೇರೇನಲ್ಲ. ಈ ಸಂಕಲನದ ಸಂಪಾದಕರು ಕವಿತೆಯಲ್ಲಿ ಕೇಳಿರುವಂತೆ "ಮೀಸಲಾತಿ, ನಿನ್ನ ಪ್ರಗತಿಪರ, ಸೀಮಿತ ಯೋಜನೆ; ಯೋಚನೆ ಬೇಡವೆ ದಲಿತರಿಗೆ ?" ದಲಿತ ತನದಿಂದ ಮುಕ್ತಿಗೊಳ್ಳಲು; ಸ್ವಾಭಿಮಾನಿಯಾಗಿ ತಲೆ ಎತ್ತಿ ನಿಲ್ಲಲು ಅಂಬೇಡಕರ್ ಬೋಧಿಸಿದರಲ್ಲದೆ, ಸ್ವತಃ ಜೀವಿಸಿ ತೋರಿಸಿದರು. ಪ್ರಜ್ಞೆಯ ಸ್ಫೋಟದಿಂದಲೇ ದಲಿತರು ಸ್ವತಂತ್ರರಾಗಬಲ್ಲರು. ಈ ಅರಿವು ಇಲ್ಲಿನ ಕವಿಗಳಿಗಿದೆ. ಅಂತೆಯೇ ಅಂಬೆಡಕರರನ್ನು ಬರಿ ಸ್ತುತಿ ಮಾಡದೆ, ಅವರ ನೆನಪು, ಸಾಧನೆ, ಕೃತಿಗಳ ಬೆಳಕಿನಲ್ಲಿ ಪ್ರಸ್ತುತತೆಯನ್ನು ವಿಮರ್ಶಿಸಿಕೊಂಡಿದ್ದಾರೆ.

ಕವಿ ಆರ್ಕೆ ಮಣಿಪಾಲರ "ಅಂಬೇಡಕರ ಮತ್ತು ನನ್ನೂರ ಕೊರಗನ ಆನೆ ಕಾಲು" ಕವನ ಒಂದು ಪರಿಣಾಮಕಾರೀ ರಚನೆ. ಧರ್ಮವ್ಯವಸ್ಥೆಯ ಅಚ್ಚುಕಟ್ಟಿಗೆ ಬೆವರುಹರಿಸಿದವನು ಕೊರಗನೆಂಬ ದಲಿತ, ಆನೆಕಾಲಿನ ರೋಗಿ ಈತ. ಮತಾಂತರ ಗೊಂಡ ದಲಿತರ ಬಗ್ಗೆ ಕಾಳಜಿವಹಿಸುವ ಬ್ರಾಹ್ಮಣಮಠಾಧೀಶರು, ತಮ್ಮೂರ ಕೊರ ಗನ ಬಗ್ಗೇ ಅಜ್ಞಾನ ತಳೆದದ್ದು ಇಲ್ಲಿಯ ವಿಪರ್ಯಾಸ. ಕವಿಗೆ ಅಂಬೇಡಕರ ನೆನ ಪಾಗುವುದು ಇಂತಹ ವ್ಯತ್ಯಾಸಗಳನ್ನು ಕಂಡೂ ತಾನು ಅಸಹಾಯಕನಾಗಿ ಉಳಿ ದಾಗ. ಕವಿತೆ ಹೇಳಿಕೆಯ ಮಟ್ಟದಲ್ಲಿ, ಭಾಷಣದ ಶೈಲಿಯಲ್ಲಿ ಬರದೆ ಒಂದು ಸುಸಂಗತ ಚಿತ್ರದ ಮೂಲಕ ಬಂದಿರುವುದರಿಂದ, ಅಂಬೇಡ್ಕರ ವ್ಯಕ್ತಿತ್ವದ ಮೇಲೆ ಬೆಳಕು ಚೆಲ್ಲುತ್ತದೆ; ಓದುಗರಿಗೂ ಅರಿವನ್ನು ಚುರುಕಾಗಿ ಮುಟ್ಟಿಸುತ್ತದೆ.

ಚಂದ್ರಶೇಖರ ಪಾಟೀಲರೂ ಇಂತಹದೇ ಇನ್ನೊಂದು ಚಿತ್ರ ಕೊಡುತ್ತಾರೆ: "ನಿನ್ನೆಗಳ ನೆನಪು" ಪದ್ಯದಲ್ಲಿ. ಆದರೆ ಈ ಚಿತ್ರ ಗಾಢವಾದುದಲ್ಲ; ತರಲವಾದುದು. ಅಂಬೇಡಕರರನ್ನು ಅವರ ಪ್ರತಿಭೆ-ಪ್ರತಿಷ್ಠೆಗಾಗಿ ನೆನಪಿಸುವವರು, ಅನಾಮಿಕರಾಗಿ ಉಳಿದಿರುವ ದಲಿತರ ಬಗ್ಗೆ ಯೋಚಿಸದೇ ಉಳಿದಿರುವುದು ಇಂದಿನ ದುರಂತ.

"ಕಪ್ಪುಜನತೆಯ ಸೂರ್ಯನಿಗೆ" ಹಾಡಿನಲ್ಲಿ ಚೆನ್ನಣ್ಣ ವಾಲಿಕಾರರು ಅಂಬೇಡ್ಕ ರರನ್ನು ಸ್ತುತಿಸುತ್ತಲೇ ಇಂದಿನ ಅಸ್ಪೃಶ್ಯರ ದುರವಸ್ಥೆಯನ್ನು ತೋಡಿಕೊಳ್ಳು ತ್ತಾರೆ. ಶೋಷಣೆಯ ಹಲವು ತಂತ್ರಗಳಿಗೆ ಬಲಿಬಿದ್ದ ದಲಿತರು ಒಗ್ಗಟ್ಟಾಗಿ ಹೋರಾಡಿದಾಗ ಮಾತ್ರ ತಲೆ ಎತ್ತಬಲ್ಲರೆಂಬ ಉತ್ತೇಜನ ಕವಿತೆಯಲ್ಲಿದೆ. ಅಂಬೇ

ಡ್ಕರ ಬೋಧಿಸಿದ "ಸ್ವಾಭಿಮಾನ" ದಲಿತರಲ್ಲಿ ಜಾಗರಗೊಳ್ಳಬೇಕೆಂದು ವಾಲೀಕಾರ ಎತ್ತಿಹೇಳುತ್ತಾರೆ.

ಅಂಬೇಡಕರರನ್ನು ವರ್ತಮಾನಕ್ಕೆ ತಂದು, ಅವರ ಪ್ರಸ್ತುತತೆಯನ್ನು ಎತ್ತಿ ಹಿಡಿಯುವುದು ಹೆಚ್ಚಿನ ಕವಿತೆಗಳ ಆಶಯವಿಲ್ಲದೆ. ಬಹುತೇಕ ಕವನಗಳು ಸಾಂದರ್ಭಿಕ ಒತ್ತಡದಿಂದ ರಚನೆಗೊಂಡಿವೆ. ಹೀಗಾಗಿ ವಾಚ್ಯಾರ್ಥದ ಮಾತುಗಾರಿಕೆ, ಅಸ್ತವ್ಯಸ್ತವಾದ ಛಂದೋಲಯ ಎದ್ದುಕಾಣುತ್ತದೆ. ಅನಿಸಿಕೆಗಳನ್ನು ವಾಕ್ಯರೂಪದಲ್ಲಿ ಹೇಳದೆ ಸಾಲುಗಳಲ್ಲಿ ಕತ್ತರಿಸಿಡುವ ಈ ಬಗೆಯ ರಚನೆಗಳು ಕಾವ್ಯದ ವಸ್ತುವಿಗಾಗಲಿ, ಕವಿಯ ಅಭಿವ್ಯಕ್ತಿ ರೀತಿಗಾಗಲಿ ನ್ಯಾಯ ಒದಗಿಸಲಾರವು.

ಪುಸ್ತಕದ ಮುದ್ರಣ ತೀರಾ ಸಾಧಾರಣವಾಗಿದೆ; ಪ್ರತಿ ಪುಟದಲ್ಲಿಯೂ ಮುದ್ರಣ ದೋಷವೆಂದು ಕಣ್ಣಿಗೆ ಕಾಡುವಂತೆ, ಓದುವಿಕೆಗೆ ಕಿರಿಕಿರಿ ಉಂಟುಮಾಡುತ್ತವೆ. ಒಂದು ಹಿರಿಯ ಚೇತನವನ್ನು ಗೌರವಿಸುವುದಕ್ಕಾಗಿ ಬರುವ ಕಾವ್ಯಕೃತಿಗಳು ನಿರ್ದೋಷರೂಪದಲ್ಲಿ ಬರುವುದು ನಿಜವಾದ ಗೌರವಾರ್ಪಣೆ. ಡಾ. ಅಂಬೇಡಕರರು ತಮ್ಮ ಇರುವಿಕೆಯಲ್ಲಿ ಸದಭಿರುಚಿಯನ್ನೂ ವೇಷಭೂಷಣದಲ್ಲಿ ಅಚ್ಚುಕಟ್ಟುತನವನ್ನೂ ಪರಿಪಾಲಿಸಿದವರು. ಅಂಥವರ ಕುರಿತ ಪುಸ್ತಕ ಕೂಡ ಸದಭಿರುಚಿ ಮತ್ತು ಸೌಂದರ್ಯದ ಪ್ರತೀಕವಾಗಿರಬೇಕಾದುದೂ ಔಚಿತ್ಯಪೂರ್ಣವಲ್ಲವೆ ?

—ಸರ್ವಜಿತ

● ● ●

ಪ್ರಸ್ತುತ

'ಕರ್ನಾಟಕ ಭಾರತಿ' ತ್ರೈಮಾಸಿಕದ ಸ್ವಾತಂತ್ರ್ಯೋತ್ಸವ ಸಂಚಿಕೆಯನ್ನು ತಮ್ಮ ಕೈಯಲ್ಲಿಡಲು ಸಂತೋಷವೆನಿಸುತ್ತದೆ. ಅನಿವಾರ್ಯ ಕಾರಣಗಳಿಂದ ಇತ್ತೀಚಿನ ಕೆಲವು ವರ್ಷಗಳಲ್ಲಿ ಸಮಯಕ್ಕೆ ಸರಿಯಾಗಿ ಹೊರಬರದೆ ಓದುಗರಿಂದ ದೂರ ಸರಿದ 'ಭಾರತಿ'ಯನ್ನು ಇಂದಿನ ಸಂಪಾದಕರು ಮತ್ತು ಸಲಹಾ ಮಂಡಲಿಯ ಸದಸ್ಯರು ಸಕಾಲಿಕಗೊಳಿಸಲು ಸಂಕಲ್ಪಿಸಿದ್ದಾರೆ. ಶಿಕ್ಷಣದ ಗುಣಮಟ್ಟ, ಸಕಾಲಿಕ ಕಾರ್ಯ ನಿರ್ವಹಣೆಗಳಿಗೆ ಒತ್ತು ಕೊಡುತ್ತಲಿರುವ ಮಾನ್ಯ ಕುಲಪತಿಗಳ ಬೆಂಬಲ ನಮ್ಮಲ್ಲಿ ಉತ್ಸಾಹ ತುಂಬಿದ್ದು, ಅರ್ಥಪೂರ್ಣ ಬರಹಗಳನ್ನು ಅಳವಡಿಸಿ, ಈ ಪತ್ರಿಯನ್ನು ಕಾಲಕ್ಕೆ ಸರಿಯಾಗಿ ಹೊರತರುವ ಭತವಸೆಯನ್ನು ನೀಡುತ್ತೇವೆ. ಸಾಹಿತ್ಯಿಕ, ಮಾನವಿಕ, ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದ ಬರಹಗಳನ್ನು ಒಳಗೊಳ್ಳುವ 'ಭಾರತಿ', ಈ ವರ್ಷ ಕೆಲವು ನೂತನ ಯೋಜನೆಗಳನ್ನು ಹಮ್ಮಿಕೊಂಡಿದೆ :

● ಪ್ರತಿ ವರ್ಷದ ಕೊನೆಯ ಸಂಚಿಕೆ (ಅಕ್ಷಯತೃತೀಯಾ)ಯಲ್ಲಿ ಆಯಾ ವರ್ಷದ ಸಾಹಿತ್ಯ ಸಮೀಕ್ಷೆಗೆ ಅವಕಾಶವನ್ನು ಕಲ್ಪಿಸಿಕೊಡುವುದು. ಆಯಾ ವರ್ಷ 'ಭಾರತಿ'ಯ ಸಂಚಿಕೆಗಳಲ್ಲಿ ಪ್ರಕಟವಾದ ಲೇಖನಗಳ ಸೂಚಿಯನ್ನು ಕೊಡುವುದು.

● ಈ ವರ್ಷ ಶತಮಾನೋತ್ಸವ ಗೌರವಕ್ಕೆ ಪಾತ್ರರಾದ ಈ ಮಹನೀಯರ ಹೆಸರಿನಲ್ಲಿ ಒಂದೊಂದು ಸಂಚಿಕೆಯನ್ನು ಹೀಗೆ ಪ್ರಕಟಿಸುವುದು :

—ರಾಜ್ಯೋತ್ಸವ ಸಂಚಿಕೆ : ಡಾ. ಅಂಬೇಡಕರ ಅವರ ಹೆಸರಿನಲ್ಲಿ

—ಸಂಕ್ರಮಣ ಸಂಚಿಕೆ : ಡಾ. ಮಾಸ್ತಿ ಅವರ ಹೆಸರಿನಲ್ಲಿ

—ಅಕ್ಷಯ ತೃತೀಯ ಸಂಚಿಕೆ : ಡಾ. ಗುಬ್ಬಿ ವೀರಣ್ಣ ಅವರ ಹೆಸರಿನಲ್ಲಿ

ಪ್ರಸ್ತುತ ಸಂಚಿಕೆಯಲ್ಲಿ ಸಾಹಿತ್ಯ, ಸಂಶೋಧನೆ, ಇತಿಹಾಸ, ವಿಮರ್ಶೆ, ಸಂಪಾದನೆ, ಜಾನಪದ, ಧರ್ಮ, ವ್ಯಾಕರಣ ವಿಷಯಗಳಿಗೆ ಸಂಬಂಧಿಸಿದ ೧೫ ಲೇಖನಗಳನ್ನು ಅಳವಡಿಸಲಾಗಿದೆ. ಒರೆಗಲ್ಲು, ಗ್ರಂಥಾವಲೋಕನ ಎಂಬ ಸ್ಥಿರಶೀರ್ಷಿಕೆಗಳನ್ನು ಮುಂದುವರಿಸಿದ್ದೇವೆ.

ಮಾನ್ಯ ಸಾಹಿತಿ ಸಂಶೋಧಕ ಮಿತ್ರರು ಹೊಸ ಹೊಸ ಲೇಖನಗಳನ್ನು ಹಾಗೂ ಸಾದರ ಸ್ವೀಕಾರ, ವಿಮರ್ಶೆಗಳಿಗಾಗಿ ಗ್ರಂಥಗಳನ್ನು ಕಳಿಸುವುದರ ಮೂಲಕ 'ಭಾರತಿ' ಮೈತುಂಬಿಕೊಂಡು ಹೊರಬರುವಂತೆ ನೋಡಿಕೊಳ್ಳಬೇಕೆಂದು ವಿನಂತಿಸಿ ಕೊಳ್ಳುತ್ತೇವೆ.

—ಸಂಪಾದಕರು

ಸಾದರ ಸ್ವೀಕಾರ

೧. **ಶರಣರ ಬಂಡಾಯದ ವಚನಗಳು** (ವಚನ ಸಂಕಲನ)
ಸಂ : ಡಾ. ಬಸವರಾಜ ಸಬರದ; ಪ್ರ : ಯುವ ಹಿರಿಯ ವಿದ್ಯಾರ್ಥಿ ಸಂಘ ಎಂ. ಬಸವಯ್ಯ ವಸತಿ ಮಹಾವಿದ್ಯಾಲಯ, ಸಿರಿಗೆರೆ–೫೭೭ ೫೪೧; ಪು. ೧೮೭ + ೧೮; ಬೆಲೆ : ಮೂವತ್ತೈದು ರೂಪಾಯಿ; ೧೯೯೧.

೨. **ಕಪ್ಪೊಡಲಿನ ಕೂಗು** (ಕವನ ಸಂಕಲನ)
ಸಂ : ವೈ. ವೈ. ಬೆಟಗೇರಿ; ಪ್ರ : ಜೆ. ಬಿ. ಪಬ್ಲಿಕೇಶನ್, ಶಿವಾನಂದ ರೋಡ, ಗದಗ; ಪು : ೪೦+viii; ಬೆಲೆ : ೫ ರೂಪಾಯಿ; ೧೯೯೦.

೩. **ಕುಮಾರವ್ಯಾಸನ ಕರ್ಣ : ಸಾಂಸ್ಕೃತಿಕ ಅಧ್ಯಯನ**
ಲೇ : ವೈ. ವೈ. ಬೆಟಗೇರಿ; ಪ್ರ : ಜೆ. ಬಿ. ಪಬ್ಲಿಕೇಶನ್, ಶಿವಾನಂದ ರೋಡ, ಗದಗ; ಪು : ೧೪೪ + vii; ಬೆಲೆ : ೧೨ ರೂಪಾಯಿ; ೧೯೮೯.

೪. **ಕನ್ನಡ ಮಹಾಭಾರತ** (ವಿರಾಟಪರ್ವ)
ಅನು : ಡಾ. ಸಿ. ಪಿ. ಕೃಷ್ಣಕುಮಾರ; ಪು : ೩೯೧+xxxiii; ಬೆಲೆ : ೩೦ ರೂಪಾಯಿ; ೧೯೯೦.

೫. **ಪೂಜ್ಯಪಾದ ಚರಿತೆ** (ದೇವಚಂದ್ರ ವಿರಚಿತ)
ಸಂ : ಕೆ. ಆರ್. ಶೇಷಗಿರಿ; ಪು : ೩೦೨ + lxiii; ಬೆಲೆ: ೧೨೦ ರೂಪಾಯಿ; ೧೯೮೮.

೬. **ಸತ್ಯೇಂದ್ರಚೋಳ ಚಾರಿತ್ರ** (ಧೂಪದಹಳ್ಳಿಶಾಂತ ವಿರಚಿತ)
ಸಂ : ಜಿ. ಜಿ. ಮಂಜುನಾಥನ್; ಪು : ೧೬೦+xxxiv; ಬೆಲೆ : ೬೦ ರೂಪಾಯಿ; ೧೯೮೮.

೭. **ಮಾರ್ಕಂಡೇಯ ಜ್ಯೋತಿಷ**
ಸಂ : ಡಾ. ಎಂ. ಪಿ. ಮಂಜಪ್ಪ ಶೆಟ್ಟಿ; ಪು : ೫೧೪ + xlvi; ಬೆಲೆ : ೧೯೫ ರೂಪಾಯಿ; ೧೯೮೯.

೮. **ಪ್ರಾಚೀನ ಕನ್ನಡ ವ್ಯಾಕರಣಗಳು**
ಲೇ : ಎಂ. ವಿ. ಸೀತಾರಾಮಯ್ಯ; ಪು : ೩೦೪+xxiv; ಬೆಲೆ : ೩೦ ರೂಪಾಯಿ; ೧೯೭೯.

೯. ಅಕ್ಬರನಿಂದ ಔರಂಗಜೇಬನವರೆಗೆ
ಮೂಲ : ಡಬ್ಲ್ಯು. ಎಚ್. ಮೋರ್‌ಲ್ಯಾಂಡ್; ಅನು : ಈಶ್ವರಚಂದ್ರ; ಪು : ೪೨೯+xv; ಬೆಲೆ : ೩೦ ರೂಪಾಯಿ; ೧೯೮೫.

೧೦. ಪು. ತಿ. ನ. ಅವರ ನಾಟಕಗಳು (ಪಿಎಚ್.ಡಿ. ಪ್ರಬಂಧ)
ಲೇ : ಡಾ. ಬಿ. ರಾಮಚಂದ್ರಾಚಾರ್; ಪು : ೨೧೫ + viii; ಬೆಲೆ : ೬೫ ರೂಪಾಯಿ; ೧೯೯೦.

೧೧. ಶ್ರೀಕೃಷ್ಣಕಥೆಯ ಉಗಮ ಮತ್ತು ವಿಕಾಸ
(ಪಿಎಚ್.ಡಿ. ಪ್ರಬಂಧ)
ಲೇ : ಡಾ. ಪ್ರಧಾನ್ ಗುರುದತ್ತ; ಪು : ೩೫೮+xxiv; ಬೆಲೆ : ೧೨೫ ರೂಪಾಯಿ; ೧೯೯೦.

೧೨. ಕನ್ನಡ ಕವಿಗಳ ಕಾವ್ಯಕಲ್ಪನೆ (ಮೂರು ವಿಶೇಷ ಉಪನ್ಯಾಸಗಳು)
ಲೇ : ಡಾ. ಜಿ. ಎಸ್. ಶಿವರುದ್ರಪ್ಪ; ಪು : ೮೮+x; ಬೆಲೆ : ೧೮ ರೂಪಾಯಿ; ೧೯೮೯.

೧೩. ಕನ್ನಡ ಕಾವ್ಯವಲ್ಲರಿ (ಪಠ್ಯಪುಸ್ತಕ)
ಪ್ರ. ಸಂ: ಡಾ. ಕೆ. ವಿ. ಪುಟ್ಟಪ್ಪ; ಪು: ೧೮೩+viii; ಬೆಲೆ: ೧೨ ರೂಪಾಯಿ; ಆರನೆಯ ಮುದ್ರಣ : ೧೯೮೯.

೧೪. ಚಂಪೂರಾಮಾಯಣ (ಅಯೋಧ್ಯಾಕಾಂಡ)
ಸಂ : ಸಂಸ್ಕೃತ ಪಠ್ಯಪುಸ್ತಕ ಸಮಿತಿ; ಪು : ೬೮ + iv; ಬೆಲೆ : ೧೦ ರೂಪಾಯಿ; ೧೯೮೯.

೧೫. ಭಾರತದ ಸಂವಿಧಾನ
ಲೇ : ಹೆಚ್. ದಾಸೇಗೌಡ; ಪು : ೧೨೪+xiv; ಬೆಲೆ : ೧೨ ರೂಪಾಯಿ; ೧೯೮೮.

೧೬. ಭಾರತದ ಮೂಲ ಸೌಕರ್ಯಗಳ ಅಭಿವೃದ್ಧಿ ಯೋಜನೆ
ಲೇ : ಪ್ರೊ. ಎ. ಪಿ. ಶ್ರೀನಿವಾಸಮೂರ್ತಿ; ಪು : ೧೨೮ + viii; ಬೆಲೆ : ೩೦ ರೂಪಾಯಿ; ೧೯೯೦.

೧೭. ಸಸ್ಯಗಳ ಪರಿಸರ ವಿಜ್ಞಾನ
ಲೇ : ಎಸ್. ಆನಂದರಾಮ ಮಂಡಿ; ಪು : ೧೨೨+೮; ಬೆಲೆ : ೧೩ ರೂಪಾಯಿ; ೧೯೮೮.

೧೮. **ಮಾನಸಿಕ ರೋಗಗಳ ಪರಿಚಯ**
ಲೇ : ವೈ. ಟಿ. ಬಾಲಕೃಷ್ಣ ಆಚಾರ್ಯ; ಪು ; ೩೧೮+x; ಬೆಲೆ ; ೪೮ ರೂಪಾಯಿ; ೧೯೯೦.

೧೯. **ಕನ್ನಡ ಕವಿಗಳು ಕಂಡ ಕ್ರೀಡೆಗಳು (ಪ್ರಚಾರ ಪುಸ್ತಕಮಾಲೆ)**
ಲೇ : ಡಾ. ಕೆ. ಶ್ರೀಕಂಠಯ್ಯ; ಪು : ೮೦+viii; ಬೆಲೆ : ೧ ರೂಪಾಯಿ: ೧೯೮೯.

೨೦. **Devaraya II and His Times** (History of Vijayanagar)
by : Dr. H. M. Nagaraju; pp : 214+xii; Price : Rs. 80; 1991.

೨೧. **Gandhian Economic Thought** (An analytical view)
by : Dr. B. G. Radhakrishna; pp : 132+viii: Price : Rs. 32; 1989.

೨೨. **Epigraphia Carnatica**(Vol. IX)
Revised edition of Vol. V by the Institute; pp : cxxxii+1088+xxii Plates; Price : Rs. 350-00; 1990.

೨೩. **The Mysore University English-Kannada Dictionary**
(Revised, Vol. 1 (A-D)
pp : 1608+xxiv; Price : Rs : 50-00; 1989.

೨೪. **Tungabhadra Board** (A Study in Development Admini stration)
by : Dr. Laxminarayana; pp : xxii + 252 + 2 maps, 4 charts; Price : Rs. 75-00; 1990.

೪ ರಿಂದ ೨೪ರ ವರೆಗಿನ ೨೧ ಪುಸ್ತಕಗಳ ಪ್ರಕಾಶಕರು : ನಿರ್ದೇಶಕರು ಪ್ರಸಾರಾಂಗ, ಮಾನಸಗಂಗೋತ್ರಿ ಮೈಸೂರ ವಿಶ್ವವಿದ್ಯಾಲಯ, ಮೈಸೂರು–೫೭೦ ೦೦೬.

ಲೇಖಕರ ವಿಳಾಸ

ಡಾ. ಎಸ್. ಎಸ್. ಕೋತಿನ
ಪ್ರವಾಚಕರು, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಡಾ. ಎಂ. ಎಂ. ಕಲಬುರ್ಗಿ
ಪ್ರಾಧ್ಯಾಪಕರು, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಡಾ. ವಿಲ್ಯಂ ಮಾಡ್ತ
ಪ್ರಾಧ್ಯಾಪಕರು, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರದಾಡ

ಡಾ. ಜಿ. ಎಂ. ಹೆಗಡೆ
ಕನ್ನಡ ಅಧ್ಯಾಪಕರು
ಕಿಟೆಲ್ ಕಲಾ ಮಹಾವಿದ್ಯಾಲಯ, ಧಾರವಾಡ

ಶ್ರೀ ಸದಾನಂದ ಪಾಟೀಲ
ಕನ್ನಡ ಅಧ್ಯಾಪಕರು
ಸರಕಾರಿ ಪದವಿಪೂರ್ವ ಕಾಲೇಜು, ಹಳಿಯಾಳ

ಶ್ರೀ ಗಣಪತಿಗೌಡ ಎಸ್.
ಸಂಶೋಧನ ವಿದ್ಯಾರ್ಥಿ
ಪ್ರಾಚೀನ ಭಾರತೀಯ ಇತಿಹಾಸ ಹಾಗೂ ಶಾಸನ ವಿಜ್ಞಾನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಡಾ. ಬಿ. ಆರ್. ಹಿರೇಮಠ
ಪ್ರವಾಚಕರು, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಡಾ. ಶಾಲಿನಿ ರಘುನಾಥ
ಅಧ್ಯಾಪಕರು, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಶ್ರೀ ಬಿ. ಆರ್. ಹೂಗಾರ
ಸಹಾಯಕ ಸಂಶೋಧಕರು, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಡಾ. ಶ್ರೀನಿವಾಸ ಪಾಡಿಗಾರ
ಹಿರಿಯ ಉಪನ್ಯಾಸಕರು
ಪ್ರಾಚೀನ ಭಾರತೀಯ ಇತಿಹಾಸ ಹಾಗೂ ಶಾಸನ ವಿಜ್ಞಾನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಡಾ. ಎಸ್. ಪಿ. ಪಾಟೀಲ
ಪ್ರವಾಚಕರು, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಡಾ. ವೀರಣ್ಣ ರಾಜೂರ
ಪ್ರವಾಚಕರು, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಶ್ರೀ ಎಂ. ಜಿ. ವಾರಿ
ಕನ್ನಡ ಅಧ್ಯಾಪಕರು
ಶ್ರೀ ವೀರಪುಲಿಕೇಶಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯ
ಬದಾಮಿ, (ಜಿಲ್ಲೆ-ವಿಜಾಪುರ)

ಡಾ. ಬಿ. ಎಸ್. ಶೇಠೆ
ಕನ್ನಡ ಅಧ್ಯಾಪಕರು
ಎಸ್. ಬಿ. ಕಲಾ ಮಹಾವಿದ್ಯಾಲಯ, ವಿಜಾಪುರ

ಸರ್ವಜಿತ (ಶ್ರೀ ಶ್ಯಾಮಸುಂದರ ಬಿದರಕುಂದಿ)
ಕನ್ನಡ ಅಧ್ಯಾಪಕರು
ಕಾಮರ್ಸ ಕಾಲೇಜು, ಗದಗ

ಬಸವನಾಳ ಪ್ರಿಂಟರ್ಸ್, ಯು. ಬಿ. ಹಿಲ್, ಧಾರವಾಡ-೧